56

ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಕರ್ನಾಟಕ ಸರಕಾರದ ಸಂಪೂರ್ಣ ಸ್ವಾಮ್ಯಕ್ಕೆ ಒಳಪಟ್ಟಿದೆ)

೧೭ನೇ ವಾರ್ಷಿಕ ವರದಿ ೨೦೧೮-೧೯

Gulbarga Electricity Supply Company Limited

(Wholly Owned by Government of Karnataka Undertaking)

17th Annual Report 2018-19



GESCOM

ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

ವಾರ್ಷಿಕ ಲೆಕ್ಕಪತ್ರಗಳು

ಹಣಕಾಸು ವರ್ಷ ೨೦೧೮-೧೯

ಸಿ.ಐ.ಎನ್. ಸಂಖ್ಯೆ :
ಯು4010ಕೆಎ2002ಎಸ್.ಜಿ.ಸಿ.030436

ನೊಂದಾಯಿತ ಕಛೇರಿ
ಸ್ಟೇಶನ್ ರಸ್ತೆ,
ಗುಲಬರ್ಗಾ – 585 102
E-Mail: mdgesco@gmail.com
Website: www.gescom.in

ಧ್ಯೇಯೋದ್ದೇಶಗಳು

ತನ್ನ ಗ್ರಾಹಕರಿಗೆ ಸ್ಪರ್ಧಾತ್ಮಕ ದರದಲ್ಲಿ ವಿಶ್ವಸನೀಯ ಮತ್ತು ಗುಣಮಟ್ಟದ ವಿದ್ಯುತ್ ಸರಬರಾಜು ಮಾಡುವುದನ್ನು ಖಚಿತಪಡಿಸುವುದೇ ಕಂಪನಿಯ ಧ್ಯೇಯೋದ್ದೇಶ.
ಜೆಸ್ಕಾಂ, ಈ ಧ್ಯೇಯೋದ್ದೇಶವನ್ನು ಈ ಕೆಳಗಿನವುಗಳ ಮೂಲಕ ಕೈಕೊಳ್ಳಲು ಪಣತೊಟ್ಟಿದೆ.

* ವಿತರಣಾ ವ್ಯವಸ್ಥೆಯಲ್ಲಿ ಅತ್ಯುತ್ತಮ ಪದ್ಧತಿಗಳನ್ನು ಪ್ರೋತ್ಸಾಹಿಸುವುದು.

* ವಿತರಣಾ ವ್ಯವಸ್ಥೆಯಲ್ಲಿ ಉತ್ತಮ ಕಾರ್ಯಾಚರಣೆಗಾಗಿ ತನ್ನೆಲ್ಲಾ ತಾಂತ್ರಿಕ ಸೌಲಭ್ಯಗಳ ಉನ್ನತ ಮಟ್ಟದಲ್ಲಿ ಕಾಯ್ದಿರುಸುವಿಕೆ.

* ಗ್ರಾಹಕರ ಸೇವೆಯಲ್ಲಿ ಉತ್ತಮ ಗುಣಮಟ್ಟಕ್ಕೆ ಆದ್ಯತೆ.

* ಜೆಸ್ಕಾಂ ತನ್ನೆಲ್ಲಾ ಗ್ರಾಹಕರ ಹಿತಕ್ಕಾಗಿ ದೇಶದಲ್ಲೇ ಅತ್ಯುತ್ತಮ ವಿದ್ಯುತ್ ಸರಬರಾಜು ಕಂಪನಿಯಾಗಲು, ತನ್ನ ತಾಂತ್ರಿಕ ಹಾಗೂ ಮಾನವ ಸಂಪನ್ಮೂಲಗಳನ್ನು ಉನ್ನತೀಕರಿಸಲು ಕಂಕಣ ಬದ್ಧವಾಗಿದೆ.

ನಿರ್ದೇಶಕ ಮಂಡಳಿ:

1. ಡಾ॥ ಎನ್ ಮಂಜುಳಾ, ಭಾ.ಆ.ಸೇ.	: ಅಧ್ಯಕ್ಷರು
2. ಡಾ॥ ಆರ್. ರಾಗಪ್ರಿಯಾ, ಭಾ.ಆ.ಸೇ.	: ವ್ಯವಸ್ಥಾಪಕ ನಿರ್ದೇಶಕರು
3. ಶ್ರೀ ಆರ್ ಜಯಕುಮಾರ್	: ನಿರ್ದೇಶಕರು (ತಾಂತ್ರಿಕ)
4. ಡಾ॥ ಪಿ ರಾಜಾ, ಭಾ.ಆ.ಸೇ.	: ನಿರ್ದೇಶಕರು
5. ಡಾ॥ ಎಚ್ ಎನ್ ಗೋಪಾಲಕೃಷ್ಣ, ಭಾ.ಆ.ಸೇ.	: ನಿರ್ದೇಶಕರು
6. ಶ್ರೀ ಚಂದ್ರಶೇಖರ ನಾಯಕ, ಭಾ.ಆ.ಸೇ.	: ನಿರ್ದೇಶಕರು
7. ಶ್ರೀ ರಾಜಕುಮಾರ್ ಎಸ್ ಬಿರಾದರ್	: ನಿರ್ದೇಶಕರು
8. ಶ್ರೀ ಪುರುಷೋತ್ತಮ್ ಸಿಂಗ್ ಬಿ ಎಚ್	: ನಿರ್ದೇಶಕರು
9. ಶ್ರೀ ಶಿವಪ್ರಕಾಶ್ ಟಿ. ಎಂ	: ನಿರ್ದೇಶಕರು
10. ಶ್ರೀ ಟಿ. ಆರ್. ರಾಮಕೃಷ್ಣಯ್ಯ	: ನಿರ್ದೇಶಕರು

* 17ನೆ ವಾರ್ಷಿಕ ಸಾಮಾನ್ಯ ಸಭೆಯ ಪ್ರಕಾರ (29ನೆ ನವೆಂಬರ್ 2019)

Statutory Auditors	- M/s P G Bhagwat, Chartered Accountants, Dharwad
Cost Auditors	- M/s S K Tikare & Co. , Cost Accountants, Belgaum
Secretarial Auditors	- P K Pande & Associates, Company Secretaries, Bengaluru

ಪರಿವಿಡಿ

ಕ್ರ. ಸಂ	ವಿವರ	ಪುಟ ಸಂಖ್ಯೆ
1	ನಿರ್ದೇಶಕರ ವರದಿ	07–23
2	ಕಾರ್ಪೊರೇಟ್ ಸಾಮಾಜಿಕಜವಾಬ್ದಾರಿ ನೀತಿ	24–26
3	ನಮೂನೆ ಸಂಖ್ಯೆ ಎಓಸಿ–2	27–27
4	ಹಣಕಾಸು ವರ್ಷ 2018–19ರ ಲೆಕ್ಕಪರಿಶೋಧಕರ \ ಪರಿಶೀಲನೆಗಳಿಗೆ ಅನುಬಂಧ	28–47
5	ಕಾರ್ಯದರ್ಶಿಯ ಲೆಕ್ಕಪರಿಶೋಧನಾ ವರದಿ	48–52
6	ಕಾರ್ಯದರ್ಶಿಯ ಲೆಕ್ಕಪರಿಶೋಧನ ವರದಿಯಲ್ಲಿ ಪರಿಶೀಲನೆಗಳಿಗೆ ಉತ್ತರಗಳು	53–55
7	ವೆಚ್ಚ ಲೆಕ್ಕಪರಿಶೋಧನಾ ವರದಿ	56–57
8	ನಮೂನೆ ಸಂ.ಎಂಜಿಟಿ – 9	58–65
9	ಸ್ವತಂತ್ರ ಲೆಕ್ಕಪರಿಶೋಧಕರ ವರದಿ	66–86
10	ಪ್ರಧಾನ ಮಹಾಲೇಖಾಪಾಲರ ಕಛೇರಿ (ಇ&ಆರ್ಎಸ್ಎ), ಕರ್ನಾಟಕ	87–88
11	ಸಂತುಲನಾ ಪಟ್ಟಿ	89–90
12	ಲಾಭ ಮತ್ತು ನಷ್ಟದ ತಃಖ್ತೆ	91–92
13	ನಗದು ಪ್ರವಹನ ವಿವರಣಾ ಪಟ್ಟಿ	93–94
14	ಈಕ್ವಿಟಿಯಲ್ಲಿನ ಬದಲಾವಣೆಯ ತಃಖ್ತೆ	95 – 96
15	ಟಿಪ್ಪಣಿಗಳು (1 ರಿಂದ 50 ರ ವರೆಗೆ)	97–154

ನಿರ್ದೇಶಕರ ವರದಿ

ನಿಮ್ಮ ನಿರ್ದೇಶಕರು ನಿಮ್ಮ ಕಂಪನಿಯ ಕಾರ್ಯಾಚರಣೆಗಳು ಮತ್ತು ಸಾಧನೆಗಳ ಮೇಲಿನ 17ನೆಯ ವಾರ್ಷಿಕ ವರದಿಯನ್ನು 31 ಮಾರ್ಚ್ 2019ಕ್ಕೆ ಕೊನೆಗೊಂಡ ಹಣಕಾಸು ವರ್ಷದ ಹಣಕಾಸು ತಖ್ತೆಗಳೊಂದಿಗೆ ನಿಮ್ಮ ಮುಂದಿಡಲು ಹರ್ಷಿಸುತ್ತಾರೆ.

ಕಂಪನಿಯನ್ನು ಕಂಪನಿ ಕಾಯ್ದೆ, 1956 ರ ಅಡಿ ಸ್ಥಾಪಿಸಲಾಯಿತು ಮತ್ತು 01.06.2002 ರಂದು ಕಂಪನಿ ತನ್ನ ವ್ಯಾಪಾರ ಚಟುವಟಿಕೆಗಳನ್ನು ಪ್ರಾರಂಭಿಸಿತು.

ಕಂಪನಿಯು ವಿದ್ಯುಚ್ಛಕ್ತಿಯ ವಿತರಣೆಯ ಕಾರ್ಯದಲ್ಲಿ ಹದಿನೇಳು ವರ್ಷಗಳನ್ನು ಯಶಸ್ವಿಯಾಗಿ ಪೂರ್ಣಗೊಳಿಸಿದೆ. ಕರ್ನಾಟಕದ ಕಲಬುರ್ಗಿ, ಬೀದರ, ಯಾದಗೀರ್, ರಾಯಚೂರು, ಕೊಪ್ಪಳ ಮತ್ತು ಬಳ್ಳಾರಿ – ಈ 6 ಜಿಲ್ಲೆಗಳಲ್ಲಿ ಸಾರ್ವಜನಿಕರ ವಿದ್ಯುಚ್ಛಕ್ತಿಯ ಅವಶ್ಯಕತೆಗಳನ್ನು ಪೂರೈಸುವ ಜವಾಬ್ದಾರಿಯನ್ನು ಕಂಪನಿಯು ಹೊತ್ತುಕೊಂಡಿದೆ.

ಪರಿಶೀಲನೆಯಲ್ಲಿರುವ ವರ್ಷದಲ್ಲಿ ಕಂಪನಿಯು ಸರ್ಕಾರದ ಉದ್ದೇಶಗಳು ಮತ್ತು ನೀತಿಗಳಿಗೆ ಪೂರಕವಾಗಿ ಉತ್ತಮವಾದ ಸೇವೆಗಳನ್ನು ಒದಗಿಸುವ ನಿಟ್ಟಿನಲ್ಲಿ ಹಲವಾರು ಉಪಕ್ರಮಗಳನ್ನು ತೆಗೆದುಕೊಂಡಿತು. ಸುಧಾರಿತ ಮಾಹಿತಿ ತಂತ್ರಜ್ಞಾನದೊಂದಿಗೆ ನೆಟ್‌ವರ್ಕ್ ವ್ಯವಸ್ಥೆಯನ್ನು ಗಟ್ಟಿಗೊಳಿಸಿ ತನ್ನ ಗ್ರಾಹಕರಿಗೆ ವಿದ್ಯುಚ್ಛಕ್ತಿಯ ವಿತರಣೆಯಲ್ಲಿ ಗುಣಮಟ್ಟದ ಸೇವೆಯನ್ನು ಒದಗಿಸುವ ಗುರಿಯನ್ನು ಕಂಪನಿ ಹೊಂದಿದೆ. ಈ ನಿಟ್ಟಿನಲ್ಲಿ ಕಂಪನಿಯು ಬಹಳಷ್ಟು ಪ್ರಗತಿಯನ್ನು ಸಾಧಿಸಿದ್ದು ಮತ್ತಷ್ಟು ಉತ್ತಮವಾದ ನಿರೀಕ್ಷೆಗಳೊಂದಿಗೆ ಭವಿಷ್ಯದತ್ತ ಮುಖಮಾಡಿದೆ.

ಈ ವರದಿಯು ಹಣಕಾಸು ಸಾಧನೆ ಮತ್ತು ಕಾರ್ಯಾಚರಣೆ ಸಾಧನೆಯೂ ಸೇರಿದಂತೆ ವಿವಿಧ ಪರಿಮಿತಾಂಕಗಳಲ್ಲಿ ಕಂಪನಿಯ ಸಾಧನೆಯ ಸಾರವನ್ನು ಒದಗಿಸುತ್ತದೆ. ಕೆಳಗಿನ ಕಂಡಿಕೆಗಳು ಇದನ್ನು ಒಳಗೊಂಡಿವೆ.

ಎ. ಆರ್ಥಿಕ ಸಾಧನೆ

ಕಾರ್ಪೊರೇಟ್ ಸಚಿವಾಲಯದ (ಎಂಸಿಎ) ಅಧಿಸೂಚನೆಯ ಪ್ರಕಾರ ಭಾರತೀಯ ಲೇಖಾ ಪ್ರಮಾಣಗಳ (ಇಂಡ್ ಎಎಸ್) ಅಳವಡಿಕೆಯ ಕಡ್ಡಾಯದ ಅಗತ್ಯದಂತೆ, ಕಂಪನಿಯು 31 ಮಾರ್ಚ್ 2019ಕ್ಕೆ ಕೊನೆಗೊಂಡ ವರ್ಷದ ಹಣಕಾಸು ತಃಖ್ತೆಗಳನ್ನು ವಿದ್ಯುಚ್ಛಕ್ತಿ (ಸರಬರಾಜು) ಕಾಯ್ದೆ 1948 (1948ರ 54) ಪರಿಚ್ಛೇದ 69, ಉಪಪರಿಚ್ಛೇದ (1)ರ ಅಡಿ ರೂಪಿಸಲಾದ ನಿಯಮಗಳು, ವಿದ್ಯುಚ್ಛಕ್ತಿ (ಸರಬರಾಜು) ವಾರ್ಷಿಕ ಲೆಕ್ಕಪತ್ರಗಳ ನಿಯಮಗಳು 1985, ಕಂಪನಿ ಕಾಯ್ದೆ, 2013 ಮತ್ತು ಕಂಪನಿಗಳ (ಭಾರತೀಯ ಲೇಖಾ ಪ್ರಮಾಣಗಳು) ನಿಯಮಗಳು 2015ರ ಅಗತ್ಯಗಳಿಗೆ ಅನುಸಾರವಾಗಿ ಸಿದ್ಧಗೊಳಿಸಲಾಗಿದೆ. ಹಣಹಾಸು ವರ್ಷ 19ರ ಹಣಕಾಸು ತಃಖ್ತೆಗಳನ್ನು ಇಎಸ್ಎಎಆರ್ ನೊಂದಿಗೆ ಅವು ಹೊಂದದ ಅಂಶಗಳಲ್ಲಿ ಇಂಡ್ ಎಎಸ್ ಉಪಬಂಧಗಳನ್ನು ಅನುಸರಿಸಿ ಸಿದ್ಧಪಡಿಸಲಾಗಿದೆ ಮತ್ತು ಇಂತಹ ಪ್ರಕರಣಗಳಲ್ಲಿ ಇಎಸ್ಎಎಆರ್ ನಿಬಂಧನೆಗಳನ್ನು ಅನುಸರಿಸಿ ಲೆಕ್ಕಪ್ರಕ್ರಿಯೆ ಮತ್ತು ಪ್ರಕಟಣೆಗಳನ್ನು ಮಾಡಲಾಗಿದೆ.

i. ಲಾಭ ಮತ್ತು ನಷ್ಟ :

ರೂ. ಕೋಟಿಗಳಲ್ಲಿ

ವಿವರಗಳು	31.03.2019ಕ್ಕೆ ಕೊನೆಗೊಂಡ ವರ್ಷಕ್ಕಾಗಿ	31.03.2018ಕ್ಕೆ ಕೊನೆಗೊಂಡ ವರ್ಷಕ್ಕಾಗಿ
ವಿದ್ಯುತ್ ಮಾರಾಟದಿಂದ ಆದಾಯ	5078.44	4291.75
ಇತರ ಆದಾಯ	127.65	110.17
ಒಟ್ಟು ಆದಾಯ	**5206.09**	**4401.92**
ವಿದ್ಯುತ್ ಖರೀದಿ	3949.24	3577.15
ಸಿಬ್ಬಂದಿ ಕಲ್ಯಾಣ ಖರ್ಚುಗಳು	529.22	444.54
ಹಣಕಾಸು ಕೂಡಿಸುವಿಕೆ ವೆಚ್ಚ	283.77	351.68
ಸವಕಳಿ	190.99	177.03
ಇತರ ಖರ್ಚುಗಳು	233.53	202.92
ಒಟ್ಟು ವೆಚ್ಚ	**5186.75**	**4753.34**
ಕಾರ್ಯಾಚರಣೆಯುಕ್ತ ಆದಾಯ	**19.34**	**-351.41**
ನಿಬಂಧನಾ ಮುಂದೂಡಿಕೆ ಆದಾಯ	328.73	-121.05
ತೆರಿಗೆಗೆ ಮುನ್ನ ಲಾಭ	**348.06**	**-472. 45**
ಚಾಲ್ತಿ ತೆರಿಗೆಗೆ ಹವಣಿಕೆ	**0**	**0**
ತೆರಿಗೆಯ ನಂತರದ ಲಾಭ	**348.06**	**-472. 45**

ii. ವಿದ್ಯುತ್ ಖರೀದಿ:

10–06–2005ಕ್ಕೆ ಮುನ್ನ ಕೆಪಿಟಿಸಿಎಲ್ ವಿವಿಧ ಉತ್ಪಾದಕ ಕಂಪನಿಗಳಿಂದ ವಿದ್ಯುತ್ ಅನ್ನು ಪಡೆದು ಎಸ್ಕಾಂಗಳಿಗೆ ಪೂರೈಸುತ್ತಿತ್ತು. ಆದರೆ ಐಇ ಕಾಯ್ದೆ, 2003ರ ಜಾರಿಗೊಳಿಸುವಿಕೆಯ ನಂತರ 10.06.2005 ರಿಂದ ಅನ್ವಯವಾಗುವಂತೆ ರಾಜ್ಯ ಪ್ರಸರಣ ಘಟಕಗಳು ವಿದ್ಯುತ್ ವ್ಯಾಪಾರ ಚಟುವಟಿಕೆಗಳಲ್ಲಿ ಪಾಲ್ಗೊಳ್ಳುವುದರ ಮೇಲೆ ನಿರ್ಬಂಧ ಹೇರಲಾಯಿತು. ವಿತರಣಾ ಕಂಪನಿಗಳ (ಎಸ್ಕಾಂಗಳು) ಪರವಾಗಿ ವಿದ್ಯುತ್ ಖರೀದಿಯ ಕಾರ್ಯವನ್ನು ಸುಗಮಗೊಳಿಸಲು ಕರ್ನಾಟಕ ಸರ್ಕಾರವು ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ (ಈ ಮುನ್ನ ಇದನ್ನು ರಾಜ್ಯ ವಿದ್ಯುತ್ ಸಂಗ್ರಹಣಾ ಸಂಯೋಜನಾ ಕೇಂದ್ರ ಎಂದು ಕರೆಯಲಾಗುತ್ತಿತ್ತು) ಅನ್ನು ರಚಿಸಿತು. ಅಲ್ಲದೆ ರಾಜ್ಯ ಸರ್ಕಾರವು ವಿದ್ಯುತ್ ಉತ್ಪಾದನಾ ಕಂಪನಿಗಳಿಂದ ನೇರವಾಗಿ ವಿದ್ಯುತ್ ಖರೀದಿಸಲು ಅಗತ್ಯ ವ್ಯವಸ್ಥೆಗಳನ್ನು ಮಾಡಿಕೊಳ್ಳುವಂತೆ ಎಸ್ಕಾಂಗಳಿಗೆ ಮಾರ್ಗಸೂಚಿಗಳನ್ನು ಹೊರಡಿಸಿತು ಮತ್ತು ಕೆಪಿಟಿಸಿಎಲ್ ಈಗಾಗಲೇ ಮಾಡಿಕೊಂಡಿರುವ ವಿದ್ಯುತ್ ಖರೀದಿ ಒಪ್ಪಂದಗಳನ್ನು 10.06.2005 ರಿಂದ ಜಾರಿಗೆ ಬರುವಂತೆ ಎಸ್ಕಾಂಗಳಿಗೆ ವಹಿಸಲಾಗಿದೆ. ವಿದ್ಯುತ್ ಉತ್ಪಾದನಾ ಕಂಪನಿಗಳಿಗೆ ಸಕಾಲಿಕ ಸಂದಾಯಗಳನ್ನು ವ್ಯವಸ್ಥೆಗೊಳಿಸಲು ಕರ್ನಾಟಕ ಸರ್ಕಾರವು ಹಣಕಾಸು ವರ್ಷ 2018–19ರ ಸಾಲಿಗೆ ನಿರ್ದೇಶನಗಳನ್ನು ಹೊರಡಿಸಿ ಜೆಸ್ಕಾಂನ ಒಟ್ಟು ವಿದ್ಯುತ್ ಖರೀದಿಯಲ್ಲಿ ಸಿಜಿಎಸ್ ಗೆಂದು 12.4137%, ಕೆಪಿಸಿಎಲ್ ಥರ್ಮಲ್‌ಗೆಂದು 5.6834% ದರದಲ್ಲಿ,6.600%, ಕೆಪಿಸಿಎಲ್ ಜಲವಿದ್ಯುತ್ ಗೆಂದು 15.5952% ದರದಲ್ಲಿ 24.4284%, 35.1809% ಆರ್‌ಪಿಸಿಎಲ್ ಗೆ 6.600% ಹಾಗೂ ಮಧ್ಯಮ ಮೂಲಕ್ಕೆ 13.684% ಮತ್ತು ಅಲ್ಪಾವಧಿ ಮೂಲಕ್ಕೆ 12.500% ಜೆಸ್ಕಾಂನ ಪಾಲು ಎಂದು ಸೂಚಿಸಿತು. ಈ ಹಂಚಿಕೆಯು (ಹಣಕಾಸು ವರ್ಷದ ಕೊನೆಯ ಹೊತ್ತಿಗೆ) ಪ್ರತಿ ಎಸ್ಕಾಂನ ನೈಜ ವಿದ್ಯುತ್ ಖರೀದಿಯೊಂದಿಗಿನ ಹೊಂದಾಣಿಕೆಗೆ ಬದ್ಧವಾಗಿದೆ.

2018–19 ರ ವರ್ಷದಲ್ಲಿ ಕಂಪನಿಯು ಕೆಪಿಸಿಎಲ್, ಆರ್‌ಪಿಸಿಎಲ್, ಎನ್‌ಟಿಪಿಸಿ, ಎನ್‌ಎಲ್‌ಸಿ, ಎನ್‌ಪಿಸಿಐಎಲ್–ಎಮ್‌ಎಪಿಎಸ್, ಕೈಗಾ & ಕೆಕೆಎನ್‌ಪಿಪಿ, ಡಿವಿಸಿ ಸಣ್ಣ ಐಪಿಪಿಗಳು ಮತ್ತು ಪ್ರಧಾನ ಐಪಿಪಿಗಳು ಮುಂತಾದ ವಿವಿಧ ವಿದ್ಯುತ್ ಉತ್ಪಾದಕರಿಂದ ಕೆಳಗೆ ವಿವರವಾಗಿ ನೀಡಿರುವಂತೆ 9306.90 ಮಿಲಿಯನ್ ಯೂನಿಟ್‌ಗಳನ್ನು (ವಿದ್ಯುತ್ ಶಿಲ್ಕು ಯೂನಿಟ್‌ಗಳನ್ನು ಹೊರತುಪಡಿಸಿ) ಪಡೆದುಕೊಂಡಿದೆ:

ವಿವರಗಳು	ವಿದ್ಯುತ್– ಮಿಲಿಯನ್ ಯೂನಿಟ್‌ಗಳು	ಮೊತ್ತ (ಕೋಟಿ.ರೂ)
ಕರ್ನಾಟಕ ಪವರ್ ಕಾರ್ಪೊರೇಷನ್ ಲಿ.,(ಕೆಪಿಸಿಎಲ್)	3534.49	648.50
ರಾಯಚೂರು ಪವರ್ ಕಾರ್ಪೊರೇಷನ್ ಲಿ., (ಆರ್‌ಪಿಸಿಎಲ್)	45.65	68.04
ನ್ಯಾಷನಲ್ ಥರ್ಮಲ್ ಪವರ್ ಕಾರ್ಪೊರೇಷನ್ ಲಿ.,(ಎನ್‌ಟಿಪಿಸಿ)	1835.88	818.24
ನೈವೇಲಿ ಲಿಗ್ನೈಟ್ ಕಾರ್ಪೊರೇಷನ್ ಲಿ.,(ಎನ್‌ಎಲ್‌ಸಿ)	492.55	199.32
ಎನ್‌ಪಿಸಿಐಎಲ್ (ಎಮ್‌ಎಪಿಎಸ್,ಕೈಗಾ & ಕುಡಂಕುಲಮ್)	429.71	171.26
ಎನ್‌ಸಿಇ ಗಳು (ಅತಿ ಸಣ್ಣ – ಐಪಿಪಿ ಗಳು)	2592.11	1092.62
ದಾಮೋದರ್ ಕಣಿವೆ ಯೋಜನೆ (ಡಿವಿಸಿ)	326.68	130.42
ಪ್ರಧಾನ ಐಪಿಪಿ ಗಳು (ಯುಪಿಸಿಎಲ್)	526.96	324.89
ಇತರ ವಿದ್ಯುತ್ ಖರೀದಿ ವೆಚ್ಚ (ಯುಐ, ಅಲ್ಪಾವಧಿ, ವಿದ್ಯುತ್ ಶಿಲ್ಕು, ಹವಣೆಕೆಗಳು ಮುಂತಾದವು)	–605.45	–167.84
ಬ್ಯಾಂಕ್ಡ್ ವಿದ್ಯುತ್,/ ಅಸ್ಥಿರ ವಿದ್ಯುತ್/ ಎಸ್‌ಆರ್‌ಪಿಟಿವಿ	118.39	18.67
ಜುರಾಲ ಜಲವಿದ್ಯುತ್ / ಟಿಬಿಎಚ್‌ಇ	9.92	14.03
ಹವಣೆಕೆಗಳು	–	34.33
ಪ್ರಸರಣ ವೆಚ್ಚಗಳು– (ಕೆಪಿಟಿಸಿಎಲ್ & ಪಿಜಿಸಿಐಎಲ್)	–	596.46
ಒಟ್ಟು	**9306.90**	**3949.24**

iii. ವಿದ್ಯುತ್ ಮಾರಾಟ:

ಮಾಪಕ–ಬದ್ಧ ಮತ್ತು ಮಾಪಕ–ಬದ್ಧವಲ್ಲದ ವರ್ಗಗಳ ಅಡಿಯಲ್ಲಿನ ಒಟ್ಟು ಮಾರಾಟಗಳು ಕೆಳಗಿನಂತಿವೆ:

	2018–19	2017–18
ಮಾಪಕ–ಬದ್ಧ ವರ್ಗದ ಮಾರಾಟಗಳು (ಮಿಲಿಯನ್ ಯೂನಿಟ್‌ಗಳು)	3767.92	3297.50
ಮಾಪಕ–ಬದ್ಧವಲ್ಲದ ವರ್ಗದ ಮಾರಾಟಗಳು (ಮಿಲಿಯನ್ ಯೂನಿಟ್‌ಗಳು)	3760.38	3213.39
ಒಟ್ಟು ಮಾರಾಟಗಳು (ಮಿಲಿಯನ್ ಯೂನಿಟ್‌ಗಳು)	**7528.30**	**6510.89**

ಮೇಲಿನ ಕೋಷ್ಟಕ ತೋರಿಸುವಂತೆ ಹಣಕಾಸು ವರ್ಷ–18ರ ತುಲನೆಯಲ್ಲಿ ಹಣಕಾಸು ವರ್ಷ–19ರಲ್ಲಿ ಮಾಪಕಬದ್ಧ ಮಾರಾಟಗಳು ಏರಿಕೆ ಕಂಡಿವೆ.

ವಿದ್ಯುತ್ ಮಾರಾಟ ತುಲನೆ :

ವರ್ಗ	ಮಾರಾಟ (ಮಿಲಿಯನ್ ಯುನಿಟಗಳು)		ಹಿಂದಿನ ವರ್ಷದಿಂದ ಏರಿಕೆ	ಹಿಂದಿನ ವರ್ಷದಿಂದ ಏರಿಕೆಯ%
	2017–18	2018–19		
ಎಲ್‌ಟಿ_ಇತರೆ	2347.88	2518.82	170.94	7.28%
ಎಲ್‌ಟಿ–ಐಪಿ ಸೆಟ್	2956.88	3514.97	558.09	18.87%
ಎಚ್‌ಟಿ	1206.14	1494.5	288.36	23.91%
ಒಟ್ಟು	**6510.9**	**7528.3**	**1017.40**	**15.63%**

ಮೇಲಿನ ವಿದ್ಯುತ್ ಮಾರಾಟದ ವಿವರಗಳಿಂದ ತಿಳಿದುಬರುವಂತೆ:

ಎ) ಎಚ್‌ಟಿ ವರ್ಗದಲ್ಲಿ 288.36 ಎಂಯು ನಷ್ಟು, ಅರ್ಥಾತ್ 23.91 % ದಷ್ಟು ಗಣನೀಯ ಹೆಚ್ಚಳ ಉಂಟಾಗಿದೆ.

ಬಿ) ಐಪಿ ಸೆಟ್ ಮಾರಾಟಗಳಲ್ಲಿನ ಸುಧಾರಿತ ನಿರ್ಧಾರಣವು 558.09 ಎಂಯುರಷ್ಟು ಹೆಚ್ಚಳಕ್ಕೆ ಕಾರಣವಾಯಿತು, ಅರ್ಥಾತ್ 18.87 % ದಷ್ಟು.

ಸಿ) ಇತರಎಲ್‌ಟಿ ವರ್ಗಗಳಲ್ಲಿ ಹಿಂದಿನ ವರ್ಷಗಳ ಮೂಲ ಅಂಕಿಗಳ ತುಲನೆಯಲ್ಲಿ 170.94 ಎಂಯು ಗಳಷ್ಟು, ಅರ್ಥಾತ್ 7.28% ರಷ್ಟು ಸುಧಾರಣೆಯಾಗಿದೆ.

ಕೆಇಆರ್‌ಸಿ ಅಂಗೀಕೃತ ಅಂಕಿ–ಅಂಶಗಳೊಂದಿಗೆ ನೈಜ ಅಂಕಿ–ಅಂಶಗಳ ತುಲನೆ

ವಿವರಗಳು	ವಿದ್ಯುತ್ ಮಾರಾಟಗಳು (ಎಂಯು)	ಆದಾಯ (ಕೋಟಿ ರೂ.)	ಸರಾಸರಿ ಆದಾಯ ಸಾಕ್ಷಾತ್ಕಾರ (ರೂ. ಪ್ರತಿಯೂನಿಟ್)
ಕೆಇಆರ್‌ಸಿ ಅಂಗೀಕರಿಸಿದಂತೆ	6981.11	4707.08	6.74
ಲೆಕ್ಕಪರಿಶೋಧಿಸದ ಹಣಕಾಸು ತಖ್ತೆಗಳ ಪ್ರಕಾರ	7528.3	5078.44	6.75
ಕೆಇಆರ್‌ಸಿ ಅಂಗೀಕೃತ ಅಂಕಿ–ಅಂಶಗಳ ತುಲನೆಯಲ್ಲಿ ಹೆಚ್ಚಳ	547.19	371.36	0.01

ಮೇಲಿನ ಕೋಷ್ಟಕದಿಂದ ತಿಳಿಯುವಂತೆ, ಕಂಪನಿಯುತನ್ನ ವಿದ್ಯುತ್ ಮಾರಾಟಗಳಲ್ಲಿ ಮಾತ್ರವಲ್ಲದೆ ಸರಾಸರಿಆದಾಯ ಸಾಕ್ಷಾತ್ಕಾರದಲ್ಲಿಯೂ ಸಹ ಕೆಇಆರ್‌ಸಿ ಅಂಗೀಕೃತವಾದ ಪ್ರತಿಯೂನಿಟ್‌ಗೆರೂ. 6.74 ಕ್ಕೆ ಪ್ರತಿಯಾಗಿರೂ. 6.75ಕ್ಕೆ ಸುಧಾರಣೆ ಸಾಧಿಸಿದೆ.ಸರಾಸರಿ ಸಾಕ್ಷಾತ್ಕಾರವು ಶುಲ್ಕ ಆದೇಶದಲ್ಲಿಅಂಗೀಕೃತವಾದ ಸಾಕ್ಷಾತ್ಕಾರದರದೊಂದಿಗೆ ಹೊಂದುತ್ತದೆ.

iv. ವಿದ್ಯುತ್ ಮಾರಾಟದಿಂದ ಆದಾಯ:

ವಿದ್ಯುತ್ ಮಾರಾಟದ ಬಾಬ್ತಿಗೆ ಈ ಅವಧಿಯಲ್ಲಿ ಆಕರಿಸಲಾದ ಬೇಡಿಕೆ ರೂ. 5078.44 ಕೋಟಿ ಆಗಿತ್ತು. ಆಕರಿಸಲಾದ ಬೇಡಿಕೆ ಮತ್ತು ಅವುಗಳಿಗೆ ಪ್ರತಿಯಾಗಿ ಮಾಡಲಾದ ಸಂಗ್ರಹದ ವರ್ಗವಾರು ವಿವರಗಳು ಕೆಳಗಿನಂತಿವೆ:

ಗ್ರಾಹಕ ವರ್ಗ	ಇರಿಸಲಾದ ಬೇಡಿಕೆ	ಮಾಡಲಾದ ನಗದುಸಂಗ್ರಹ (ಹೊಂದಾಣಿಕೆ ಸೇರಿ)	ಸಂಗ್ರಹ ಸಾಮರ್ಥ್ಯ (ಪ್ರತಿಶತ)	
	(ಕೋಟಿ ರೂ.ಗಳಲ್ಲಿ)		2018–19	2017–18
ಎಲ್‌ಟಿ ವರ್ಗ	3687.53	3677.95	99.74%	112.93%
ಎಚ್‌ಟಿ ವರ್ಗ	1198.61	1204.25	100.47%	99.08%
ವಿಳಂಬದ ಸಂದಾಯದ ಮೇಲಿನ ಬಡ್ಡಿ & ಇತರೆ	192.30	192.19	99.94%	203.08%
ಒಟ್ಟು (ಎಲ್‌ಟಿ & ಎಚ್‌ಟಿ)	**5078.44**	**5074.38**	**99.92%**	**112.53%**

ಆದಾಯ ತುಲನೆ :

ವರ್ಗ	ಆದಾಯ (ಕೋಟಿ ರೂ.)		ಹಿಂದಿನ ವರ್ಷದ ತುಲನೆಯಲ್ಲಿ ಏರಿಕೆ	ಹಿಂದಿನವರ್ಷದ ತುಲನೆಯಲ್ಲಿ ಏರಿಕೆಯ %
	2017-18	2018-19		
ಎಲ್‌ಟಿ –ಇತರೆ	1614.77	1875.14	260.37	16.12%
ಎಲ್‌ಟಿ–ಐಪಿ ಸೆಟ್	1650.31	1994.64	344.33	20.86%
ಎಚ್‌ಟಿ	1026.68	1208.66	181.99	17.73%
ಒಟ್ಟು	**4291.76**	**5078.44**	**786.68**	**18.33%**

ಮೇಲಿನ ಕೋಷ್ಟಕ ಸೂಚಿಸುವ ರೆವಿನ್ಯೂ ಆದಾಯದ ವಿವರಗಳಿಂದ ತಿಳಿದುಬರುವಂತೆ:

ಎ) ಎಲ್‌ಟಿ – ಇತರೆ ವರ್ಗದಲ್ಲಿ ಹಿಂದಿನ ವರ್ಷದ ಹೆಚ್ಚಿಸಲಾದ ಮೂಲ ಅಂಕಿ–ಅಂಶಗಳ (ಹಣಕಾಸು ವರ್ಷ 18ರಲ್ಲಿ 21.68% ಹೆಚ್ಚಳ) ತುಲನೆಯಲ್ಲಿ ರೂ. 260.37 ಕೋಟಿ, ಅರ್ಥಾತ್ 16.12% ದಷ್ಟು ಸುಧಾರಣೆ ಕಾಣುತ್ತದೆ.

ಬಿ) ಐಪಿ ಸೆಟ್ ಮಾರಾಟಗಳ ಸುಧಾರಿತ ನಿರ್ಧಾರಣ ರೂ. 344.33 ಕೋಟಿ, ಅರ್ಥಾತ್ 20.86% ರಷ್ಟು ಹೆಚ್ಚಳಕ್ಕೆ ಕಾರಣವಾಗಿದೆ.

ಎಚ್‌ಟಿ ವರ್ಗದಲ್ಲಿ ರೂ, 181.99 ಕೋಟಿ, ಅರ್ಥಾತ್ 17.73% ದಷ್ಟು ಗಣನೀಯ ಹೆಚ್ಚಳ ಉಂಟಾಗಿದೆ.

v. ಸಹಾಯಧನಗಳಿಂದ ಆದಾಯ:

ಈ ವರ್ಷದಲ್ಲಿ ಹಣಕಾಸು ವರ್ಷ 2019ಕ್ಕೆಂದು ಕರ್ನಾಟಕ ಸರ್ಕಾರ ಬಿಡುಗಡೆಗೊಳಿಸಿದ ಶುಲ್ಕ ಸಹಾಯಧನ ರೂ.1697.29 ಕೋಟಿ ಆಗಿದ್ದು ಇದರಲ್ಲಿ ಕರ್ನಾಟಕ ಸರ್ಕಾರ ಅಂಗೀಕರಿಸಿದ ರೂ.178.68 ಕೋಟಿ ಮೊತ್ತದ ತ್ರಿಪಕ್ಷೀಯ ಒಪ್ಪಂದಗಳನ್ನು 31.3.2019ಕ್ಕೆ ಕೊನೆಗೊಂಡ ಹಣಕಾಸು ವರ್ಷದ ಶುಲ್ಕ ಸಹಾಯಧನವೆಂದು ಪರಿಗಣಿಸಲಾಗಿದೆ.

vi. ಬಂಡವಾಳ ವೆಚ್ಚ:

ಕಂಪನಿಯು ಹಿಂದಿನ ವರ್ಷದ ರೂ. 351.28 ಕೋಟಿ ಮೊತ್ತಕ್ಕೆ ಪ್ರತಿಯಾಗಿ ವಿವಿಧ ಬಂಡವಾಳ ಕಾಮಗಾರಿಗಳ ಮೇಲೆ ಹಣಕಾಸು ವರ್ಷ 19ರ ವರ್ಷದಲ್ಲಿ ರೂ. 636.95ಕೋಟಿ ವೆಚ್ಚವನ್ನು ಮಾಡಿದ್ದು ವಿವರಗಳು ಕೆಳಗಿನಂತಿವೆ

(ಕೋಟಿ ರೂ.ಗಳು)

ಕ್ರ ಸಂ	ವಿವರಗಳು	ವ್ಯಯಿಸಲಾದ ವೆಚ್ಚ		ಷರಾ
		2018-19	2017-18	
1	ವಿಸ್ತರಣೆ ಮತ್ತು ಸುಧಾರಣೆ ಕಾರ್ಯಗಳು & ಎಪಿಆರ್‌ಡಿಪಿ	166.55	97.80	ಮರುವಿಂಗಡಿಸಲಾಗಿದೆ
2	ದೋಷಯುಕ್ತ ಹಂಚಿಕೆ ಟ್ರಾನ್ಸ್‌ಫಾರ್ಮರ್‌ಗಳ ಬದಲಿಕೆ	57.47	63.82	
3	ಗಂಗಾ ಕಲ್ಯಾಣ ಕಾಮಗಾರಿ – ಜೆಸ್ಕಾಂ	65.63	52.88	ಮರುವಿಂಗಡಿಸಲಾಗಿದೆ
4	ಗ್ರಾಹಕ ಕೊಡುಗೆ/ಠೇವಣಿ ಕೊಡುಗೆ ಕಾಮಗಾರಿ	50.12	51.75	ಮರುವಿಂಗಡಿಸಲಾಗಿದೆ
5	ನಿರಂತರ ಜ್ಯೋತಿ ಕಾಮಗಾರಿಗಳು	33.93	15.01	
6	ಸಿವಿಲ್ ಇಂಜಿನಿಯರಿಂಗ್ ಕಾಮಗಾರಿಗಳು	16.01	11.77	ಮರುವಿಂಗಡಿಸಲಾಗಿದೆ
7	ಗ್ರಾಮೀಣ ವಿದ್ಯುದೀಕರಣ /ಡಿಟಿಸಿಗಳ ಮೀಟರಿಂಗ್, ಅನುಷ್ಠಾನಗಳು	16.31	13.2	
8	ಹೆಚ್ಚುವರಿ ಡಿಟಿಸಿಗಳು/ ಡಿಟಿಸಿಗಳ ಸಾಮರ್ಥ್ಯ ವೃದ್ಧಿ	19.77	11.80	ಮರುವಿಂಗಡಿಸಲಾಗಿದೆ
9	ಸೇವಾ ಜೋಡಣೆ ಮತ್ತು ಮೀಟರ್ ಅಳವಡಿಸುವಿಕೆ	3.14	4.49	ಮರುವಿಂಗಡಿಸಲಾಗಿದೆ
10	ನೀರು ಸರಬರಾಜು ಕಾಮಗಾರಿಯ ವಿದ್ಯುದೀಕರಣ	4.01	3.91	
11	ದೀನ್ ದಯಾಳ್ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆ	150.53	3.78	ಹೊಸ ಕಾಮಗಾರಿ
12	ಇತರ ವೆಚ್ಚ/ಹವಣಿಕೆಗಳು	4.94	3.16	ಮರುವಿಂಗಡಿಸಲಾಗಿದೆ
13	ಅನಧಿಕೃತ ಐಪಿ ಸೆಟ್‌ಗಳ ಸಕ್ರಮಗೊಳಿಸುವಿಕೆ	3.27	2.37	
14	ಐಪಿ ಸೆಟ್ ವಿದ್ಯುದೀಕರಣ	13.62	1.76	ಮರುವಿಂಗಡಿಸಲಾಗಿದೆ
15	ಎಪಿಡಿಆರ್‌ಪಿ/ಐಪಿಡಿಎಸ್ ಆರ್‌ಜಿಜಿವಿವೈ	30.82	10.42	
16	ಮೀಟರಿಂಗ್ ಪ್ರಕ್ರಿಯೆ/ ಡಿಟಿಸಿಗಳು	0.83	3.34	
	ಒಟ್ಟು	**636.95**	**351.28**	

vii. ಪೂರೈಕೆ ದರ, ಸರಾಸರಿ ಬೇಡಿಕೆ ಮತ್ತು ಪ್ರತಿ ಯೂನಿಟ್‌ಗೆ ವಸೂಲಾಗುವ ಮೌಲ್ಯ:

1. ಪ್ರತಿ ಯೂನಿಟ್‌ನ ಸರಾಸರಿ ಪೂರೈಕೆ ದರ ಹಣಕಾಸು ವರ್ಷ 17–18ರಲ್ಲಿ ರೂ. 7.25 ಆಗಿದ್ದು ಇದಕ್ಕೆ ಪ್ರತಿಯಾಗಿ ಹಣಕಾಸು ವರ್ಷ 18–19ರಲ್ಲಿ ಇದು ರೂ.6.89 ಆಗಿತ್ತು.
2. ಇದಕ್ಕೆ ಪ್ರತಿಯಾಗಿ, ವಿವಿಧ ಗ್ರಾಹಕ ವರ್ಗಗಳಿಗೆ ಸಂಬಂಧಿಸಿದಂತೆ ಆಕರಿಸಲಾದ ಸರಾಸರಿ ಬೇಡಿಕೆ ಮತ್ತು ನಗದು ಸಾಕ್ಷಾತ್ಕಾರ ಮೌಲ್ಯದ ವಿವರಗಳು ಕೆಳಗಿನಂತಿವೆ:

ಗ್ರಾಹಕ ವರ್ಗ	ಪ್ರತಿ ಯೂನಿಟ್ ವಿದ್ಯುತ್‌ಗೆ ಸರಾಸರಿ ಬೇಡಿಕೆ (ರೂ)	ಪ್ರತಿ ಯೂನಿಟ್ ವಿದ್ಯುತ್‌ಗೆ ಸರಾಸರಿ ಸಾಕ್ಷಾತ್ಕಾರ (ರೂ)
ಗೃಹಬಳಕೆ(ಎಲ್‌ಟಿ)	5.97	5.88
ವಾಣಿಜ್ಯ(ಎಲ್‌ಟಿ)	9.23	9.21
ಕೈಗಾರಿಕೆ(ಎಲ್‌ಟಿ)	7.63	7.61
ಇತರ(ಎಲ್‌ಟಿ)	5.85	5.53
ಕೈಗಾರಿಕೆ(ಎಚ್‌ಟಿ)	8.48	8.50
ವಾಣಿಜ್ಯ(ಎಚ್‌ಟಿ)	9.64	9.44
ಇತರ(ಎಚ್‌ಟಿ)	5.29	5.48
ಮಾಪಕಬದ್ಧ(ಎಲ್‌ಟಿ & ಎಚ್‌ಟಿ)	7.23	6.87
ಮಾಪಕಬದ್ಧವಲ್ಲದ್ದು (ಎಲ್‌ಟಿ)(ಶುಲ್ಕ ಸಹಾಯಧನವಿಲ್ಲದೆ)	5.75	5.74
ಒಟ್ಟು–ಮಾಪಕಬದ್ಧ & ಮಾಪಕ ಬದ್ಧವಲ್ಲದ್ದು (ಎಲ್‌ಟಿ & ಎಚ್‌ಟಿ)	**6.49**	**6.31**
ಒಟ್ಟು–ಎಲ್‌ಟಿ & ಎಚ್‌ಟಿ (ಬಡ್ಡಿ ಸೇರಿ)	**6.75**	**6.57**

viii. ಸಾಲಗಳು:

ಹಣಕಾಸು ವರ್ಷ 2019ರಲ್ಲಿ ಕಂಪನಿಯು ಮೆ. ಆರ್‌ಇಸಿ ಲಿ., ನಿಂದ ಕಾರ್ಯಕಾರಿ ಬಂಡವಾಳಕ್ಕೆಂದು ರೂ. 150 ಕೋಟಿಯಷ್ಟು ಮಧ್ಯಮಾವಧಿ ಸಾಲವನ್ನು, ಹೊಸದಾದ 33/11 ಕೆವಿ ಉಪಕೇಂದ್ರಗಳನ್ನು ಸ್ಥಾಪಿಸಲು ಮೆ. ಪಿಎಫ್‌ಸಿ ಲಿ., ನಿಂದ ರೂ. 26.63 ಕೋಟಿ, ಆರ್‌ಎಪಿಡಿಆರ್‌ಪಿ (ಭಾಗ – ಎ & ಬಿ) ಯೋಜನೆಗಳಿಗಾಗಿ ರೂ. 23.29 ಕೋಟಿ, ದೀರ್ಘಾವಧಿ ಸಾಲವನ್ನು, ಮೆ. ಆರ್‌ಇಸಿ ಲಿ., ನಿಂದ ಹೊಸದಾದ 33/11 ಕೆವಿ ಉಪಕೇಂದ್ರಗಳನ್ನು ಸ್ಥಾಪಿಸಲು ರೂ. 35.22 ಕೋಟಿ, ಡಿಡಿಯುಜಿಜೆವೈ ಯೋಜನೆಗಾಗಿ ರೂ. 120.29 ಕೋಟಿ, ಐಡಿಪಿಎಸ್ ಯೋಜನೆಗಾಗಿ ರೂ. 30.84 ಕೋಟಿ ಮತ್ತು ಹಂಚಿಕೆ ಟ್ರಾನ್ಸ್‌ಫಾರ್ಮರ್‌ಗಳ ಖರೀದಿಗಾಗಿ ರೂ. 79.22 ಕೋಟಿ – ಹೀಗೆ ರೂ. 315.50 ಕೋಟಿ ಮೊತ್ತದ ದೀರ್ಘಾವಧಿ ಸಾಲಗಳನ್ನು ಪಡೆದುಕೊಂಡಿದೆ.

ಪ್ರಸ್ತುತ ವರ್ಷ ಕಂಪನಿಯು ಒಟ್ಟು ರೂ. 187.98 ಕೋಟಿ ಮೊತ್ತವನ್ನು ಮರುಪಾವತಿಸಿದೆ. ಇದರಲ್ಲಿ ಮೆ. ಪಿಎಫ್‌ಸಿ ಲಿ., & ಮೆ. ಆರ್‌ಇಸಿ ಲಿ., ಗೆ ಅವಧಿ ಸಾಲದ ಮೇಲಿನ ರೂ. 99.04 ಕೋಟಿ ಹಾಗೂ ಮೆ. ಆರ್‌ಇಸಿ ಲಿ., & ಸಿಂಡಿಕೇಟ್ ಬ್ಯಾಂಕಿಗೆ ಮಧ್ಯಮಾವಧಿ ಸಾಲದ ಮೇಲೆ ರೂ. 87.68 ಕೋಟಿ ಸಾಲ ಸೇರಿದೆ. ಜೊತೆಗೆ, ಜೆಸ್ಕಾಂ ಪರವಾಗಿ ಕರ್ನಾಟಕ ಸರ್ಕಾರದಿಂದ ಕೆಪಿಟಿಸಿಎಲ್ ಪಡೆದ ಸಾಲಗಳಿಗೆ ಪ್ರತಿಯಾಗಿ ವರ್ಷದಲ್ಲಿ ರೂ. 1.26 ಕೋಟಿ ಮೊತ್ತವನ್ನು ಮರುಪಾವತಿಸಲಾಯಿತು.

ಬಿ. ಕಾರ್ಯಾಚರಣೆ ಸಾಧನೆ

i. ಗ್ರಾಹಕ ನೆಲೆ:

ವರ್ಷದ ಪ್ರಾರಂಭದಲ್ಲಿ ಕಂಪನಿಯು 29.45 ಲಕ್ಷ ಗ್ರಾಹಕರನ್ನು ಹೊಂದಿತ್ತು.ವರ್ಷದಲ್ಲಿ 1.27 ಲಕ್ಷ ಹೊಸ ಗ್ರಾಹಕರ ಸೇರ್ಪಡೆಯಾಯಿತು.ವರ್ಷದ ಕೊನೆಯ ಹೊತ್ತಿಗೆ ಗ್ರಾಹಕರ ಸಂಖ್ಯೆ 30.73 ಲಕ್ಷ ಆಗಿತ್ತು. ವಿವಿಧ ವರ್ಗಗಳ ಗ್ರಾಹಕ ಸಂಖ್ಯೆಯ ವಿವರಗಳು ಕೆಳಗಿನಂತಿವೆ:

ಶುಲ್ಕ ವರ್ಗ	31.03.2018 ರಂದು ಇದ್ದಂತೆ ಗ್ರಾಹಕ ಸಂಖ್ಯೆ	2018–19ರಲ್ಲಿ ಸೇರ್ಪಡೆಯಾದ ಗ್ರಾಹಕರ ಸಂಖ್ಯೆ	31.03.2019ರಂದು ಇದ್ದಂತೆ ಗ್ರಾಹಕ ಸಂಖ್ಯೆ
ಭಾಗ್ಯ ಜ್ಯೋತಿ/ಕುಟೀರ ಜ್ಯೋತಿ	597,675	0	597,675
ನೀರಾವರಿ ಪಂಪ್‌ಸೆಟ್‌ಗಳು	354,085	29,496	383,581
ನೀರು ಪೂರೈಕೆ ಮತ್ತು ಬೀದಿ ದೀಪ	32,083	4,102	36,185
ಗೃಹಬಳಕೆ ದೀಪ & ಎಇಎಚ್	1,614,714	71,824	1,686,538
ವಾಣಿಜ್ಯ ದೀಪ	255,209	17,097	272,306
ಕೈಗಾರಿಕೆ(ಎಲ್‌ಟಿ)	61,845	2,259	64,104
ತಾತ್ಕಾಲಿಕ ಪೂರೈಕೆ	27,513	2,379	29,892
ನೀರು ಪೂರೈಕೆ(ಎಚ್‌ಟಿ)	136	11	147
ಏತ ನೀರಾವರಿ ಯೋಜನೆಗಳು (ಎಚ್‌ಟಿ)	365	18	383
ಕೈಗಾರಿಕೆ(ಎಚ್‌ಟಿ)	1,474	78	1,552
ವಾಣಿಜ್ಯ(ಎಚ್‌ಟಿ)	359	23	382
ಆಸ್ಪತ್ರೆಗಳು, ಶಿಕ್ಷಣ (ಎಚ್‌ಟಿ)	162	22	184
ವಸತಿ ಕಾಲೊನಿಗಳು & ತಾತ್ಕಾಲಿಕ ಪೂರೈಕೆ(ಎಚ್‌ಟಿ)	62	0	62
ಒಟ್ಟು	**2,945,682**	**127,309**	**3,072,991**

ii ಪ್ರಸರಣ ಮತ್ತು ವಿತರಣೆ ನಷ್ಟಗಳು:

2018–19ರ ವರ್ಷದಲ್ಲಿ ಕಂಪನಿಯು ಕೆಪಿಟಿಸಿಎಲ್/ಜೆಸ್ಕಾಂ ಇಂಟರ್‌ಫೇಸ್ ಬಿಂದುವಿನಲ್ಲಿ 8796.04 ಮಿಲಿಯನ್ ಯೂನಿಟ್‌ಗಳನ್ನು ಪಡೆದುಕೊಂಡಿದೆ. ಇಂಟರ್‌ಫೇಸ್ ಬಿಂದುವಿನವರೆಗೆ ಪ್ರಸರಣ ಮತ್ತು ಹಂಚಿಕೆ ನಷ್ಟಗಳು 1267.74 ಮಿಲಿಯನ್ ಯೂನಿಟ್‌ಗಳಾಗಿತ್ತು (ಹಣಕಾಸು ವರ್ಷ 2017–18ರಲ್ಲಿ 1276.48 ಮಿಲಿಯನ್ ಯೂನಿಟ್‌ಗಳು). ವರ್ಷದಲ್ಲಿ ಖರೀದಿಸಲಾದ ವಿದ್ಯುತ್‌ನ ಪ್ರತಿಶತವಾಗಿ ಇಂಟರ್‌ಫೇಸ್ ಬಿಂದುವಿನವರೆಗೆ ಹಂಚಿಕೆ ನಷ್ಟ 2018–19ಕ್ಕೆ 14.41% (2017–18ರಲ್ಲಿ 16.39%) ಆಗಿತ್ತು.

iii. ಒಟ್ಟು ತಾಂತ್ರಿಕ ಮತ್ತು ವಾಣಿಜ್ಯ ನಷ್ಟಗಳು (ಎಟಿ&ಸಿ ನಷ್ಟಗಳು)

2018–19ರ ವರ್ಷಕ್ಕೆ ಒಟ್ಟು ತಾಂತ್ರಿಕ ಮತ್ತು ವಾಣಿಜ್ಯಕ ನಷ್ಟಗಳು ಹಿಂದಿನ ವರ್ಷದ 5.92% ಗೆ ಪ್ರತಿಯಾಗಿ 14.48% ಆಗಿತ್ತು. ಸಂಗ್ರಹಣ ಸಾಮರ್ಥ್ಯವನ್ನು ಸುಧಾರಿಸುವ ಮತ್ತು ವ್ಯವಸ್ಥೆ ನಷ್ಟಗಳನ್ನು ಕಡಿಮೆಗೊಳಿಸುವ ಮೂಲಕ ವಿವಿಧ ತಾಂತ್ರಿಕ ಮತ್ತು ತಾಂತ್ರಿಕವಲ್ಲದ ಕ್ರಮಗಳನ್ನು ಕೈಗೊಂಡು ಎಟಿ&ಸಿ ನಷ್ಟಗಳನ್ನು ಇಳಿಸುವ ಪ್ರಯತ್ನಗಳು ಸಾಗಿವೆ. ಎಟಿ&ಸಿ ನಷ್ಟಗಳ ವಿವರಗಳು ಕೆಳಗಿನಂತಿವೆ:

ವಿವರಗಳು	2018–19 (%)	2017–18 (%)
ಬಿಲ್ಲಿಂಗ್ ಸಾಮರ್ಥ್ಯ (ಬಿಲ್ ಮಾಡಿದ ಯೂನಿಟ್‌ಗಳು/ಖರೀದಿ (ಊಡಿಕೆ)ಸಿದ ಯುನಿಟ್‌ಗಳು	85.59	83.61
ಸಂಗ್ರಹಣ ಸಾಮರ್ಥ್ಯ (ಸಂಗ್ರಹಣ/ಆಕರಿಸಲಾದ ಕಂದಾಯ ಬೇಡಿಕೆ)	99.92	112.53
ವ್ಯಾಪಾರ ಸಾಮರ್ಥ್ಯ (ಬಿಲ್ಲಿಂಗ್ ಸಾಮರ್ಥ್ಯ / ಸಂಗ್ರಹಣ ಸಾಮರ್ಥ್ಯ)	85.52	94.08
ಒಟ್ಟು ತಾಂತ್ರಿಕ ಮತ್ತು ವಾಣಿಜ್ಯ ನಷ್ಟಗಳು (100–ವ್ಯಾಪಾರ ಸಾಮರ್ಥ್ಯ)	14.48	5.92

(ಹಣಕಾಸು ವರ್ಷ 2018ರಲ್ಲಿ ಕರ್ನಾಟಕ ಸರ್ಕಾರವು ಭದ್ರತಾ ವ್ಯವಸ್ಥೆಗಳ ಮೂಲಕ ಗ್ರಾಮೀಣ ಸ್ಥಳೀಯ ಸಂಸ್ಥೆಗಳು ಉಳಿಸಿಕೊಂಡಿದ್ದ ನೀರು ಪೂರೈಕೆ ಮತ್ತು ಬೀದಿ ದೀಪ ಬಾಕಿಗಳಿಗೆಂದು ರೂ. 748.48 ಕೋಟಿ ಮೊತ್ತವನ್ನು ಬಿಡುಗಡೆ ಮಾಡಿತು ಹಾಗೂ ಇದನ್ನು ವರ್ಷದಲ್ಲಿನ ಸಂಗ್ರಹವೆಂದು ಪರಿಗಣಿಸಲಾಯಿತು. ಈ ಕಾರಣದಿಂದಾಗಿ ಹಣಕಾಸು ವರ್ಷ 2018ರ ಸಂಗ್ರಹಣ ಸಾಮರ್ಥ್ಯವು ಹೆಚ್ಚಾಗಿ ಎಟಿ&ಸಿ ನಷ್ಟಗಳು ಕಡಿಮೆಯಾದವು. ಈ ಒಂದುಬಾರಿಯ ಸ್ವೀಕೃತಿಯನ್ನು ಹೊರತುಪಡಿಸಿದರೆ ಎಟಿ&ಸಿ ನಷ್ಟಗಳು 20.50% ದಷ್ಟಿರುತ್ತವೆ).

iv. ವಿತರಣಾ ಟ್ರಾನ್ಸ್‌ಫಾರ್ಮರ್ ವೈಫಲ್ಯ:

1. 2018–19ರ ವರ್ಷದಲ್ಲಿ ಟ್ರಾನ್ಸ್‌ಫಾರ್ಮರ್ ವೈಫಲ್ಯ 12.96% ಆಗಿದೆ(2017–18 ರಲ್ಲಿ ಇದು 13.21% ಆಗಿತ್ತು). ನಗರ ಪ್ರದೇಶಗಳಲ್ಲಿ ಟ್ರಾನ್ಸ್‌ಫಾರ್ಮರ್ ವೈಫಲ್ಯ 6.02% ಇತ್ತು ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಅದು 13.94% ಇತ್ತು.2018–19ರಲ್ಲಿ ವಿಫಲವಾದ ಟ್ರಾನ್ಸ್‌ಫಾರ್ಮರ್‌ಗಳ ಒಟ್ಟು ಸಂಖ್ಯೆ 13021 (ನಗರ ಪ್ರದೇಶಗಳಲ್ಲಿ 748 ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 12273) ಆಗಿತ್ತು.
2. ವಿದ್ಯುತ್ ವ್ಯವಸ್ಥೆಯ ವೋಲ್ಟೇಜ್ ಅನ್ನು ಸುಧಾರಿಸಲು, ಗ್ರಾಹಕರಿಗೆ ವಿದ್ಯುತ್ ಪೂರೈಕೆಯಲ್ಲಿ ವಿಶ್ವಾಸಾರ್ಹತೆಯನ್ನು ಒದಗಿಸಲು ಮತ್ತು ವಿದ್ಯುತ್ ವ್ಯವಸ್ಥೆಯ ನಷ್ಟಗಳನ್ನು ಕಡಿಮೆಮಾಡಲು 2018–19ರಲ್ಲಿ ವ್ಯವಸ್ಥೆಗೆ 25 ಕೆವಿಎ, 63 ಕೆವಿಎ, & 100 ಕೆವಿಎ ಮುಂತಾದ ವಿವಿಧ ಸಾಮರ್ಥ್ಯದ ಒಟ್ಟು 7759 ವಿತರಣಾ ಟ್ರಾನ್ಸ್‌ಫಾರ್ಮರ್‌ಗಳನ್ನು ಸೇರಿಸಲಾಯಿತು. ಕಂಪನಿಯ ವಿತರಣಾ ವ್ಯವಸ್ಥೆಯಲ್ಲಿ ಅಸ್ತಿತ್ವದಲ್ಲಿರುವ ಟ್ರಾನ್ಸ್‌ಫಾರ್ಮರ್‌ಗಳ ಒಟ್ಟು ಸಂಖ್ಯೆ ವರ್ಷದ ಕೊನೆಯ ಹೊತ್ತಿಗೆ 100481 ಆಗಿತ್ತು (ನಗರ ಪ್ರದೇಶಗಳಲ್ಲಿ 12420 ಮತ್ತು ಗ್ರಾಮೀಣ ಪ್ರದೇಶಗಳಲ್ಲಿ 88061 ವಿತರಣ ಟ್ರಾನ್ಸ್‌ಫಾರ್ಮರ್‌ಗಳು).
3. ವಿಫಲವಾದ ಟ್ರಾನ್ಸ್‌ಫಾರ್ಮರ್‌ಗಳನ್ನು ತ್ವರಿತವಾಗಿ ಬದಲಿಸಲು ವಿಭಾಗಗಳು ಮತ್ತು ಉಪ–ವಿಭಾಗಗಳಲ್ಲಿ ಟ್ರಾನ್ಸ್‌ಫಾರ್ಮರ್‌ಗಳ ಬಫರ್ ಸ್ಟಾಕ್ ಅನ್ನು ಸಿದ್ಧಪಡಿಸುವ ಪ್ರಯತ್ನಗಳು ಸಾಗಿವೆ. ಇದೇ ಉದ್ದೇಶಕ್ಕಾಗಿ ಕಂಪನಿಯು 2018–19ರಲ್ಲಿ 25ಕೆವಿಎ ಸಾಮರ್ಥ್ಯದ 2000 ಟ್ರಾನ್ಸ್‌ಫಾರ್ಮರ್‌ಗಳನ್ನು ಖರೀದಿಸಿದೆ. ಕಂಪನಿಯು ಈಗಾಗಲೇ ಎಲ್ಲ ತಾಲ್ಲೂಕು ಕೇಂದ್ರಗಳಲ್ಲಿ ಟ್ರಾನ್ಸ್‌ಫಾರ್ಮರ್ ದುರಸ್ತಿ ಕೇಂದ್ರಗಳನ್ನು ಸ್ಥಾಪಿಸಿದೆ.

v. ಎಚ್‌ಟಿ/ಎಲ್‌ಟಿ ಲೈನುಗಳು :

ಈ ವರ್ಷ 3804.71 ಕಿಮೀ ಗಳಷ್ಟು ಎಚ್‌ಟಿ ಲೈನುಗಳನ್ನು ಮತ್ತು 1469.24 ಕಿಮೀಗಳಷ್ಟು ಎಲ್‌ಟಿ ಲೈನುಗಳನ್ನು ಸೇರಿಸಲಾಯಿತು ಮತ್ತು ಇದರಿಂದ ಹಂಚಿಕೆ ಜಾಲದಲ್ಲಿ ಕಂಪನಿಯ ಎಚ್‌ಟಿ & ಎಲ್‌ಟಿ ಲೈನುಗಳ ಒಟ್ಟು ಉದ್ದ ಕ್ರಮವಾಗಿ 62249.61 ಕಿಮೀ ಮತ್ತು 87941.35 ಕಿಮೀ ಆಗಿದೆ. 31.03.19ರಂದು ಇದ್ದಂತೆ ಎಲ್‌ಟಿ/ಎಚ್‌ಟಿ ಅನುಪಾತವನ್ನು 1:1.412ಕ್ಕೆ ಇಳಿಸಲಾಯಿತು (31.03.18 ರಂದು 1:480).

vi. 33/11 ಕೆವಿ ಉಪಕೇಂದ್ರಗಳ ಸ್ಥಾಪನೆ:

ಹಣಕಾಸು ವರ್ಷ 2018–19ರಲ್ಲಿ 05 (ಐದು) 33 ಕೆವಿ ಉಪಕೇಂದ್ರಗಳನ್ನು ಸ್ಥಾಪಿಸಲಾಯಿತು ಮತ್ತು ಹಣಕಾಸು ವರ್ಷ 2019–20ರ ಮೊದಲ ತ್ರೈಮಾಸಿಕದಲ್ಲಿ 06 (ಆರು) 33 ಕೆವಿ ಉಪಕೇಂದ್ರಗಳನ್ನು ಸ್ಥಾಪಿಸಲಾಯಿತು. ಅಲ್ಲದೆ, 05 (ಐದು) 33 ಕೆವಿ ಉಪಕೇಂದ್ರಗಳ ಕಾಮಗಾರಿಗಳು (ಕುಡಿದರ್ಗಾ, ಲಿಂಗದಹಳ್ಳಿ, ಹಿರೇಮ್ಯಾಗೇರಿ, ಕಡೇಚೂರು & ಮಾಮದದೊಡ್ಡಿ) ಪ್ರಗತಿಯಲ್ಲಿದ್ದು 90% ದಷ್ಟು ಕಾಮಗಾರಿಗಳು ಪೂರ್ಣಗೊಂಡಿವೆ.

ಕಲಬುರ್ಗಿ ನಗರದಲ್ಲಿನ 05 ಜಿಐಎಸ್ ಉಪಕೇಂದ್ರದ ಕಾಮಗಾರಿಗಳ ಪೈಕಿ ಕೇವಲ 03 ಕೇಂದ್ರಗಳ – i) ಸೇವಾ ಕೇಂದ್ರ–44, ii) ಕೆಎಚ್‌ಬಿ ಸಮುಚ್ಛಯ &iii) ಸರ್ಕಾರಿ ಆಸ್ಪತ್ರೆ ಉಪಕೇಂದ್ರ ಗಳನ್ನು ಸ್ಥಾಪಿಸಲಾಯಿತು. ಉಳಿದ 02 ಕೇಂದ್ರಗಳ – i) ಶಾಂತಿನಗರ & ii) ಕೆಸಿಟಿ ಗೇಟ್ ಉಪಕೇಂದ್ರದ ಕಾಮಗಾರಿಗಳು ಪೂರ್ಣಗೊಂಡಿದ್ದು ಸ್ಥಾಪನೆಗೆ ಸಿದ್ಧವಾಗಿದೆ. ಹೆಚ್ಚುವರಿ 5ಎಂವಿಎ ವಿದ್ಯುತ್ ಟ್ರಾನ್ಸ್‌ಫಾರ್ಮರ್‌ಗಳನ್ನು ಒದಗಿಸುವ ಮೂಲಕ i) ಜಂಬಗ, ii) ಮಲ್ಲಿ, iii) ರೆಟಿಕಲ್, iv) ರೋಡಲಬಂಡ ಮತ್ತು v) ಸಾಗರ ಉಪಕೇಂದ್ರಗಳ ಜೋಡಿಸುವಿಕೆಯ ಕಾಮಗಾರಿಗಳು ಪ್ರಗತಿಯಲ್ಲಿವೆ.

vii. ಮೀಟರ್ ಅಳವಡಿಕೆ ಪ್ರಕ್ರಿಯೆ

1. 2018–19ರಲ್ಲಿ ರೀಡಿಂಗ್ ದಾಖಲಿಸದ 22010 ಮೀಟರ್‌ಗಳನ್ನು ಬದಲಿಸಲಾಯಿತು ಮತ್ತು 6340 ಮೀಟರ್‌ಗಳನ್ನು ನೇರ ಸಂಪರ್ಕದಲ್ಲಿರುವ ಸ್ಥಾವರಗಳಿಗೆ ಅಳವಡಿಸಲಾಯಿತು.
2. ಕಂಪನಿಯ ವ್ಯಾಪ್ತಿಯಲ್ಲಿ ಒಟ್ಟು 12878 ಬೀದಿ ದೀಪ ಸರ್ಕ್ಯೂಟ್‌ಗಳು ಅಸ್ತಿತ್ವದಲ್ಲಿವೆ ಮತ್ತು ಈ ಪೈಕಿ 11079

ಬೀದಿ ದೀಪಗಳಿಗೆ ಮೀಟರ್‌ಗಳನ್ನು ಅಳವಡಿಸಲಾಗಿದೆ.

3. ಜೆಸ್ಕಾಂನಲ್ಲಿ ವರ್ಷದ ಪ್ರಾರಂಭದ ಹೊತ್ತಿಗೆ 597675 ಬಿಜೆ/ಕೆಜೆ ಸ್ಥಾವರಗಳು ಅಸ್ತಿತ್ವದಲ್ಲಿದ್ದವು ಮತ್ತು 2018–19ರಲ್ಲಿ ಈ ಪೈಕಿ 2658 ಸ್ಥಾವರಗಳಿಗೆ ಮೀಟರ್ ಅಳವಡಿಸಲಾಯಿತು. ಮೀಟರ್ ಅಳವಡಿಸಲಾದ ಸಂಚಯಿತ ಬಿಜೆ/ಕೆಜೆ ಅನುಷ್ಠಾನಗಳ ಸಂಖ್ಯೆ 431015 ಆಗಿದೆ ಮತ್ತು ಮೀಟರ್ ಅಳವಡಿಸಬೇಕಾದ ಉಳಿದ ಸ್ಥಾವರಗಳ ಸಂಖ್ಯೆ 166660 ಆಗಿದೆ. ಇವುಗಳಿಗೆ ಮೀಟರ್ ಅಳವಡಿಸಲು ಕ್ರಮಗಳು ಜಾರಿಯಲ್ಲಿವೆ.

viii. ವಿಚಕ್ಷಣಾ ದಳದ ಚಟುವಟಿಕೆಗಳು:

(ಲಕ್ಷ ರೂಗಳು)

ವಿವರಗಳು	18–19ರಲ್ಲಿ ಪ್ರಗತಿ	17–18ರಲ್ಲಿ ಪ್ರಗತಿ
ತಪಾಸಿಸಿದ ಸ್ಥಾವರಗಳ ಸಂಖ್ಯೆ	75725	42197
ದಾಖಲಿಸಿದ ಪ್ರಕರಣಗಳ ಸಂಖ್ಯೆಯ (ಸಂಜ್ಞೇಯ ಮತ್ತು ಅಸಂಜ್ಞೇಯ)	6952	7049
ಬ್ಯಾಕ್ ಬಿಲ್ಲಿಂಗ್ ಮೊತ್ತ (ಸಂಜ್ಞೇಯ ಮತ್ತು ಅಸಂಜ್ಞೇಯ)	1476.27	1424.50
ಸಂಗ್ರಹಿಸಲಾದ ಬ್ಯಾಕ್ ಬಿಲ್ಲಿಂಗ್ ಶುಲ್ಕ (ಸಂಜ್ಞೇಯ ಮತ್ತು ಅಸಂಜ್ಞೇಯ)	1113.32	659.79
ರಾಜಿ ಕಬೂಲಿ ಶುಲ್ಕ i. ನಿರ್ಧಾರಣವಾದದ್ದು (ಸಂಜ್ಞೇಯ ಪ್ರಕರಣಗಳು)	119.45	163.65
ii. ಸಂಗ್ರಹಿಸಲಾದದ್ದು (ಸಂಜ್ಞೇಯ ಪ್ರಕರಣಗಳು)	159.49	178.25

ಸಿ. ಸಾಮಾಜಿಕ ಕಲ್ಯಾಣದ ಯೋಜನೆಗಳು :

i. ಕುಡಿಯುವ ನೀರಿನ ಪೂರೈಕೆ ಯೋಜನೆಗಳ ವಿದ್ಯುದೀಕರಣ:

1. 2018–19 ರಲ್ಲಿ 929 ನೀರು ಪೂರೈಕೆ ಯೋಜನೆಗಳನ್ನು ಕಂಪನಿಯ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಪ್ರಧಾನ ಆದ್ಯತೆಯ ಮೇಲೆ ಕರ್ನಾಟಕ ಸರ್ಕಾರದ ವಿವಿಧ ಯೋಜನೆಗಳ ಅಡಿ ವಿದ್ಯುದೀಕರಿಸಲಾಯಿತು.
2. 31–03–2019 ರಂದು ಇದ್ದಂತೆ ಕುಡಿಯುವ ನೀರಿನ ಪೂರೈಕೆ ಯೋಜನೆಗಳ ವಿದ್ಯುದೀಕರಣಕ್ಕಾಗಿ 210 ಅರ್ಜಿಗಳು (ಗ್ರಾಮೀಣ ಪ್ರದೇಶಗಳಲ್ಲಿ) ಬಾಕಿ ಉಳಿದಿದ್ದವು. ಈ ಪೈಕಿ 81 ಪ್ರಕರಣಗಳು ಜೆಸ್ಕಾಂನಲ್ಲಿ ಬಾಕಿ ಉಳಿದಿದ್ದವು. 129 ಪ್ರಕರಣಗಳು ಕಂಪನಿಯ ವಿವಿಧ ಔಪಚಾರಿಕತೆಗಳು ಪೂರ್ಣವಾಗದ ಕಾರಣ ಸ್ಥಳೀಯ ಸಂಸ್ಥೆಗಳಲ್ಲಿ ಬಾಕಿ ಉಳಿದಿದ್ದವು. ಉಳಿದ ಕಾಮಗಾರಿಗಳು ಪ್ರಗತಿಯಲ್ಲಿವೆ.

ii. ಗ್ರಾಮೀಣ ಮೂಲಸೌಕರ್ಯ ಸೃಷ್ಟಿ ಮತ್ತು ಆರ್‌ಜಿಜಿವಿವೈ ಯೋಜನೆಗಳ ಅಡಿಯ ಬಿಪಿಎಲ್ ಮನೆಗಳೂ ಸೇರಿದಂತೆ ಗ್ರಾಮೀಣ ನಿವಾಸಗಳ ವಿದ್ಯುದೀಕರಣ.

ಗುಲ್ಬರ್ಗಾ ಜಿಲ್ಲೆಗಾಗಿ 12ನೇ ಯೋಜನೆಯ ಅಡಿ ರೂ. 12.21 ಕೋಟಿ ಒಟ್ಟು ಮೊತ್ತದ ಆರ್‌ಜಿಜಿವಿವೈ ಯೋಜನೆಯನ್ನು ಮಂಜೂರು ಮಾಡಲಾಯಿತು.ಕಾಮಗಾರಿಯನ್ನು ಮೆ. ಶ್ರೀ ಈಶ್ವರ್ ಎಲೆಕ್ಟ್ರಿಕಲ್ಸ್, ಧಾರವಾಡ – ಇವರಿಗೆ ಮಾರ್ಚ್ 2015ರಲ್ಲಿ ವಹಿಸಲಾಯಿತು. ಕಾಮಗಾರಿಯು ಮೂಲಸೌಕರ್ಯವೂ ಸೇರಿ 26518 ಬಿಪಿಎಲ್ ಮನೆಗಳ ವಿದ್ಯುದೀಕರಣವನ್ನುಒಳಗೊಂಡಿತ್ತು. ಟರ್ನ್‌ಕೀ ಸಂಸ್ಥೆಯು ಬಿಪಿಎಲ್ ಮನೆಗಳ ವಿದ್ಯುದೀಕರಣವನ್ನು ಮಾತ್ರ ಪೂರೈಸಿತೇ ಹೊರತು ಕಾಮಗಾರಿಗಳನ್ನು ಪೂರೈಸಲಿಲ್ಲ. ಕಾಮಗಾರಿಯನ್ನು ದಿನಾಂಕ 05.09.2017ರಂದು ಗುತ್ತಿಗೆಯನ್ನು ಅವಧಿಗೆ ಮುನ್ನವೇ ರದ್ದು ಪಡಿಸಲಾಯಿತು ಮತ್ತು ಸಂಸ್ಥೆಯನ್ನು ಕಪ್ಪು ಪಟ್ಟಿಗೆ ಸೇರಿಸಲಾಯಿತು. ವಿದ್ಯುದೀಕರಣಗೊಳ್ಳದ ಉಳಿಕೆ ಗ್ರಾಮೀಣ ಗೃಹಗಳನ್ನು ಸೌಭಾಗ್ಯ ಯೋಜನೆಯಡಿ ಸೇರಿಸಲಾಯಿತು.

iii. ನೀರಾವರಿ ಪಂಪ್‌ಸೆಟ್‌ಗಳ ವಿದ್ಯುದೀಕರಣ:

2018–19ರ ವರ್ಷದಲ್ಲಿ ಸಾಮಾನ್ಯ ವರ್ಗ, ಎಸ್‌ಸಿಪಿ, ಗಂಗಾಕಲ್ಯಾಣ ಯೋಜನೆ, ಹಿಂದುಳಿದ ಸಮುದಾಯ ಮತ್ತು ಅಲ್ಪಸಂಖ್ಯಾತರು ಮುಂತಾದ ಯೋಜನೆಗಳ ಅಡಿ 9193 ನೀರಾವರಿ ಪಂಪ್‌ಸೆಟ್‌ಗಳನ್ನು ವಿದ್ಯುದೀಕರಿಸಲಾಯಿತು.

ಡಿ.ಹೊಸ ಉಪಕ್ರಮಗಳು

2) 24 x 7 ಗ್ರಾಹಕ ಸೇವಾ ಕೇಂದ್ರ:

- ಫ್ಯೂಸ್ ಹಾಳಾಗುವುದು, ಬಿಲ್ಲಿಂಗ್, ಟ್ರಾನ್ಸ್‌ಫಾರ್ಮರ್ ವೈಫಲ್ಯ ಮತ್ತು ವಿದ್ಯುತ್ ಸರಬರಾಜು ವೈಫಲ್ಯ ಮುಂತಾದ ವಿಷಯಗಳಿಗೆ ಸಂಬಂಧಿಸಿದಂತೆ ಗ್ರಾಹಕರು ದೂರುಗಳನ್ನು ನೋಂದಾಯಿಸಲು ಸಾಧ್ಯವಾಗುವಂತೆ ಕಾರ್ಪೊರೇಟ್ ಕಛೇರಿಯಲ್ಲಿ ಒಂದು 24 x 7 ಗ್ರಾಹಕ ಸೇವಾ ಕೇಂದ್ರವನ್ನು 180042558585 ಟೋಲ್ ಫ್ರೀ ಸಂಖ್ಯೆಯೊಂದಿಗೆ ಎಲ್ಲ ಮೂಲಸೌಕರ್ಯಗಳೊಂದಿಗೆ 18.01.2012 ರಂದು ಸ್ಥಾಪಿಸಲಾಗಿದೆ.
- 13.08.2017 ರಿಂದ ಸಿಸಿಸಿಯಲ್ಲಿ ಸಾರ್ವಜನಿಕ ದೂರುಗಳ ನಿವಾರಣಾ ಸೇವೆಯನ್ನು (ಪಿಜಿಆರ್‌ಎಸ್) ಅನುಷ್ಠಾನಗೊಳಿಸಲಾಗಿದೆ. ಗ್ರಾಹಕರು ಕೆಳಗಿನ ವಿಧಾನಗಳನ್ನು ಅನುಸರಿಸಿ gescompgrs24X7.com - ಇಲ್ಲಿ ಆನ್‌ಲೈನ್ ಮೂಲಕ ದೂರುಗಳನ್ನು ನೋಂದಾಯಿಸಬಹುದಾಗಿದೆ:

1. ಎಸ್‌ಎಂಎಸ್ 2. ಇ–ಮೇಲ್ 3. ವೆಬ್ ವಿಳಾಸ
4. ಫೇಸ್‌ಬುಕ್ 5. ಆಫ್‌ಲೈನ್ ಮುಂತಾದವು.

- ವಿದ್ಯುತ್ ಸರಬರಾಜಿಗೆ ತಡೆಯುಂಟುಮಾಡುವ ಲೈನುಗಳ/ಸಲಕರಣೆಗಳ ಬ್ರೇಕ್‌ಡೌನ್, ಟ್ರಾನ್ಸ್‌ಫಾರ್ಮರ್‌ಗಳ ವೈಫಲ್ಯ ಮುಂತಾದ ಗ್ರಾಹಕರ ದೂರುಗಳನ್ನು ಬಗೆಹರಿಸುವಲ್ಲಿ ಅಗತ್ಯವಾದ ಸಮಯವನ್ನು ಕಡಿಮೆಮಾಡುವ ನಿಟ್ಟಿನಲ್ಲಿ ತ್ವರಿತವಾಗಿ ಮತ್ತು ಪರಿಣಾಮಕಾರಿಯಾಗಿ ಸೇವೆಗಳನ್ನು ಒದಗಿಸುವ ಮೂಲಕ ಗ್ರಾಹಕ ಸೇವೆಗಳನ್ನು ಉತ್ತಮಗೊಳಿಸುವ ತನ್ನ ಪ್ರಯತ್ನಗಳನ್ನು ಮುಂದುವರೆಸಿದೆ.

➢ ಗ್ರಾಹಕರು ತಮ್ಮ ಕುಂದುಕೊರತೆಗಳಿಗೆ ಸಂಬಂಧಿಸಿದಂತೆ ಸಕಾಲಿಕವಾದ ಮತ್ತು ಪರಿಣಾಮಕಾರಿಯಾದ ಸೇವೆಗಳು/ಪರಿಹಾರಗಳನ್ನು ತಮ್ಮ ವಿದ್ಯುತ್ ಸರಬರಾಜಿನ ಪ್ರದೇಶಗಳಲ್ಲಿ ಪಡೆದುಕೊಳ್ಳಲು ಸಾಧ್ಯವಾಗುವಂತೆ ಜೆಸ್ಕಾಂ ಎಲ್ಲ ವಿದ್ಯುಚ್ಛಕ್ತಿ ಗ್ರಾಹಕ ದೂರುಗಳ ನಿವಾರಣೆಯ ಪ್ರಕ್ರಿಯೆಯನ್ನು ಸೂಕ್ತವಾಗಿ ಮೇಲ್ವಿಚಾರಿಸುತ್ತಿದೆ. ಜೆಸ್ಕಾಂ ವ್ಯಾಪ್ತಿಯ ಎಲ್ಲ ಗ್ರಾಹಕರೂ ತಮ್ಮ ದೂರುಗಳನ್ನು ನೇರವಾಗಿ ಸಲ್ಲಿಸಲು ಸಾಧ್ಯವಾಗುವಂತೆ ಕೇಂದ್ರೀಕೃತ ಗ್ರಾಹಕರ ಸೇವಾ ಕೇಂದ್ರವು ಪರ್ಯಾಪ್ತವಾದ ಸಂಖ್ಯೆಯಲ್ಲಿ ಡೆಸ್ಕ್ ಆಪರೇಟರ್‌ಗಳನ್ನು ಹೊಂದಿದೆ.

ಪ್ರತಿಯೊಂದು ದೂರನ್ನೂ ಸಹಾಯವಾಣಿ ದೂರವಾಣಿ ಸಂಖ್ಯೆಯಲ್ಲಿ ಡೆಸ್ಕ್ ಆಪರೇಟರ್ ಸ್ವೀಕರಿಸಿ ನೋಂದಾಯಿಸುತ್ತಾರೆ ಮತ್ತು ಗ್ರಾಹಕರಿಗೆ ಡಾಕೆಟ್ ಸಂಖ್ಯೆಯೊಂದನ್ನು ನೀಡುತ್ತಾರೆ. ತದನಂತರ ದೂರನ್ನು ಸಂಬಂಧಿತ ಕ್ಷೇತ್ರ ಸಿಬ್ಬಂದಿಗೆ ಪರಿಹಾರಕ್ಕೆಂದು ಆನ್‌ಲೈನ್ ಮೂಲಕ ವರ್ಗಾಯಿಸಲಾಗುತ್ತದೆ/ತಿಳಿಸಲಾಗುತ್ತದೆ. ದೂರುದಾರರ/ದೋಷವಿರುವ ನೆಲೆಗೆ ಆದಷ್ಟು ಬೇಗ ಸಂಬಂಧಿತ ಓ&ಎಂ/ಸ್ಥಳೀಯ ಸೇವಾ ಕೇಂದ್ರ ಸಿಬ್ಬಂದಿ ಭೇಟಿನೀಡಿ ದೂರುಗಳನ್ನು ಪರಿಹರಿಸಿ ಆನಂತರ ದೂರನ್ನು ಪರಿಹರಿಸಿರುವ ಬಗ್ಗೆ ಕೇಂದ್ರೀಕೃತ ಸೇವಾಕೇಂದ್ರಕ್ಕೆ ಮಾಹಿತಿ ನೀಡುತ್ತಾರೆ.

➢ ಇದಾದ ನಂತರ ಕಾಲ್ ಸೆಂಟರ್ ಸಿಬ್ಬಂದಿ ದೂರುದಾರರಿಗೆ ಕರೆಮಾಡಿ ದೂರನ್ನು ಪರಿಹರಿಸಲಾಗಿದೆಯೇ ಎಂದು ವಿಚಾರಿಸುತ್ತಾರೆ. ಗ್ರಾಹಕರ/ದೂರುದಾರರ ಸ್ಥಿರೀಕರಣದ ನಂತರ ದೂರನ್ನು ಮುಕ್ತಾಯಗೊಳಿಸಲಾಗುತ್ತದೆ. ಸಿಸಿಸಿ ವ್ಯವಸ್ಥೆಯು ಸ್ವೀಕರಿಸಲಾದ ದೂರುಗಳ ಸಂಖ್ಯೆ/ಸ್ವರೂಪ, ಪರಿಹರಿಸಲಾದ ದೂರುಗಳು, ಬಾಕಿ ಇರುವ ದೂರುಗಳು ಮತ್ತು ದೂರುಗಳನ್ನು ಪರಿಹರಿಸದಿರಲು ಕಾರಣಗಳನ್ನು ಸೂಚಿಸುತ್ತ ವರದಿಗಳನ್ನು ಸೃಷ್ಟಿಸುತ್ತದೆ.

3) ಜೆಸ್ಕಾಂನಲ್ಲಿ ನಿರಂತರ ಜ್ಯೋತಿ ಯೋಜನೆಯ ಅನುಷ್ಠಾನ.

ಜೆಸ್ಕಾಂನಲ್ಲಿ ನಿರಂತರ ಜ್ಯೋತಿ ಯೋಜನೆಯನ್ನು ತಾಲ್ಲೂಕುವಾರು ನೆಲೆಯಲ್ಲಿ ಹಂತ 1 & 2 ರಲ್ಲಿ ಕೈಗೆತ್ತಿಕೊಳ್ಳಲು ಪ್ರಸ್ತಾಪಿಸಲಾಗಿತ್ತು. ಹಂತ–1 ರ ಅಡಿ 20 ತಾಲ್ಲೂಕುಗಳು ಮತ್ತು ಹಂತ–2ರ ಅಡಿ 10 ತಾಲ್ಲೂಕುಗಳು ಬರುತ್ತವೆ. ಸ್ವತಂತ್ರ 11ಕೆವಿ ಫೀಡರ್‌ಗಳನ್ನು ನಿರ್ಮಿಸುವ ಮೂಲಕ ಗ್ರಾಮೀಣ ಪ್ರದೇಶಗಳಲ್ಲಿ ಕೃಷಿಯೇತರ ಹೊರೆಗಳಿಗೆ 24 ಗಂಟೆಗಳ ವಿದ್ಯುತ್ ಸರಬರಾಜುಮಾಡಲು ಈ ಯೋಜನೆಯನ್ನು ಉದ್ದೇಶಿಸಲಾಯಿತು. ನಿರಂತರ ಜ್ಯೋತಿ ಯೋಜನೆಯ ಪೂರ್ಣಗೊಳಿಸಲಾದ ಮತ್ತು ಅನುಷ್ಠಾನಗೊಳಿಸಲಾದ ಬಗೆಗಿನ ವಿವರಗಳನ್ನು ಕೆಳಗೆ ನೀಡಲಾಗಿದೆ.

ಕ್ರ.ಸಂ.	ಹಂತ	ತಾಲ್ಲೂಕುಗಳ ಸಂಖ್ಯೆ	ಅನುಷ್ಠಾನಗೊಳಿಸಲು ತಿಳಿಸಲಾದ ಫೀಡರ್‌ಗಳ ಸಂಖ್ಯೆ	ವ್ಯಾಪ್ತಿಯಲ್ಲಿ ಬರುವ ಹಳ್ಳಿಗಳು	ಹೊಸ ಎನ್‌ಜೆ ಫೀಡರ್‌ಗಳ ಸಂಖ್ಯೆ	ಪ್ರಗತಿಯಲ್ಲಿರುವ ಕಾಮಗಾರಿ	ಬುಕ್ ಮಾಡಲಾದ ವೆಚ್ಚ (ಕೋಟಿ)	ಅನುಷ್ಠಾನಗೊಳಿಸಲಾದ ದಿನಾಂಕ
1	ಹಂತ – 1	20	246	2765	246	0	387.01	ಸೆಪ್ಟೆಂಬರ್ –17
2	ಹಂತ – 11	10	109	1087	100	5	169.05	ಏಪ್ರಿಲ್ – 18
ಒಟ್ಟು		**30**	**355**	**3852**	**346**	**5**	**556.06**	

ಸರ್ಕಾರಿ ಆದೇಶ ಸಂಖ್ಯೆ ಡಿಓಇ 18 ಎಆರ್‌ಯು ಬೆಂಗಳೂರು ದಿನಾಂಕ. 13.03.2014 ಅನ್ವಯ ಜೆಸ್ಕಾಂನ ನಿರಂತರ ಜ್ಯೋತಿ ಯೋಜನೆಯ ಆಂತರಿಕ ಮೌಲ್ಯಮಾಪನ ಅಧ್ಯಯನವನ್ನು ನಡೆಸುವ ಕೆಲಸವನ್ನು ಹೈದರಾಬಾದ್ ಕರ್ನಾಟಕ ಸೆಂಟರ್ ಫಾರ್ ಅಡ್ವಾನ್ಸ್ಡ್ ಲರ್ನಿಗ್ ಅಂಡ್ ವೆಲ್‌ಫೇರ್ ಸೊಸೈಟಿಗೆ ವಹಿಸಲಾಗಿದೆ. ದಿನಾಂಕ 29.04.2019ರಂದು ಜೆಸ್ಕಾಂನ ನಿರಂತರ ಜ್ಯೋತಿ ಯೋಜನೆಯ ಸಾಧನೆಯ ಮೌಲ್ಯಮಾಪನದ ವರದಿಯನ್ನು ಸಲ್ಲಿಸಲಾಗಿದ್ದು ಗ್ರಾಮಸ್ಥರು ವಿದ್ಯುತ್ ಸರಬರಾಜು ವ್ಯವಸ್ಥೆಗಳ ಬಗ್ಗೆ ಸಾಮಾನ್ಯವಾಗಿ ತಮ್ಮ ತೃಪ್ತಿಯನ್ನು ವ್ಯಕ್ತಪಡಿಸಿರುತ್ತಾರೆ.

4) ಹೊಸ ಯೋಜನೆಗಳು :

ಇಂಧನ ಸಚಿವಾಲಯ/ಭಾರತ ಸರ್ಕಾರ ಎರಡು ಹೊಸ ಯೋಜನೆಗಳನ್ನು ಮಂಜೂರುಮಾಡಿದೆ:

1) ದೀನ್ ದಯಾಳ್ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆ (ಡಿಡಿಯುಜಿಜೆವೈ):

ಭಾರತ ಸರ್ಕಾರವು ದೇಶದ ಗ್ರಾಮೀಣ ಭಾಗಗಳಲ್ಲಿ ವಿತರಣಾ ಮೂಲಸೌಕರ್ಯವನ್ನು ಬಲಪಡಿಸಲು ಮತ್ತು ಜೋಡಿಸಲು ಡಿಸ್ಕಾಂಗಳು/ವಿದ್ಯುತ್ ಇಲಾಖೆಗಳ ಪ್ರಯತ್ನಗಳಿಗೆ ಪೂರಕವಾಗಿರಲು ಬಂಡವಾಳ ವೆಚ್ಚಕ್ಕೆ ಪ್ರತಿಯಾಗಿ ಹಣಕಾಸು ಬೆಂಬಲವನ್ನು ವಿಸ್ತರಿಸುವ ಉದ್ದೇಶದಿಂದ ದೀನ್ ದಯಾಳ್ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆಯನ್ನು (ಡಿಡಿಯುಜಿಜೆವೈ) ಪ್ರಾರಂಭಿಸಿದೆ.

ಕಾಮಗಾರಿಯ ವ್ಯಾಪ್ತಿ :

ಯೋಜನೆಯ ಅಡಿಯಲ್ಲಿ ಕೇವಲ ಗ್ರಾಮೀಣ ಪ್ರದೇಶಗಳನ್ನು ಮಾತ್ರ ಸೇರಿಸಲಾಗಿದ್ದು ಕಾಮಗಾರಿಯ ವ್ಯಾಪ್ತಿಯಲ್ಲಿ ಫೀಡರ್ ಬೇರ್ಪಡಿಸುವಿಕೆ, ವ್ಯವಸ್ಥೆಯ ಬಲಪಡಿಸುವಿಕೆ ಮತ್ತು ವಿತರಣಾ ಟ್ರಾನ್ಸ್‌ಫಾರ್ಮರ್/ಫೀಡರ್/ಗ್ರಾಹಕರಿಗೆ ಪೂರೈಸಲಾಗುವ ವಿದ್ಯುತ್ತಿಗೆ ಮೀಟರ್ ಅಳವಡಿಸುವ ಪ್ರಕ್ರಿಯೆ ಮತ್ತು ಗ್ರಾಮೀಣ ವಿದ್ಯುದೀಕರಣವೂ ಒಳಗೊಂಡಂತೆ ಸಂಸದ್ ಆದರ್ಶ ಗ್ರಾಮ ಯೋಜನೆ (ಎಸ್‌ಎಜಿವೈ) ಗಳಿಗೆ ಸಂಬಂಧಿಸಿದ ಕಾಮಗಾರಿಗಳು ಸೇರುತ್ತವೆ. ಮಾನ್ಯ ಹೆಚ್ಚುವರಿ ಮುಖ್ಯ ಕಾರ್ಯದರ್ಶಿಗಳು, ಇಂಧನ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ ಇಎನ್ 11 ವಿಎಸ್‌ಸಿ 2015/ಪಿ1 ದಿ. 29.01.2016 ಅನ್ವಯ ಜೆಸ್ಕಾಂನಲ್ಲಿ 6 ಜಿಲ್ಲಾವಾರು ಪ್ರಸ್ತಾವನೆಗಳನ್ನು ಮಂಜೂರುಮಾಡಲಾಗಿದ್ದು ಮಂಜೂರಾದ ಜಿಲ್ಲಾವಾರು ಡಿಪಿಆರ್ ಮೊತ್ತವನ್ನು ಕೆಳಗೆ ನೀಡಲಾಗಿದೆ:

ಜೆಸ್ಕಾಂನಲ್ಲಿ ದೀನ್ ದಯಾಳ್ ಉಪಾಧ್ಯಾಯ ಗ್ರಾಮ ಜ್ಯೋತಿ ಯೋಜನೆ (ಡಿಡಿಯುಜಿಜೆವೈ) ಅಡಿಯಲ್ಲಿ ಮಂಜೂರಾದ ಜಿಲ್ಲಾವಾರು/ಅಂಗವಾರು ಮೊತ್ತದ ವಿವರ

ಮೊತ್ತ (ಕೋಟಿ ರೂ. ಗಳು)

ಕ್ರ. ಸಂ	ಜಿಲ್ಲೆಯ ಹೆಸರು	ಮೀಟರಿಂಗ್	ಎಸ್ಎಜಿವೈ		ಆರ್ಎಚ್ ಗಳಿಗೆ ಲಭ್ಯ ವಕಾಶ	ವ್ಯವಸ್ಥೆ ಬಲ ಪಡಿಸುವಿಕೆ	ಫೀಡರ್ ಪ್ರತ್ಯೇಕಿಸುವಿಕೆ	ಒಟ್ಟು ವೆಚ್ಚ	ಪಿಎಂಎ ಶುಲ್ಕಗಳು	ಪಿಎಂಎ ಶುಲ್ಕಗಳೂ ಸೇರಿ ಒಟ್ಟು ವೆಚ್ಚ	ಕಾಮಗಾರಿಯ ಸ್ಥಿತಿಗತಿ
			ಸಂ.	ವೆಚ್ಚ							
1	ಬಳ್ಳಾರಿ	27.94	1	0.07	1.47	14.13	35.98	79.59	0.40	79.99	ವ್ಯವಸ್ಥೆಯ ಬಲಪಡಿಸುವಿಕೆ, ಫೀಡರ್ ಬೇರ್ಪಡಿಸುವಿಕೆ, ಎಸ್ಎಜಿವೈ ಮತ್ತು ಆರ್ಎಚ್ಎಚ್ ಗಾಗಿ 15.7.17ರಂದು ಎಲ್ಓಐ ಹೊರಡಿಸಲಾಗಿದೆ. ಮೀಟರಿಂಗ್ ಅಂಗಕ್ಕಾಗಿ 2.2.2019ರಂದು ಎಲ್ಓಐ ಹೊರಡಿಸಲಾಗಿದೆ.
2	ಬೀದರ್	14.13	1	0.11	0.65	13.44	54.82	83.15	0.42	83.57	
3	ಗುಲ್ಬರ್ಗಾ	30.77	1	0.28	0	15.84	86.06	132.95	0.66	133.61	
4	ಕೊಪ್ಪಳ	15.46	0	0	0.65	8.42	26.17	50.70	0.25	50.95	
5	ರಾಯಚೂರು	22.23	2	0.67	2.45	7.36	30.48	63.19	0.32	63.51	
6	ಯಾದಗಿರಿ	10.28	1	0.21	2.03	7.72	67.00	87.24	0.44	87.68	
ಜೆಸ್ಕಾಂ ಒಟ್ಟು		**120.81**	**6.00**	**1.34**	**7.25**	**66.91**	**300.51**	**496.82**	**2.48**	**499.31**	

ಯೋಜನೆಗೆ ಹಣಕಾಸು ಬೆಂಬಲ ಕೆಳಗಿನಂತಿರುತ್ತದೆ :

ಅಭಿಕರಣ	ಬೆಂಬಲದ ಸ್ವರೂಪ	ಬೆಂಬಲದ ಪರಿಮಾಣ (ಯೋಜನಾ ವೆಚ್ಚದ ಪ್ರತಿಶತ) ವಿಶೇಷ ವರ್ಗದ ರಾಜ್ಯಗಳನ್ನುಬಿಟ್ಟು ಉಳಿದವು
ಭಾರತ ಸರ್ಕಾರ	ಅನುದಾನ	60
ಉಪಯುಕ್ತತೆ/ರಾಜ್ಯದ ಕೊಡುಗೆ	ಸ್ವಂತ ನಿಧಿ	10
ಸಾಲ (ಹಣಕಾಸು ಸಂಸ್ಥೆಗಳು/ ಬ್ಯಾಂಕುಗಳು)	ಸಾಲ	30
ನಿಗದಿತ ಗುರಿಗಳ ಸಾಧನೆಯ ಮೇಲೆ		
ಭಾರತ ಸರ್ಕಾರದಿಂದ ಹೆಚ್ಚುವರಿ ಅನುದಾನ	ಅನುದಾನ	ಒಟ್ಟು ಸಾಲ ಅಂಗದ (30%) 50%, ಅರ್ಥಾತ್ 15%
ಭಾರತ ಸರ್ಕಾರದಿಂದ ಗರಿಷ್ಠ ಅನುದಾನ (ನಿಗದಿತ ಗುರಿಗಳ ಸಾಧನೆಯ ಮೇಲೆ ಹೆಚ್ಚುವರಿ ಅನುದಾನವೂ ಸೇರಿ)	ಅನುದಾನ	75%

ಡಿಡಿಯುಜಿಜೆವೈ ಭೌತಿಕ ಪ್ರಗತಿ (ಮಾರ್ಚ್ 19ರ ವರೆಗೆ)

ಕ್ರ.ಸಂ	ಮೈಲಿಗಲ್ಲಿನ ಗುರುತು	ಘಟಕ	ಜೆಸ್ಕಾಂ	
			ಗುರಿ	ಸಾಧನೆ
1	ಹೊಸದಾದ 11 ಕೆವಿ ಲೈನ್ ನಿರ್ಮಾಣ	ಕಿಮೀ	5591.39	3410.24
2	11 ಕೆವಿ ಲೈನ್ ಮರುವಾಹಕಗೊಳಿಸುವಿಕೆ	ಕಿಮೀ	2651.31	1602.23
3	ಹೊಸದಾದ ಎಚ್ಟಿ ಲೈನ್ ನಿರ್ಮಾಣ	ಕಿಮೀ	188.54	74.88
4	ಎಲ್ಟಿ ಲೈನ್ ಮರುವಾಹಕಗೊಳಿಸುವಿಕೆ	ಕಿಮೀ	549.49	393.77
5	ಹೊಸದಾದ ಡಿಟಿಸಿ ಒದಗಿಸುವಿಕೆ	ಸಂಖ್ಯೆ	3552	2264
6	ಬಿಪಿಎಲ್ ಮನೆಗಳಿಗೆ ಸೇವಾಜೋಡಣೆ ಒದಗಿಸುವಿಕೆ	ಸಂಖ್ಯೆ	4942	4942
7	ಎಲ್ಟಿ ಎಬಿ ಕೇಬಲ್	ಸಂಖ್ಯೆ	1842.9	496.94
8	ದಾಖಲಿಸಿದ ವೆಚ್ಚ	249.21 ಕೋಟಿ		

2. **ಐಪಿಡಿಎಸ್ (ಇಂಟೆಗ್ರೇಟೆಡ್ ಪವರ್ ಡೆವಲಪ್‌ಮೆಂಟ್ ಸ್ಕೀಮ್):** ವೃತ್ತವಾರು ಮಂಜೂರಾದ ಮೊತ್ತ – ರೂ. 183.41 ಕೋಟಿ, ವ್ಯಾಪ್ತಿಯಲ್ಲಿನ ಪಟ್ಟಣಗಳು – 42

ಕಾರ್ಯದ ವ್ಯಾಪ್ತಿ:

ಓವರ್‌ಹೆಡ್ ಮತ್ತು ಎಬಿ ಕೇಬಲ್‌ಗಳೂ ಸೇರಿದಂತೆ ಮತ್ತು ಎಚ್‌ಟಿ & ಎಲ್‌ಟಿ ಲೈನುಗಳ ರಿ–ಕಂಡಕ್ಟರಿಂಗ್, ಹೊಸ ಎಚ್‌ಟಿ & ಎಲ್‌ಟಿ ಲೈನುಗಳು, ಹೆಚ್ಚುವರಿ ಡಿಟಿಗಳು, ಡಿಟಿ ಗಳ ದುರಸ್ತಿ & ನಿರ್ವಹಣೆ ಕಾಮಗಾರಿಗಳ ವೃದ್ಧಿ, ಹೊಸ 33 ಕೆವಿ ಕೇಂದ್ರಗಳ ಸ್ಥಾಪನೆ ಮತ್ತು ಜೋಡಿಸುವಿಕೆ ಹಾಗೂ ಅಸ್ತಿತ್ವದಲ್ಲಿರುವ ಜೆಸ್ಕಾಂ/ಸರ್ಕಾರಿ ಕಟ್ಟಡಗಳ ಮೇಲೆ ಸೌರ ಮೇಲು ಛಾವಣಿ ಅಳವಡಿಕೆ– ಇವುಗಳನ್ನು ಒಳಗೊಳ್ಳುವಂತೆ 11 ಕೆವಿ ವ್ಯವಸ್ಥೆಯ ಬಲಪಡಿಸುವಿಕೆ ವೆಚ್ಚವನ್ನು ಒಳಗೊಳ್ಳುತ್ತದೆ. ಕಲಬುರ್ಗಿ, ಬೀದರ್ ಮತ್ತು ಬಳ್ಳಾರಿ ವೃತ್ತಗಳಲ್ಲಿನ ಕಾಮಗಾರಿಗಳು ಪೂರ್ಣಗೊಂಡಿದ್ದು ರಾಯಚೂರು ವೃತ್ತದಲ್ಲಿ ಕಾಮಗಾರಿ ಪ್ರಗತಿಯಲ್ಲಿದ್ದು ಸೆಪ್ಟೆಂಬರ್ 15, 2019ರ ಹೊತ್ತಿಗೆ ಪೂರ್ಣಗೊಳ್ಳುತ್ತದೆ. ಪೂರ್ಣಗೊಳಿಸುವಿಕೆ ವರದಿಗಳ ಸಿದ್ಧಪಡಿಸುವಿಕೆಯು ಪ್ರಗತಿಯಲ್ಲದೆ.

3. ಸೌಭಾಗ್ಯ ಯೋಜನೆ

ಕಾಮಗಾರಿಯ ವ್ಯಾಪ್ತಿ:

ಗ್ರಾಮೀಣ ಪ್ರದೇಶಗಳ ಎಲ್ಲ ವಿದ್ಯುತ್–ರಹಿತ ಗೃಹಗಳಿಗೂ ವಿದ್ಯುಚ್ಛಕ್ತಿ ಸಂಪರ್ಕವನ್ನು ಒದಗಿಸಿ ಕೊನೆಯ ಬಿಂದುವನ್ನೂ ಸಂಪರ್ಕದ ವ್ಯಾಪ್ತಿಗೆ ತರುವುದು.

- ಈ ಯೋಜನೆಯಡಿ ಉಚಿತ ವಿದ್ಯುಚ್ಛಕ್ತಿಯ ಲಾಭ ಪಡೆಯುವ ಮನೆಗಳನ್ನು ಸಾಮಾಜಿಕ–ಆರ್ಥಿಕ ಜನಗಣತಿ (ಎಸ್‌ಇಸಿಸಿ) 2011 ಬಳಸಿ ಗುರುತಿಸಲಾಗುವುದು ಮತ್ತು ಇದರಿಂದ ಈ ಯೋಜನೆಯಡಿ ಎಲ್ಲ ಆರ್ಥಿಕವಾಗಿ ಹಿಂದುಳಿದ ಗೃಹಗಳೂ ಲಾಭ ಪಡೆಯಬಹುದಾಗಿದೆ.
- ಸೌಭಾಗ್ಯ ಯೋಜನೆಯಡಿ ವಿದ್ಯುದೀಕರಣಕ್ಕಾಗಿ ಒಟ್ಟು 61446 ಗ್ರಾಮೀಣ ಗೃಹಗಳನ್ನು ಪರಿಗಣಿಸಲಾಗಿದೆ.
- ಈ ಯೋಜನೆಯಡಿ ಗ್ರಾಮೀಣ ಪ್ರದೇಶಗಳಲ್ಲಿವಿದ್ಯುತ್–ರಹಿತ ಗೃಹಗಳ ವಿದ್ಯುದೀಕರಣ ಕಾಮಗಾರಿಯನ್ನು 16 ಪ್ಯಾಕೇಜುಗಳಿಗೆ ವಹಿಸಲಾಗಿದೆ (7 ವಿಭಾಗವಾರು ಪ್ಯಾಕೇಜುಗಳು ಮತ್ತು 9 ತಾಲ್ಲೂಕುವಾರು ಪ್ಯಾಕೇಜುಗಳು).
- ಒಟ್ಟು ಡಿಪಿಆರ್ ವೆಚ್ಚವು ರೂ. 77.55 ಕೋಟಿ ಆಗಿದೆ.
- 16 ಪ್ಯಾಕೇಜುಗಳ ಒಟ್ಟು ವಹಿಸಲಾದ ವೆಚ್ಚ ರೂ. 91.78 ಕೋಟಿ ಆಗಿದೆ.
- 16 ಪ್ಯಾಕೇಜುಗಳ ಪೈಕಿ ಎಲ್ಲ 16ರಲ್ಲೂ ಸೇವಾ ಜೋಡಣೆ ಕಾಮಗಾರಿಗಳು ಪೂರ್ಣಗೊಂಡಿದ್ದು ಮೂಲಸೌಕರ್ಯ ಕಾಮಗಾರಿಗಳು ಪ್ರಗತಿಯಲ್ಲಿವೆ.

4. ಗ್ರಾಮ ವಿದ್ಯುತ್ ಪ್ರತಿನಿಧಿ ಯೋಜನೆ : ಸದ್ಯಕ್ಕೆ ಜೆಸ್ಕಾಂನಲ್ಲಿ 1063 ಮೈಕ್ರೋ ಫೀಡರ್ ಫ್ರಾಂಚೈಸೀಗಳು ಅಸ್ತಿತ್ವದಲ್ಲಿದ್ದು ಈ ಪೈಕಿ 919 ಮೈಕ್ರೋ ಫೀಡರ್ ಫ್ರಾಂಚೈಸೀಗಳು ಕಾರ್ಯನಿರ್ವಹಿಸುತ್ತಿವೆ.

2018–19ರ ವರ್ಷದಲ್ಲಿ ಎಮ್‌ಎಫ್‌ಎಫ್ ಗಳು ಸಾಧಿಸಿದ ಪ್ರಗತಿ ಹೀಗಿದೆ:

ಲಕ್ಷ ರೂ.ಗಳು

ಕ್ರ	ವಿಭಾಗದ ಹೆಸರು	ಪ್ರಾರಂಭದ ತಿಂಗಳ್	ಗುರಿ		ಸಾಧನೆ		ಮುಕ್ತಾಯದ ತಿಂಗಳ್	ಗುರಿಯ ಮೇಲಿನ	
			ಬೇಡಿಕೆ	ಸಂಗ್ರಹಣೆ	ಬೇಡಿಕೆ	ಸಂಗ್ರಹಣೆ		ಬೇಡಿಕೆ	ಸಂಗ್ರಹಣ
1	ಗುಲ್ಬರ್ಗಾ–1	806.24	4306.36	4268.11	4892.79	4813.39	850.74	113.62	112.78
2	ಗುಲ್ಬರ್ಗಾ–2	829.50	2533.59	2444.77	2779.80	2493.76	906.05	109.72	102.00
3	ಯಾದಗಿರಿ	1460.85	2719.91	2583.18	2705.11	2620.53	1532.73	99.46	101.45
4	ಸೇಡಂ	433.83	1709.27	1693.39	1687.17	1698.64	650.32	98.71	100.31
5	ಬೀದರ್	1446.35	2926.31	3159.38	3212.48	3242.84	1416.03	109.78	102.64
6	ಹುಮ್ನಾಬಾದ್	333.99	2686.501	2373.871	2833.146	2584.34	330.48	105.46	108.87
7	ರಾಯಚೂರು	1106.48	2580.79	2291.42	2938.31	2830.31	1146.65	113.85	123.52
8	ಕೊಪ್ಪಳ	614.55	1538.30	1519.22	2187.62	2186.85	615.34	142.21	143.95
9	ಸಿಂಧನೂರು	218.03	696.81	917.45	1729.70	1676.63	540.39	248.23	182.75
10	ಗಂಗಾವತಿ	607.83	2788.07	2185.34	2770.86	3918.12	1110.40	99.38	179.29
11	ಬಳ್ಳಾರಿ	1205.23	3473.76	3499.06	3740.11	3647.12	1298.42	107.67	104.23
12	ಹೊಸಪೇಟೆ	423.47	3489	2875.86	3014.00	3021.90	457.53	86.39	105.08
	ಜೆಸ್ಕಾಂ	**9486.35**	**31448.67**	**29811.05**	**34491.09**	**34734.43**	**10855.08**	**109.67**	**116.52**

5. ಟೆಂಡರಿಂಗ್ ವ್ಯವಸ್ಥೆ :

ವಿವಿಧ ಕಾಮಗಾರಿಗಳಿಗಾಗಿ ಟೆಂಡರ್‌ಗಳನ್ನು ಆಹ್ವಾನಿಸುವ ಪ್ರಕ್ರಿಯೆಯಲ್ಲಿನ ಪಾರದರ್ಶಕತೆಯನ್ನು ಹೆಚ್ಚಿಸುವ ಸಲುವಾಗಿ ಕಂಪನಿಯಲ್ಲಿ ವಿದ್ಯುನ್ಮಾನ ಟೆಂಡರಿಂಗ್ ವ್ಯವಸ್ಥೆಯನ್ನು – ಅರ್ಥಾತ್ ಕರ್ನಾಟಕ ಸರ್ಕಾರದ ವಿದ್ಯುನ್ಮಾನ ಆಡಳಿತ ಇಲಾಖೆಯು ಇ–ಪ್ರೊಕ್ಯೂರ್‌ಮೆಂಟ್ ಪೋರ್ಟಲ್ **www.karnataka.gov.in** ಅಳವಡಿಸಿಕೊಳ್ಳಲಾಗಿದೆ. ಈ ನಿಟ್ಟಿನಲ್ಲಿ ಕರೆಯಲಾದ ಟೆಂಡರ್‌ಗಳು ಪ್ರೋತ್ಸಾಹದಾಯಕವಾಗಿದೆ.

6. ಸಂವಹನ ಕಾರ್ಯತಂತ್ರಗಳು:

ಗ್ರಾಹಕರ ಕುಂದುಕೊರತೆಗಳನ್ನು ನಿವಾರಿಸುವ ಸಲುವಾಗಿ ಕಂಪನಿಯ ವ್ಯಾಪ್ತಿಯಲ್ಲಿನ ನಗರ ಮತ್ತು ಗ್ರಾಮೀಣ ಪ್ರದೇಶಗಳಲ್ಲಿ ಜನಪ್ರತಿನಿಧಿಗಳು, ಕಂಪನಿಯ ಸ್ಥಳೀಯ ಸಿಬ್ಬಂದಿ ಮತ್ತು ಹಿರಿಯ ಅಧಿಕಾರಿಗಳನ್ನು ಒಳಗೊಳ್ಳುವಂತೆ ಜನಸಂಪರ್ಕ ಸಭೆಗಳನ್ನು ನಡೆಸಲಾಗುತ್ತಿದೆ.

7. ಡಿಟಿಸಿ ಮೀಟರಿಂಗ್:

ಜೆಸ್ಕಾಂ ಅಡಿಯ ನಗರ ಪ್ರದೇಶ ಮತ್ತು ಗ್ರಾಮೀಣ ಪ್ರದೇಶದಗಳೆರಡರಲ್ಲೂ, 31–03–2019ರಂದು ಇದ್ದಂತೆ ಡಿಟಿಸಿ ಮೀಟರಿಂಗ್ ಸ್ಥಿತಿಗತಿ ಕೆಳಗಿನಂತಿವೆ:

ಕ್ರ ಸಂ.	ವಿವರಗಳು	ಮಾಪಕ ಬದ್ಧಗೊಳಿಸಲಾದ ಒಟ್ಟು ಡಿಟಿಸಿಸಂಖ್ಯೆ	ಮಾಪಕ ಬದ್ಧಗೊಳಿಸಬೇಕಾದ ಉಳಿಕೆ
1	ನಗರ ಪ್ರದೇಶ	9630	2790
2	ಗ್ರಾಮೀಣ ಪ್ರದೇಶ	68669	19392

8. ಸಿಬ್ಬಂದಿ ತರಬೇತಿ:

ಮಾನವ ಸಂಪನ್ಮೂಲಗಳನ್ನು ಗರಿಷ್ಠ ಮಟ್ಟದಲ್ಲಿ ಪೋಷಿಸುವ ಉದ್ದೇಶದಿಂದ ಕಂಪನಿ ಸಿಬ್ಬಂದಿ ತರಬೇತಿಗೆ ಅತಿಹೆಚ್ಚಿನ ಪ್ರಾಮುಖ್ಯ ನೀಡಿದೆ. ವ್ಯಾಪಾರ ಗುರಿಗಳನ್ನು ಸಾಧಿಸುವಲ್ಲಿ ಇದು ಮಹತ್ತರ ಪಾತ್ರವನ್ನು ವಹಿಸಲಿದೆ. ಪರಿಶೀಲನೆಯಲ್ಲಿನ ವರ್ಷದಲ್ಲಿ ಕಂಪನಿಯು ವಿತರಣಾ ವ್ಯಾಪಾರದ ಆರ್ಥಿಕ ನಿರ್ವಹಣೆ, ವಿತರಣಾ ನಷ್ಟ ತಗ್ಗಿಸುವಲ್ಲಿ ಅತ್ಯುತ್ತಮ ಆಚರಣೆಗಳು, ವಿದ್ಯುಚ್ಛಕ್ತಿ ಸೋರಿಕೆ–ಪತ್ತೆಹಚ್ಚುವಿಕೆ ಮತ್ತು ತಡೆಗಟ್ಟುವಿಕೆ, ವಿದ್ಯುತ್ ವ್ಯಾಪಾರ, ರಾಜ್ಯಾಂತರ ಎಬಿಟಿ ಮತ್ತು ವಿತರಣಾ ಕಂಪನಿಗಳಿಗೆ ಎಬಿಟಿ ಕಾರ್ಯತಂತ್ರ ಮುಂತಾದ ವಿಷಯಗಳ ಮೇಲೆ 3118 ಅಧಿಕಾರಿಗಳಿಗೆ ತರಬೇತಿ ಒದಗಿಸಿತು. ತರಬೇತಿಯನ್ನು ಆರ್‌ಇಸಿ, ಪಿಎಫ್‌ಸಿ, ಎನ್‌ಟಿಪಿಸಿ, ಇಂಜಿನಿಯರಿಂಗ್ ಸ್ಟಾಫ್ ಕಾಲೇಜ್ ಆಫ್ ಇಂಡಿಯಾ, ಪವರ್ ರಿಸರ್ಚ್ & ಡೆವಲಪ್‌ಮೆಂಟ್ ಕನ್‌ಸಲ್ಟೇಶನ್ ಪ್ರೈ ಲಿ., ಸಿಪಿಆರ್‌ಐ, ಐಸಿಡಬ್ಲ್ಯೂಎಐ ಮುಂತಾದ ಪ್ರತಿಷ್ಠಿತ ಸಂಸ್ಥೆಗಳ ವೃತ್ತಿಪರರು ನೀಡಿದರು.

ಇ. ನಿಗಮದ ಆಡಳಿತ

ಜೆಸ್ಕಾಂ ತನ್ನ ಕಾರ್ಯಾಚರಣೆಯ ಎಲ್ಲ ಅಂಶಗಳಲ್ಲೂ ಪಾರದರ್ಶಕತೆ ಮತ್ತು ಬದ್ಧತೆಗಳಲ್ಲಿ ನಂಬಿಕೆ ಇರಿಸಿದೆ. ಜೆಸ್ಕಾಂ ನ ನಿರ್ದೇಶಕರ ಮಂಡಳಿ ತನ್ನ ಎಲ್ಲ ವ್ಯವಹಾರಗಳಲ್ಲೂ ಅತ್ಯುತ್ತಮ ಆಚರಣೆಗಳನ್ನು ಸಾಧಿಸುವುದನ್ನು ಖಾತ್ರಿಗೊಳಿಸುವ ನಿಗಮದ ಆಡಳಿತ ಆಚರಣೆಗಳಲ್ಲಿ ನಂಬಿಕೆಯಿರಿಸಿದೆ, ಅಂತಹ ಆಚರಣೆಗಳನ್ನು ಬೆಂಬಲಿಸುತ್ತದೆ.

ಮಂಡಳಿ ಮತ್ತು ಮಂಡಳಿ ಉಪ–ಸಮಿತಿಗಳ ತೀರ್ಮಾನಗಳ ಮೇಲೆ ತೆಗೆದುಕೊಳ್ಳಲಾದ ಕ್ರಮಗಳನ್ನು/ಬಾಕಿ ಇರುವ ಕ್ರಮಗಳನ್ನು ಕುರಿತಂತೆ ಸಭೆಯ ನಂತರ ವಿಷಯದ ಅನುಸರಣೆ, ಪರಿಶೀಲನೆ ಮತ್ತು ವರದಿಮಾಡುವಿಕೆಯ ಪ್ರಕ್ರಿಯೆಗಳನ್ನು ಕಂಪನಿಯ ನಿಗಮನ ಪ್ರಕ್ರಿಯೆ ಒಳಗೊಳ್ಳುತ್ತದೆ. ಈ ವರದಿಯ ದಿನಾಂಕದಂದು ಇದ್ದಂತೆ ಕಂಪನಿಯ ನಿರ್ದೇಶಕ ಮಂಡಳಿ 10 ಸದಸ್ಯರನ್ನು ಹೊಂದಿತ್ತು. ಎಲ್ಲ ನಿರ್ದೇಶಕರೂ ಮಂಡಳಿಯ ಮತ್ತು ಉಪ–ಸಮಿತಿಯ ಸಭಾಕಲಾಪಗಳಲ್ಲಿ ಸಕ್ರಿಯವಾಗಿ ಭಾಗವಹಿಸಿದರು ಮತ್ತು ತೀರ್ಮಾನಗಳನ್ನು ತೆಗೆದುಕೊಳ್ಳುವ ಪ್ರಕ್ರಿಯೆಯನ್ನು ಮೌಲ್ಯಯುತವಾಗಿಸಿದರು.

➢ **ನಿರ್ದೇಶಕ ಮಂಡಳಿ :**

ಪ್ರಸ್ತುತ ವರದಿಯ ದಿನಾಂಕದಂದು ಇದ್ದಂತೆ ನಿರ್ದೇಶಕ ಮಂಡಳಿಯ ರಚನೆ ಕೆಳಗಿನಂತಿರುತ್ತದೆ:

1. ಡಾ॥ ಎನ್ ಮಂಜುಳಾ, ಭಾಆಸೇ	: ಅಧ್ಯಕ್ಷರು
2. ಡಾ॥ ಆರ್.ರಾಗಪ್ರಿಯಾ, ಭಾಆಸೇ	: ವ್ಯವಸ್ಥಾಪಕ ನಿರ್ದೇಶಕರು
3. ಶ್ರೀ ಆರ್ ಜಯಕುಮಾರ್	: ನಿರ್ದೇಶಕರು (ತಾಂತ್ರಿಕ)
4. ಡಾ॥ ಪಿ ರಾಜಾ, ಭಾಆಸೇ	: ನಿರ್ದೇಶಕರು
5. ಡಾ॥ ಎಚ್ ಎನ್ ಗೋಪಾಲಕೃಷ್ಣ, ಭಾಆಸೇ	: ನಿರ್ದೇಶಕರು
6. ಶ್ರೀ ಚಂದ್ರಶೇಖರ ನಾಯಕ, ಭಾಆಸೇ	: ನಿರ್ದೇಶಕರು
7. ಶ್ರೀ ರಾಜಕುಮಾರ್ ಎಸ್ ಬಿರಾದರ್	: ನಿರ್ದೇಶಕರು
8. ಶ್ರೀ ಪುರುಷೋತ್ತಮ್ ಸಿಂಗ್ ಬಿ ಎಚ್	: ನಿರ್ದೇಶಕರು
9. ಶ್ರೀ ಶಿವಪ್ರಕಾಶ್ ಟಿ. ಎಂ	: ನಿರ್ದೇಶಕರು
10. ಶ್ರೀ ಟಿ. ಆರ್. ರಾಮಕೃಷ್ಣಯ್ಯ	: ನಿರ್ದೇಶಕರು

ಕಂಪನಿಯ ನಿರ್ದೇಶಕ ಮಂಡಳಿಯಲ್ಲಿನ ರಚನೆಯಲ್ಲಿನ ಬದಲಾವಣೆಯನ್ನು ಕರ್ನಾಟಕ ಸರ್ಕಾರವು ಹೊರಡಿಸಿದ ಆದೇಶಗಳ ಅನುಸಾರ ಮಾಡಲಾಯಿತು.

ಮಂಡಳಿ ಸಭೆಗಳು:

ನಿರ್ದೇಶಕ ಮಂಡಳಿಯ ಸಭೆಗಳು ನಡೆಯುವ ಬಗ್ಗೆ ಮಾಹಿತಿಯನ್ನು ಸಾಕಷ್ಟು ಮುಂಚಿತವಾಗಿಯೇ ನಿರ್ಧರಿಸಿ ತಿಳಿಸಲಾಗುತ್ತದೆ ಮತ್ತು ಪ್ರತಿ ನಿರ್ದೇಶಕರಿಗೂ ಈ ಸಂಬಂಧ ತಿಳುವಳಿಕೆಯನ್ನು ನೀಡಲಾಗುತ್ತಿತ್ತು. ಸಭೆಯ ಕಾರ್ಯಸೂಚಿ ಮತ್ತಿತರ ಸಂಬಂಧಿತ ಟಿಪ್ಪಣಿಗಳನ್ನು ನಿರ್ದೇಶಕರಿಗೆ ಸಭೆಗೆ ಪೂರ್ವದಲ್ಲಿಯೇ ಸಾಕಷ್ಟು ಮುಂಚಿತವಾಗಿಯೇ ಒದಗಿಸಲಾಗುತ್ತಿತ್ತು.

2018–19ರ ವರ್ಷದಲ್ಲಿ ಮಂಡಳಿಯ ಸಭೆಗಳನ್ನು ಕೆಳಗೆ ಹೇಳಲಾಗಿರುವ ದಿನಾಂಕಗಳಂದು ನಡೆಸಲಾಯಿತು:

ಕ್ರ. ಸಂ.	ಸಭೆಯ ಸಂಖ್ಯೆ	ಸಭೆ ನಡೆದ ದಿನಾಂಕ
1	71ನೇ ಸಭೆ	02.07.2018
2	72ನೇ ಸಭೆ	26.10.2018
3	73ನೇ ಸಭೆ	17.11.2018
4	74ನೇ ಸಭೆ	17.01.2019

➢ **ಮಂಡಳಿ ಉಪಸಮಿತಿಗಳು:**

ಪ್ರಧಾನವಾದ ವಿಷಯಗಳ ಮೇಲೆ ಹೆಚ್ಚು ಗಮನವುಳ್ಳ ನೋಟವನ್ನು ಹರಿಸುವ ಉದ್ದೇಶದಿಂದ ಮಾತ್ರವಲ್ಲದೇ ಇಂತಹ ವಿಷಯಗಳ ಮೇಲಿನ ನಿರ್ಧಾರಗಳನ್ನು ಆದಷ್ಟು ತ್ವರಿತವಾಗಿ ತೆಗೆದುಕೊಳ್ಳುವ ದೃಷ್ಟಿಯಿಂದ ಮಂಡಳಿಯ ಉಪ–ಸಮಿತಿಗಳನ್ನು ರಚಿಸಲಾಯಿತು. ತ್ವರಿತವಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುವ ನಿಟ್ಟಿನಲ್ಲಿ ಮಂಡಳಿಯು ಕೆಲವು ನಿರ್ದಿಷ್ಟ ಅಧೀಕಾರಗಳನ್ನು ಉಪ–ಸಮಿತಿಗಳಿಗೆ ಒದಗಿಸಿರುತ್ತದೆ.

1. ಖರೀದಿ ಸಮಿತಿ:

ಕಂಪನಿಗೆ ರೂ. 3.00 ಕೋಟಿಗೂ ಮೇಲ್ಪಟ್ಟು ರೂ. 10.00 ಕೋಟಿ ಒಳಗಿನ ಆರ್ಥಿಕ ಪರಿಣಾಮವನ್ನು ಉಂಟುಮಾಡುವ ಕಂಪನಿಗೆ ಸಂಬಂಧಿಸಿದ ಖರೀದಿಗಳು ಮತ್ತು ಕೇಂದ್ರ ಕಾಮಗಾರಿಗಳು/ಲೈನ್ ಕಾಮಗಾರಿಗಳು ಅಥವಾ ಇತರ ಯಾವುದೇ ಕಾಮಗಾರಿಗಳ ಎಲ್ಲ ಪ್ರಕರಣಗಳು ಮತ್ತು ಕಂಪನಿಗೆ ಸಂಬಂಧಿಸಿದ ಈ ಬಗೆಯ ಎಲ್ಲ ವಿಷಯಗಳನ್ನು ಪರಿಗಣಿಸಲು ಖರೀದಿ ಸಮಿತಿಯನ್ನು ರಚಿಸಲಾಗಿದೆ.

ಖರೀದಿ ಸಮಿತಿಯ ರಚನೆ ಕೆಳಗಿನಂತಿದೆ:

ಕ್ರ. ಸಂ	ಸದಸ್ಯರು	ಪದನಾಮ
1	ವ್ಯವಸ್ಥಾಪಕ ನಿರ್ದೇಶಕರು, ಜೆಸ್ಕಾಂ	ಅಧ್ಯಕ್ಷರು
2	ನಿರ್ದೇಶಕರು (ತಾಂತ್ರಿಕ), ಜೆಸ್ಕಾಂ	ಸದಸ್ಯರು
3	ಶ್ರೀ ರಾಜಕುಮಾರ್.ಎಸ್ ಬಿರಾದಾರ್	ಸದಸ್ಯರು
4.	ಅಧಿಕೃತ ಸಹಿಗಾರರು ಜೆಸ್ಕಾಂ	ಸಂಚಾಲಕರು

ವರದಿಯ ವರ್ಷದಲ್ಲಿ ಖರೀದಿ ಸಮಿತಿಯು ಕೆಳಗಿನಂತೆ ಸಭೆಗಳನ್ನು ನಡೆಸಿರುತ್ತದೆ:

ಕ್ರ. ಸಂ.	ಸಭೆಯ ಸಂಖ್ಯೆ	ಸಭೆ ನಡೆದ ದಿನಾಂಕ
1	77ನೇ ಸಭೆ	22.09.2018
2.	78ನೇ ಸಭೆ	03.11.2018
3.	79ನೇ ಸಭೆ	29.11.2018
4.	80ನೇ ಸಭೆ	07.01.2019
5.	81ನೇ ಸಭೆ	13.02.2019
6.	82ನೇ ಸಭೆ	02.03.2019
7.	83ನೇ ಸಭೆ	08.03.2019

2. ಲೆಕ್ಕಪರಿಶೋಧನಾ ಸಮಿತಿ:

1. ಲೆಕ್ಕಪರಿಶೋಧನಾ ಸಮಿತಿಯ ರಚನೆ ಕೆಳಗಿನಂತಿದೆ:

ಕ್ರ. ಸಂ	ಸದಸ್ಯರು	ಪದನಾಮ
1	ಶ್ರೀ ರಾಜ. ಪಿ. ಭಾಆಸೇ	ಅಧ್ಯಕ್ಷರು
2	ನಿರ್ದೇಶಕರು (ತಾಂತ್ರಿಕ), ಜೆಸ್ಕಾಂ	ಸದಸ್ಯರು
3	ಶ್ರೀ ರಾಜಕುಮಾರ್.ಎಸ್ ಬಿರಾದಾರ್	ಸದಸ್ಯರು
4	ಕಂಪನಿ ಕಾರ್ಯದರ್ಶಿಗಳು, ಜೆಸ್ಕಾಂ	ಸಂಚಾಲಕರು

ಗಮನಿಕೆ :

* ಜೆಸ್ಕಾಂ ಮಂಡಳಿಯ ನಿರ್ದೇಶಕತ್ವದೊಂದಿಗೆ ಸಮಿತಿಯ ಸದಸ್ಯತ್ವ ಜೊತೆಯಾಗಿ ಹೋಗುತ್ತದೆ.

ಶಾಸನಬದ್ಧ ಲೆಕ್ಕಪರಿಶೋಧಕರು, ಆಂತರಿಕ ಲೆಕ್ಕಪರಿಶೋಧಕರು ಮತ್ತು ಹಣಕಾಸು ವಿಭಾಗದ ಮುಖ್ಯ ಹಣಕಾಸು ಅಧಿಕಾರಿಗಳು ಲೆಕ್ಕಪರಿಶೋಧನಾ ಸಮಿತಿಯ ಸಭೆಗಳಲ್ಲಿ ಹಾಜರಿದ್ದು ಕಲಾಪಗಳಲ್ಲಿ ಭಾಗವಹಿಸುತ್ತಾರೆ.

3.ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ (ಸಿಎಸ್‌ಆರ್) ಸಮಿತಿ:

ಕೆಳಗಿನ ಸದಸ್ಯರುಗಳನ್ನು ಒಳಗೊಂಡಿರುವ ಸಿಎಸ್‌ಆರ್ ಸಮಿತಿಯನ್ನು ಮಂಡಳಿಯು ರಚಿಸಿದೆ:

ಕ್ರ. ಸಂ	ಸದಸ್ಯರು	ಪದನಾಮ
1	ಅಧ್ಯಕ್ಷರು, ಜೆಸ್ಕಾಂ	ಅಧ್ಯಕ್ಷರು
2	ನಿರ್ದೇಶಕರು (ತಾಂತ್ರಿಕ), ಜೆಸ್ಕಾಂ	ಸದಸ್ಯರು
3	ನಿರ್ದೇಶಕರು (ಆಡಳಿತ & ಮಾನವ ಸಂಪನ್ಮೂಲ)	ಸದಸ್ಯರು
4	ಅಧಿಕೃತ ಸಹಿಗಾರರು ಜೆಸ್ಕಾಂ	ಸಂಚಾಲಕರು

ಕಂಪನಿಯು ವರದಿಯ ವರ್ಷದ ಹಿಂದಿನ ಮೂರು ವರ್ಷಗಳಲ್ಲಿ ಯಾವುದೇ ತೆರಿಗೆಗೆ ಮುನ್ನ ಸರಾಸರಿ ನಿವ್ವಳ ಲಾಭ ವನ್ನು ಗಳಿಸಿರುವುದಿಲ್ಲ ಮತ್ತು ಹಾಗಾಗಿ ಹಣಕಾಸು ವರ್ಷ 2018–19ರ ಸಾಲಿಗೆ ಸಿಎಸ್ಆರ್ ಮೊತ್ತದ ವಿನಿಯೋಗದ ಪ್ರಶ್ನೆ ಅನ್ವಯಿಸುವುದಿಲ್ಲ.

ಕಂಪನಿಯ ಸಿಎಸ್ಆರ್ ನೀತಿಯನ್ನುಅನುಬಂಧ 1 ರಲ್ಲಿ ನೀಡಲಾಗಿದೆ ಮತ್ತು ಇದು ಕಂಪನಿಯ ವೆಬ್ಸೈಟ್ www.gescom.in ನಲ್ಲಿ ಕೂಡ ಲಭ್ಯವಿದೆ.

➢ **ಶಾಸನಬದ್ಧ ಪ್ರಕಣೆಗಳು:**

ಕಂಪನಿ ಕಾಯ್ದೆ, 2013ರ ಪರಿಚ್ಛೇದ 164(2)ರ ಉಪಬಂಧಗಳ ಅನ್ವಯ ಕಂಪನಿಯ ಯಾವ ನಿರ್ದೇಶಕರೂ ಅನರ್ಹರಾಗಿರುವುದಿಲ್ಲ. ಕಂಪನಿ ಕಾಯ್ದೆ, 2013ರ ಉಪಬಂಧಗಳ ಅನ್ವಯ ಅಗತ್ಯ ಪ್ರಕಟಣೆಗಳನ್ನು ನಿಮ್ಮ ನಿರ್ದೇಶಕರು ಮಾಡಿರುತ್ತಾರೆ.

➢ **ನಿರ್ದೇಶಕರ ಜವಾಬ್ದಾರಿ ತಃಖ್ತೆ:**

ಕಂಪನಿ ಕಾಯ್ದೆ, 2013, ಪರಿಚ್ಛೇದ 134(5) ಅನುಸಾರ ನಿರ್ದೇಶಕರು

i. ವಾರ್ಷಿಕ ಲೆಕ್ಕಪತ್ರಗಳ ಸಿದ್ಧಪಡಿಸುವಿಕೆಯಲ್ಲಿ ಅನ್ವಯಿಸಬಹುದಾದ ಲೇಖಾ ಪ್ರಮಾಣಗಳನ್ನು (ಇಂಡ್ ಎಎಸ್) ವಾಸ್ತವಿಕ ಪಥಾಂತರಗಳಿಗೆ ಸಂಬಂಧಿಸಿದ ಸೂಕ್ತ ವಿವರಣೆಯೊಂದಿಗೆ ಅನುಸರಿಸಲಾಗಿದೆ;

ii. ನಿರ್ದೇಶಕರು ಸೂಕ್ತವಾದ ಲೇಖಾ ಕಾರ್ಯನೀತಿಗಳನ್ನು ಆಯ್ಕೆಮಾಡಿ ಅವನ್ನು ನಿಯತವಾಗಿ ಅನ್ವಯಿಸಿರುತ್ತಾರೆ ಹಾಗೂ ಹಣಕಾಸು ವರ್ಷದ ಕೊನೆಯ ಹೊತ್ತಿಗೆ ಕಂಪನಿಯ ಸ್ಥಿತಿಗತಿಗಳ ಬಗ್ಗೆ ಹಾಗೂ ಅದೇ ಅವಧಿಗಾಗಿ ಕಂಪನಿಯ ಲಾಭ ಮತ್ತು ನಷ್ಟದ ತಃಖ್ತೆಯ ಬಗ್ಗೆ ನೈಜವಾದ ಮತ್ತು ನಿಷ್ಪಕ್ಷಪಾತವಾದ ಚಿತ್ರವನ್ನು ಒದಗಿಸುವಂತೆ ತೀರ್ಮಾನಗಳು ಮತ್ತು ಅಂದಾಜುಗಳನ್ನು ಮಾಡಿರುತ್ತಾರೆ;

iii. ನಿರ್ದೇಶಕರು ಕಂಪನಿಯ ಆಸ್ತಿಗಳನ್ನು ಕಾಪಾಡಿಕೊಳ್ಳಲು ಹಾಗೂ ಮೋಸ ಮತ್ತಿತರ ಅಕ್ರಮಗಳನ್ನು ಪತ್ತೆಮಾಡಲು ಹಾಗೂ ತಡೆಗಟ್ಟಲು ಕಾಯ್ದೆಯ ಉಪಬಂಧಗಳ ಅನ್ವಯ ಪರ್ಯಾಪ್ತವಾದ ದಾಖಲೆಗಳ ನಿರ್ವಹಣೆಗೆ ಸೂಕ್ತ ಮತ್ತು ಸಮಂಜಸವಾದ ಕ್ರಮಗಳನ್ನು ತೆಗೆದುಕೊಂಡಿರುತ್ತಾರೆ;

iv. ನಿರ್ದೇಶಕರು ವಾರ್ಷಿಕ ಲೆಕ್ಕಪತ್ರಗಳನ್ನು ಮುಂದುವರೆಯುತ್ತಿರುವ ಸಂಸ್ಥೆ ಆಧಾರದ ಮೇಲೆ ಸಿದ್ಧಪಡಿಸಲಾಗಿದೆ; ಮತ್ತು

v. ಅನ್ವಯವಾಗುವ ಎಲ್ಲ ಕಾನೂನುಗಳ ಉಪಬಂಧಗಳ ಅನುಸರಣೆಗಾಗಿ ಸೂಕ್ತ ವ್ಯವಸ್ಥೆಗಳು ಅಸ್ತಿತ್ವದಲ್ಲಿರುವುದನ್ನು ಹಾಗೂ ಇಂತಹ ವ್ಯವಸ್ಥೆಗಳು ಪರ್ಯಾಪ್ತವಾಗಿದ್ದು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿವೆ ಎನ್ನುವುದನ್ನು ನಿಮ್ಮ ನಿರ್ದೇಶಕರು ಖಚಿತಪಡಿಸಿಕೊಂಡಿರುತ್ತಾರೆ ಎಂದು ತಮ್ಮ ಅತ್ಯುತ್ತಮ ಜ್ಞಾನ ಮತ್ತು ತಿಳುವಳಿಕೆಯ ಆಧಾರದ ಮೇಲೆ ತಿಳಿಸಬಯಸುತ್ತಾರೆ.

➢ **ಸಂಬಂಧಿತ ಪಕ್ಷ ವ್ಯವಹಾರಗಳು:**

ಪ್ರಸ್ತುತ ಹಣಕಾಸು ವರ್ಷದಲ್ಲಿ ಸಂಬಂಧಿತ ಪಕ್ಷಗಳೊಂದಿಗೆ ಕಂಪನಿ ಮಾಡಿಕೊಂಡ ಎಲ್ಲ ಗುತ್ತಿಗೆಗಳು/ವ್ಯವಸ್ಥೆಗಳು/ನಡೆಸಿದ ವ್ಯವಹಾರಗಳು ವ್ಯಾಪಾರದ ಸಾಮಾನ್ಯ ನಡೆಯಲ್ಲಿ ಇದ್ದವು ಮತ್ತು ಇವುಗಳ ಕಂಪನಿಯ ಮೇಲೆ ದೂರದ ಪರಿಣಾಮವನ್ನು ಬೀರದೆ ಕಂಪನಿಯ ಹಿತಾಸಕ್ತಿಯೊಂದಿಗೆ ಸಂಘರ್ಷದ ಸಂಭಾವ್ಯತೆಯನ್ನು ಹೊಂದಿರುವುದಿಲ್ಲ.

ಜಿಎಸ್ಆರ್ 463 (ಇ) ದಿನಾಂಕ 5 ಜೂನ್ 2015ರ ಅನ್ವಯ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಹೊರಡಿಸಿದ ಅಧಿಸೂಚನೆಯ ಅನುಸಾರ ಸಂಬಂಧಿತ ಪಕ್ಷಗಳೊಂದಿಗಿನ ವ್ಯವಹಾರಗಳು ಕಂಪನಿ ಕಾಯ್ದೆ, 2013ರ ಪರಿಚ್ಛೇದ 188 (1)ರ ಉಪಬಂಧಗಳ ಪರಿಧಿಗೆ ಬರುವುದಿಲ್ಲ.

ಕಾಯ್ದೆಯ ಪರಿಚ್ಛೇದ 134(3)(ಎಚ್) ಅನುಸಾರ ಮತ್ತು ಪರಿಚ್ಛೇದ 188ಕ್ಕೆ ಹಾಗೂ ಕಂಪನಿಗಳ (ಲೆಕ್ಕಪತ್ರಗಳು) ನಿಯಮಗಳು, 2014ರ ನಿಯಮ 8(2)ಕ್ಕೆ ಸಂಗತವಾಗುವಂತೆ ನಮೂನೆ ಸಂಖ್ಯೆ ಎಓಸಿ–2 ರಲ್ಲಿ ವರದಿಮಾಡಬೇಕಿರುವ ಸಂಬಂಧಿತ ಪಕ್ಷಗಳೊಂದಿಗೆ ಕಂಪನಿ ಮಾಡಿಕೊಂಡ ಎಲ್ಲ ಗುತ್ತಿಗೆಗಳು/ವ್ಯವಸ್ಥೆಗಳು/ನಡೆಸಿದ ವ್ಯವಹಾರಗಳನ್ನು ಈ ವರದಿಯೊಂದಿಗೆ ಅನುಬಂಧ 2 ರಲ್ಲಿ ಅನುಬಂಧಿಸಲಾಗಿದೆ.

ಕ್ರ.	ವ್ಯವಹಾರಗಳ ಸ್ವರೂಪ	ಪಕ್ಷದ ಹೆಸರು	2018–19
1	ವಿದ್ಯುತ್ ಪ್ರಸರಣ	ಕೆಪಿಟಿಸಿಎಲ್	–406.57
2	ವಿದ್ಯುತ್ ಸಮತೋಲನ ಪ್ರಕ್ರಿಯೆಗಾಗಿ ವಸೂಲಾಗಬೇಕಾದವು/ ಪಾವತಿಯಾಗಬೇಕಾದವು	ಬೆಸ್ಕಾಂ	149.33
3	ವಿದ್ಯುತ್ ಸಮತೋಲನ ಪ್ರಕ್ರಿಯೆಗಾಗಿ ವಸೂಲಾಗಬೇಕಾದವು/ ಪಾವತಿಯಾಗಬೇಕಾದವು	ಹೆಸ್ಕಾಂ	0.30
4	ವಿದ್ಯುತ್ ಸಮತೋಲನ ಪ್ರಕ್ರಿಯೆಗಾಗಿ ವಸೂಲಾಗಬೇಕಾದವು/ ಪಾವತಿಯಾಗಬೇಕಾದವು	ಮೆಸ್ಕಾಂ	90.73
5	ವಿದ್ಯುತ್ ಸಮತೋಲನ ಪ್ರಕ್ರಿಯೆಗಾಗಿ ವಸೂಲಾಗಬೇಕಾದವು/ ಪಾವತಿಯಾಗಬೇಕಾದವು	ಸೆಸ್ಕಾಂ	–1.31
6	ವಿದ್ಯುತ್ ಖರೀದಿ	ಪಿಸಿಕೆಎಲ್	–
7	ವಿದ್ಯುತ್ ಖರೀದಿ	ಕೆಪಿಸಿಎಲ್	–2202.26

ಗಮನಿಕೆ : ವರ್ಷದಲ್ಲಿನ ವ್ಯವಹಾರಗಳಲ್ಲಿ (–) ಪಾವತಿಸಬೇಕಾದ್ದು ಸೂಚಿಸಿದರೆ (+) ಬರಬೇಕಿರುವುದು ಸೂಚಿಸುತ್ತವೆ.

➢ **ಸಾಲಗಳು, ಖಾತರಿಗಳು ಅಥವಾ ಹೂಡಿಕೆಗಳ ವಿವರಗಳು :**

ಕಂಪನಿ ಕಾಯ್ದೆ, 2013ರ ಪರಿಚ್ಛೇದ 186ರ ಉಪಬಂಧಗಳ ವ್ಯಾಪ್ತಿಗೆ ಬರುವ ಯಾವುದೇ ಸಾಲಗಳು ಅಥವಾ ಖಾತರಿಗಳನ್ನು ಕಂಪನಿ ನೀಡಿರುವುದಿಲ್ಲ. ಕಂಪನಿಯು ಮಾಡಿರುವ ಹೂಡಿಕೆಗಳ ವಿವರಗಳನ್ನು ಹಣಕಾಸು ತಃಖ್ತೆಗಳಿಗೆ ಒದಗಿಸಿರುವ ಟಿಪ್ಪಣಿಗಳಲ್ಲಿ ನೀಡಲಾಗಿದೆ.

➢ **ಮುಡಿಪುಗಳಿಗೆ ವರ್ಗಾವಣೆಗಳು :**

ಪರಿಶೀಲನೆಯಲ್ಲಿರುವ ವರ್ಷದ ಸಾಮಾನ್ಯ ಮುಡಿಪಿಗೆ ಯಾವುದೇ ಮೊತ್ತದ ವರ್ಗಾವಣೆಯ ಪ್ರಸ್ತಾಪವೂ ಇರುವುದಿಲ್ಲ.

➢ **ಲಾಭಾಂಶ :**

ಲಾಭಾಂಶಕ್ಕಾಗಿ ಯಾವುದೇ ಮೊತ್ತವನ್ನು ಶಿಫಾರಸು ಮಾಡಿರುವುದಿಲ್ಲ.

➢ **ಅಧೀನ ಕಂಪನಿಗಳು**

ಕಂಪನಿಯು ಯಾವುದೇ ಅಧೀನ ಕಂಪನಿಗಳನ್ನು ಹೊಂದಿರುವುದಿಲ್ಲ.

➢ **ನಿಶ್ಚಿತ ಠೇವಣಿಗಳು**

ಕಂಪನಿ ಕಾಯ್ದೆ, 2013 ಪರಿಚ್ಛೇದ 73ರ ಮತ್ತು ಅದರಡಿಯ ನಿಯಮಗಳ ವ್ಯಾಪ್ತಿಗೆ ಬರುವ ಯಾವುದೇ ಠೇವಣಿಗಳನ್ನು ಕಂಪನಿಯು ಪ್ರಸ್ತುತ ವರ್ಷದಲ್ಲಿ ಸ್ವೀಕರಿಸಿರುವುದಿಲ್ಲ.

➢ **ಲೆಕ್ಕಪರಿಶೋಧಕರು ಮತ್ತು ಲೆಕ್ಕಪರಿಶೋಧನಾ ವರದಿಗಳು**

ಜಿ. ಶಾಸನಬದ್ಧ ಲೆಕ್ಕಪರಿಶೋಧಕರು ಮತ್ತು ಲೆಕ್ಕಪರಿಶೋಧನಾ ವರದಿ :

ಕಂಪನಿ ಕಾಂಯ್ದೆ, 2013ರ ಅಸ್ತಿತ್ವದಲ್ಲಿರುವ ಉಪಬಂಧಗಳ ಅನುಸಾರ, ಸಿ & ಎಜಿ ಅವರು 2018–19ರ ವರ್ಷಕ್ಕೆ ಜೆಸ್ಕಾಂ ಶಾಸನಬದ್ಧ ಲೆಕ್ಕಪರಿಶೋಧಕರಾಗಿ ಮೆ॥ ಪಿ. ಜಿ. ಭಾಗವತ್, ಸನದಿ ಲೆಕ್ಕಿಗರು – ಇವರನ್ನು ನೇಮಿಸಿರುತ್ತಾರೆ. ಸದರಿ ಲೆಕ್ಕಪರಿಶೋಧಕರು ಕಾಯ್ದೆಯ ಅಡಿಯ ಅಗತ್ಯಗಳ ಅನುಸಾರ ಲೆಕ್ಕಪರಿಶೋಧನೆಯನ್ನು ನಡೆಸಿ ತಮ್ಮ ವರದಿಯನ್ನು ಸಲ್ಲಿಸಿರುತ್ತಾರೆ. ಶಾಸನಬದ್ಧ ಲೆಕ್ಕಪರಿಶೋಧಕರ ಪರಿಶೀಲನೆಗಳಿಗೆ ಉತ್ತರಗಳನ್ನು ಅನುಬಂಧ 3 ರಲ್ಲಿ ಲಗತ್ತಿಸಲಾಗಿದೆ.

ಬಿ. ಕಾರ್ಯದರ್ಶೀಯ ಲೆಕ್ಕಪರಿಶೋಧಕರು ಮತ್ತು ಕಾರ್ಯದರ್ಶೀಯ ಲೆಕ್ಕಪರಿಶೋಧನಾ ವರದಿ

ಕಂಪನಿ ಕಾಂಯ್ದೆ, 2013ರ ಪರಿಚ್ಛೇದ 204ರ ಉಪಬಂಧಗಳ ಹಾಗೂ ತಿದ್ದುಪಡಿಯಾದಂತೆ, ಕಂಪನಿಗಳ (ವ್ಯವಸ್ಥಾಪನಾ ಸಿಬ್ಬಂದಿಯ ನೇಮಕ ಮತ್ತು ಸಂಭಾವನೆ) ನಿಯಮಗಳು 2014ರ ಅನುಸಾರ ಹಣಕಾಸು ವರ್ಷ 2018–19ಕ್ಕಾಗಿ ಕಂಪನಿಯ ಕಾರ್ಯದರ್ಶೀಯ ಲೆಕ್ಕಪರಿಶೋಧನೆಯನ್ನು ನಡೆಸಲು ಮೆ. ಪಿ. ಕೆ. ಪಾಂಡೆ & ಅಸೋಸಿಯೇಟ್ಸ್, ವೃತ್ತಿಪರ ಕಂಪನಿ ಕಾರ್ಯದರ್ಶಿಗಳು – ಇವರನ್ನು ಕಾರ್ಯದರ್ಶೀಯ ಲೆಕ್ಕಪರಿಶೋಧಕರನ್ನಾಗಿ ಕಂಪನಿಯು ನೇಮಿಸಿರುತ್ತದೆ. ಕಾರ್ಯದರ್ಶೀಯ ಲೆಕ್ಕಪರಿಶೋಧನಾ ವರದಿಯನ್ನು ಅನುಬಂಧ 4 ರಲ್ಲಿ ಲಗತ್ತಿಸಲಾಗಿದೆ. ಸದರಿ ಲೆಕ್ಕಪರಿಶೋಧಕರ ಪರಿಶೀಲನೆಗಳಿಗೆ ಉತ್ತರಗಳನ್ನು ಅನುಬಂಧ 5 ರಲ್ಲಿ ಒದಗಿಸಲಾಗಿದೆ.

ಸಿ. ವೆಚ್ಚ ಲೆಕ್ಕಪರಿಶೋಧಕರು ಮತ್ತು ವೆಚ್ಚ ಲೆಕ್ಕಪರಿಶೋಧನಾ ವರದಿ:

ಕಂಪನಿ ಕಾಯ್ದೆ, 2013ರ ಪರಿಚ್ಛೇದ 204 ಹಾಗೂ ಅದರಡಿ ರೂಪಿಸಲಾದ ನಿಯಮಗಳ ಪ್ರಕಾರ ನಿಯಮಗಳಲ್ಲಿ ನಿಗದಿಪಡಿಸಲಾದ ವರ್ಗದ ವ್ಯಾಪ್ತಿಗೆ ಬರುವ ಪ್ರತಿಯೊಂದು ಕಂಪನಿಯೂ ವೆಚ್ಚ ಲೆಕ್ಕಪರಿಶೋಧನೆಯನ್ನು ಕಡ್ಡಾಯವಾಗಿ ಕೈಗೊಳ್ಳಬೇಕಾಗುತ್ತದೆ. ಈ ಉಪಬಂಧದ ಅನುಸರಣೆಯಾಗಿ, ಕಂಪನಿಯು ಹಣಕಾಸು ವರ್ಷ 2018–19ಕ್ಕಾಗಿ ಕಂಪನಿಯ ವೆಚ್ಚ ದಾಖಲೆಗಳ ಲೆಕ್ಕಪರಿಶೋಧನೆಯನ್ನು ನಡೆಸಲು ಮೆ. ಎಸ್. ಕೆ. ಟಿಕಾರೆ & ಕಂಪನಿ, ವೆಚ್ಚ ಲೆಕ್ಕಿಗರು, ಬೆಳಗಾವಿ – ಇವರನ್ನು ನೇಮಿಸಿರುತ್ತದೆ. ಹಣಕಾಸು ವರ್ಷ 2018–19ಕ್ಕಾಗಿವೆಚ್ಚ ದಾಖಲೆಗಳ ಲೆಕ್ಕಪರಿಶೋಧನೆಯನ್ನು ವೆಚ್ಚ ಲೆಕ್ಕಪರಿಶೋಧಕರು ಸಲ್ಲಿಸಿದ್ದು ಅದನ್ನು ಅನುಬಂಧ 6 ರಲ್ಲಿ ಲಗತ್ತಿಸಲಾಗಿದೆ.

31 ಮಾರ್ಚ್, 2019ಕ್ಕೆ ಕೊನೆಗೊಂಡ ಹಣಕಾಸು ವರ್ಷಕ್ಕಾಗಿನ ತಮ್ಮ ವರದಿಯಲ್ಲಿ ವೆಚ್ಚ ಲೆಕ್ಕಪರಿಶೋಧಕರು ಯಾವುದೇ ಪರಿಶೀಲನೆಗಳು, ಮಿತಿಗಳನ್ನು ಪ್ರಕಟಿಸುವ ಅಥವಾ ವ್ಯತಿರಿಕ್ತ ಅಭಿಪ್ರಾಯಗಳನ್ನು ಪ್ರಕಟಿಸಿರುವುದಿಲ್ಲ.

ಕಂಪನಿಯ ನಿರ್ದೇಶಕ ಮಂಡಳಿಯು 2019–20ರ ಹಣಕಾಸು ವರ್ಷಕ್ಕೆ ಕಂಪನಿಯು ವೆಚ್ಚ ದಾಖಲೆಗಳ ಲೆಕ್ಕಪರಿಶೋಧನೆಯನ್ನು ನಡೆಸಲು ಮೆ. ಎಸ್. ಕೆ. ಟಿಕಾರೆ & ಕಂಪನಿ, ವೆಚ್ಚ ಲೆಕ್ಕಿಗರು, ಬೆಳಗಾವಿ – ಇವರ ನೇಮಕಾತಿಯನ್ನು ರೂ. 44,500/– (ಎಲ್ಲವೂ ಒಳಗೊಳ್ಳುವಂತೆ ಉದ್ಧೃತ) ಸಂಭಾವನೆಯೊಂದಿಗೆ, ಕಂಪನಿಯ ವಾರ್ಷಿಕ ಸರ್ವಸದಸ್ಯರ ಸಭೆಯಲ್ಲಿ ಸದಸ್ಯರಿಂದ ಸ್ಥಿರೀಕರಣಕ್ಕೆ ಬದ್ಧವಾಗಿ, ಮುಂದುವರೆಸಿದೆ. ಮಂಡಳಿಯು ಕಂಪನಿ ಕಾಯ್ದೆ, ಪರಿಚ್ಛೇದ 148 ಮತ್ತು ಅದರಡಿಯ ನಿಯಮಗಳ ಅನುಸಾರ ವೆಚ್ಚ ಲೆಕ್ಕಪರಿಶೋಧಕರಿಗೆ ಪಾವತಿಸಬೇಕಾದ ಸಂಭಾವನೆಯ ಸ್ಥಿರೀಕರಣವನ್ನು ಶಿಫಾರಸುಮಾಡುತ್ತದೆ.

➢ **ವಾರ್ಷಿಕ ಸಲ್ಲಿಕೆಯ ಉದ್ಧೃತ ಭಾಗ**

ಅನುಬಂಧ 7ರಲ್ಲಿ ಎಂಜಿಟಿ – 9ರ ರೂಪದಲ್ಲಿ ವಾರ್ಷಿಕ ಸಲ್ಲಿಕೆಯ ಉದ್ಧೃತ ಭಾಗವನ್ನು ಅನುಬಂಧ–7 ರಲ್ಲಿ ಲಗತ್ತಿಸಲಾಗಿದೆ. ಇದು ನಮ್ಮ ವೆಬ್‌ಸೈಟ್ www.gescom.in.ರಲ್ಲಿ ಲಭ್ಯವಿದೆ.

➢ **ಶಕ್ತಿ ಸಂರಕ್ಷಣೆ, ತಂತ್ರಜ್ಞಾನ ವಿಲೀನ ಮತ್ತು ವಿದೇಶಿ ವಿನಿಮಯ ಗಳಿಕೆ ಹಾಗೂ ವ್ಯಯದ ವಿವರಗಳು**

ಎ. ಶಕ್ತಿ ಸಂರಕ್ಷಣೆ

1) ಶಕ್ತಿ ಸಂರಕ್ಷಣೆಗಾಗಿ ತೆಗೆದುಕೊಳ್ಳಲಾದ ಕ್ರಮಗಳು ಅಥವಾ ಈ ಸಂಬಂಧದ ಪರಿಣಾಮ

ಎ) ಉಜ್ವಲ್ ಯೋಜನೆಯ ಅಡಿಯಲ್ಲಿ ವಿದ್ಯುತ್ ಉಳಿಸುವ ಎಲ್‌ಇಡಿ ಬಲ್ಬುಗಳು, ಎಲ್‌ಇಡಿ ಟ್ಯೂಬ್ ಲೈಟ್‌ಗಳು ಮತ್ತು ಪಂಚ ತಾರಾಂಕಿತ ಛಾವಣಿ ಫ್ಯಾನುಗಳನ್ನು ಮಾರಲಾಯಿತು, ವಿವರಗಳು ಹೀಗಿವೆ: ಎಲ್‌ಇಡಿ ಬಲ್ಬುಗಳು: 255710, ಎಲ್‌ಇಡಿ ಟ್ಯೂಬ್ ಲೈಟ್‌ಗಳು: 888, ಪಂಚ ತಾರಾಂಕಿತ ಛಾವಣಿ ಫ್ಯಾನುಗಳು: 921 – ಇವನ್ನು ಇಇಎಸ್‌ಎಲ್ ಮಾರಾಟಮಾಡಿತು ಹಾಗೂ ಹಣಕಾಸು ವರ್ಷದಲ್ಲಿ ಉಳಿಸಲಾದ ಒಟ್ಟು ವಿದ್ಯುತ್ 13.72 ಮಿಲಿಯನ್ ಯೂನಿಟ್‌ಗಳಾಗಿವೆ.

ಬಿ) ಹಳೆಯ, ಅಸಮರ್ಪಕ ಕೃಷಿ ಪಂಪ್ ಸೆಟ್‌ಗಳನ್ನು ತೆಗೆದು ವಿದ್ಯುತ್ ಉಳಿಸುವ ಬಿಬಿಇ ತಾರಾಂಕಿತ ಪಂಪ್ ಸೆಟ್‌ಗಳನ್ನು ಅಳವಡಿಸುವ ಉದ್ದೇಶದಿಂದ ಕೃಷಿ ವಲಯದಲ್ಲಿ ಡಿಎಸ್‌ಎಂ ಜಾರಿಯ ಜವಾಬ್ದಾರಿಯನ್ನು ಜೆಸ್ಕಾಂಗೆ ವಹಿಸಲಾಗಿದ್ದು ಕೃಷಿ–ಡಿಎಸ್‌ಎಂ ಗಳಿಗಾಗಿ ಡಿಪಿಆರ್ ಸಿದ್ಧಪಡಿಸಲು ಇಇಎಸ್‌ಎಲ್ ಗೆ ಹಣಕಾಸು ವರ್ಷ 2018–19ರಲ್ಲಿ ಪತ್ರವನ್ನು ಬರೆಯಲಾಗಿದೆ.

2) ಪರ್ಯಾಯ ಶಕ್ತಿ ಮೂಲಗಳ ಬಳಕೆಗಾಗಿ ಕಂಪನಿಯು ತೆಗೆದುಕೊಂಡ ಕ್ರಮಗಳು

ಎ. ಹಣಕಾಸು ವರ್ಷ 2018–19ರಲ್ಲಿ ಐಪಿಪಿಎಸ್ ಯೋಜನೆಯ ಅಡಿಯಲ್ಲಿ ಅಸಾಂಪ್ರದಾಯಿಕ ಶಕ್ತಿ ಮೂಲಗಳ ಬಳಕೆಗಾಗಿ ಜೆಸ್ಕಾಂ ಕಟ್ಟಡ ಮತ್ತು ಇತರ ಸರ್ಕಾರಿ ಕಟ್ಟಡಗಳೂ ಸೇರಿ ಜೆಸ್ಕಾಂ ವ್ಯಾಪ್ತಿಯಲ್ಲಿ 77 ಸೌರ ಮೇಲ್ಛಾವಣಿ ಫೋಟೋ ವೋಲ್ಟಾಯಿಕ್ ಗಳನ್ನು (ಎಸ್‌ಆರ್‌ಟಿಪಿವಿ) ಅನುಷ್ಠಾನಗೊಳಿಸಲಾಯಿತು (1,670 ಕೆಡಬ್ಲ್ಯೂಪಿ).

ಬಿ) ಅಸಾಂಪ್ರದಾಯಿಕ ವಿದ್ಯುತ್ ಸೃಷ್ಟಿಯನ್ನು ಪ್ರೋತ್ಸಾಹಿಸಲು ಜೆಸ್ಕಾಂ ಮತ್ತು ಎಸ್‌ಆರ್‌ಟಿಪಿವಿ ಅನುಷ್ಠಾನಗೊಳಿಸಲಾದ ಜೆಸ್ಕಾಂ ಗ್ರಾಹಕರ ನಡುವಿನ ವಿದ್ಯುತ್ ಖರೀದಿ ಒಪ್ಪಂದದ ಮೂಲಕ ಜೆಸ್ಕಾಂ ಗ್ರಾಹಕರಿಂದ ವಿದ್ಯುಚ್ಛಕ್ತಿಯ ಖರೀದಿ.

ಸಿ) ಸೌರ ಜಲ ಹೀಟರ್‌ಗಳನ್ನು ಅನಷ್ಠಾನಗೊಳಿಸಿರುವ ಗ್ರಾಹಕರಿಗೆ ವಿದ್ಯುಚ್ಛಕ್ತಿ ಬಿಲ್ಲುಗಳಲ್ಲಿ ಸಹಾಯಧನ ಒದಗಿಸುವಿಕೆ.

ಬಿ) ತಂತ್ರಜ್ಞಾನ ವಿಲೀನ

1) ತಂತ್ರಜ್ಞಾನ ವಿಲೀನದತ್ತ ಕೈಗೊಳ್ಳಲಾದ ಕ್ರಮಗಳು

ಎ) ವಿತರಣಾ ಟ್ರಾನ್ಸ್‌ಫಾರ್ಮರ್ ಜೀವನಚಕ್ರ ನಿರ್ವಹಣಾ ತಂತ್ರಾಂಶ (ಡಿಟಿಎಲ್‌ಎಂಎಸ್):

ಟ್ರಾನ್ಸ್‌ಫಾರ್ಮರ್ ಜೀವನಚಕ್ರವನ್ನು ಗಣಕೀಕರಿಸುವ ದೃಷ್ಟಿಯಿಂದ ಅವುಗಳ ಸ್ಥಿತಿಗತಿ ಮತ್ತು ನೆಲೆಯನ್ನು ಕಾರ್ಯಯುಕ್ತಗೊಳಿಸಲಾಗಿದ್ದು ಪತ್ತೆಹಚ್ಚದ ಕೊರತೆಗಳು/ದೋಷಗಳು ಇಲ್ಲದ ರೀತಿಯಲ್ಲಿ ಸಕ್ರಿಯ ಬಳಕೆಗೆ ತೊಡಗಿಸಲಾಗಿದೆ.

ಬಿ. ಐಪಿ ಸೆಟ್‌ಗಳ ಸಮೀಕ್ಷೆ:

ಈ ತಂತ್ರಾಂಶವು ಜೆಸ್ಕಾಂ ನಲ್ಲಿನ ಐಪಿ ಸೆಟ್‌ಗಳು ಮತ್ತು ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ನೆಲೆಗಳನ್ನು (ಜಿಪಿಆರ್‌ಎಸ್) ಒದಗಿಸುತ್ತದೆ.

ಸಿ. ಸಾರ್ವಜನಿಕ ಕುಂದುಕೊರತೆ ನಿವಾರಣಾ ವ್ಯವಸ್ಥೆ (ಪಿಜಿಆರ್‌ಎಸ್):

ಜೆಸ್ಕಾಂ ಗ್ರಾಹಕರಿಗೆ ಪರಿಣಾಮಕಾರಿಯಾದ ಕುಂದುಕೊರತೆ ನಿವಾರಣಾ ವಿಧಾನವನ್ನು ಒದಗಿಸುವ ದೃಷ್ಟಿಯಿಂದ ಜೆಸ್ಕಾಂನ ಈ ಬಹು ಬಿಂದು ಸಾರ್ವಜನಿಕ ಕುಂದುಕೊರತೆ ನಿವಾರಣಾ ವ್ಯವಸ್ಥೆಯನ್ನು ರೂಪಿಸಲಾಗಿದೆ. ವಿದ್ಯುಚ್ಛಕ್ತಿ ಮತ್ತು ಅದರ ಅಬಾಧಿತ ಸರಬರಾಜಿಗೆ ಸಂಬಂಧಿಸಿದಂತೆ ಇರುವ ಕುಂದುಕೊರತೆಗಳನ್ನು ನಿವಾರಿಸಲು ಸಹಕರಿಸುವ ನಿಟ್ಟಿನಲ್ಲಿ ಈ ವ್ಯವಸ್ಥೆಯನ್ನು ವಿನ್ಯಾಸಗೊಳಿಸಲಾಗಿದೆ.

2) ಉತ್ಪನ್ನ ಸುಧಾರಣೆ, ವೆಚ್ಚ ತಗ್ಗಿಸುವಿಕೆ, ಉತ್ಪನ್ನ ಅಭಿವೃದ್ಧಿ ಮತ್ತು ಆಮದು ಪರ್ಯಾಯ ಮುಂತಾದ ಲಾಭಗಳ ಸಾಕಾರ:

ಎ) ಡಿಟಿಎಲ್‌ಎಂಎಸ್:

ಈ ತಂತ್ರಾಂಶದಿಂದ ಟ್ರಾನ್ಸ್‌ಫಾರ್ಮರ್ ನಿರ್ವಹಣೆಯ ಮೂಲಭೂತ ಸಮಸ್ಯೆಗಳನ್ನು ಎದುರಿಸಬಹುದಾಗಿದೆ. ಇದು ಎಲ್ಲ ಸಂಕೇತಗಳ ದತ್ತಾಂಶನೆಲೆಯನ್ನು ಸೃಷ್ಟಿಸಿ ಟ್ರಾನ್ಸ್‌ಫಾರ್ಮರ್ ಮತ್ತು ಅವುಗಳ ಜೀವನಚಕ್ರಗಳ ವಿವರಗಳನ್ನು ನಿರ್ವಹಿಸಲು ಸಮಾನ ವೆಬ್–ಆಧಾರಿತ ತಂತ್ರಾಂಶದ ಅಭಿವೃದ್ಧಿಪಡಿಸುತ್ತದೆ.

ಬಿ) ಐಪಿ ಸೆಟ್‌ಗಳ ಸಮೀಕ್ಷೆ:

- ಐಪಿ ಸೆಟ್‌ಗಳು ಮತ್ತು ವಿತರಣಾ ಟ್ರಾನ್ಸ್‌ಫಾರ್ಮರ್‌ಗಳ ನೈಜ ಸಂಖ್ಯೆಯನ್ನು ತಿಳಿದುಕೊಳ್ಳುವುದು.
- ನಮ್ಮ ಲೆಕ್ಕಪುಸ್ತಕಗಳಲ್ಲಿ ಐಪಿ ಸೆಟ್‌ಗಳ ಲೆಕ್ಕಗಳನ್ನು ಸೂಕ್ತವಾಗಿರಿಸಿ ಕರ್ನಾಟಕ ಸರ್ಕಾರದಿಂದ ಸಹಾಯಧನಕ್ಕೆ ಹಕ್ಕುಸಲ್ಲಿಸುವುದು.
- ಅಧಿಕೃತ ಐಪಿ ಸೆಟ್‌ಗಳು ಮತ್ತು ಅನಧಿಕೃತ ಐಪಿ ಸೆಟ್‌ಗಳ ನೈಜ ಸಂಖ್ಯೆಯನ್ನು ತಿಳಿದುಕೊಳ್ಳುವುದು.
- ಟ್ರಾನ್ಸ್‌ಫಾರ್ಮರ್‌ಗಳಿಗೆ ಜೋಡಿಸಲಾದ ಐಪಿ ಸೆಟ್‌ಗಳ ಸಂಖ್ಯೆಯನ್ನು ತಿಳಿದುಕೊಳ್ಳುವುದು.
- ವಿತರಣಾ ವ್ಯವಸ್ಥೆಯನ್ನು ಬಲಪಡಿಸಿ ಎಲ್ಲ ರೈತರಿಗೆ ಗುಣಮಟ್ಟದ ಸೇವೆಯನ್ನು ಒದಗಿಸುವುದು.
- ನೀರಿನ ಸೆಲೆಯು ಕಡಿಮೆ ಇರುವ ಪ್ರದೇಶಗಳಲ್ಲಿನ ಐಪಿ ಸಟ್‌ಗಳ ಸಂಖ್ಯೆಯನ್ನು ತಿಳಿದುಕೊಳ್ಳುವುದು.

ಸಿ) (ಪಿಜಿಆರ್‌ಎಸ್):

ವೆಬ್ ಆಧಾರಿತ ಪಿಜಿಆರ್‌ಎಸ್ ವ್ಯವಸ್ಥೆಯನ್ನು ಎಲ್ಲಿಂದಲೇ ಆದರೂ ಇಂಟರ್‌ನೆಟ್ ಮೂಲಕ ದೂರುಗಳನ್ನು ದಾಖಲಿಸಲು ಬಳಸಬಹುದಾಗಿದೆ. ಗ್ರಾಹಕರು ತಮ್ಮದೇ ಕಂಪ್ಯೂಟರ್ ಮೂಲಕ ಅಥವಾ ಮೊಬೈಲ್ ಸಾಧನಗಳ ಮೂಲಕ ಬಳಕೆದಾರರ ಹೆಸರು ಹಾಗೂ ಪಾಸ್‌ವರ್ಡ್ ಇಲ್ಲದೆ ತಮ್ಮ ದೂರುಗಳನ್ನು ಕೇಂದ್ರ ದತ್ತಾಂಶನೆಲೆಗೆ ನೇರವಾಗಿ ದಾಖಲಿಸಬಹುದಾಗಿದೆ. ಗ್ರಾಹಕರ ದೂರುಗಳಿಗೆ ಪ್ರತಿಸ್ಪಂದನೆಯಾಗಿ ಡಾಕೆಟ್ ಸಂಖ್ಯೆಯೊಂದನ್ನು ಅವರಿಗೆ ನೀಡಲಾಗುತ್ತದೆ.

- **ನೌಕರರ ವಿವರಗಳು**

  ಜಿಎಸ್‌ಆರ್.463 (ಇ) ದಿನಾಂಕ 5 ಜೂನ್ 2015ರ ಅನ್ವಯ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯವು ಹೊರಡಿಸಿರುವ ಅಧಿಸೂಚನೆಯ ಅನುಸಾರ ಕಂಪನಿ ಕಾಯ್ದೆ, 2013ರ ಪರಿಚ್ಛೇದ 197 ಮತ್ತು ಅದರಡಿ ರೂಪಿಸಲಾದ ನಿಯಮಗಳು ಕಂಪನಿಗೆ ಅನ್ವಯಿಸುವುದಿಲ್ಲ. ಹಾಗಾಗಿ, ನೌಕರರ ವಿವರಗಳನ್ನು ಈ ವರದಿಯಲ್ಲಿ ಸೇರಿಸಲಾಗಿಲ್ಲ.

- **ಕಾರ್ಯದರ್ಶೀಯ ಪ್ರಮಾಣಗಳ ಅನುಸರಣ**

  ಕಂಪನಿಯು ಇನ್ಸ್‌ಟಿಟ್ಯೂಟ್ ಆಫ್ ಕಂಪೆನಿ ಸೆಕ್ರೆಟರೀಸ್ ಆಫ್ ಇಂಡಿಯಾ ಹೊರಡಿಸಿರುವ, ಅನ್ವಯವಾಗುವ ಕಾರ್ಯದರ್ಶೀಯ ಪ್ರಮಾಣಗಳ ಅನುಸರಣೆಯನ್ನು ಮಾಡಿರುತ್ತದೆ.

- **ವಾಸ್ತವಿಕ ಬದಲಾವಣೆಗಳು ಮತ್ತು ಬಾಧ್ಯತೆಗಳು**

  ಹಣಕಾಸು ವರ್ಷ ಕೊನೆಯಾದ ನಂತರ, ಈ ವರದಿಯ ದಿನಾಂಕದ ವರೆಗೆ, ಕಂಪನಿಯ ಆರ್ಥಿಕ ಪರಿಸ್ಥಿತಿಯನ್ನು ಪ್ರಭಾವಿಸುವ ಯಾವುದೇ ವಾಸ್ತವಿಕ ಬದಲಾವಣೆಗಳು ಮತ್ತು ಬಾಧ್ಯತೆಗಳು ಘಟಿಸಿರುವುದಿಲ್ಲ.

- **ಕೈಗಾರಿಕಾ ಸಂಬಂಧಗಳು**

  ಪರಿಶೀಲನೆಯಲ್ಲಿರುವ ವರ್ಷದಲ್ಲಿ ನಮ್ಮ ಕಂಪನಿಯು ವರ್ಷದುದ್ದಕ್ಕೂ ಎಲ್ಲ ಹಂತಗಳ ಕಾರ್ಮಿಕರು ಮತ್ತು ನೌಕರರೊಂದಿಗೆ ಸೌಹಾರ್ದಯುತವಾದ ಸಂಬಂಧವನ್ನು ಹೊಂದಿತ್ತು.

➢ **ಮಹತ್ವದ ಮತ್ತು ಗಣನೀಯವಾದ ಆದೇಶಗಳು :**

ನಿಬಂಧಕರು ಅಥವಾ ನ್ಯಾಯಾಲಯಗಳು ಅಥವಾ ನ್ಯಾಯಾಧಿಕರಣಗಳು ಕಂಪನಿಯ ಮುಂದುವರಿಕೆಯ ಸ್ಥಿತಿಯನ್ನು ಮತ್ತು ಮುಂಗಾಣಬಹುದಾದ ಭವಿಷ್ಯದಲ್ಲಿ ಕಂಪನಿಯ ಕಾರ್ಯಾಚರಣೆಗಳನ್ನು ಪ್ರಭಾವಿಸುವ ಯಾವುದೇ ಮಹತ್ವದ ಮತ್ತು ಗಣನೀಯವಾದ ಆದೇಶಗಳನ್ನು ಹೊರಡಿಸಿರುವುದಿಲ್ಲ.

➢ **ಕೆಲಸದ ಸ್ಥಳದಲ್ಲಿ ಮಹಿಳೆಯ ಲೈಂಗಿಕ ಶೋಷಣೆ (ತಡೆಗಟ್ಟುವಿಕೆ, ನಿಷೇಧ ಮತ್ತು ನಿವಾರಣೆ) ಕಾಯ್ದೆ, 2013ರ ಅಡಿ ಪ್ರಕಟಣೆ :**

ಕೆಲಸದ ಸ್ಥಳದಲ್ಲಿ ಮಹಿಳೆಯ ಲೈಂಗಿಕ ಶೋಷಣೆ (ತಡೆಗಟ್ಟುವಿಕೆ, ನಿಷೇಧ ಮತ್ತು ನಿವಾರಣೆ) ಕಾಯ್ದೆ, 2013ರ ಅಗತ್ಯಗಳಿಗೆ ಅನುಸಾರವಾಗಿ ನಿಮ್ಮ ಕಂಪನಿಯು ಕೆಲಸದ ಸ್ಥಳದಲ್ಲಿ ಮಹಿಳೆಯ ಲೈಂಗಿಕ ಶೋಷಣೆಯನ್ನು ತಡೆಗಟ್ಟುವ, ನಿಷೇಧಿಸುವ ಮತ್ತು ದಂಡಿಸುವ ನೀತಿಯನ್ನು ಹೊಂದಿದೆ. ಲೈಂಗಿಕ ದೌರ್ಜನ್ಯವನ್ನು ಕುರಿತಾಗಿ ಪಡೆದ ದೂರುಗಳನ್ನು ನಿವಾರಿಸಲು ಆಂತರಿಕ ದೂರುಗಳ ಸಮಿತಿಯೊಂದನ್ನು ರಚಿಸಲಾಗಿದೆ. ಈ ನೀತಿಯು ವ್ಯಾಪ್ತಿಗೆ ಎಲ್ಲ ಸಿಬ್ಬಂದಿಯೂ ಬರುತ್ತಾರೆ. ಪರಿಶೀಲನೆಯಲ್ಲಿರುವ ವರ್ಷದಲ್ಲಿ ಮಹಿಳೆಯರ ಲೈಂಗಿಕ ಶೋಷಣೆಗೆ ಸಂಬಂಧಿಸಿದಂತೆ ಕೆಲಸದ ಸ್ಥಳದಲ್ಲಿ ಮಹಿಳೆಯ ಲೈಂಗಿಕ ಶೋಷಣೆ (ತಡೆಗಟ್ಟುವಿಕೆ, ನಿಷೇಧ ಮತ್ತು ನಿವಾರಣೆ) ಕಾಯ್ದೆ, 2013ರ ವ್ಯಾಪ್ತಿಗೆ ಬರುವ ಯಾವುದೇ ದೂರುಗಳು ವರದಿಯಾಗಿಲ್ಲ.

ಎಫ್.ಕೃತಜ್ಞತೆಗಳು:

ಮಂಡಳಿಯು

- ಕರ್ನಾಟಕ ಸರ್ಕಾರ, ಭಾರತ ಸರ್ಕಾರಗಳಿಗೆ, ಭಾರತದ ನಿಯಂತ್ರಕರು ಮತ್ತು ಮಹಾಲೇಖಾಪಾಲರಿಗೆ ಹಾಗೂ ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರ, ಕೇಂದ್ರ ವಿದ್ಯುತ್ ನಿಯಂತ್ರಣಾ ಆಯೋಗ, ಕರ್ನಾಟಕ ವಿದ್ಯುತ್ ನಿಯಂತ್ರಣಾ ಆಯೋಗ, ಮತ್ತಿತರ ಅಭಿಕರಣಗಳು/ನಿಬಂಧನಾ ಸಂಸ್ಥೆಗಳಿಗೆ ಅವು ನೀಡಿದ, ಸಹಾಯ, ಮಾರ್ಗದರ್ಶನ ಮತ್ತು ಸಹಕಾರಗಳಿಗೆ.
- ಗ್ರಾಮೀಣ ವಿದ್ಯುದೀಕರಣ ನಿಗಮ, ಪವರ್ ಫೈನಾನ್ಸ್ ಕಾರ್ಪೊರೇಶನ್ ಮತ್ತು ವಾಣಿಜ್ಯ ಬ್ಯಾಂಕುಗಳು ಮುಂತಾದ ಹಣಕಾಸು ಸಂಸ್ಥೆಗಳಿಗೆ, ಅವು ನೀಡಿದ ಆರ್ಥಿಕ ಬೆಂಬಲಕ್ಕೆ
- ಪ್ರಚಾರ ನೀಡಿದ್ದಕ್ಕೆ ಮತ್ತು ಜನತೆಯಲ್ಲಿ ಜಾಗೃತಿಯನ್ನು ಮೂಡಿಸಿದ್ದಕ್ಕೆ ಮಾಧ್ಯಮಗಳಿಗೆ
- ಶಾಸನಬದ್ಧ ಲೆಕ್ಕಪರಿಶೋಧಕರು, ವೆಚ್ಚ ಲೆಕ್ಕಪರಿಶೋಧಕರು ಹಾಗೂ ಕಾರ್ಯದರ್ಶಿಯ ಲೆಕ್ಕಪರಿಶೋಧಕರಿಗೆ ಅವರ ಮಾರ್ಗದರ್ಶನ ಮತ್ತು ಬೆಂಬಲಕ್ಕೆ
- ನೌಕರರ ಯೂನಿಯನ್‌ಗಳು ಮತ್ತು ಸಂಘಗಳು

ಇವರುಗಳು ನೀಡಿದ ಸಹಕಾರ ಮತ್ತು ಸಹಯೋಗಕ್ಕೆ – ಕೃತಜ್ಞತೆಗಳನ್ನು ಸಲ್ಲಿಸುತ್ತದೆ.

ಜೆಸ್ಕಾಂ ಪರವಾಗಿ

ಸಹಿ	ಸಹಿ
ವ್ಯವಸ್ಥಾಪಕ ನಿರ್ದೇಶಕರು	ನಿರ್ದೇಶಕರು (ತಾಂತ್ರಿಕ)
ಜೆಸ್ಕಾಂ	ಜೆಸ್ಕಾಂ

ಅನುಬಂಧ-1

ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

ಸಿಐಎನ್ : ಯು0410ಕೆಎ2002ಎಸ್‌ಜಿಸಿ030436

ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ನೀತಿ

ವಿಷಯಸೂಚಿ:

1. ಹಿನ್ನೆಲೆ
2. ಉದ್ದೇಶ
3. ಸಿಎಸ್‌ಆರ್ ಸಮಿತಿಯ ಉಲ್ಲೇಖಲಾ ನಿಬಂಧನೆಗಳು
4. ಸಿಎಸ್‌ಆರ್ ಚಟುವಟಿಕೆಗಳು/ಯೋಜನೆಗಳು
5. ಸಿಎಸ್‌ಆರ್ ಮೊತ್ತ
6. ಸಿಎಸ್‌ಆರ್ ಮೊತ್ತದ ವಿನಿಯೋಜನೆ
7. ಆಡಳಿತ
8. ಮಾಹಿತಿಯ ಪ್ರಸರಣ

1. ಹಿನ್ನೆಲೆ:

ತಾನು ಯಾವ ಸಮುದಾಯದ ನಡುವೆ ಮತ್ತು ಯಾವ ಪರಿಸರದಲ್ಲಿ ಕಾರ್ಯ ನಿರ್ವಹಿಸುತ್ತಿದೆಯೋ ಅವುಗಳ ಬಗೆಗೆ ಕಂಪನಿ ಹೊಂದಿರುವ ಜವಾಬ್ದಾರಿಯ ಪ್ರಜ್ಞೆಯೇ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಯಾಗಿದೆ. ನೀತಿಬದ್ಧವಾಗಿ ನಡೆದು ಒಟ್ಟಾರೆ ಸಮಾಜದ ಆರ್ಥಿಕ ಅಭಿವೃದ್ಧಿಗೆ ಕೊಡುಗೆಯನ್ನು ಸಲ್ಲಿಸಿ ಜೀವನ ಮುಂದುವರೆಸಲು ಸಮಾಜದ ವಲಯಗಳನ್ನು ಸಶಕ್ತಗೊಳಿಸುವ ನಿಟ್ಟಿನಲ್ಲಿ ವ್ಯಾಪಾರಿ ಉದ್ಯಮಗಳು ನಿರಂತರವಾಗಿ ಹೊಂದಿರಬೇಕಾದ ಬದ್ಧತೆಯಿದು. ನಿಗಮವು ತನ್ನ ವ್ಯಾಪಾರವನ್ನು ಅತ್ಯಂತ ಜವಾಬ್ದಾರಿಯುತವಾಗಿ, ನ್ಯಾಯಬದ್ಧವಾಗಿ ಮತ್ತು ಪಾರದರ್ಶಕವಾಗಿ ನಡೆಸುವುದರಲ್ಲಿ ನಂಬಿಕೆಯಿರಿಸಿದೆ. ತನ್ನ ಸಾಮಾಜಿಕ ಗುರಿಗಳ ಭಾಗವಾಗಿ, ತಾನು ಕಾರ್ಯ ನಿರ್ವಹಿಸುವ ಸಮಾಜ ಮತ್ತು ಪರಿಸರದ ಮೇಲೆ ಸಕಾರಾತ್ಮಕವಾದ ಪರಿಣಾಮವನ್ನು ಉಂಟುಮಾಡಲು ನಿಗಮವು ನಿರಂತರವಾದ ಪ್ರಯತ್ನಗಳನ್ನು ತೊಡಗಿಸಿದೆ.

ರಾಜ್ಯ ವಿತರಣಾ ಸಂಸ್ಥೆಯಾಗಿ ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತವು ತನ್ನ ವಿದ್ಯುತ್ ಕೇಂದ್ರಗಳು ಮತ್ತು ಹಂಚಿಕೆ ಲೈನುಗಳ ಮೂಲಕ ಕರ್ನಾಟಕ ರಾಜ್ಯದಲ್ಲಿ ವಿದ್ಯುತ್ ಹಂಚಿಕೆಯ ಕಾರ್ಯಗಳನ್ನು ನಡೆಸುವಅಧಿಕಾರವನ್ನು ಪಡೆದಿರುತ್ತದೆ. ಜೆಸ್ಕಾಂ ಸ್ಪರ್ಧಾತ್ಮಕ ಬೆಲೆಗಳಲ್ಲಿ ಮತ್ತು ವಿಶ್ವಾಸಾರ್ಹವಾಗಿ ಗುಣಮಟ್ಟದ ವಿದ್ಯುತ್ ಒದಗಿಸುವುದನ್ನು ಖಚಿತಪಡಿಸಿಕೊಂಡು ಸಾರ್ವಜನಿಕರಿಗೆ ಸೇವೆಯನ್ನು ಸಲ್ಲಿಸಲು ಕೆಳಗಿನ ಕ್ರಮಗಳ ಮೂಲಕ ಉದ್ಯುಕ್ತವಾಗಿದೆ:

1. ವಿತರಣೆಯಲ್ಲಿ ಅತ್ಯುತ್ತಮವಾದ ಆಚರಣೆಗಳನ್ನು ಪ್ರೋತ್ಸಾಹಿಸುವುದು;
2. ತನ್ನ ಎಲ್ಲ ತಾಂತ್ರಿಕ ಸೌಲಭ್ಯಗಳ ನಿರ್ವಹಣೆಯಲ್ಲಿ ಅತ್ಯುಚ್ಛ ಮಟ್ಟವನ್ನು ಖಚಿತಪಡಿಸಿಕೊಳ್ಳುವುದು; ಮತ್ತು
3. ಗ್ರಾಹಕ ಸೇವೆಯಲ್ಲಿ ಅತ್ಯುತ್ತಮ ಪ್ರಮಾಣಗಳ ಸಾಧನೆಯ ಮೇಲೆ ಒತ್ತನ್ನು ಇರಿಸುವುದು.

2. ಉದ್ದೇಶ:

ಈ ನೀತಿಯು ಸಿಎಸ್‌ಆರ್ ಅನ್ನು ಒಂದು ಪ್ರಧಾನ ವ್ಯಾಪಾರ ಪ್ರಕ್ರಿಯೆಯಾಗಿಸಲು ಮಾರ್ಗಸೂಚಿಗಳನ್ನು ಮುಂದಿಡುತ್ತದೆ. ನಿಗಮವು ಭಾರತದಲ್ಲಿ ನಡೆಸಿರುವ ಚಟುವಟಿಕೆಗಳ ಸಾಮಾಜಿಕ ಮತ್ತು ಪರಿಸರಾತ್ಮಕ ಪರಿಣಾಮಗಳನ್ನು ಆಧರಿಸಿ ಸಾಮಾಜಿಕ ಕಲ್ಯಾಣಕ್ಕೆ ಅಗತ್ಯವಾದ ಕ್ರಮಗಳನ್ನು ವೃದ್ಧಿಸುವ ಉದ್ದೇಶ ಈ ನೀತಿಯದಾಗಿದೆ. ಕಂಪನಿ ಕಾಯ್ದೆ, 2013ರ ಅನುಸೂಚಿ VII ರ ನೆಲೆಯಲ್ಲಿ ಕೈಗೊಳ್ಳಬಹುದಾದ ಯೋಜನೆಗಳು ಮತ್ತು ಕಾರ್ಯಕ್ರಮಗಳನ್ನು ನೀತಿಯು ನಿರ್ದಿಷ್ಟಗೊಳಿಸುತ್ತದೆ. ಅನುಷ್ಠಾನದ ವರ್ಷಗಳಲ್ಲಿ ಕೈಗೊಳ್ಳಲು ಉದ್ದೇಶಿಸಲಾಗುವ ಯೋಜನೆಗಳು ಮತ್ತು ಕಾರ್ಯಕ್ರಮಗಳು, ಆಯ್ಕೆ ಮಾಡಲಾದ ಕ್ಷೇತ್ರಗಳು/ವಲಯಗಳಲ್ಲಿ ಯೋಜನೆಗಳನ್ನು ಜಾರಿಗೊಳಿಸುವ ವಿಧಾನಗಳು ಮತ್ತು ಅನುಷ್ಠಾನದ ವೇಳಾಪಟ್ಟಿಯನ್ನು ನೀತಿಯು ಸ್ಪಷ್ಟಪಡಿಸುತ್ತದೆ. ಕಂಪನಿ ಕಾಯ್ದೆ, 2013ರ ಅನುಸೂಚಿ-**VII** ರಲ್ಲಿ ಹೇಳಲಾಗಿರುವ ಚಟುವಟಿಕೆಗಳಿಗೆ ಬದ್ಧವಾಗಿ, ವಿವಿಧ ಸಂದರ್ಭಗಳು ಮತ್ತು ಸವಾಲುಗಳಿಗೆ ಸೂಕ್ತವಾಗಿ ಮತ್ತು ನಮ್ಯತೆಯಿಂದ ಪ್ರತಿಸ್ಪಂದಿಸಲು ನಿಗಮಕ್ಕೆ ಸಾಧ್ಯವಾಗುವ ರೀತಿಯಲ್ಲಿ ಈ ನೀತಿಯ ವ್ಯಾಪ್ತಿಯನ್ನು ಸಾಧ್ಯವಾದಷ್ಟೂ ವಿಶಾಲವಾಗಿ ಇರಿಸಲಾಗಿದೆ. ಆದರೆ, ಭಾರತದ ಹೊರಗೆ ನಡೆಸಲಾಗುವ ಯಾವುದೇ ಚಟುವಟಿಕೆಗಳಿಗೆ ಯಾವುದೇ ಕೊಡುಗೆಯನ್ನು ನೀಡಲಾಗುವುದಿಲ್ಲ.

3. ಸಿಎಸ್‌ಆರ್ ಸಮಿತಿಯ ಉಲ್ಲೇಖನಾ ನಿಬಂಧನೆಗಳು:

ಸಿಎಸ್‌ಆರ್ ಸಮಿತಿಗೆಂದು ಕೆಳಗಿನ ಉಲ್ಲೇಖನಾ ನಿಬಂಧನೆಗಳನ್ನು ನಿಗದಿಪಡಿಸಲಾಗಿದೆ:

ಎ) ಒಂದು ಸಿಎಸ್‌ಆರ್ ನೀತಿಯನ್ನು ರೂಪಿಸಿ ಅದನ್ನು ಮಂಡಳಿಗೆ ಶಿಫಾರಸುಮಾಡುವುದು;

ಬಿ) ಸಿಎಸ್‌ಆರ್ ಚಟುವಟಿಕೆಗಳ ಮೇಲೆ ವ್ಯಯಿಸಬೇಕಿರುವ ಮೊತ್ತವನ್ನು ಶಿಫಾರಸುಮಾಡುವುದು.

ಸಿ) ಕಾಲದಿಂದ ಕಾಲಕ್ಕೆ ಕಂಪನಿಯ ಸಿಎಸ್ಆರ್ ನೀತಿಯ ಮೇಲ್ವಿಚಾರಣ ನಡೆಸುವುದು; ಮತ್ತು

ಡಿ) ಕಂಪನಿಯು ಕೈಗೊಳ್ಳುವ ಸಿಎಸ್ಆರ್ ಯೋಜನೆಗಳು/ಕಾರ್ಯಕ್ರಮಗಳು ಅಥವಾ ಕಾರ್ಯಕ್ರಮಗಳ ಜಾರಿಗೊಳಿಸುವಿಕೆಗೆ ಪಾರದರ್ಶಕವಾದ ಮೇಲ್ವಿಚಾರಣಾ ಕಾರ್ಯವಿಧಾನವನ್ನು ಸ್ಥಾಪಿಸುವುದು.

ಸಿಎಸ್ಆರ್ ಸಮಿತಿಯು ನಿಗಮದ ಸಿಎಸ್ಆರ್ ಉದ್ದೇಶಗಳ ಈಡೇರಿಕೆಯ ಸಲುವಾಗಿ ಕೆಳಗಿನ ಪಾತ್ರವನ್ನು ನಿರ್ವಹಿಸುತ್ತದೆ:

- ಸಿಎಸ್ಆರ್ ಉಪಕ್ರಮಗಳಿಗೆ ಸಂಬಂಧಿಸಿದಂತೆ ನಿಗಮವು ಕೈಗೆತ್ತಿಕೊಳ್ಳಬೇಕಿರುವ ಚಟುವಟಿಕೆಗಳನ್ನು ಸೂಚಿಸುತ್ತ ಸಿಎಸ್ಆರ್ ನೀತಿಯನ್ನು ರೂಪಿಸುವುದು ಮತ್ತು ಪರಿಶೀಲಿಸುವುದು;
- ಸಿಎಸ್ಆರ್ ಚಟುವಟಿಕೆಗಳ ಮೇಲೆ ವ್ಯಯಿಸಬೇಕಿರುವ ಮೊತ್ತವನ್ನು ಶಿಫಾರಸುಮಾಡುವುದು; ಮತ್ತು
- ನಿಗಮವು ಕೈಗೊಳ್ಳಲು ಪ್ರಸ್ತಾಪಿಸಿರುವ ಯೋಜನೆಗಳು/ಕಾರ್ಯಕ್ರಮಗಳು ಅಥವಾ ಕಾರ್ಯಕ್ರಮಗಳ ಜಾರಿಗೊಳಿಸುವಿಕೆಗೆ ಅಥವಾ ನಿಗಮವು ಸಿಎಸ್ಆರ್ ಚಟುವಟಿಕೆಗಳಿಗೆಂದು ವ್ಯಯಿಸಿರುವ ಮೊತ್ತದ ಕೊನೆಯ ಬಳಕೆಗೆ ಪಾರದರ್ಶಕವಾದ ಮೇಲ್ವಿಚಾರಣಾ ಕಾರ್ಯವಿಧಾನವನ್ನು ರೂಪಿಸುವುದು.
- ಕಾಲದಿಂದ ಕಾಲಕ್ಕೆ ಈ ನೀತಿಯ ಮೇಲ್ವಿಚಾರಣ ನಡೆಸುವುದು;
- ಸಿಎಸ್ಆರ್ ಚಟುವಟಿಕೆಗಳ ಸ್ಥಿತಿಗತಿ ಮತ್ತು ನಿಗಮವು ನೀಡಿರುವ ಕೊಡುಗೆಗಳ ಬಗ್ಗೆ ಮಂಡಳಿಗೆ ವಾರ್ಷಿಕವಾಗಿ ವರದಿಮಾಡುವುದು
- ಈ ಸಂಬಂಧವಾಗಿ ಹೊರಡಿಸಲಾದ ಕಾಯ್ದೆ ಮತ್ತು ನಿಯಮಗಳ ಅಡಿ ಕಡ್ಡಾಯವಾಗಿರುವ ಇತರ ಯಾವುದೇ ಅಗತ್ಯಗಳು.

4. ಸಿಎಸ್ಆರ್ ಚಟುವಟಿಕೆಗಳು/ಯೋಜನೆಗಳು:

ಕಂಪನಿಗಳು ತಮ್ಮ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿ ನೀತಿಗೆ ಸಂಬಂಧಿಸಿದಂತೆ ನಡೆಸಬಹುದಾದ ಚಟುವಟಿಕೆಗಳ ಪಟ್ಟಿಗೆ ಸೇರಬಹುದಾದ ಕೆಳಗಿನವುಗಳನ್ನು ಕಂಪನಿ ಕಾಯ್ದೆ, 2013ರ ಪರಿಷ್ಕೃತ ಅನುಸೂಚಿ **VII** ಉಪಬಂಧಿಸುತ್ತದೆ:

1) ಹಸಿವು, ಬಡತನ ಮತ್ತು ಅಪೌಷ್ಟಿಕತೆಯ ನಿರ್ಮೂಲನೆ, ನಿವಾರಣಾ ಆರೋಗ್ಯ ಕಾಳಜಿಯೂ ಸೇರಿದಂತೆ ಆರೋಗ್ಯ ಕಾಳಜಿ ಮತ್ತು ನೈರ್ಮಲ್ಯೀಕರಣವನ್ನು ಪ್ರೋತ್ಸಾಹಿಸಲು ಕೇಂದ್ರ ಸರ್ಕಾರವು ಸ್ಥಾಪಿಸಿರುವ ಸ್ವಚ್ಛ ಭಾರತ ಕೋಶಕ್ಕೆ ಕೊಡುಗೆಯೂ ಸೇರಿದಂತೆ ನೈರ್ಮಲ್ಯೀಕರಣ ಹಾಗೂ ಸುರಕ್ಷಿತ ಕುಡಿಯುವ ನೀರನ್ನು ಲಭ್ಯವಾಗಿಸುವುದು.
2) ವಿಶೇಷವಾಗಿ ಮಕ್ಕಳು, ಮಹಿಳೆಯರು, ವಯಸ್ಕರು ಮತ್ತು ಭಿನ್ನ ಸಾಮರ್ಥ್ಯದ ಜನರಲ್ಲಿ ವಿಶೇಷ ಶಿಕ್ಷಣ ಮತ್ತು ಉದ್ಯೋಗ ವೃದ್ಧಿ ಕೌಶಲ್ಯಗಳನ್ನು ಒಳಗೊಂಡಿರುವ ಶಿಕ್ಷಣವನ್ನು ಹಾಗೂ ಜೀವನೋಪಾಯ ವೃದ್ಧಿ ಯೋಜನೆಗಳನ್ನು ಪ್ರೋತ್ಸಾಹಿಸುವುದು.
3) ಲಿಂಗ ಸಮಾನತೆ ಮತ್ತು ಮಹಿಳಾ ಸಬಲೀಕರಣವನ್ನು ಪ್ರೋತ್ಸಾಹಿಸುವುದು, ಮಹಿಳೆಯರು ಮತ್ತು ಅನಾಥರಿಗೆ ಮನೆಗಳು ಮತ್ತು ವಸತಿ ನಿಲಯಗಳನ್ನು ಸ್ಥಾಪಿಸುವುದು, ಹಿರಿಯ ನಾಗರಿಕರಿಗೆ ಮೀಸಲಾದ ನಿಲಯಗಳು, ದಿನವಹಿ ಕಾಳಜಿ ಕೇಂದ್ರಗಳು ಮತ್ತುಇತರ ಸೌಲಭ್ಯಗಳನ್ನು ಕಲ್ಪಿಸುವುದು ಹಾಗೂ ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ವರ್ಗಗಳು ಎದುರಿಸುತ್ತಿರುವ ಅಸಮಾನತೆಗಳನ್ನು ತಗ್ಗಿಸಲು ಕ್ರಮಗಳನ್ನು ಕೈಗೊಳ್ಳುವುದು.
4) ಪರಿಸರಾತ್ಮಕ ಸ್ಥಿರತೆ, ಪರಿಸರ ಸಮತೋಲನ, ಗಿಡ ಮರಗಳ ಸಂರಕ್ಷಣೆ, ಪ್ರಾಣಿವರ್ಗದ ಕ್ಷೇಮ, ಅರಣ್ಯಕೃಷಿ, ಪ್ರಾಕೃತಿಕ ಸಂಪನ್ಮೂಲಗಳ ಸಂರಕ್ಷಣೆ ಮತ್ತು ನೀರು, ಮಣ್ಣು ಹಾಗೂ ಗಾಳಿಯ ಗುಣಮಟ್ಟವನ್ನು ಕಾಪಾಡಿಕೊಳ್ಳುವುದು ಹಾಗೂ ಗಂಗಾ ನದಿಯ ಪುನರುಜ್ಜೀವನಕ್ಕಾಗಿ ಕೇಂದ್ರ ಸರ್ಕಾರ ಸ್ಥಾಪಿಸಿರುವ ಶುದ್ಧ ಗಂಗಾ ನಿಧಿಗೆ ಕೊಡುಗೆ.
5) ಐತಿಹಾಸಿಕ ಪ್ರಾಮುಖ್ಯ ಹೊಂದಿರುವ ಕಟ್ಟಡಗಳು ಮತ್ತು ತಾಣಗಳು ಹಾಗೂ ಕಲಾಕೃತಿಗಳೂ ಸೇರಿದಂತೆ ರಾಷ್ಟ್ರೀಯ ಪರಂಪರೆ, ಕಲೆ ಮತ್ತು ಸಂಸ್ಕೃತಿಯ ಸಂರಕ್ಷಣೆ; ಸಾರ್ವಜನಿಕ ಗ್ರಂಥಾಲಯಗಳ ಸ್ಥಾಪನೆ; ಸಾಂಪ್ರದಾಯಿಕ ಕಲೆ ಮತ್ತು ಕರಕುಶಲ ಕಲೆಗಳ ಪ್ರೋತ್ಸಾಹ ಮತ್ತು ಅಭಿವೃದ್ಧಿ;
6) ಸಶಸ್ತ್ರ ಪಡೆಗಳ ನಿವೃತ್ತ ಸೈನಿಕರು, ಯುದ್ಧ ವಿಧವೆಯರು ಮತ್ತು ಅವರ ಅವಲಂಬಿತರ ಹಿತಕ್ಕಾಗಿ ಕ್ರಮಗಳು;
7) ಗ್ರಾಮೀಣ ಕ್ರೀಡೆಗಳು, ರಾಷ್ಟ್ರೀಯ ಮಾನ್ಯತೆಯ ಕ್ರೀಡೆಗಳು, ಪ್ಯಾರಒಲಂಪಿಕ್ ಕ್ರೀಡೆಗಳು ಮತ್ತು ಒಲಂಪಿಕ್ ಕ್ರೀಡೆಗಳ ತರಬೇತಿ ಮತ್ತು ಪ್ರೋತ್ಸಾಹ;
8) ಪ್ರಧಾನಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿಗೆ ಅಥವಾ ಸಾಮಾಜಿಕ–ಆರ್ಥಿಕ ಅಭಿವೃದ್ಧಿ ಮತ್ತು ಅನುಸೂಚಿತಜಾತಿ, ವರ್ಗ ಮತ್ತಿತರ ಹಿಂದುಳಿದ ವರ್ಗಗಳು, ಅಲ್ಪಸಂಖ್ಯಾತರು ಮತ್ತು ಮಹಿಳೆಯರ ಪರಿಹಾರ ಹಾಗೂ ಕಲ್ಯಾಣಕ್ಕಾಗಿ ಕೇಂದ್ರ ಸರ್ಕಾರ ಸ್ಥಾಪಿಸಿರುವ ಯಾವುದಾದರೂ ನಿಧಿಗೆ ಕೊಡುಗೆ;
9) ಕೇಂದ್ರ ಸರ್ಕಾರ ಅಂಗೀಕರಿಸಿರುವ ಶೈಕ್ಷಣಿಕ ಸಂಸ್ಥೆಗಳ ಒಳಗೆ ಸ್ಥಿತವಿರುವ ತಾಂತ್ರಿಕ ಇನ್ಕ್ಯುಬೇಟರ್ಗಳಿಗೆ ಒದಗಿಸುವ ಕೊಡುಗೆಗಳು ಅಥವಾ ನಿಧಿಗಳು;
10) ಗ್ರಾಮೀಣ ಅಭಿವೃದ್ಧಿ ಯೋಜನೆಗಳು
11) ಕೊಳಗೇರಿಗಳ ಅಭಿವೃದ್ಧಿ.

ವಿವರಣೆ–

ಈ ಅಂಶಕ್ಕೆ ಸಂಬಂಧಿಸಿದಂತೆ, ಕೇಂದ್ರ ಸರ್ಕಾರ ಅಥವಾ ಯಾವುದೇ ರಾಜ್ಯ ಸರ್ಕಾರ ಅಥವಾ ಜಾರಿಯಲ್ಲಿರುವ ಕಾನೂನಿನ ಅಡಿಯಲ್ಲಿ ಇರುವ ಯಾವುದೇ ಸಕ್ಷಮ ಪ್ರಾಧಿಕಾರವು ಕೊಳಗೇರಿ ಎಂದು ಘೋಷಿಸಿರುವ ಪ್ರದೇಶವನ್ನು 'ಕೊಳಗೇರಿ ಪ್ರದೇಶ' ಎಂದು ತಿಳಿಯಬೇಕಾಗಿದೆ.

ಸಿಎಸ್ಆರ್ ಅಡಿಯಲ್ಲಿ ವೆಚ್ಚಕ್ಕೆಂದು ಪರಿಗಣಿಸಬಹುದಾದ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಅನುಸೂಚಿ**VII** ಮಾರ್ಗಸೂಚಿ ದಾಖಲೆಯಾಗಿದೆ ಮತ್ತು ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಇದನ್ನು ಪರಿಷ್ಕರಿಸುತ್ತದೆ. ಹಾಗಾಗಿ, ಭಾರತ ಸರ್ಕಾರದ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯ ಪರಿಷ್ಕರಿಸಿದಂತೆ ಅನುಸೂಚಿ**VII** ಸಿಎಸ್ಆರ್ ನೀತಿಯಲ್ಲಿ ಸೇರ್ಪಡೆಯಾಗುತ್ತದೆ.

5. ಸಿಎಸ್ಆರ್ ಮೊತ್ತ:

ಕಂಪನಿ ಕಾಯ್ದೆ, 2013ರ ಪರಿಚ್ಛೇದ 135 ಮತ್ತು ಅದಕ್ಕೆ ಸಂವಾದಿಯಾಗಿರೂಪಿಸಲಾದ ನಿಯಮಗಳಿಗೆ ಬದ್ಧವಾಗಿ ಹಾಗೂ ಕಾರ್ಪೊರೇಟ್ ಸಾಮಾಜಿಕ ಜವಾಬ್ದಾರಿಯ ಅನುಸರಣೆಯಲ್ಲಿ ಹಿಂದಿನ ತಕ್ಷಣದ 3 ವರ್ಷಗಳಲ್ಲಿ (ತೆರಿಗೆಗೆ ಮುನ್ನ) ಪಡೆಯಲಾದ ಸರಾಸರಿ ನಿವ್ವಳ ಲಾಭಗಳ ಕನಿಷ್ಠ 2% ದಷ್ಟು ಮೊತ್ತವನ್ನು ನಿಗಮವು ಪ್ರತಿ ಹಣಕಾಸು ವರ್ಷದಲ್ಲಿ ವ್ಯಯಿಸುವುದನ್ನು ಖಚಿತಪಡಿಸಿಕೊಳ್ಳಬೇಕು.

ಈ ನೀತಿಯ ಉದ್ದೇಶಕಾಗಿ, ಮೊದಲ ಸಿಎಸ್ಆರ್ ವೆಚ್ಚದ ಹಣಕಾಸು ವರ್ಷವು 2014–15 ಆಗಿರುತ್ತದೆ ಮತ್ತು ನಿವ್ವಳ ಲಾಭವೆಂದರೆ ಹಣಕಾಸು ವರ್ಷ 2011–12, 2012–13 ಮತ್ತು 2013–14ರ ವಾರ್ಷಿಕ ಸರಾಸರಿ ನಿವ್ವಳ ಲಾಭವಾಗಿದೆ. ಇಲ್ಲಿ ಸೂಚಿಸಿರುವ ನಿವ್ವಳ ಲಾಭವೆಂದರೆ, ನಿಗಮದ ಲೆಕ್ಕಪುಸ್ತಕಗಳ ಪ್ರಕಾರ ತೆರಿಗೆಗೆ ಮುಂಚಿನ ನಿವ್ವಳ ಲಾಭವಾಗಿದೆ ಮತ್ತು ಇದರಲ್ಲಿ ಭಾರತದ ಹೊರಗಡೆಯಿರುವ ಶಾಖೆಗಳು ಒದಗಿಸುವ ಲಾಭಗಳು ಸೇರುವುದಿಲ್ಲ.

6. ಸಿಎಸ್ಆರ್ ಮೊತ್ತವನ್ನು ವ್ಯಯಿಸುವುದು:

ಸಿಎಸ್ಆರ್ ಮೊತ್ತವನ್ನು ವ್ಯಯಿಸುವುದಕ್ಕೆ ಸಂಬಂಧಿಸಿದಂತೆ ಕೆಳಗಿನ ಅಂಶಗಳ ಬಗ್ಗೆ ಸಿಎಸ್ಆರ್ ಸಮಿತಿಯು ನಿರ್ಧರಿಸುತ್ತದೆ:

- ವಿವಿಧ ಅಭಿವೃದ್ಧಿ ಸಂಸ್ಥೆಗಳು ಮತ್ತು ಅತ್ಯಂತ ಕೆಳಹಂತದ ಸಂಸ್ಥೆಗಳಿಗೆ ಬಳಸಬೇಕಾದ ಒಟ್ಟು ಪ್ರತಿಶತ ಮೊತ್ತ; ಮತ್ತು
- ವಿತರಣೆಯ ಕಂತುಗಳು.
- ಸ್ವೀಕರಿಸಲಾದ ಕೊಡುಗೆಯಿಂದ ಉದಿಯಿಸುವ ಆದಾಯ ಅಥವಾ ಸಿಎಸ್ಆರ್ ಚಟುವಟಿಕೆಗಳಿಂದ ಒದಗುವ ಹೆಚ್ಚಳವನ್ನು ಸಿಎಸ್ಆರ್‌ಗೇ ಬಳಸಬೇಕಾಗುತ್ತದೆ.
- ನಿಗಮದ ಸಿಬ್ಬಂದಿಯ ಸಿಎಸ್ಆರ್ ಸಾಮರ್ಥ್ಯವನ್ನು ಬೆಳೆಸಲು ನಿಧಿಗಳನ್ನು ವಿನಿಯೋಗಿಸಲು ಸಮಿತಿಯು ಶಿಫಾರಸು ಮಾಡಬೇಕು ಮತ್ತು ಈ ಸಿಬ್ಬಂದಿಯ ಮೂಲಕ ನಿಗಮವು ಸಿಎಸ್ಆರ್ ಚಟುವಟಿಕೆಗಳನ್ನು ನಡೆಸಬೇಕು.

7. ಆಡಳಿತ :

1. ಪ್ರತಿ ವರ್ಷ ಸಿಎಸ್ಆರ್ ಸಮಿತಿಯು ಸಂಬಂಧಿತ ಹಣಕಾಸು ವರ್ಷದಲ್ಲಿ ನಡೆಸಬೇಕಿರುವ ಸಿಎಸ್ಆರ್ ಚಟುವಟಿಕೆಗಳನ್ನು ವಿಶದಪಡಿಸುವ ಸಿಎಸ್ಆರ್ ಯೋಜನೆಯನ್ನು ಮತ್ತು ಅದಕ್ಕೆ ಸಂವಾದಿಯಾಗಿ ನಿರ್ದಿಷ್ಟಗೊಳಿಸಲಾದ ಆಯವ್ಯಯಗಳನ್ನು ಮಂಡಳಿಯ ಅಂಗೀಕಾರಕ್ಕಾಗಿ ಸಲ್ಲಿಸಬೇಕು. ಮಂಡಳಿಯು ಸಿಎಸ್ಆರ್ ಯೋಜನೆಯನ್ನು ಪರಿಗಣಿಸಿ ಅಗತ್ಯವೆಂದು ತೋರುವ ಮಾರ್ಪಾಡಿನೊಂದಿಗೆ ಅದನ್ನು ಅಂಗೀಕರಿಸುತ್ತದೆ.
2. ಸಿಎಸ್ಆರ್ ಕಾರ್ಯಕ್ರಮಗಳ ಜಾರಿಯನ್ನು ಸಿಎಸ್ಆರ್ ಸಮಿತಿಯು ಪರಿಶೀಲಿಸಬೇಕು ಮತ್ತು ಈ ನೀತಿಗೆ ಅನುಸಾರವಾಗಿ ಸಿಎಸ್ಆರ್ ಕಾರ್ಯಕ್ರಮಗಳನ್ನು ಕ್ರಮಬದ್ಧವಾಗಿ ಮತ್ತು ದಕ್ಷವಾಗಿ ಜಾರಿಗೊಳಿಸುವುದನ್ನು ಖಚಿತಪಡಿಸಿಕೊಳ್ಳಲು ಕಾಲದಿಂದ ಕಾಲಕ್ಕೆ ಅಗತ್ಯ ನಿರ್ದೇಶನಗಳನ್ನು ಒದಗಿಸಬೇಕು.
3. ಪ್ರತಿ ಆರು ತಿಂಗಳಿಗೆ ಒಮ್ಮೆ, ಹಿಂದಿನ ಆರು ತಿಂಗಳಲ್ಲಿ ಅಂಗೀಕೃತವಾದ ಸಿಎಸ್ಆರ್ ಕಾರ್ಯಕ್ರಮಗಳ ಜಾರಿಯ ಪ್ರಗತಿಯ ಬಗ್ಗೆ ಸ್ಥಿತಿಗತಿಯ ವರದಿಯನ್ನು ಸಿಎಸ್ಆರ್ ಸಮಿತಿಯು ಒದಗಿಸಬೇಕು. ಇಂತಹ ವರದಿಗಳನ್ನು ಪರಿಶೀಲಿಸಿ ಸಿಎಸ್ಆರ್ ಕಾರ್ಯಕ್ರಮಗಳ ಜಾರಿಯ ಸ್ಥಿತಿಗತಿಯನ್ನು ಮಂಡಳಿಗೆ ತಿಳಿಸುವುದು ಸಿಎಆರ್ ಸಮಿತಿಯ ಜವಾಬ್ದಾರಿಯಾಗಿರುತ್ತದೆ.
4. ಪ್ರತಿ ಹಣಕಾಸು ವರ್ಷದ ಕೊನೆಯ ಹೊತ್ತಿಗೆ ಸಿಎಸ್ಆರ್ ಸಮಿತಿಯು ಮಂಡಳಿಗೆ ತನ್ನ ವರದಿಯನ್ನು ಸಲ್ಲಿಸುತ್ತದೆ.

8. ಮಾಹಿತಿಯ ಪ್ರಸರಣ

ಸಿಎಸ್ಆರ್ ಸಮಿತಿಯು, ಕನಿಷ್ಠ ವಾರ್ಷಿಕ ನೆಲೆಯಲ್ಲಿ ನಿಗಮವು ಕೈಗೆತ್ತಿಕೊಂಡಿರುವ ಸಿಎಸ್ಆರ್ ಯೋಜನೆಗಳು/ಚಟುವಟಿಕೆಗಳ ವರದಿಯನ್ನು ಅಂತಹ ಯೋಜನೆಗಳು/ಚಟುವಟಿಕೆಗಳು ಮೂಡಿಸಿರುವ ಪರಿಣಾಮವನ್ನೂ ಒಳಗೊಂಡಂತೆ ನಿಗಮದ ಮಂಡಳಿಗೆ ವರದಿಮಾಡಬೇಕು.

ನಿಗಮವು ತನ್ನ ವೆಬ್‌ಸೈಟ್ www.kptcl.com/ePrasarana ದಲ್ಲಿ ಈ ನೀತಿಯನ್ನು ಅಪ್‌ಲೋಡ್ ಮಾಡಬೇಕು. ಅಲ್ಲದೆ, ವಾರ್ಷಿಕ ವರದಿಯ ಭಾಗವಾದ ನಿರ್ದೇಶಕರ ವರದಿಯಲ್ಲಿ ನಿಗಮವು ಕೈಗೊಂಡ ಸಿಎಸ್ಆರ್ ಚಟುವಟಿಕೆಗಳ ವಿವರವಾದ ಸ್ಥಿತಿಗತಿ ವರದಿಯನ್ನು ಪ್ರಕಟಿಸಬೇಕು.ಇದೇ ಮಾಹಿತಿಯನ್ನು ನಿಗಮದ ವೆಬ್‌ಸೈಟ್ ನಲ್ಲೂ ಸಹ ಪ್ರಕಟಿಸಬೇಕು.

ಸಿಎಸ್ಆರ್ ಸಮಿತಿಯು ವಾರ್ಷಿಕ ವರದಿಯಲ್ಲಿ ಜವಾಬ್ದಾರಿ ತಃಖ್ತೆಯೊಂದನ್ನು ಪ್ರಸ್ತುತಪಡಿಸಿ ಅದರಲ್ಲಿ ಸಿ.ಎಸ್.ಆರ್. ನೀತಿಯ ಅನುಷ್ಠಾನ ಮತ್ತು ಮೇಲ್ವಿಚಾರಣೆಯು ತತ್ವ ಮತ್ತು ಆಚರಣೆಗಳೆರಡರಲ್ಲೂ ಸಿ.ಎಸ್.ಆರ್ ಉದ್ದೇಶಗಳಿಗೆ ಪೂರಕವಾಗಿದೆ ಎಂಬುದನ್ನು ತಿಳಿಸಬೇಕು.

ಅನುಬಂಧ-2

ನಮೂನೆ ಸಂಖ್ಯೆ ಎ ಓ ಸಿ 2

(ಕಂಪನಿ ಕಾಯ್ದೆ, 2013, ಪರಿಚ್ಛೇದ 134ರ ಉಪಪರಿಚ್ಛೇದ(3), ಕಲಮು (ಎಚ್) ಮತ್ತು ಕಂಪನಿಗಳ (ಲೆಕ್ಕಪತ್ರಗಳು) ನಿಯಮಗಳು, 2014ರ ನಿಯಮ 8(2) ರ ಅನುಸಾರ)

ಮೂರನೆ ಪಕ್ಷದ ಷರತ್ತುಗಳ ಅಡಿಯ ಕೆಲವು ಹತ್ತಿರದ ವ್ಯವಹಾರಗಳೂ ಸೇರಿ, ಕಂಪನಿ ಕಾಯ್ದೆ, 2013, ಪರಿಚ್ಛೇದ 188ರ ಉಪಪರಿಚ್ಛೇದ (1)ರಲ್ಲಿ ಉಲ್ಲೇಖಿಸಲಾದ ಸಂಬಂಧಿತ ಪಕ್ಷಗಳೊಂದಿಗೆ ಕಂಪನಿಯು ಮಾಡಿಕೊಂಡಿರುವ ಗುತ್ತಿಗೆಗಳು/ವ್ಯವಸ್ಥೆಗಳ ವಿವರಗಳ ಪ್ರಕಟಣೆ:

1. ತೀರ ಹತ್ತಿರದ ಆಧಾರದ್ದಲ್ಲದ ಗುತ್ತಿಗೆಗಳು ಅಥವಾ ವ್ಯವಸ್ಥೆಗಳು ಅಥವಾ ವ್ಯವಹಾರಗಳ ವಿವರಗಳು – ಅನ್ವಯವಾಗುವುದಿಲ್ಲ.

2. ತೀರ ಹತ್ತಿರದ ಆಧಾರದ್ದಾದ ಸಾಮಗ್ರಿ ಗುತ್ತಿಗೆಗಳು ಅಥವಾ ವ್ಯವಸ್ಥೆಗಳು ಅಥವಾ ವ್ಯವಹಾರಗಳ ವಿವರಗಳು –

ಎ) ಸಂಬಂಧಿತ ಪಕ್ಷದ ಹೆಸರು ಮತ್ತು ಸಂಬಂಧದ ಸ್ವರೂಪ

ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆಪಿಟಿಸಿಎಲ್), ಬೆಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ (ಬೆಸ್ಕಾಂ), ಹುಬ್ಬಳ್ಳಿ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ (ಹೆಸ್ಕಾಂ), ಮಂಗಳೂರು ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ (ಮೆಸ್ಕಾಂ), ಚಾಮುಂಡೇಶ್ವರಿ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ (ಸೆಸ್ಕ್), ಪವರ್ ಕಂಪನಿ ಆಫ್ ಕರ್ನಾಟಕ ನಿಯಮಿತ (ಪಿಕೆಸಿಎಲ್), ಕರ್ನಾಟಕ ವಿದ್ಯುತ್ ನಿಗಮ ನಿಯಮಿತ (ಕೆಪಿಸಿಎಲ್), ಇಂಡ್ ಎಎಸ್ 24 ಮತ್ತು ಪರಿಚ್ಛೇದ 2(76) (viii) (ಸಿ) ಅಡಿ ಕಂಪನಿಯ ಸಂಬಂಧಿತ ಪಕ್ಷ, ಕಂಪನಿ ಕಾಯ್ದೆ, 2013ರ ಪರಿಚ್ಛೇದ 188ಕ್ಕೆ ಸಂಗತವಾಗುವಂತೆ.

ಬಿ) ಗುತ್ತಿಗೆಗಳು/ವ್ಯವಸ್ಥೆಗಳು/ವ್ಯವಹಾರಗಳ ಸ್ವರೂಪ:

ವಿದ್ಯುತ್ ಖರೀದಿ ವ್ಯವಹಾರಗಳಿಗೆ ಒಪ್ಪಂದ

ಸಿ) ಗುತ್ತಿಗೆಗಳು/ವ್ಯವಸ್ಥೆಗಳು/ವ್ಯವಹಾರಗಳ ಅವಧಿ:

ದೀರ್ಘಾವಧಿ

ಡಿ) ಮೌಲ್ಯವೂ ಸೇರಿದಂತೆ, ಅದು ಇದ್ದಲ್ಲಿ, ಗುತ್ತಿಗೆಗಳು ಅಥವಾ ವ್ಯವಸ್ಥೆಗಳು ಅಥವಾ ವ್ಯವಹಾರಗಳ ಮುಖ್ಯಾಂಶಗಳು:

ಸಂಬಂಧಿತ ಪಕ್ಷದೊಂದಿಗಿನ ಒಪ್ಪಂದಗಳು ಸಾಮಾನ್ಯವಾಗಿ ವಿದ್ಯುತ್ ಸರಬರಾಜು, ಪ್ರಸರಣ ಲೈನುಗಳನ್ನು ಒದಗಿಸುವುದು ಮುಂತಾದವಕ್ಕೆ ಆಗಿರುತ್ತದೆ.

ವ್ಯವಹಾರದ ಸ್ವರೂಪ ವ್ಯಾಪಾರದ ಸಾಧಾರಣ ನಡೆಯಲ್ಲಿ ಉದ್ಭವಿಸುವ ಪ್ರಸರಣ ಶುಲ್ಕಗಳ ಪಾವತಿ, ವಿದ್ಯುತ್ ಸಮತೋಲನ ಬಾಕಿಗಳ ಇತ್ಯರ್ಥ, ಹಂಚಿಕೊಳ್ಳಲಾದ ಖರ್ಚುಗಳು ಮುಂತಾದವಾಗಿವೆ ಮತ್ತು ವ್ಯವಹಾರದ ಮೌಲ್ಯವು ವ್ಯವಹಾರಗಳ ನೈಜ ಪರಿಮಾಣವನ್ನು ಆಧರಿಸಿದೆ.

ಇ) ಮಂಡಳಿಯಿಂದ ಅಂಗೀಕಾರದ ದಿನಾಂಕಗಳು, ಅವು ಇದ್ದಲ್ಲಿ:

ಸಂಬಂಧಿತ ಪಕ್ಷಗಳೊಂದಿಗಿನ ಈ ಗುತ್ತಿಗೆಗಳನ್ನು ಕರ್ನಾಟಕ ಸರ್ಕಾರವು ಕಡ್ಡಾಯಗೊಳಿಸಿರುವಂತೆ ವ್ಯಾಪಾರದ ಸಾಧಾರಣವಾದ ನಡೆಯಲ್ಲಿ ಸಾಮಾನ್ಯವಾಗಿ ನಿರ್ದೇಶಕ ಮಂಡಳಿ ಅಥವಾ ಕೆ.ಇ.ಆರ್.ಸಿ, ಕೆ.ಆರ್.ಇ.ಡಿ.ಎಲ್ ಮುಂತಾದ ಪ್ರಾಧಿಕಾರಗಳು ಅಂಗೀಕರಿಸುತ್ತವೆ.

ಎಫ್) ಮುಂಗಡಗಳಾಗಿ ಪಾವತಿಸಲಾದ ಮೊತ್ತ, ಅದು ಇದ್ದಲ್ಲಿ:

ಯಾವುದೂ ಇಲ್ಲ.

ನಿರ್ದೇಶಕ ಮಂಡಳಿಯ ಪರವಾಗಿ

ನಿರ್ದೇಶಕರು (ತಾಂತ್ರಿಕ)
ಜೆಸ್ಕಾಂ

ವ್ಯವಸ್ಥಾಪಕ ನಿರ್ದೇಶಕರು
ಜೆಸ್ಕಾಂ

ನಿರ್ದೇಶಕ ವರದಿಯ ಅನುಬಂಧ–3

ಹಣಕಾಸು ವರ್ಷ 2018–19ರ ನಿರ್ದೇಶಕರ ವರದಿಗೆ ಜೋಡಿಕೆ

ಕ್ರ.ಸಂ.	ಲೆಕ್ಕಪರಿಶೋಧಕರ ಪರಿಶೀಲನೆ	ಆಡಳಿತ ಮಂಡಳಿಯ ಉತ್ತರ
1	ದಾಸ್ತಾನುಗಳ ಮೇಲಿನ ಇಂಡ್ ಎಎಸ್ 2	
ಎ	ಇಂಡ್ಎಎಸ್ 2 ರ ಅನುಸಾರ ಕಂಪನಿಯು ತನ್ನ ದಾಸ್ತಾನುಗಳನ್ನು ನಿವ್ವಳ ಸಾಕ್ಷಾತ್ಕಾರ ಮೌಲ್ಯದ ವೆಚ್ಚದಲ್ಲಿ ಕಡಿಮೆಯಾದುದಕ್ಕೆ ಮೌಲ್ಯಹಾಕಬೇಕಾಗುತ್ತದೆ. ಆದರೆ, ಕಂಪನಿಯು ಖರೀದಿಗಳ ಲೆಕ್ಕಕ್ಕೆ ಪ್ರಮಾಣೀತ ವೆಚ್ಚವನ್ನು ಹಾಗೂ ಮುಕ್ತಾಯದ ದಾಸ್ತಾನಿನ ಮೌಲ್ಯಮಾಪನಕ್ಕೆ ಸರಾಸರಿ ವೆಚ್ಚವನ್ನು ಬಳಸುತ್ತಿದೆ. ದಾಸ್ತಾನಿನಲ್ಲಿ ತೊಡೆದುಹಾಕಲಾದ ಆಸ್ತಿಗಳು, ದೋಷಪೂರಿತ ಮತ್ತು ಮರುಬಳಕೆಗೆಂದು ಕಳಚಿದ ಆಸ್ತಿಗಳು ಮತ್ತು ರಿಪೇರಿ ಮಾಡಿ ಉತ್ತಮ ಸಾಮಗ್ರಿಗಳು ಸೇರಿದ್ದು ಇವನ್ನು ನಮೂದಿಸಲಾದ ಮೌಲ್ಯದಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗುತ್ತದೆ. ಇದು ಕಂಪನಿ ಕಾಯ್ದೆ, 2013ರ ಪರಿಚ್ಛೇದ 133 ರ ಅಡಿಯಲ್ಲಿ ನಿಗದಿಪಡಿಸಲಾಗಿರುವ ಭಾರತೀಯ ಲೆಖಾ ಪ್ರಮಾಣಗಳಿಗೆ ಅನುಸಾರವಾಗಿರುವುದಿಲ್ಲ. ಆಡಳಿತ ಮಂಡಳಿಯು ಪರಿಣಾಮದ ವಿಶ್ಲೇಷಣೆಯನ್ನು ನಡೆಸಿರದ ಕಾರಣದಿಂದಾಗಿ ಈ ಪಥಾಂತರದಿಂದಾಗಿ ಹಣಕಾಸು ತಃಖ್ತೆಗಳ ಮೇಲೆ ಘಟಿಸಿರುವ ಪರಿಣಾಮವನ್ನು ತಿಳಿಯಲು ಸಾಧ್ಯವಾಗಿರುವುದಿಲ್ಲ.	ಇದು 2019ರ ಹಣಕಾಸು ವರ್ಷದ ಹಣಕಾಸು ತಃಖ್ತೆಗಳ ಟಿಪ್ಪಣಿ ಸಂಖ್ಯೆ 2ರ ಕಲಮು 2.19ರಲ್ಲಿ ಸೂಚಿತವಾಗಿರುವಂತಹ ದಾಸ್ತಾನುಗಳ ಮೇಲಿನ ಕಂಪನಿಯ ಲೇಖಾ ಕಾರ್ಯನೀತಿಗೆ ಅನುಗುಣವಾಗಿದೆ. ಪ್ರಸ್ತುತ ಮಾರುಕಟ್ಟೆ ದರಗಳು ಮತ್ತು ಅವಧಿಯ ಭವಿಷ್ಯದ ಬೆಲೆಗಳಲ್ಲಿನ ಸಂಭಾವ್ಯ ಹೆಚ್ಚಳ/ಇಳಿಕೆ – ಇವುಗಳನ್ನು ಪರಿಗಣಿಸಿ ಪ್ರಮಾಣಿತ ದರವನ್ನು ನಿರ್ಧರಿಸಲಾಗುತ್ತದೆ. ಈ ಲೇಖಾ ನೀತಿಗಳನ್ನು ವಿದ್ಯುಚ್ಛಕ್ತಿ ಸರಬರಾಜು ವಾರ್ಷಿಕ ಲೆಕ್ಕಪತ್ರಗಳ ನಿಯಮಗಳು 1985ರ ಅನುಸಾರವಾಗಿ ರೂಪಿಸಲಾಗಿದೆ.
ಬಿ	ಬಳಕೆತಪ್ಪಿದ ಮತ್ತು ಬಳಸದಿರುವ ದಾಸ್ತಾನಿಗೆ ಹವಣಿಕೆಯನ್ನು ಒದಗಿಸುವ ಸಲುವಾಗಿ ವಿವಿಧ ನೆಲೆಗಳಲ್ಲಿ ಕಂಪನಿಯು ಹೊಂದಿರುವ ದಾಸ್ತಾನಿನ ಆಯುಷ್ಯ ತೀರುವಿಕೆ, ಉಪಯುಕ್ತತೆ ಮತ್ತು ಸೇವಾಯುಕ್ತತೆಯ ಅಂದಾಜಿನ ಅಗತ್ಯವಿದೆ. ಆಡಳಿತ ಮಂಡಳಿಯು ಇಂತಹ ಯಾವುದೇ ಅಂದಾಜನ್ನು ನಡೆಸಿರದ ಕಾರಣ ಬಳಕೆತಪ್ಪಿದ ಮತ್ತು ಬಳಸದಿರುವ ದಾಸ್ತಾನಿಗೆ ಸಂಬಂಧಿಸಿದಂತೆ ಹವಣಿಕೆಯ ಅಗತ್ಯವನ್ನು ಕುರಿತಂತೆ ಹಾಗೂ ಹಣಕಾಸು ತಃಖ್ತೆಗಳ ಮೇಲಿನ ಅದರ ಪರಿಣಾಮದ ಬಗ್ಗೆಯಾಗಲೀ ನಾವು ನಮ್ಮ ಅಭಿಪ್ರಾಯವನ್ನು ಒದಗಿಸುವುದು ಸಾಧ್ಯವಿರುವುದಿಲ	ಕಂಪನಿಯ ಪ್ರತಿ ದಾಸ್ತಾನು ಭಂಡಾರದಲ್ಲಿ ಪ್ರತಿ ವರ್ಷದ ಜನವರಿಯಲ್ಲಿ ವಾರ್ಷಿಕ ದಾಸ್ತಾನು ಲೆಕ್ಕವನ್ನು ಪಡೆಯಲಾಗುತ್ತದೆ. ಈ ಸಂದರ್ಭದಲ್ಲಿ ಆ ದಿನದಂದು ಇದ್ದಂತೆ ದಾಸ್ತಾನಿನ ಸಂಖ್ಯೆಯು ಲೆಡ್ಜರ್‌ನಲ್ಲಿ ನಮೂದಿಸಿರುವ ಪರಿಮಾಣಕ್ಕೆ ಪ್ರತಿಯಾಗಿ ದಾಸ್ತಾನಿನ ವಾಸ್ತವ ಪರಿಮಾಣವನ್ನು ಪರಿಶೀಲಿಸಲಾಗುತ್ತದೆ. ದಾಸ್ತಾನಿನ ಯಾವುದಾದರೂ ಸಾಮಗ್ರಿಯು ಬಳಸಲಾರದಂತೆ ಇದ್ದರೆ/ರಿಪೇರಿ ಅಗತ್ಯವಿದ್ದರೆ ಅಂತಹ ಸಾಮಗ್ರಿಯನ್ನು ಯುಕ್ತವಾದ ಕ್ರಮಗಳನ್ನು ಅನುಸರಿಸಿ ರದ್ದಿಗೆ ವರ್ಗಾಯಿಸುವಂತೆ ಸಕ್ಷಮ ಪ್ರಾಧಿಕಾರಕ್ಕೆ ಶಿಫಾರಸುಮಾಡಲಾಗುತ್ತದೆ. ಲೆಕ್ಕಪುಸ್ತಗಳ ಪ್ರಕಾರ ಮೌಲ್ಯ ಹಾಗೂ ಸಾಕ್ಷಾತ್ಕಾರವಾದ ಮೌಲ್ಯದ ನಡುವಿನ ವ್ಯತ್ಯಾಸದ ಮೊತ್ತವನ್ನು ಗುರುತಿಸಿ ಹಣಕಾಸು ವರ್ಷದ ಲಾಭ ಮತ್ತು ನಷ್ಟದ ತಃಖ್ತೆಗೆ ಸೇರಿಸಲಾಗುತ್ತದೆ.
ಸಿ	ಸಿ. ಸಿಬ್ಬಂದಿಯೊಂದಿಗೆ ಉಳಿದಿರುವ (ಸಾಮಗ್ರಿ ಕೈಹಣ ಖಾತೆ) ಮತ್ತು ದಾಸ್ತಾನುಗಳ ಭಾಗವಾಗಿ ತೋರಿಸಿರುವ ರೂ 216.44 ಲಕ್ಷ (ಹಿಂದಿನ ವರ್ಷ 180.11 ಲಕ್ಷ) ಮೊತ್ತದ ಸಾಮಗ್ರಿಗಳಲ್ಲಿ ಸಕ್ರಮಗೊಳಿಸಬೇಕಿರುವ ಹಳೆಯ ಸಾಮಗ್ರಿಗಳು ಸೇರುತ್ತವೆ. ಸಿಬ್ಬಂದಿಯೊಂದಿಗೆ ಉಳಿದಿರುವ ಈ ಸಾಮಗ್ರಿಗಳ ಸಕ್ರಮಗೊಳಿಸುವಿಕೆಯು ಬಾಕಿ ಇರುವ ಕಾರಣ ಹಣಕಾಸು ತಃಖ್ತೆಗಳ ಮೇಲಿನ ಇದರ ಪರಿಣಾಮವನ್ನು ಕುರಿತು ನಾವು ಯಾವುದೇ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಸಾಧ್ಯವಾಗಿರುವುದಿಲ್ಲ.	ಕ್ಷೇತ್ರ ಅಧಿಕಾರಿಗಳು ಪಡೆದುಕೊಂಡಿರುವ ಸಾಮಗ್ರಿಗಳು ಸದ್ಯ ನಡೆಯುತ್ತಿರುವ ತುರ್ತು ಕಾರ್ಯಗಳಿಗಾಗಿದ್ದು (ವಿದ್ಯುತ್ ಸರಬರಾಜಿನ ಪುನರ್‌ಸ್ಥಾಪನೆ) ಈ ಸಂಬಂಧದ ಸಿಬ್ಬಂದಿವಾರು ದಾಖಲೆಗಳು ಲೆಕ್ಕ ಘಟಕಗಳಲ್ಲಿ ಲಭ್ಯವಿವೆ. ಕ್ರಮಯುಕ್ತವಾದ ಕಾರ್ಯ ಆದೇಶಗಳ ಹಾಗೂ ದಾಖಲೀಕರಣದೊಂದಿಗೆ ಮುಕ್ತಾಯದ ವರದಿಗಳನ್ನು ಸೇರಿಸಿ ಇವನ್ನು ಸಕ್ರಮಗೊಳಿಸಲಾಗುತ್ತದೆ. ಸಕ್ರಮಗೊಳಿಸುವಿಕೆಯ ಉದ್ದೇಶದಿಂದ ಎಲ್ಲ ಸಾಮಗ್ರಿಗಳ ನೀಡುವಿಕೆಯ ಪ್ರಕ್ರಿಯೆಯ ಮೇಲ್ವಿಚಾರಣೆಯನ್ನು ನಿರಂತರವಾಗಿ ನಡೆಸಲಾಗುತ್ತದೆ.

ಕ್ರ.ಸಂ.	ಲೆಕ್ಕಪರಿಶೋಧಕರ ಪರಿಶೀಲನೆ	ಆಡಳಿತ ಮಂಡಳಿಯ ಉತ್ತರ
1	ದಾಸ್ತಾನುಗಳ ಮೇಲಿನ ಇಂಡ್ ಎಎಸ್ 2	
ಡಿ	ಕಂಪನಿಯು ದಾಸ್ತಾನನ ಲೆಡ್ಜರ್ ಒಂದನ್ನು ನಿರ್ವಹಿಸಿದ್ದು ಇದರಲ್ಲಿ ಸೇವೆಗಳ ಸರಬರಾಜಿನ ಸಂದರ್ಭದಲ್ಲಿ ಅಂತಿಮವಾಗಿ ಬಳಕೆಯಾಗುವ ಹಾಗೂ ಒಂದ್ಕಕಿಂತ ಹೆಚ್ಚಿನ ಅವಧಿಗೆ ಬಳಕೆಗೆ ತೊಡಗಿಸಲು ಉದ್ದೇಶಿಸಿರುವ ಸಾಮಗ್ರಿಗಳು ಸೇರುತ್ತವೆ. ದಾಸ್ತಾನನಲ್ಲಿರುವ ಇಂತಹ ಸಾಮಗ್ರಿಗಳ ಉದ್ದೇಶ/ ಅಂತಿಮ ಬಳಕೆಯು "ಸ್ಥಾವರ ಸಲಕರಣೆ"ಯ ಸೃಷ್ಟಿಗಾಗಿ ಇರುವುದರಿಂದ ಇದನ್ನು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ ಎಂದು ಪ್ರತ್ಯೇಕವಾಗಿ ಗುರುತಿಸಿ ವರ್ಗೀಕರಿಸಬೇಕಾಗುತ್ತದೆ.	ಸಾಮಗ್ರಿಗಳು/ದಾಸ್ತಾನನ್ನು ಬಂಡವಾಳ ಮತ್ತು ದುರಸ್ತಿ ಹಾಗೂ ನಿರ್ವಹಣೆ ಎರಡೂ ಉದ್ದೇಶಗಳಿಗೆ ಬಳಸಲಾಗುತ್ತದೆ. ಸಾಮಗ್ರಿಗಳನ್ನು ಬಳಕೆಗೆಂದು ಪಡೆಯದ ಹೊರತು – ಬಂಡವಾಳ ಅಥವಾ ಕಂದಾಯ ಎಂದು– ವರ್ಗೀಕರಿಸಲಾಗುವುದಿಲ್ಲ. ಈ ಕಾರಣದಿಂದಾಗಿ ಇಡೀ ದಾಸ್ತಾನನ್ನು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ ಎಂದು ವರ್ಗೀಕರಿಸಲಾಗುತ್ತದೆ ಹಾಗೂ ತರುವಾಯದಲ್ಲಿ ಕಂದಾಯ ಸ್ವರೂಪದ ಕಾಮಗಾರಿಗಳಿಗೆ ಸಾಮಗ್ರಿಗಳ ಬಿಡುಗಡೆಯು ಅಗತ್ಯವಾಗಬಹುದು. ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಇವನ್ನು ಪ್ರಗತಿಯ್ಲಲಿರುವ ಬಂಡವಾಳ ಕಾಮಗಾರಿ ಎಂದು ವರ್ಗೀಕರಿಸಲಾಗಿರುವುದಿಲ್ಲ.
ಇ	ಕಂಪನಿಯ ದಾಸ್ತಾನುಗಳಲ್ಲಿ ಗುತ್ತಿಗೆದಾರರಿಗೆ/ಸಿಬ್ಬಂದಿಗೆ ತಾತ್ಕಾಲಿಕ ಅನುಷ್ಠಾನಗಳಿಗೆಂದು ಬಿಡುಗಡೆಮಾಡಲಾಗಿರುವ ರೂ. 195.73 ಲಕ್ಷ (ಹಿಂದಿನ ವರ್ಷ ರೂ. 186.08 ಲಕ್ಷ) ಮೌಲ್ಯದ ಸಾಮಗ್ರಿ ಸೇರಿದೆ ಮತ್ತು ಇವು ವಾಸ್ತವದಲ್ಲಿ ಕಾಮಗಾರಿ ನೆಲೆಯಲ್ಲಿ ಉಳಿದಿವೆ/ಬಳಕೆಯಾಗುತ್ತಿವೆ. ಕಾಮಗಾರಿ ನೆಲೆಯಲ್ಲಿನ ಇಂತಹ ಸಾಮಗ್ರಿಯನ್ನು ಚಾಲ್ತಿ ಆಸ್ತಿಗಳ ಅಡಿಯಲ್ಲಿ "ಗುತ್ತಿಗೆದಾರರು ಹೊಂದಿರುವ ಸಾಮಗ್ರಿ" ಎಂಬ ಶೀರ್ಷಿಕೆಯಡಿ ದಾಸ್ತಾನು ಎಂದು ವರ್ಗೀಕರಿಸಲಾಗಿದೆ. ನಮ್ಮ ಅಭಿಪ್ರಾಯದಲ್ಲಿ ಈ ವರ್ಗೀಕರಣ ಸೂಕ್ತವಾದುದಲ್ಲ. ಏಕೆಂದರೆ, ಗುತ್ತಿಗೆದಾರರಿಗೆ ಒದಗಿಸಲಾಗಿರುವ ಸಾಮಗ್ರಿಯು ಕಂಪನಿಯ ದಾಸ್ತಾನು ದಾಖಲೆಗಳಲ್ಲಿನ ಒಂದು ಕಾಲ್ಪನಿಕ ನಮೂದಾಗಿದ್ದು ಇದನ್ನು ಪ್ರಗತಿಯಲ್ಲಿರುವ ಕಾಮಗಾರಿ ಎಂದು ಪ್ರಕಟಿಸಬೇಕಾಗುತ್ತದೆ. ಈ ಕಾರಣದಿಂದಾಗಿ, ಚಾಲ್ತಿ ಆಸ್ತಿಗಳ ಮೌಲ್ಯವು ಹೆಚ್ಚಾಗಿ ಪ್ರಕಟವಾಗಿದೆ ಮತ್ತು ಪ್ರಗತಿಯಲ್ಲಿರುವ ಕಾಮಗಾರಿ/ಗ್ರಾಹ್ಯ ಆಸ್ತಿಗಳ ಮೌಲ್ಯವು ಮೇಲೆ ನಿರ್ದಿಷ್ಟಗೊಳಿಸಲಾಗಿರುವಷ್ಟರ ಮಟ್ಟಿಗೆ ಕಡಿಮೆಯಾಗಿ ಪ್ರಕಟವಾಗಿದೆ	ತಾತ್ಕಾಲಿಕ ಸ್ಥಾವರಗಳಿಗೆ ಬಿಡುಗಡೆಮಾಡಲಾಗುವ ಸಾಮಗ್ರಿಗಳನ್ನು ಸ್ಥಾವರವನ್ನು ಖಾಯಂ ನಿಲುಗಡೆಗೊಳಿಸಿದ ನಂತರ ಹಾಗೂ ಮೂಲಸೌಕರ್ಯವನ್ನು ಕಳಚಿದ ನಂತರ ದಾಸ್ತಾನು ಭಂಡಾರಕ್ಕೆ ಮರಳಿಸಬೇಕಾಗುತ್ತದೆ. ತಾತ್ಕಾಲಿಕ ಸೇವೆಗಳಿಗೆ ಒದಗಿಸಲಾಗುವ ಮೂಲಸೌಕರ್ಯವು ಸ್ವರೂಪದಲ್ಲಿ ಖಾಯಂ ಆಗಿರುವುದಲ್ಲ, ಏಕೆಂದರೆ ತಾತ್ಕಾಲಿಕ ಸ್ಥಾವರಗಳನ್ನು ಕಳಚಿದ ಹಿಂದಕ್ಕೆ ಒಪ್ಪಿಸಿದ ನಂತರ ಈ ಮೂಲಸೌಕರ್ಯವು ಅನವಶ್ಯಕವಾಗುತ್ತದೆ. ಪ್ರಗತಿಯಲ್ಲಿರುವ ಕಾಮಗಾರಿಗಳ ವರ್ಗೀಕರಣವನ್ನು ಕಾಮಗಾರಿಗಳ ಬಂಡವಾಳೀಕರಣ ಮತ್ತು ಹೊಸ ಆಸ್ತಿಗಳ ಸೃಷ್ಟಿಯನ್ನುಅಂತಿಮವಾದ ಉದ್ದೇಶವವಾಗಿರಿಸಿ ಮಾಡಲಾಗುತ್ತದೆ. ಈ ಪ್ರಕರಣದಲ್ಲಿ ಯಾವುದೇ ಸ್ಥಿರಾಸ್ತಿಗಳ ಸೃಷ್ಟಿ ಆಗಿರದ ಕಾರಣ ತಾತ್ಕಾಲಿಕ ಸ್ಥಾವರಗಳ ಮೂಲಸೌಕರ್ಯಗಳಿಗಾಗಿ ಬಿಡುಗಡೆಮಾಡಲಾದ ಸಾಮಗ್ರಿಗಳನ್ನು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಎಂದು ತೋರಿಸಿ ನಂತರಅವನ್ನುದಾಸ್ತಾನಿಗೆ ಹಿಂದಿರುಗಿಸುವುದರಲ್ಲಿ ಯಾವುದೇ ಅರ್ಥವಿರುವುದಿಲ್ಲ.

<table>
<tr><th>ಕ್ರ.ಸಂ.</th><th colspan="5">ಲೆಕ್ಕಪರಿಶೋಧಕರ ಪರಿಶೀಲನೆ</th><th>ಆಡಳಿತ ಮಂಡಳಿಯ ಉತ್ತರ</th></tr>
<tr><td>2.</td><td colspan="5">ನಗದು ಮತ್ತು ನಗದು ಸಮಾನಗಳು:</td><td></td></tr>
<tr><td>ಎ</td><td colspan="5">ನಗದು ಮತ್ತು ನಗದು ಸಮಾನಗಳಲ್ಲಿ ಚೆಕ್ಕುಗಳಿಗೆ/ಡಿಡಿಗಳಿಗೆ ಸಂಬಂಧಿಸಿದ ಆದರೆ ಸಾಕಾರಗೊಳ್ಳದ ಮೊತ್ತಗಳು, ಸಕ್ರಮಗೊಳ್ಳದ ನೌಕರರ ನಗದು ಅನಿಶ್ಚಿತ ಶಿಲ್ಕುಗಳು, ಟ್ರಯಲ್ ಶಿಲ್ಕು ವ್ಯತ್ಯಾಸಗಳು ಮತ್ತು ತನಿಖೆ ಬಾಕಿ ಇರಿಸಿ ನಗದು ಅವ್ಯವಹಾರಗಳು ಸೇರುತ್ತವೆ. ವಿವರಗಳು ಕೆಳಗಿನಂತಿವೆ:
<table>
<tr><th>ಕ್ರ ಸಂ.</th><th>ಲೆಕ್ಕ ಘಟಕದ ಹೆಸರು</th><th>ವ್ಯತ್ಯಾಸದ ಸ್ವರೂಪ</th><th>ಲಕ್ಷ ರೂ.ಗಳು</th><th>ಈ ವರ್ಷಕ್ಕೆ ಸಂಬಂಧಿಸಿದ್ದು</th></tr>
<tr><td>I</td><td>ಗುಲ್ಬರ್ಗಾ ಓ & ಎಂ ವಿಭಾಗ</td><td>ಟ್ರಯಲ್ ಶಿಲ್ಕು ಮತ್ತು ನಗದು/ ಬ್ಯಾಂಕ್ ಖಾತೆ ಮೊತ್ತದ ನಡುವಿನ ವ್ಯತ್ಯಾಸ</td><td>95.57</td><td>ಪ್ರತ್ಯೇಕವಾದ ಬಳಿಕ ಕಂಪನಿಯ ರಚನೆಯಾದ ದಿನದಿಂದ</td></tr>
<tr><td>Ii</td><td>ವಿವಿಧ ಲೆಕ್ಕ ಘಟಕಗಳು</td><td>ವಿಶೇಷ ಲೆಕ್ಕಪರಿಶೋಧನೆಯ ಪ್ರಕಾರ ಮೋಸಗಳ ಕಾರಣದಿಂದಾಗಿ, ತನಿಖೆ ಬಾಕಿ ಉಳಿಸಿ</td><td>678.78</td><td>2012–13 ರಿಂದ 2018–19</td></tr>
</table>

ನಗದು ಮತ್ತು ನಗದು ಸಮಾನಗಳಲ್ಲಿ ಚೆಕ್ಕುಗಳಿಗೆ/ಡಿಡಿಗಳಿಗೆ ಸಂಬಂಧಿಸಿದ ಆದರೆ ಸಾಕಾರಗೊಳ್ಳದ ಮೊತ್ತಗಳು, ಸಕ್ರಮಗೊಳ್ಳದ ನೌಕರರ ನಗದು ಅನಿಶ್ಚಿತ ಶಿಲ್ಕುಗಳು, ಟ್ರಯಲ್ ಶಿಲ್ಕು ವ್ಯತ್ಯಾಸಗಳು ಮತ್ತು ತನಿಖೆ ಬಾಕಿ ಇರಿಸಿ ನಗದು ಅವ್ಯವಹಾರಗಳು ಸೇರುತ್ತವೆ. ವಿವರಗಳು ಕೆಳಗಿನಂತಿವೆ :

ಲೆಕ್ಕ ಘಟಕದ ಹೆಸರುವ್ಯತ್ಯಾಸದ ಸ್ವರೂಪಲಕ್ಷ ರೂ.ಗಳುಈ ವರ್ಷಕ್ಕೆ ಸಂಬಂಧಿಸಿದ್ದುI ಗುಲ್ಬರ್ಗಾ ಓ & ಎಂ ವಿಭಾಗಟ್ರಯಲ್ ಶಿಲ್ಕು ಮತ್ತು ನಗದು/ಬ್ಯಾಂಕ್ ಖಾತೆ ಮೊತ್ತದ ನಡುವಿನ ವ್ಯತ್ಯಾಸ 95.57ಪ್ರತ್ಯೇಕವಾದ ಬಳಿಕ ಕಂಪನಿಯ ರಚನೆಯಾದ ದಿನದಿಂದIiವಿವಿಧ ಲೆಕ್ಕ ಘಟಕಗಳುವಿಶೇಷ ಲೆಕ್ಕಪರಿಶೋಧನೆಯ ಪ್ರಕಾರ ಮೋಸಗಳ ಕಾರಣದಿಂದಾಗಿ, ತನಿಖೆ ಬಾಕಿ ಉಳಿಸಿ 678.782012–13 ರಿಂದ 2018–19ಈ ಕಾರಣದಿಂದಾಗಿ, ನೈಜ ಶಿಲ್ಕುಗಳಿಗೆ ಪ್ರತಿಯಾಗಿ ನಗದು ಮತ್ತು ನಗದು ಸಮಾನಗಳನ್ನು ಹೆಚ್ಚಿಗೆ ತೋರಿಸಲಾಗಿದೆ ಮತ್ತು ವಿಷಯಗಳಸಿತ್ಯರ್ಥವಾಗದೆ ಬಾಕಿ ಉಳಿದಿರುವ ಕಾರಣ ಸಂಭಾವ್ಯ ವಸೂಲಾಗದಿರುವಿಕೆಯ ಕಾರಣದಿಂದಾಗಿ ಆಗಿರವು ನಷ್ಟಕ್ಕಾಗಿ ಹವಣಿಕೆಯನ್ನು ಮಾಡಿರುವುದಿಲ್ಲ. ನಗದು ಮತ್ತು ನಗದು ಸಮಾನಗಳನ್ನು ಹೆಚ್ಚಿಗೆ ತೋರಿಸಲಾಗಿರುವ ಮಟ್ಟಿಗೆ ನಗದು ಪ್ರವಹನ ತಃಖ್ತೆಯು ಇಂಡ್ ಎಎಸ್ – 7, "ನಗದು ಪ್ರವಹನಗಳ ತಃಖ್ತೆ" ಯ ಅನುಸಾರವಾಗಿಲ್ಲ.</td><td>ಓ & ಎಂ ವಿಭಾಗ I, ಗುಲ್ಬರ್ಗಾ – ಇಲ್ಲಿನ ಲೆಕ್ಕಪತ್ರಗಳಲ್ಲಿ ನಗದು ಮತ್ತು ಹೊಂದಿಕೆಯಾಗದ ಬ್ಯಾಂಕ್ ಶಿಲ್ಕು ಕೊರತೆಯು ಕಂಪನಿಯ ರಚನೆಯ ಪೂರ್ವ ಅವಧಿಗೆ ಸಂಬಂಧಿಸಿದುದಾಗಿದೆ. ಈ ವಿಷಯವನ್ನು ಕೆ.ಪಿ.ಟಿ.ಸಿ.ಎಲ್ ನೊಂದಿಗೆ ಚರ್ಚಿಸಲಾಗುತ್ತಿದೆ. ಕೆ.ಪಿ.ಟಿ.ಸಿ.ಎಲ್ ನಿಂದ ವಿವರಗಳನ್ನು ಪಡೆದುಕೊಂಡ ನಂತರ ಅಗತ್ಯ ಹೊಂದಾಣಿಕೆಗಳನ್ನು ಮಾಡಲಾಗುವುದು. ನಗದಿನ ಕೊರತೆಗಳು/ಅಪಬಳಕೆಗಳ ಮೇಲಿನ ವಿಶೇಷ ಲೆಕ್ಕಪರಿಶೋಧನೆಯು ಅಂತಿಮಗೊಳ್ಳುತ್ತಿದ್ದು ಆಂತರಿಕ ಲೆಕ್ಕಪರಿಶೋಧನೆಯ ವರದಿಯ ಪ್ರಕಾರ ಸಂಬಂಧಿತ ನೌಕರರ ಮೇಲೆ ತನಿಖೆಗಳನ್ನು ಜಾರಿಗೊಳಿಸಲಾಗುತ್ತಿದೆ.ತನಿಖೆಯ ಫಲಿತಾಂಶವನ್ನು ಆಧರಿಸಿ ತಪ್ಪಸಗಿರುವ ನೌಕರರ ವಿರುದ್ಧ ಸೂಕ್ತ ಶಿಸ್ತಿನ ಕ್ರಮಗಳನ್ನು ಜಾರಿಗೊಳಿಸಲಾಗುವುದು ಮತ್ತು ಸಂಬಂಧಿತ ನೌಕರರಿಂದ ಸಂಬಂಧಿತ ಮೊತ್ತಗಳನ್ನು ವಸೂಲಿಮಾಡಲು ಕ್ರಮಗಳನ್ನು ತೆಗೆದುಕೊಳ್ಳಲಾಗುವುದು.</td></tr>
</table>

ಕ್ರ.ಸಂ.	ಲೆಕ್ಕಪರಿಶೋಧಕರ ಪರಿಶೀಲನೆ	ಆಡಳಿತ ಮಂಡಳಿಯ ಉತ್ತರ
2.	ನಗದು ಮತ್ತು ನಗದು ಸಮಾನಗಳು:	
ಬಿ	ಲೆಕ್ಕ ಸಂಕೇತ 24.3 (ನಗದು ಶಿಲ್ಕು) ಕ್ಕೆ ಸಂಬಂಧಿಸಿದಂತೆ, ನಾನ್ ಆಪರೇಟಿವ್ ಬ್ಯಾಂಕ್ ಖಾತೆಗಳ ಹೊಂದಾಣಿಕೆಯ ಲೆಕ್ಕವಿಡುವಿಕೆ, ವರದಿಮಾಡುವಿಕೆ ಮತ್ತು ಪ್ರಕ್ರಿಯೆಯ ವಿಧಾನವನ್ನು ಪರಿಶೀಲಿಸುವುದು ಅಗತ್ಯವಾಗಿದೆ, ಏಕೆಂದರೆ, ಬ್ಯಾಂಕ್ ಹೊಂದಾಣಿಕೆ ತಃಖ್ತೆ (ಬಿಆರ್ಎಸ್)ಯು ನಮೂನೆಯು ಹೊಂದಾಣಿಕೆಯ ದಿನಾಂಕದಂದು ಇದ್ದಂತೆ ಸಾಕ್ಷತ್ಕಾರವಾಗದ ಚೆಕ್ಕುಗಳ ಸಂಚಿತ ಮೌಲ್ಯವನ್ನು ನೀಡುವುದಿಲ್ಲ. ಅಲ್ಲದೆ, ಏಕ ಸಮಾನ ಸಂಕೇತ 24.3ರ ಮೂಲಕ ಪ್ರಕಟಿಸುವುದರ ಬದಲಿಗೆ ಲೆಕ್ಕ ಘಟಕ ಹಂತಗಳಲ್ಲಿನ ಟ್ರಯಲ್ ಶಿಲ್ಕು ಪ್ರತಿ ನಾನ್ ಆಪರೇಟಿವ್ ಬ್ಯಾಂಕ್ ಖಾತೆಯನ್ನು ಪ್ರತಿಫಲಿಸಬೇಕಾಗುತ್ತದೆ. ಏಕರೂಪವಾದ ಬಿಆರ್ಎಸ್ ನಮೂನೆಯನ್ನು ಆಪರೇಟಿವ್ ಮತ್ತು ನಾನ್ಆಪರೇಟಿವ್ ಬ್ಯಾಂಕ್ ಖಾತೆತಗಳೆರಡಕ್ಕೂ ಬಳಸುವುದು ಅಗತ್ಯವಾಗಿದೆ.	ಬ್ಯಾಂಕ್ ಹೊಂದಾಣಿಕೆಯ ಅಸ್ತಿತ್ವದಲ್ಲಿರುವ ವಿಧಾನವು ನಿಗದಿತ ವಿಧಾನವಾಗಿದ್ದು ಇದೇ ರೀತಿಯಲ್ಲಿ ಎಲ್ಲ ಎಸ್ಕಾಂಗಳೂ ಈ ಪ್ರಕ್ರಿಯೆಯನ್ನು ನಡೆಸಿವೆ. ಘಟಕಗಳ ಟ್ರಯಲ್ ಶುಲ್ಕವು ವ್ಯವಹಾರಗಳ ಸಾರಾಂಶ ಶಿಲ್ಕನ್ನು ಸೂಚಿಸಬೇಕು, ಅದರಲ್ಲಿ ಪ್ರತಿ ಬ್ಯಾಂಕ್ ಖಾತೆ/ಪಕ್ಷದ ಶಿಲ್ಕುಗಳು ಪ್ರತ್ಯೇಕವಾಗಿ ವರದಿಯಾಗಬೇಕೆಂಬ ಅಗತ್ಯವಿಲ್ಲ. ಪ್ರತಿ ಖಾತೆಯೂ ಪೂರಕ ರಿಜಿಸ್ಟರ್ಗಳನ್ನು (ನಗದು ಪುಸ್ತಕಗಳು) ಹೊಂದಿದ್ದು ಇವು ಲೆಕ್ಕ ಘಟಕವು ಹೊಂದಿರುವ ಎಲ್ಲ ಖಾತೆಗಳ ವಿವರಗಳನ್ನು ಒದಗಿಸುತ್ತವೆ.
ಸಿ	ಕಂಪನಿಯು ಗ್ರಾಹಕರಿಂದ ಪಡೆದುಕೊಳ್ಳಲಾಗುವ ವೆಬ್ ಆಧಾರಿತ ವಿದ್ಯುನ್ಮಾನ ಪಾವತಿಗಳಿಗೆಂದು ವಿವಿಧ ವಿದ್ಯುನ್ಮಾನ ಸೇವಾ ಸರಬರಾಜುದಾರರೊಂದಿಗೆ ಕೈಜೋಡಿಸಿದೆ. ನಾವು ಭೇಟಿ ನೀಡಿದ ಲೆಕ್ಕ ಘಟಕಗಳ ಪರೀಕ್ಷೆಗಳ ಆಧಾರದ ಮೇಲೆ ಹೇಳುವುದಾದರೆ, ಈ ಪಾವತಿಗಳನ್ನು ಬ್ಯಾಂಕ್ ಖಾತೆಗೆ ಕಾಲಕಾಲಕ್ಕೆ ಸಮನ್ವಯ ಗೊಳಿಸಿರುವುದು ಗಮನಕ್ಕೆ ಬಂದಿರುತ್ತದೆ. ಕೆಲವು ಪ್ರಕರಣಗಳಲ್ಲಿ ವ್ಯತ್ಯಾಸಗಳನ್ನು "ಆನ್ಲೈನ್ (ಆರ್ಟಿಜಿಎಸ್) ಖಾತೆ ಸಂಕೇತ 46.973 – ಇಲ್ಲಿಂದ ಬ್ಯಾಂಕಿನ ದೋಷಯುಕ್ತ ಜಮೆಗಳು" (ಕೊಪ್ಪಳ ಘಟಕ) – ಇಲ್ಲ ಇರಿಸಲಾಗಿದೆ. ಈ ವ್ಯವಹಾರಗಳ ಕಾಲಕಾಲಿಕ ಸಮನ್ವಯಗೊಳಿಸುವಿಕೆ ಮತ್ತು ಮೇಲ್ವಿಚಾರಣೆಯ ಅಗತ್ಯ ಕಾಣುತ್ತಿದೆ.	ಆನ್ಲೈನ್ ಪಾವತಿ ಮತ್ತು ಸಂಬಂಧಿತ ಪ್ರಕ್ರಿಯೆಗಳ ಅಡಿಯ ವ್ಯವಹಾರಗಳ ಲೆಕ್ಕವಿರಿಸುವುದಕ್ಕೆ ಸಂಬಂಧಿಸಿದಂತೆ ಈ ಕಛೇರಿಯಿಂದ ಮಾರ್ಗಸೂಚಿಗಳನ್ನು ಹೊರಡಿಸಲಾಗಿದೆ. ಕಂಪನಿಯ ಪರವಾಗಿ ತಾವು ಮಾಡುವ ಸಂಗ್ರಹಗಳ ಪಾವತಿಗೆ ಟಿ + 2 ಆಧಾರದ ಮೇಲೆ ಆನ್ಲೈನ್ ಪಾವತಿ ಸೇವಾ ಸರಬರಾಜುದಾರರ ಸೇವೆಗಳನ್ನು ಪಡೆಯಲಾಗಿದೆ. ರಸೀದಿಗಳು ಸೃಷ್ಟಿಯಾಗಿ ಸೇವಾ ಸರಬರಾಜುದಾರರಿಂದ ಸ್ವೀಕರಿಸದೇ ಇದ್ದಲ್ಲಿ ಅಂತಹ ಹಣವನ್ನು ರವಾನೆಯಲ್ಲಿರುವ ಪಾವತಿ ಎಂದು ಲೆಕ್ಕ ತೋರಿಸಲು ಸೂಚಿಸಲಾಗಿದೆ. ಇಂತಹ ಪ್ರಕರಣಗಳಲ್ಲಿ ಇನ್ನೂ ಹಣವನ್ನು ಸ್ವೀಕರಿಸಿರದ ಕಾರಣ ಇವು ಬ್ಯಾಂಕು ಹಣವನ್ನು ಸ್ವೀಕರಿಸಿ ದೋಷಯುಕ್ತ ಪಾವತಿ ಎಂದು ವ್ಯವಹಾರವನ್ನು ಪರಿಗಣಿಸಬೇಕಾದ ವರ್ಗಕ್ಕೆ ಇವು ಸೇರುವುದಿಲ್ಲ.ಆದರೆ, ಘಟಕವೊಂದು ಬ್ಯಾಂಕುಗಳಿಂದ ಬರುವ ದೋಷಯುಕ್ತ ಜಮೆಗಳನ್ನು ನಿಭಾಯಿಸಲು ಕಾರಣವೆಂದರೆ, ಕೆಲವು ಸರ್ಕಾರಿ ಇಲಾಖೆಗಳು/ಎಚ್ಟಿ ಗ್ರಾಹಕರು ಕಂಪನಿಗೆ ಪಾವತಿಸಿಬೇಕಿರುವ ಹಣವನ್ನು ನಮ್ಮ ಆನ್ಲೈನ್ ಪಾವತಿ ಪೋರ್ಟಲ್ ಅಥವಾ ಇತರ ನಿಗದಿತ ಡಿಜಿಟಲ್ ಪಾವತಿ ವಿಧಾನಗಳ ಮೂಲಕ ಪಾವತಿಸದೆ ಚಲಾವಣೆಯಲ್ಲಿರದ ನಮ್ಮ ಬ್ಯಾಂಕ್ ಖಾತೆಗೆ ನೇರವಾಗಿ ವರ್ಗಾಯಿಸುವುದೇ ಆಗಿರುತ್ತದೆ.ಸಂದಾಯ ಮಾಡಿದವರು ಆರ್ಟಿಜಿಎಸ್ ವರ್ಗಾವಣೆ ಉಲ್ಲೇಖ ದಸ್ತಾವೇಜುಗಳೊಂದಿಗೆ ಕಛೇರಿಗೆ ಆಗಮಿಸಿ ತಮ್ಮ ಬಾಕಿಗಳಿಗೆ ಪ್ರತಿಯಾಗಿ ಆ ಮೊತ್ತವನ್ನು ಖಾತೆಗಳಲ್ಲಿ ನಮೂದಿಸುವವರೆಗೂ ಲೆಕ್ಕ ಘಟಕಗಳಿಗೆ ಗ್ರಾಹಕ ಲೆಡ್ಜರ್ನಲ್ಲಿನ ಸಂವಾದಿ ನಮೂದುಗಳ ವಿವರಗಳು ತಿಳಿದಿರುವುದಿಲ್ಲ. ಸಕ್ರಮ ಪ್ರಕ್ರಿಯೆಯ ನಂತರ ಈ ಮೊತ್ತವನ್ನು ದೋಷಯುಕ್ತ ಖಾತೆಯಿಂದ ಹಿಂಪಡೆದು ಗ್ರಾಹಕ ಖಾತೆಗೆ ವರ್ಗಾಯಿಸಲಾಗುತ್ತದೆ.

ಕ್ರ.ಸಂ.	ಲೆಕ್ಕಪರಿಶೋಧಕರ ಪರಿಶೀಲನೆ	ಆಡಳಿತ ಮಂಡಳಿಯ ಉತ್ತರ
3.	**ಸ್ವತ್ತು, ಸ್ಥಾವರ ಮತ್ತ ಉಸಲಕರಣೆಯ ಮೇಲೆ ಇಂಡ್ ಎಎಸ್ 16**	
ಎ	ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ ಎಂದು ರೂ. 30032.07 ಲಕ್ಷ ಮೊತ್ತವನ್ನು ಹಾಗೂ ಬೆಳವಣಿಗೆಯಲ್ಲಿರುವ ಅಗ್ರಾಹ್ಯ ಆಸ್ತಿಗಳ ಅಡಿಯಲ್ಲಿ ರೂ. 749.23 ಲಕ್ಷ ಮೊತ್ತವನ್ನು ತೋರಿಸಲಾಗಿದೆ. ಹಣಕಾಸು ತಃಖ್ತೆಗಳಲ್ಲಿ ಪ್ರಕಟಿಸಲಾದ ಪ್ರಗತಿಯಲ್ಲಿರುವ ಕಾಮಗಾರಿಯ ಮೌಲ್ಯದ ವಿವರವಾದ ಪಟ್ಟಿಮಾಡುವಿಕೆಯನ್ನು/ವಿಶ್ಲೇಷಣೆಯಯನ್ನು, ಉದಾ. ಬಾಕಿ ಇರುವ ಕಾಮಗಾರಿ ಆದೇಶಗಳ ಆಯುಷ್ಯ ತೀರುವಿಕೆ, ಸಂಬಂಧಿಸಿದ ಮೊತ್ತಗಳು, ಕಾಮಗಾರಿ ಆದೇಶದ ಪ್ರಕಾರ ಪೂರ್ಣಗೊಳಿಸುವಿಕೆಯ ದಿನಾಂಕ ಮತ್ತು ವರದಿಯ ದಿನಾಂಕದಂದು ಇದ್ದಂತೆ ನೈಜ ಪ್ರಗತಿ – ಈ ವಿವರಗಳನ್ನು ಕಂಪನಿಯು ಹೊಂದಿರುವುದಿಲ್ಲ. ಇದರಿಂದಾಗಿ, ಈಗಾಗಲೇ ಆಸ್ತಿಗಳನ್ನು ಬಳಕೆಗೆ ತೊಡಗಿಸಿದ್ದರೂ ಬಂಡವಾಳೀಕರಣವಾಗದಿರುವ ಸಾಧ್ಯತೆ ಇರುತ್ತದೆ. ಜೊತೆಗೆ, ರೂ. 33608.73 ಲಕ್ಷ ಮೊತ್ತದ ಬಂಡವಾಳ ಮುಂಗಡಕ್ಕೆ ಸಂಬಂಧಿಸಿದ ಮಾಹಿತಿಯು ಪರ್ಯಾಪ್ತವಾಗಿರದ ಕಾರಣ ಈ ವರ್ಗೀಕರಣದ ಯುಕ್ತತೆಯ ಬಗ್ಗೆ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಸಾಧ್ಯವಿರುವುದಿಲ್ಲ, ಏಕೆಂದರೆ, ಈ ಮುಂಗಡಗಳಿಗೆ ಪ್ರತಿಯಾದ ಕಾಮಗಾರಿಗಳ ಮೌಲ್ಯವನ್ನು ಅರಿಯಲು ಅದನ್ನು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಯಾಗಿ ಪರಿವರ್ತಿಸುವುದು ಅಥವಾ ಸ್ವತ್ತು, ಸ್ಥಾವರ ಮತ್ತು ಸಲಕರಣೆಯಾಗಿ ಅದರ ವರ್ಗೀಕರಣವನ್ನು ಅಗತ್ಯವಾಗಿಸುತ್ತದೆ. ಹೀಗಾಗಿ ನಾವು ವರ್ಗೀಕರಣದ ಯುಕ್ತತೆ, ಗ್ರಾಹ್ಯ ಆಸ್ತಿಗಳ ಮೌಲ್ಯ, ಮತ್ತು ಹಣಕಾಸು ತಃಖ್ತೆಗಳ ಮೇಲಿನ ಸವಕಳಿ ಮತ್ತು ದತ್ತಿ ಪರಿಣಾಮವನ್ನು ಕುರಿತು ಅಭಿಪ್ರಾಯ ವ್ಯಕ್ತಪಡಿಸುವುದು ಸಾಧ್ಯವಿರುವುದಿಲ್ಲ.	2109ರ ಹಣಕಾಸು ತಃಖ್ತೆಗಳ ಟಿಪ್ಪಣಿ 2ರ ಕಲಮು ಸಂಖ್ಯೆ 2.4ರಲ್ಲಿ ಬಂಡವಾಳೀಕರಣದ ಬಗೆಗಿನ ಕಂಪನಿಯ ನೀತಿಯನ್ನು ಹೇಳಲಾಗಿದೆ. ಗುತ್ತಿಗೆದಾರರು/ಸರಬರಾಜುದಾರರಿಗೆ ಮಾಡಲಾಗುವ ಬಂಡವಾಳ ಮುಂಗಡಗಳು ಗುತ್ತಿಗೆಯ ಕರಾರುಗಳ ಪ್ರಕಾರವಿರುತ್ತದೆ ಮತ್ತು ಅವನ್ನು ಚಾಲ್ತಿ ಬಿಲ್ಲುಗಳಲ್ಲಿ ಹೊಂದಿಸಲಾಗುತ್ತದೆ. ಹೆಚ್ಚಿನ ಸಂದರ್ಭಗಳಲ್ಲಿ, ಸರಬರಾಜಿನ ನಂತರ, ಸಾಮಗ್ರಿಗಳ ಮೌಲ್ಯದ 50% ವನ್ನು ಮಾತ್ರ ಪಾವತಿಸಿ ಉಳಿದ ಹಣವನ್ನು ಗುತ್ತಿಗೆಯ ಧಾರಣ ಹಣವಾಗಿ ಇರಿಸಿಕೊಳ್ಳಲಾಗುತ್ತದೆ. ಸ್ಥಾವರಗಳ ಸ್ಥಾಪನೆಯಾಗಿ ಆ ಬಗ್ಗೆ ವರದಿ ಬರುವವರೆಗೆ ಗುತ್ತಿಗೆದಾರರಲ್ಲಿ ಉಳಿಯುವ ಸಾಮಗ್ರಿಗಳ ಮೌಲ್ಯವನ್ನು ಬಂಡವಾಳ ಮುಂಗಡವಾಗಿ ಪರಿಗಣಿಸಲಾಗುವುದು. ಕಾಮಗಾರಿಗಳು ಪೂರ್ಣಗೊಂಡು ಅಚಿತಿಮ ಬಿಲ್ಲುಗಳನ್ನು ಸಲ್ಲಿಸಿದ ನಂತರ ಈ ಮುಂಗಡಗಳನ್ನು ಹೊಂದಿಸಿ ಆಸ್ತಿಗಳನ್ನು ಬಂಡವಾಳೀಕರಿಸಲಾಗುವುದು. ಅಚಿತಿಮ ದರಪಟ್ಟಿಗಳನ್ನು ಸೃಷ್ಟಿಸಿ ಅಳತೆ ಪುಸ್ತಕಗಳಲ್ಲಿ ದೃಢೀಕೃತ ಅಳತೆಗಳನ್ನು ದಾಖಲಿಸ ಹೊರತು ಕಾಂಗಾರಿಗಳನ್ನು ಬಂಡವಾಳೀಕರಿಸಿ ಕಾಮಗಾರಿ ಲೆಕ್ಕಗಳನ್ನು ಮುಕ್ತಾಯಗೊಳಿಸುವುದು ಸಾಧ್ಯವಾಗುವುದಿಲ್ಲ. ಅಂತಿಮ ಬಿಲ್ಲುಗಳು ಸ್ವೀಕೃತವಾಗಿ ನೈಜ ಆಸ್ತಿಗಳನ್ನು ಬಳಕೆಗೆ ತೊಡಗಿಸಿದ ದಿನಾಂಕ ಮತ್ತು ಅಂತಿಮ ಅಳತೆ ದಿನಾಂಕಗಳ ನಡುವೆ ಕಾಲ ವ್ಯತ್ಯಾಸವಿದ್ದಲ್ಲಿ ಆಸ್ತಿಯನ್ನು ಬಳಕೆಗೆ ತೊಡಗಿಸಿದ ದಿನಾಂಕದಿಂದ ಸವಕಳಿಯನ್ನು ವಿಧಿಸಲು ಸೂಚಿಸಲಾಗುತ್ತದೆ.
ಬಿ	ಬಿ. ಸ್ವತ್ತು, ಸ್ಥಾವರ ಮತ್ತು ಸಲಕರಣೆಯ ಮೇಲಿನ ಇಂಡ್ ಎಎಸ್ 16 ರ ಪ್ರಕಾರ ಸಾಮಗ್ರಿಯು ಬಂಡವಾಳೀಕರಣದ ವೆಚ್ಚವನ್ನು ಲೆಕ್ಕಹಾಕುವಲ್ಲಿ ಕಳಚುವ ವೆಚ್ಚವನ್ನು ಅಂದಾಜುಮಾಡಿ ಅದನ್ನು ಸೇರಿಸಬೇಕಾಗುತ್ತದೆ. ಕಂಪನಿಯು ಬಂಡವಾಳೀಕರಣದ ವೆಚ್ಚದಲ್ಲಿ ಕಳಚುವ ವೆಚ್ಚವನ್ನು ಅಂದಾಜುಮಾಡಿ ಅದನ್ನು ಸೇರಿಸಿರುವುದಿಲ್ಲ. ಇದು ಹಣಕಾಸು ತಃಖ್ತೆಗಳ ಮೇಲೆ ಬೀರುವ ಪರಿಣಾಮವನ್ನು ತಿಳಿಯುವುದು ಸಾಧ್ಯವಿರುವುದಿಲ್ಲ.	ಎಲ್ಲ ಎಸ್ಕಾಂ ಗಳಲ್ಲಿ ಪ್ರಸ್ತುತ ಅಳವಡಿಸಿಕೊಳ್ಳಲಾಗುತ್ತಿರುವ ದರಗಳ ಸಮಾನ ಅನುಸೂಚಿಯಲ್ಲಿ ನಿಗದಿಪಡಿಸಲಾದ ವೆಚ್ಚ ದತ್ತಾಂಶ ಹಾಳೆಗಳ ಪ್ರಕಾರ ಅಂದಾಜುಗಳು/ಕಾಮಗಾರಿ ಆದೇಶಗಳನ್ನು ಸಿದ್ಧಪಡಿಸಲಾಗುತ್ತದೆ. ಇದು ಕಳಚುವ ವೆಚ್ಚವನ್ನು ಒಳಗೊಳ್ಳುವುದಿಲ್ಲ ಮತ್ತು ಹಾಗಾಗಿ ಕಳಚುವ ವೆಚ್ಚವು ಬಂಡವಾಳೀಕರಣದ ಸಂದರ್ಭದಲ್ಲಿ ಆಸ್ತಿಯ ಭಾಗವಾಗುವುದಿಲ್ಲ. ಆಸ್ತಿಯ ಮೌಲ್ಯಕ್ಕೆ ಹೋಲಿಸಿದರೆ ಕಳಚುವುದಕ್ಕೆ ತಗುಲುವ ವೆಚ್ಚವು ನಾಮಮಾತ್ರವಾಗಿದ್ದು ಅದನ್ನು ಆದಾಯಕ್ಕೆ ಖರ್ಚುಹಾಕಲಾಗುವುದು.

ಕ್ರ.ಸಂ.	ಲೆಕ್ಕಪರಿಶೋಧಕರ ಪರಿಶೀಲನೆ	ಆಡಳಿತ ಮಂಡಳಿಯ ಉತ್ತರ
3.	**ಸ್ವತ್ತು, ಸ್ಥಾವರ ಮತ್ತ ಉಸಲಕರಣೆಯ ಮೇಲೆ ಇಂಡ್ ಎಎಸ್ 16**	
ಸಿ.	ಸಕ್ರಿಯ ಬಳಕೆಯಿಂದ ಹಿಂಪಡೆದ ಆಸ್ತಿಗಳನ್ನು ಗುರುತುಮಾಡಲಾದ ಮೌಲ್ಯದಲ್ಲಿ ತೋರಿಸಲಾಗಿದ್ದು ಇವನ್ನು ತುಲನಾತ್ಮಕ ನಿವ್ವಳ ಸಾಕ್ಷಾತ್ಕಾರಗೊಳ್ಳಬಹುದಾದ ಮೌಲ್ಯಕ್ಕೆ ಪರೀಕ್ಷಮಾಡಿರುವುದಿಲ್ಲ. ಬಳಕೆತಪ್ಪಿದ/ತೊಡೆದುಹಾಕಲಾದ ಆಸ್ತಿಗಳ ಡಬ್ಲ್ಯೂಡಿವಿ ಶೀರ್ಷಿಕೆಯ ಅಡಿ ತಪಶೀಲು,ದಾಸ್ತಾನು ಮತ್ತು ಬಿಡಿಭಾಗಗಳು ಎಂದು ಈ ಆಸ್ತಿಗಳನ್ನು ಪ್ರಕಟಿಸಲಾಗಿದೆ. ಈ ಆಸ್ತಿಗಳನ್ನು ದುರಸ್ತಿಯ ನಂತರ ದಾಸ್ತಾನಿನ ಸರಾಸರಿ ವೆಚ್ಚದಲ್ಲಿ ಮರುಬಿಡುಗಡೆಮಾಡಲಾಗುವುದು, ಅದರ ಡಬ್ಲ್ಯೂಡಿವಿ ಯಲ್ಲಲ್ಲ. ಇದು ಸ್ವತ್ತು, ಸ್ಥಾವರ ಮತ್ತ ಉಸಲಕರಣೆಯ (ಪಿಪಿಇ) ಮೇಲಿನ ಇಂಡ್ ಎಎಸ್ 16 ಭಾರತೀಯ ಲೇಖಾ ಪ್ರಮಾಣದ ಅನುಸಾರವಾಗಿಲ್ಲ. ಲೇಖಾ ನೀತಿಯ ಪ್ರಕಾರ, ಡಿಕಮಿಶನಿಂಗ್ ದಿನಾಂಕದಿಂದ ಆಸ್ತಿಗಳನ್ನು ಮರುಬಿಡುಗಡೆಮಾಡಿ ಬಂಡವಾಳೀಕರಿಸುವವರೆಗೆ ಸವಕಳಿಯ ಮೇಲಿನ ಖರ್ಚನ್ನು ವಿಧಿಸಲಾಗುವುದಿಲ್ಲ. ಮರುಬಿಡುಗಡೆಮಾಡಲಾದ ಇಂತಹ ಆಸ್ತಿಯನ್ನು ಸರಾಸರಿ ವೆಚ್ಚದಲ್ಲಿ ಬಂಡವಾಳೀಕರಿಸಿ ಅವುಗಳ ಮೂಲ ಆಯುಷ್ಯದ ಅವಧಿಗೆ ಸವಕಳಿಯನ್ನು ವಿಧಿಸಲಾಗುವುದು, ಅವುಗಳ ಉಳಿಕೆ ಉಪಯುಕ್ತ ಆಯುಷ್ಯಕ್ಕಲ್ಲ. ಈ ಪದ್ಧತಿಯು ಇಂಡ್ ಎಎಸ್ 16ರ ಅನುಸಾರ ಇರುವುದಿಲ್ಲ. ಇದು ಹಣಕಾಸು ತಃಖ್ತೆಗಳ ಮೇಲೆ ಬೀರುವ ಪರಿಣಾಮವನ್ನು ತಿಳಿಯುವುದು ಸಾಧ್ಯವಿರುವುದಿಲ್ಲ.	ಇದು ಹಣಕಾಸು ತಃಖ್ತೆಗಳ ಮೇಲಿನ ಟಿಪ್ಪಣಿ 2 ರ ಕಲಮು ಸಂಖ್ಯೆ 204 ರ ಪ್ರಕಾರ ಕಂಪನಿಯು ಮಹತ್ವದ ಲೇಖಾ ನೀತಿಗೆ ಅನುಸಾರವಾಗಿದೆ. ಆಸ್ತಿಗಳು ಬಳಕೆಯಲ್ಲಿರುವಾಗ ಮತ್ತು ಅವು ವಿಫಲವಾಗಿ ಅವನ್ನು ಬಿಡುಗಡೆಮಾಡಿದಾಗ ಆಸ್ತಿಗಳ ಮೇಲೆ ಸವಕಳಿಯನ್ನು ವಿಧಿಸಲಾಗುವುದು, ಇಲ್ಲದೇ ಹೋದಲ್ಲಿ ಬಳಕೆಗೆ ಮತ್ತೆ ತೊಡಗಿಸುವವರೆಗೂ ಇವನ್ನು ದಾಸ್ತಾನೆಂದು ಪರಿಗಣಿಸಲಾಗುವುದು.
ಡಿ.	ಕಂಪನಿಯು ಅಂತಿಮ ಬಿಲ್ಲುಗಳ ಸ್ವೀಕೃತಿ ಮತ್ತು ಸಕ್ಷಮ ಅಧಿಕಾರದಿಂದ ಅವುಗಳ ಅಂಗೀಕಾರದ ನಂತರ ಆಸ್ತಿಗಳನ್ನು ಬಂಡವಾಳೀಕರಿಸುತ್ತದೆ. ಇದು ಇಂಡ್ ಎಎಸ್ 16 ರ ಅನುಸಾರ ಇಲ್ಲ. ಜೊತೆಗೆ, ಸ್ಥಿರಾಸ್ತಿಗಳನ್ನು ಬಂಡವಾಳೀಕರಿಸುವಲ್ಲಿ ಮತ್ತು ಸವಕಳಿಯನ್ನು ಆಸ್ತಿಗಳು ಉದ್ದೇಶಿತ ಬಳಕೆಗೆ ಸಿದ್ಧವಾದ ದಿನಾಂಕದಿಂದಲ್ಲದೆ ಬಂಡವಾಳೀಕರಣದ ದಿನಾಂಕದಿಂದ ಸವಕಳಿಯನ್ನು ಒದಗಿಸುವಲ್ಲಿ ಸಹ ವಿಳಂಬವಿರುತ್ತದೆ. ಆಸ್ತಿಯು ಉದ್ದೇಶಿತ ಬಳಕೆಗೆ ಸಿದ್ಧವಿದ್ದ ನೈಜ ದಿನಾಂಕವನ್ನು ತಿಳಿಸುವ ದಾಖಲೆಗಳ ಅನುಪಸ್ಥಿತಿಯಲ್ಲಿ ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಕೊರತೆ ಸವಕಳಿಯ ವಿಧಿಸುವಿಕೆಯ ಪರಿಣಾಮವನ್ನು ತಿಳಿಯುವುದು ಸಾಧ್ಯವಿರುವುದಿಲ್ಲ.	ಇದು ಆಸ್ತಿಯನ್ನು ಬಳಕೆಗೆ ತೊಡಗಿಸಿದ ನೈಜ ದಿನಾಂಕ ಮತ್ತು ಲೆಕ್ಕವನ್ನು ಮುಕ್ತಾಯಗೊಳಿಸಲು ಅಗತ್ಯವಾದ ಅಳತೆಯ, ಬಳಸಲಾದ ಸಾಮಗ್ರಿಯ ದೃಢೀಕರಣ ಮೊದಲಾದ ವಿವರಗಳನ್ನು ಲೆಕ್ಕ ವಿಭಾಗಕ್ಕೆ ರವಾನಿಸುವ ಔಪಚಾರಿಕತೆಗಳ ನಡುವಿನ ಕಾಲ ವ್ಯತ್ಯಾಸದಿಂದ ಆಗಿರುತ್ತದೆ. ಆದರೆ, ಲೆಕ್ಕಪರಿಶೋಧನೆಯ ಪರಿಶೀಲನೆಗಳ ಹಿನ್ನೆಲೆಯಲ್ಲಿ, ಆಸ್ತಿಗಳನ್ನು ಜಾರಿಗೊಳಿಸುವ/ಬಳಕೆಗೆ ತೊಡಗಿಸುವ ಮುನ್ನ ಸವಕಳಿ/ಬಡ್ಡಿಯನ್ನು ವಿಧಿಸದಿರುವಂತೆ ಎಚ್ಚರವನ್ನು ತೆಗೆದುಕೊಳ್ಳಲಾಗುವುದು.

ಕ್ರ.ಸಂ.	ಲೆಕ್ಕಪರಿಶೋಧಕರ ಪರಿಶೀಲನೆ	ಆಡಳಿತ ಮಂಡಳಿಯ ಉತ್ತರ
3.	**ಸ್ಥತ್ತು, ಸ್ಥಾವರ ಮತ್ತ ಉಸಲಕರಣೆಯ ಮೇಲೆ ಇಂಡ್ ಎಎಸ್ 16**	
ಇ.	31.03.2018ಕ್ಕೆ ಕೊನೆಗೊಂಡ ಹಣಕಾಸು ವರ್ಷದ ಲೆಕ್ಕಪರಿಶೋಧನಾ ವರದಿಯಲ್ಲಿ ಹಿಂದಿನ ಲೆಕ್ಕಪರಿಶೋಧಕರು ವರದಿಮಾಡಿದಂತೆ ಕೊಪ್ಪಳ ವಿಭಾಗದಲ್ಲಿ ಕೈಗೊಳ್ಳಲಾಗಿದ್ದ ಮರುವಾಕಹ ಪ್ರಕ್ರಿಯೆ ಮತ್ತು ಸ್ಕಾಡಾ ಕಾಮಗಾರಿಗಳನ್ನು ನಿಲ್ಲಿಸಲಾಗಿತ್ತು ಮತ್ತು ತನಿಖೆಯನ್ನು ಪ್ರಾರಂಭಿಸಲಾಗಿತ್ತು. 31 ಮಾರ್ಚ್ 2015ರಂದು ಇದ್ದಂತೆ ಹೀಗೆ ನಿಲ್ಲಿಸಲಾದ ಕಾಗಾರಿಗಳ ಒಟ್ಟು ಮೌಲ್ಯವು ರೂ. 2,225.01 ಲಕ್ಷವಾಗಿತ್ತು ಮತ್ತು ಇವನ್ನು ವ್ಯಾಜ್ಯಗಳು ಬಾಕಿ ಇದ್ದ ಕಾರಣ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ ಎಂದು ತೋರಿಸಲಾಗಿತ್ತು. ಮತ್ತು ಈ ಆಸ್ತಿಗಳನ್ನು ಬಳೆಕಗೆ ತೊಡಗಿಸಿದ್ದರೂ ಬಂಡವಾಳೀಕರಿಸಲಾಗಿರಲಿಲ್ಲ ಮತ್ತು ಸೂಕ್ತ ಸವಕಳಿಯನ್ನು ವಿಧಿಸಿರಲಿಲ್ಲ. ಈ ಸಂಬಂಧ ಪರಿಷ್ಕೃತ ಸ್ಥಿತಿಗತಿಯ ಬಗ್ಗೆ ಯಾವುದೇ ದಾಖಲೆಯ ಸಾಕ್ಷ್ಯವೂ ವರ್ಷದ ಹಣಕಾಸು ತಃಖ್ತೆಗಳ ದಿನಾಂಕದಂದು ಇದ್ದಂತೆ ಪರಿಶೀಲಿಸಲು ನಮಗೆ ಲಭ್ಯವಿರುವುದಿಲ್ಲ. ಹಾಗಾಗಿ ಇದು ವರ್ಷದ ಹಣಕಾಸು ತಃಖ್ತೆಗಳ ಮೇಲೆ ಬೀರುವ ಪರಿಣಾಮವನ್ನು ತಿಳಿಯುವುದು ಸಾಧ್ಯವಿರುವುದಿಲ್ಲ.	ಅಂತಿಮ ಬಿಲ್ಲುಗಳನ್ನು ಗುತ್ತಿಗೆದಾರರು ಸಲ್ಲಿಸಬೇಕಿದ್ದು ಅವುಗಳ ಸಂಸ್ಕರಣೆ ಆಗಬೇಕಿದೆ. ಹಾಗಾಗಿ, ಕಾಮಗಾರಿಗಳ ಮಾಪನ ಮತ್ತು ಪೂರ್ಣವಾಗಿ ಬಂಡವಾಳೀಕರಣ ಸಾಧ್ಯವಾಗಿರುವುದಿಲ್ಲ. ಮತ್ತೆ ಮತ್ತೆ ಪ್ರಯತ್ನಿಸಿದರೂ ಗುತ್ತಿಗೆದಾರರು ಈ ಕಾಮಗಾರಿಗಳನ್ನು ಪೂರ್ಣಗೊಳಿಸಿರುವುದಿಲ್ಲ ಮತ್ತು ಹಾಗಾಗಿ ಈ ಕಾಮಗಾರಿಗಳ ಲೆಕ್ಕಗಳನ್ನು ಮುಕ್ತಾಯಗೊಳಿಸುವುದು ಈ ಕಾರಣದಿಂದ ಸಾಧ್ಯವಾಗಿರುವುದಿಲ್ಲ.
ಎಫ್.	31.03.2018ಕ್ಕೆ ಕೊನೆಗೊಂಡ ಹಣಕಾಸು ವರ್ಷದ ಲೆಕ್ಕಪರಿಶೋಧನಾ ವರದಿಯಲ್ಲಿ ಹಿಂದಿನ ಲೆಕ್ಕಪರಿಶೋಧಕರು ಕೆಳಗಿನ ಪರಿಶೀಲನೆಯನ್ನು ಮಾಡಿದ್ದರು:"2015–16ರ ಹಣಕಾಸು ವರ್ಷದಲ್ಲಿ ಅನೇಕ ವಿಭಾಗಗಳು ಟ್ರಾನ್ಸ್‌ಫಾರ್ಮರ್ ಜೋಡಣೆ ಮತ್ತು ಏರಿಯಲ್ ಫ್ಯೂಸ್ ಜೋಡಣೆಯ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಬೃಹತ್ ಮೊತ್ತದ ಕಾಮಗಾರಿ ಗುತ್ತಿಗೆಗಳ ಹಂಚಿಕೆಯಲ್ಲಿ ಅವ್ಯವಹಾರ ಆಗಿದೆಯೆಂಬ ಆರೋಪವಿತ್ತು ಮತ್ತು ಈ ಸಂಬಂಧ ಕರ್ನಾಟಕ ಸರ್ಕಾರವು ತನಿಖೆಯನ್ನು ಆದೇಶಿಸಿತ್ತು. ತನಿಖೆ ಪೂರ್ಣಗೊಂಡು ಆದೇಶವನ್ನು ನಿರೀಕ್ಷಿಸಲಾಗಿತ್ತು. ಈ ನಡುವೆ ಎಲ್ಲ ಬಾಕಿ ಕಾಮಗಾರಿಗಳನ್ನೂ ನಿಲ್ಲಿಸಲಾಗಿತ್ತು. ಈ ಕಾಮಗಾರಿ ಗುತ್ತಿಗೆಯ ಸ್ವರೂಪ, ಮೌಲ್ಯ ಮತ್ತು ವಹಿಸುವಿಕೆ, ವಿಧಿಸಲಾದ ವಿಧಿವಿಧಾನಗಳ ಉಲ್ಲಂಘನೆ ಮತ್ತು ಕರ್ನಾಟಕ ಸರ್ಕಾರದಿಂದ ತನಿಖೆ ಆದೇಶ – ಇವುಗಳ ಬಗ್ಗೆ ವಿವರವಾದ ಮಾಹಿತಿಯು ಅನುಪಸ್ಥಿತಿಯಲ್ಲಿ ಅವ್ಯವಹಾರದ ಸ್ವರೂಪದ ಬಗ್ಗೆ ಮತ್ತು ಕಂಪನಿಯ ಹಣಕಾಸು ತಃಖ್ತೆಗಳ ಮೇಲಿನ ಅದರ ಪರಿಣಾಮದ ಬಗ್ಗೆ ನಾವು ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಸಾಧ್ಯವಿರುವುದಿಲ್ಲ."	ಕರ್ನಾಟಕ ಸರ್ಕಾರದ ಇಂಧನ ಇಲಾಖೆಯು ರಚಿಸಿದ ಸಮಿತಿಯು ಈ ಪ್ರಕರಣದ ತನಿಖೆಯನ್ನು ನಡೆಸಿದ್ದಾರೆ. ಜೊತೆಗೆ, ನಷ್ಟವನ್ನು ಅಂದಾಜುಮಾಡಲು ಸದರಿ ಅವಧಿಯಲ್ಲಿ ಈ ಶೀರ್ಷಿಕೆಗಳಡಿಯಲ್ಲಿ ಕೈಗೊಳ್ಳಲಾದ ಎಲ್ಲ ಕಾಮಗಾರಿಗಳಿಗೆ ಸಂಬಂಧಿಸಿದಂತೆ ವಿವರವಾದ ತನಿಖೆಗಳನ್ನು ಹಾಗೂ ವ್ಯಾಪಕ ಕ್ಷೇತ್ರ ಪರಿಶೀಲನೆಯನ್ನು ನಡೆಸಲಾಗಿದೆ. ತಪ್ಪೆಸಗಿದ ಎಲ್ಲ ಅಧಿಕಾರಿಗಳು/ಸಿಬ್ಬಂದಿಯ ಮೇಲೆ ತನಿಖೆಗಳನ್ನು ಕೆ.ಪಿ.ಟಿ.ಸಿ.ಎಲ್. ಪ್ರಾರಂಭಿಸಿದೆ. ತನಿಖೆಯ ಫಲಿತಾಂಶಗಳನ್ನು ಆಧರಿಸಿ ಅಗತ್ಯ ಹಣಕಾಸು ವ್ಯವಹಾರಗಳನ್ನು ಲೆಕ್ಕಗಳಲ್ಲಿ ಸೇರಿಸಿಕೊಳ್ಳಲಾಗುವುದು.

ಕ್ರ.ಸಂ.	ಲೆಕ್ಕಪರಿಶೋಧಕರ ಪರಿಶೀಲನೆ	ಆಡಳಿತ ಮಂಡಳಿಯ ಉತ್ತರ
3.	**ಸ್ಥತ್ತು, ಸ್ಥಾವರ ಮತ್ತ ಉಸಲಕರಣೆಯ ಮೇಲೆ ಇಂಡ್ ಎಎಸ್ 16**	
4.	ಪವರ್ ಫೈನಾನ್ಸ್ ಕಾರ್ಪೊರೇಶನ್‌ನಿಂದ ಪಡೆದ ಸಾಲಕ್ಕೆ ಸಂಬಂಧಿಸಿದಂತೆ (ಆರ್‌ಎಪಿಡಿಆರ್‌ಪಿ – ಮೂಲದಲ್ಲಿ ಒದಗಿಸಲಾದ ಮೊತ್ತ ರೂ. 3604 ಲಕ್ಷ ಮತ್ತು 31.2.2019ರಂದು ಇದ್ದಂತೆ ಉಳಿಕೆ ರೂ. 1261.92 ಲಕ್ಷ), ನಮಗೆ ನೀಡಲಾದ ಮಾಹಿತಿಯಂತೆ, ಸಾಲವು ಅನುದಾನಕ್ಕೆ ಪರಿವರ್ತಿತವಾಗುವ ಯೋಜನೆಯ ಅಡಿ ಇತ್ತು. ಕಂಪನಿಯು ವರ್ಷದ ಬಡ್ಡಿ ವೆಚ್ಚವಾಗಿ ರೂ. 9.27 ಕೋಟಿ ಮೊತ್ತವನ್ನು ಗುರುತಿಸಿದೆ ಮತ್ತು ಪಿಎಫ್‌ಸಿ ಒದಗಿಸಿದ ಸಾಲ ಶಿಲ್ಕು ಸ್ಥಿರೀಕರಣದ ಆಧಾರದ ಮೇಲೆ ಮುಂಚಿನ ವರ್ಷಗಳಲ್ಲಿ ಗುರುತಿಸಿದ ರೂ. 7.21 ಕೋಟಿಯಷ್ಟು ಬಡ್ಡಿ ವೆಚ್ಚವನ್ನು ವ್ಯತಿರಿಕ್ತಗೊಳಿಸಿದೆ. ಸಾಲದ ಪರಿವರ್ತನೆ/ಹಿಂದಿನ ವರ್ಷಗಳ ಬಡ್ಡಿಯ ವ್ಯತಿರಿಕ್ತಗೊಳಿಸುವಿಕೆಯ ಅಂಗೀಕಾರ ಮತ್ತು ಚಾಲ್ತಿ ವರ್ಷದ ಬಡ್ಡಿಯನ್ನು ಮನ್ನಾಮಾಡುವ ಬಗ್ಗೆ ಯಾವುದೇ ನಿರ್ದಿಷ್ಟ ಸ್ಥಿರೀಕರಣವಿಲ್ಲ. ಇದು ವರ್ಷದ ಹಣಕಾಸು ವೆಚ್ಚವನ್ನು ರೂ. 16.48 ಕೋಟಿಯಷ್ಟು ಕಡಿಮೆ ತೋರಿಸಲು ಹಾಗೂ ಅದೇ ಮಟ್ಟಿಗೆ ಲಾಭವನ್ನು ಹೆಚ್ಚಿಗೆ ತೋರಿಸಲು ಕಾರಣವಾಗಿದೆ.	ಪಿಎಫ್‌ಸಿ ಪ್ರಾಧಿಕಾರವು ಆರ್‌ಎಪಿಡಿಆರ್‌ಪಿ (ಭಾಗ–ಎ ಯೋಜನೆಗೆ ಪ್ರತಿಯಾಗಿ ಆಗಸ್ಟ್ –18ರಿಂದ ಮಾಸಿಕ ಇಎಂಐ ಬೇಡಿಕೆ ನೋಟೀಸನ್ನು ನೀಡಿರುವುದಿಲ್ಲ. ಜೊತೆಗೆ, ಆಗಸ್ಟ್ – 18ರಲ್ಲಿನ ಇಎಂಐ ಬೇಡಿಕೆ ನೋಟೀಸಿನಲ್ಲಿ ರೂ. 1.07 ಕೋಟಿಯಷ್ಟು ಮೊತ್ತವನ್ನು ಕಡಿಮೆಮಾಡಲಾಗಿದೆ. ಸಂತುಲನ ಪಟ್ಟಿಯ ದಿನಾಂಕದಂದು ಇದ್ದಂತೆ ಪ್ರಾಪ್ತ ಬಡ್ಡಿಯ ವಿವರಗಳನ್ನು ಎಲ್ಲ ದಾತರು/ಹಣಕಾಸು ಸಂಸ್ಥೆಗಳಿಂದ ಪಡೆದುಕೊಳ್ಳುವುದು ವಾಡಿಕೆಯಾಗಿದ್ದು ಇದಕ್ಕನುಗುಣವಾಗಿ ಜೆಸ್ಕಾಂ ಪತ್ರ ಸಂಖ್ಯೆ 988, ದಿನಾಂಕ 03–04–2019ರ ಅನ್ವಯ 31.03.2019ರಂದು ಇದ್ದಂತೆ, ಪ್ರಾಪ್ತವಾದ ಆದರೆ ಬಾಕಿ ಇರದ ಬಡ್ಡಿಯ ವಿವರಗಳನ್ನು ಒದಗಿಸಲು ಕೋರಲಾಯಿತು. ಪಿಎಫ್‌ಸಿ ಪ್ರಾಧಿಕಾರವು ಇದಕ್ಕೆ ಮೇ 2019ರಲ್ಲಿ ಮರು ಉತ್ತರಿಸಿತು ಹಾಗೂ ಪ್ರಾರಂಭದಲ್ಲಿ ಇದನ್ನು ದಾಖಲಿಸಲಾಯಿತು. ಆದರೆ, ಸಂಬಂಧಿತ ಯೋಜನಾ ತಂಡಗಳು/ತಾಂತ್ರಿಕ ವಿಭಾಗದೊಂದಿಗೆ ನಡೆದ ಸಮಾಲೋಚನೆ/ಚರ್ಚೆಯ ಸಂದರ್ಭದಲ್ಲಿ ನಮಗೆ ಎಂಓಪಿ ಕೈಗೊಂಡಿರುವ ಯೋಜನಾ ಮುಕ್ತಾಗೊಳಿಸುವಿಕೆ ಪ್ರಕ್ರಿಯೆಯ ಬಗ್ಗೆ ಮಾಹಿತಿ ನೀಡಲಾಯಿತು. ಹಾಗೂ ಎಂಓಪಿ, ಭಾರತ ಸರ್ಕಾರದ ಅಧಿಕೃತ ಜ್ಞಾಪನಾ ಸಂ. 26/1/2015–ಐಪಿಡಿಎಸ್ (ಸಂ–4) ಭಾಗ (1), ದಿನಾಂಕ 18.06.2019ರ ಅನ್ವಯ ಸಾಲಗಳು ಅನುದಾನಗಳಾಗಿ ಪರಿವರ್ತಿತವಾಗುವ ಅರ್ಹತೆಯನ್ನು ಹೊಂದಿರುವುದಾಗಿ ಮತ್ತು ಬಡ್ಡಿಯ ಹೊಣೆಯ ಪ್ರಶ್ನೆ ಉದ್ಭವಿಸುವುದಿಲ್ಲ ಎಂದು ಸ್ಪಷ್ಟವಾಗಿ ಸೂಚಿಸಲಾಗಿತ್ತು. ಇದನ್ನು ಆಧರಿಸಿ ಆರ್‌ಎಪಿಡಿಎಪಿ (ಭಾಗ –ಎ) ಸಾಲಗಳ ಮೇಲಿನ ಬಡ್ಡಿಗಾಗಿ ಸೃಷ್ಟಿಸಿದ್ದ ಹೊಣೆಕೆಯನ್ನು ವ್ಯತಿರಿಕ್ತಗೊಳಿಸಲಾಗಿದೆ. ಬಡ್ಡಿ ಹೊಣೆ ಇರದಿದ್ದ ಕಾರಣ ಈ ವ್ಯತಿರಿಕ್ತ ಪ್ರಕ್ರಿಯೆಯನ್ನು ಕೈಗೊಳ್ಳಲಾಯಿತು. ಮೇಲಿನ ಅಂಶಗಳ ಹಿನ್ನೆಲೆಯಲ್ಲಿ ಉತ್ತರವನ್ನು ಪರಿಗಣಿಸಿ ಈ ಪರಿಶೀಲನೆಯನ್ನು ಕೈಬಿಡಲು ಕೋರಲಾಗಿದೆ.

ಕ್ರ.ಸಂ.	ಲೆಕ್ಕಪರಿಶೋಧಕರ ಪರಿಶೀಲನೆ	ಆಡಳಿತ ಮಂಡಳಿಯ ಉತ್ತರ
5.	ಇಂಡ್ ಎಎಸ್ 12 – ಆದಾಯ ತೆರಿಗೆಗಳು:	
ಎ.	ಕಂಪನಿಯು ಆದಾಯ ತೆರಿಗೆ ಕಾಯ್ದೆಯ ಅಡಿಯಲ್ಲಿ ಸವಕಳಿ, ಪಾವತಿ ಆಧಾರದ ಮೇಲೆ ತೆರಿಗೆ ಉದ್ದೇಶಗಳಿಗೆಂದು ಅವಕಾಶ ನೀಡಲಾದ ಸಿಬ್ಬಂದಿ ಸಂಬಂಧಿತ ವೆಚ್ಚಗಳು, ಭವಿಷ್ಯದ ಲಾಭಗಳಿಗೆ ಪ್ರತಿಯಾಗಿ ಹೊಂದಿಸಬಹುದಾದ ಮುಂದೂಡಲಾದ ಆದಾಯ ಬಾಬ್ತುಗಳು ಮತ್ತು ಮುಂದಕ್ಕೆ ಒಯ್ಯಲಾದ ನಷ್ಟಗಳ ಕಾರಣ ಉಂಟಾದ ಕಾಲ ವ್ಯತ್ಯಾಸಗಳಿಗೆ ಸಂಬಂಧಿಸಿದಂತೆ ಮುಂದೂಡಲಾದ ತೆರಿಗೆ ಆಸ್ತಿಗಳು/ ಹೊಣೆಗಳನ್ನು ಸೃಷ್ಟಿಸಿಲ್ಲ. ಸೂಕ್ತ ದತ್ತಾಂಶ ಮತ್ತು ಮಾಹಿತಿಯ ಅನುಪಸ್ಥಿತಿಯಲ್ಲಿ ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಮುಂದೂಡಲಾದ ತೆರಿಗೆಯ ಪ್ರಸ್ತುತ ಪರಿಣಾಮವನ್ನು ಕುರಿತು ಅಭಿಪ್ರಾಯ ವ್ಯಕ್ತಪಡಿಸುವುದು ಸಾಧ್ಯವಿರುವುದಿಲ್ಲ.	ಇದು ಹಣಕಾಸು ತಃಖ್ತೆಗಳ ಕಲಮು 2.16 ಅಡಿ ಹೇಳಲಾಗಿರುವ ಲೇಖಾ ನೀತಿಗೆ ಅನುಗುಣವಾಗಿದೆ. ಮುಂದೂಡಲಾದ ತೆರಿಗೆ ಲೆಕ್ಕಹಾಕುವಿಕೆಯನ್ನು ಕುರಿತಂತೆ ಹಣಕಾಸು ತಃಖ್ತೆಗಳಲ್ಲಿ ಅಗತ್ಯ ಪ್ರಕಟಣೆಗಳನ್ನು ಮಾಡಲಾಗಿದೆ.
ಬಿ.	ಜೊತೆಗೆ, ಕಂಪನಿಯು 1.4.2016ರಂದು ಇದ್ದಂತೆ ಸ್ವತಂತ್ರ ಹಿಡುವಳಿ ಭೂಮಿಯ ಮರುಮೌಲ್ಯಮಾಪನ ಮುಡಿಪಿನ ಮೊತ್ತದ ಮೇಲೆ ಮುಂದೂಡಲಾದ ತೆರಿಗೆ ಹೊಣೆಯನ್ನು ಸೃಷ್ಟಿಸಿದೆ. ಈ ಸ್ವತ್ತುಗಳನ್ನು ಹೊಂದಿರುವ ಅಂತಿಮವಾದ ಉದ್ದೇಶವು ಸದ್ಯದ ಭವಿಷ್ಯದಲ್ಲಿ ಅವನ್ನು ಮಾರದೆ ವ್ಯಾಪಾರದಲ್ಲಿ ಬಳಸಿಕೊಳ್ಳುವುದೇ ಆಗಿರುವುದರಿಂದ, ನಮ್ಮ ಅಭಿಪ್ರಾಯದಂತೆ, ಮುಂದೂಡಲಾದ ತೆರಿಗೆ ಹೊಣೆಯ ಸೃಷ್ಟಿಯು ಸೂಕ್ತವಾದದ್ದುಲ್ಲ ಮತ್ತು ಅದನ್ನು ವ್ಯತಿರಿಕ್ತಗೊಳಿಸಬೇಕಿರುತ್ತದೆ. ಈ ಕಾರಣದಿಂದಾಗಿ, ಮುಂದೂಡಲಾದ ತೆರಿಗೆ ಹೊಣೆಯನ್ನು ರೂ. 20,726.93 ಲಕ್ಷದಷ್ಟು ಹೆಚ್ಚಾಗಿ ಮತ್ತು ಮರುಮೌಲ್ಯಮಾಪನ ಮುಡಿಪನ್ನು ಅದೇ ಮಟ್ಟಿಗೆ ಕಡಿಮೆ ತೋರಿಸಲಾಗಿದೆ.	
ಸಿ.	ಜೊತೆಗೆ, ಆದಾಯ ತರಿಗೆ ಕಾಯ್ದೆಯ ಅಡಿ ಸವಕಳಿಯ ಉದ್ದೇಶಗಳಿಗಾಗಿ ವರ್ಷದಲ್ಲಿ ಸ್ಥಿರಾಸ್ತಿಗಳಿಗೆ ಮಾಡಲಾದ ಎಲ್ಲ ಸೇರ್ಪಡೆಗಳೂ 180ಕ್ಕಿಂತಲೂ ಕಡಿಮೆ ಅವಧಿಗೆ ಸೇರ್ಪಡೆಗಳೆಂದು ಪರಿಗಣಿಸಲಾಗಿದೆ. ಇದರಿಂದಾಗಿ ಆದಾಯ ತೆರಿಗೆ ಕಾಯ್ದೆಯ ಅಡಿ ಕಡಿಮೆ ಸವಕಳಿಯ ಹಕ್ಕನ್ನು ಸಲ್ಲಿಸಲಾಗಿದೆ. ನಾವು ಇಂತಹ ಮೊತ್ತದ ಪರಿಮಾಣೀಕರಣವನ್ನು ಮಾಡುವುದು ಸಾಧ್ಯವಾಗಿಲ್ಲ ಮತ್ತು ಆಸ್ತಿಗಳಿಗೆ ದಿನವಹಿ ಸೇರ್ಪಡೆಗಳ ವಿವರಗಳ ಅನುಪಸ್ಥಿತಿಯಲ್ಲಿ ಮುಂದೂಡಲಾದ ತೆರಿಗೆಗಳು ಮತ್ತು ಲಾಭ ಮತ್ತು ನಷ್ಟದ ತಃಖ್ತೆಯ ಮೇಲಿನ ಸಂಬಂಧಿತ ಪರಿಣಾಮವನ್ನು ನಿರ್ಧರಿಸುವುದು ಸಾಧ್ಯವಿರುವುದಿಲ್ಲ.	ಪ್ರತಿ ವರ್ಷ ರಚನೆಯಾಗುವ ಮತ್ತು ನಿರ್ಮಾಣವಾಗುವ ಅಸಂಖ್ಯ ಆಸ್ತಿಗಳ ಹಿನ್ನೆಲೆಯಲ್ಲಿ ಆದಾಯ ತೆರಿಗೆ ಪ್ರಾಧಿಕಾರಗಳಿಗೆ ಪ್ರತಿ ಆಸ್ತಿಯನ್ನು ಜಾರಿಗೊಳಿಸಿದ ದಿನಾಂಕದ ಆಧಾರವನ್ನು ಒದಗಿಸುವುದು ಕಷ್ಟವಾಗುತ್ತದೆ. ಆದರೆ, ಇದು ವರ್ಷದ ತೆರಿಗೆ ಲೆಕ್ಕಾಚಾರದ ಮೇಲೆ ಹೆಚ್ಚಿನ ಪರಿಣಾಮವನ್ನು ಬೀರುವುದಿಲ್ಲ ಮತ್ತು ಆಸ್ತಿಗಳ ಉಳಿಕೆ ಆಯುಷ್ಯದ ಅವಧಿಯಲ್ಲಿ ಹೊಂದಿಕೆಯಾಗುತ್ತದೆ.
6.	ಕಂಪನಿಯು ಹಾನಿಗೊಳಗಾದ ಆಸ್ತಿಗಳನ್ನು ಗುರುತಿಸುವ ಪ್ರಕ್ರಿಯೆಯನ್ನು ಲೇಖಾ ಪ್ರಮಾಣ 36ರ ಅನುಸಾರ ಮತ್ತು ಹಾಗಾಗಿ ನಾವು ಪ್ರಸ್ತುತ ಅನುಸರಣೆ ಮತ್ತು ಹಣಕಾಸು ತಃಖ್ತೆಗಳ ಮೇಲಿನ ಇದರ ಪರಿಣಾಮವನ್ನು ಕುರಿತಾಗಿ ಅಭಿಪ್ರಾಯ ವ್ಯಕ್ತಪಡಿಸುವ ಸ್ಥಿತಿಯಲ್ಲಿ ಇರುವುದಿಲ್ಲ.	ಪ್ರಸ್ತುತ ವರ್ಷದಲ್ಲಿ ಬಾಧೆಗೊಳಗಾದದ್ದು ಎಂದು ಯಾವುದೇ ಆಸ್ತಿಯನ್ನೂ ವರ್ಗೀಕರಿಸಲಾಗಿಲ್ಲ.

ಕ್ರ.ಸಂ.	ಲೆಕ್ಕಪರಿಶೋಧಕರ ಪರಿಶೀಲನೆ	ಆಡಳಿತ ಮಂಡಳಿಯ ಉತ್ತರ
7.	**ಸಿಬ್ಬಂದಿ ಸವಲತ್ತುಗಳ ಮೇಲಿನ ಇಂಡ್ ಎಎಸ್ 19**	
ಎ.	ಕಂಪನಿಯು ವೇತನದ ಪ್ರತಿಶತವನ್ನು ಆಧರಿಸಿ ಗ್ರಾಚುಟಿ ಮತ್ತು ಪಿಂಚಣಿ ಹೊಣೆಗಾಗಿ ಕಾಲದಿಂದ ಕಾಲಕ್ಕೆ ಮಾಹಿತಿ ಒದಗಿಸಲಾದಂತೆ ಪಿಂಚಣಿ ಮತ್ತು ಗ್ರಾಚುಟಿ ನ್ಯಾಸಕ್ಕೆ ಪಾವತಿಗಳನ್ನು ಮಾಡುತ್ತ ಬಂದಿದೆ. ನ್ಯಾಸವು ಸದರಿ ವರ್ಷಕ್ಕಾಗಿ ಮಾಡಿದ ವಿಮಾಗಣಕ ಮೌಲ್ಯಮಾಪನದ ವಿವರಗಳನ್ನು ಕಂಪನಿಯು ಹೊಂದಿರುವುದಿಲ್ಲ ಮತ್ತು ಇದಕ್ಕನುಗುಣವಾಗಿ ಇಂತಹ ಸಿಬ್ಬಂದಿ ಸವಲತ್ತುಗಳಿಗೆ ಪ್ರತಿಯಾಗಿ ಹಣಕಾಸು ತಃಖ್ತೆಗಳಲ್ಲಿ ಯಾವುದೇ ವಿಮಾಗಣಕ ಮೌಲ್ಯಮಾಪನ ಹವಣಿಕೆಯನ್ನು ಹೊಂದಿರುವುದಿಲ್ಲ. ಇದರಿಂದಾಗಿ, ವಿಮಾಗಣಕ ಮೌಲ್ಯಮಾಪನದ ಪ್ರಕಾರ ಲಾಭ ಮತ್ತು ನಷ್ಟದ ತಃಖ್ತೆಗೆ ಖರ್ಚುಹಾಕಲಾದ ಸಿಬ್ಬಂದಿ ಸವಲತ್ತು ವೆಚ್ಚಗಳ ಯುಕ್ತತೆಯ ಬಗ್ಗೆ ಹಾಗೂ ಹಣಕಾಸು ತಃಖ್ತೆಗಳಲ್ಲಿ ಇಂಡ್ ಎಎಸ್ ಅಗತ್ಯವಾಗಿಸುವ ಪ್ರಕಟಣೆಗಳ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ನಮಗೆ ಸಾಧ್ಯವಿರುವುದಿಲ್ಲ.	2109ರ ಹಣಕಾಸು ತಃಖ್ತೆಗಳ ಟಿಪ್ಪಣಿ 2ರ ಕಲಮು ಸಂಖ್ಯೆ 2.13ರಲ್ಲಿ ಗ್ರಾಚುಟಿ ಮತ್ತು ಪಿಂಚಣಿ ನ್ಯಾಸಕ್ಕೆ ಮಾಡಲಾಗುವ ಪಾವತಿಯ ಬಗೆಗಿನ ಕಂಪನಿಯ ನೀತಿಯನ್ನು ಹೇಳಲಾಗಿದೆ.ನಗದಿತ ದರಗಳಲ್ಲಿ ನ್ಯಾಸಕ್ಕೆ ಪಾವತಿಗಳನ್ನು ಮಾಡಿದ ತಕ್ಷಣ ಕಂಪನಿಯ ಹೊಣೆ ಮುಕ್ತಾಯವಾಗುತ್ತದೆ. ಪಿಂಚಣಿ ಹೊಣೆಯನ್ನು ನಿಭಾಯಿಸಲು ಅಗತ್ಯವಾದ ನೈಜ ನಿಧಿಗಳ ವಿಮಾಗಣಕ ಮೌಲ್ಯಮಾಪನ ಮತ್ತು ಕೊಡುಗೆಯ ದರದ ನಿಗದಿಯ ಜವಾಬ್ದಾರಿಯು ನ್ಯಾಸದ್ದಾಗಿರುತ್ತದೆ, ಜೆಸ್ಕಾಂನದ್ದಲ್ಲ. ಪಿ & ಜಿ ನ್ಯಾಸವು ವಿವಾಗಣಕ ಮೌಲ್ಯಮಾಪನವನ್ನು ಕಾಲಕಾಲಕ್ಕೆ ಮಾಡುತ್ತದೆ ಮತ್ತು ಪಿ & ಜಿ ನ್ಯಾಸದ ನ್ಯಾಸಧಾರಿಗಳ ಮಂಡಳಿಯ ಭಾಗವಾಗಿರುವ ಎಲ್ಲ ಎಸ್ಕಾಂ ಪ್ರತಿನಿಧಿಗಳೊಂದಿಗೆ, ವಿವಿಧ ಕಾರ್ಮಿಕ ಯೂನಿಯನ್/ಸಂಘಗಳೊಂದಿಗೆ ಮತ್ತು ಸರ್ಕಾರದ ಪ್ರತಿನಿಧಿಗಳೊಂದಿಗೆ ಅದನ್ನು ಹಂಚಿಕೊಳ್ಳುತ್ತದೆ. ನ್ಯಾಸಧಾರಿಗಳು ಇದನ್ನು ಒಪ್ಪಿಕೊಂಡ ಒಡನೆಯೇ ಕೊಡುಗೆಯ ದರಗಳನ್ನು ನಿರ್ಧರಿಸಿ ಪಾವತಿಗಾಗಿ ಎಸ್ಕಾಂ ಗೆ ತಿಳಿಸಲಾಗುತ್ತದೆ.
ಬಿ.	ಎನ್‌ಡಿಸಿಪಿಎಸ್ ಯೋಜನೆಯ ಭಾಗವಾಗಿರುವ ನೌಕರರಿಗೆ ಗ್ರಾಚುಟಿ ಪಾವತಿಯ ಪುಬಂಧಗಳ ಅನ್ವಯವನ್ನು ಕಂಪನಿಯು ತಿಳಿದುಕೊಂಡಿರುವುದಿಲ್ಲ. ನಮಗೆ ತಿಳಿಸಲಾದಂತೆ, ಇಂತಹ ನೌಕರರಿಗೆ ಗ್ರಾಚುಟಿ ಅನ್ವಯದ ಬಗ್ಗೆ ಸ್ಪಷ್ಟವಾದ ನರ್ದೇಶನಗಳು ಇರುವುದಿಲ್ಲ ಮತ್ತು ಹಾಗಾಗಿ ಪ್ರಾಪ್ತ ಗ್ರಾಚುಟಿ ಹಿಣೆಗಾಗಿ, ಅವು ಇದ್ದಲ್ಲಿ, ಯಾವುದೇ ಹವಣಿಕೆಯನ್ನು ಮಾಡಿರುವುದಿಲ್ಲ.	ಪರಿಶೀಲನೆಯಲ್ಲಿರುವ ವರ್ಷದಲ್ಲಿ ನ್ಯಾಸವು ಯಾವುದೇ ಮಾರ್ಗಸೂಚಿಗಳನ್ನು ನಿಗದಿಪಡಿಸಿರುವುದಿಲ್ಲ. ಹಾಗಾಗಿ ಯಾವುದೇ ಹವಣಿಕೆಯನ್ನು ಮಾಡಲಾಗಿಲ್ಲ.
7.	**ಇಂಡ್ ಎಎಸ್ 113 – ನ್ಯಾಯಯುತ ಮೌಲ್ಯದ ಲೆಕ್ಕಾಚಾರ ಮತ್ತು ಇಂಡ್ ಎಎಸ್ 109 – ಹಣಕಾಸು ಸಾಧನಗಳು**	
ಎ.	ಇಂಡ್ ಎಎಸ್ ವಿಧಾನಕ್ಕೆ ಮಾರ್ಪಾಟಾದ ದಿನದಂದು ಇದ್ದಂತೆ ಸ್ವತಂತ್ರ ಹಿಡುವಳಿಗೆ ಸಂಬಂಧಿಸಿದಂತೆ ಮರುಮೌಲ್ಯಮಾಪನ ಮಾದರಿಯನ್ನು ಕಂಪನಿಯು ಅಳವಡಿಸಿಕೊಂಡಿದೆ. ಪ್ರಾರಂಭಿಕ ಲೆಕ್ಕಾಚಾರದ ದಿನದಿಂದ 3 ವರ್ಷಗಳು ಘಟಿಸಿವೆಯಾದ ಕಾರಣ ಸಂತುಲನ ಪಟ್ಟಿಯ ದಿನದಂದು ಇದ್ದಂತೆ ನ್ಯಾಯಯುತ ಮೌಲ್ಯವನ್ನು ಲೆಕ್ಕಾಚಾರ ಹಾಕಲು ಇದನ್ನು ಮತ್ತೆ ಪರಿಶೀಲಿಸುವ ಆಗತ್ಯವಿದೆ. ಲೆಕ್ಕಾಚಾರದ ಅನುಪಸ್ಥಿತಿಯಲ್ಲಿ ವರ್ಷದ ಹಣಕಾಸು ತಃಖ್ತೆಗಳ ಮೇಲೆ ಇದರ ಪರಿಣಾಮವನ್ನು ನಿರ್ಧರಿಸುವುದು ನಮಗೆ ಸಾಧ್ಯವಾಗಿಲ್ಲ.	2109ರ ಹಣಕಾಸು ತಃಖ್ತೆಗಳ ಟಿಪ್ಪಣಿ 2ರ ಕಲಮು ಸಂಖ್ಯೆ 2.24ರಲ್ಲಿ ದಾಸ್ತಾನಿನ ಬಗೆಗಿನ ಕಂಪನಿಯ ನೀತಿಯನ್ನು ಹೇಳಲಾಗಿದೆ. ಹಣಕಾಸು ತಃಖ್ತೆಗಳ ಟಿಪ್ಪಣಿ ಸಂಖ್ಯೆ 50ರಲ್ಲಿ ಸ್ವತ್ತು, ಸ್ಥಾವರ ಮತ್ತು ಸಲಕರಣೆಗಳ ಮೌಲ್ಯಮಾಪನದ ಪ್ರಕಟಣೆಗಳನ್ನು ಒದಗಿಸಲಾಗಿದೆ.

ಕ್ರ.ಸಂ.	ಲೆಕ್ಕಪರಿಶೋಧಕರ ಪರಿಶೀಲನೆ	ಆಡಳಿತ ಮಂಡಳಿಯ ಉತ್ತರ
7.	**ಇಂಡ್ ಎಎಸ್ 113 – ನ್ಯಾಯಯುತ ಮೌಲ್ಯದ ಲೆಕ್ಕಾಚಾರ ಮತ್ತು ಇಂಡ್ ಎಎಸ್ 109 – ಹಣಕಾಸು ಸಾಧನಗಳು**	
ಬಿ.	ಕಂಪನಿಯು ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್‌ನಲ್ಲಿ ರೂ. 251 ಲಕ್ಷ ಮೊತ್ತದ ಈಕಿಟಿ ಷೇರುಗಳಲ್ಲಿ ಹೂಡಿಕೆ ಮಾಡಿದೆ. ಸಂತುಲನ ಪಟ್ಟಿಯ ದಿನಾಂಕದಂದು ಇದ್ದಂತೆ ಈ ಷೇರುಗಳ ನ್ಯಾಯಯುತ ಮೌಲ್ಯಮಾಪನ ಆಗಿರುವುದಿಲ್ಲ. ಹಾಗಾಗಿ ನಾವು ಇಂಡ್ ಎಎಸ್ ಅನುಸರಣೆ ಮತ್ತು ಹಣಕಾಸು ತಃಖ್ತೆಗಳ ಮೇಲಿನ ಇದರ ಪರಿಣಾಮವನ್ನು ಕುರಿತಾಗಿ ಅಭಿಪ್ರಾಯ ವ್ಯಕ್ತಪಡಿಸುವ ಸ್ಥಿತಿಯಲ್ಲಿ ಇರುವುದಿಲ್ಲ.	ಹಣಕಾಸು ತಃಖ್ತೆಗಳ ಟಿಪ್ಪಣಿ ಸಂಖ್ಯೆ 6ರಲ್ಲಿ ಅಗತ್ಯ ಪ್ರಕಟಣೆಗಳನ್ನು ಮಾಡಲಾಗಿದೆ.
ಸಿ.	ಗುತ್ತಿಗೆದಾರರು/ಸರಬರಾಜುದಾರರಿಂದ ಪಡೆದ ಭದ್ರತಾ ಠೇವಣಿಗಳು ಮತ್ತು ಗುತ್ತಿಗೆದಾರರಿಂದ ಪಡೆದ ಧಾರಣ ಹಣವನ್ನು ಇಂಡ್ ಎಎಸ್ –109ರ ಅಗತ್ಯದಂತೆ ದತ್ತಿ ವೆಚ್ಚದಲ್ಲಿ ಲೆಕ್ಕತೋರಿಸಿರುವುದಿಲ್ಲ. ನಿರೀಕ್ಷೆಯಂತೆ ಈ ಠೇವಣಿಗಳ ಸಾಕ್ಷಾತ್ಕಾರ ದಿನಾಂಕವನ್ನು ತಿಳಿಯುವುದು ಸಾಧ್ಯವಿರುವುದಿಲ್ಲ. ಇದಕ್ಕನುಗುಣವಾಗಿ, ನಾವು ಠೇವಣಿ ಮತ್ತು ಧಾರಣ ಹಣದ ಪರಿಣಾಮಗಳನ್ನು ಹಾಗೂ ಇವುಗಳು ಲಾಭ ಮತ್ತು ನಷ್ಟದ ತಃಖ್ತೆಯ ಮೇಲೆ ಬೀರಬಹುದಾದ ಪರಿಣಾಮವನ್ನು ಕುರಿತು ಅಭಿಪ್ರಾಯ ವ್ಯಕ್ತಪಡಿಸಲು ಸಾಧ್ಯವಿರುವುದಿಲ್ಲ.	ಸಂತುಲನ ಪಟ್ಟಿಯ ದಿನಾಂಕದಂತೆ ಸಾಕ್ಷಾತ್ಕಾರದ ನಿಖರವಾದ ದಿನಾಂಕವನ್ನು ನಿರ್ಧರಿಸುವುದು ಸಾಧ್ಯವಾಗಲಿಲ್ಲ ಮತ್ತು ಹಾಗಾಗಿ ಇವನ್ನು ದತ್ತಿ ಹಾಕಲಾಗಿಲ್ಲ.
9.	**ಭಾರತೀಯ ಲೇಖಾ ಪ್ರಮಾಣ (ಇಂಡ್ ಎಎಸ್) 17 – ಗುತ್ತಿಗೆಗಳು** ನಮಗೆ ತಿಳಿದಂತೆ ಕಂಪನಿಯು ಚರಾಸ್ತಿಗಳನ್ನು ಗುತ್ತಿಗೆಗೆ ನೀಡಿದೆ/ಪಡೆದುಕೊಂಡಿದೆ. ಕೆಲವು ಪ್ರಕರಣಗಳಲ್ಲಿ (ಕೆಪಿಟಿಸಿಎಲ್ ನೊಂದಿಗೆ ಗುತ್ತಿಗೆ) ಷರತ್ತು ಮತ್ತು ನಿಬಂಧನೆಗಳ ದಾಖಲೆಗಳಿಲ್ಲ. ಗುತ್ತಿಗೆಗೆ ನೀಡಿರುವ ಪಕ್ಷವು ಭೋಗ್ಯದ ಮೊತ್ತಕ್ಕಾಗಿ ಬೇಡಿಕೆಗಳನ್ನು ಇರಿಸಿರುವು ಗಮನಕ್ಕೆ ಬಂದಿರುತ್ತದೆ ಮತ್ತು ಇವನ್ನು ಕಂಪನಿಯು ಲೆಕ್ಕಪುಸ್ತಕಗಳಲ್ಲಿ ಸೇರಿಸಿರುವುದಿಲ್ಲ. ಜೊತೆಗೆ, ಕಂಪೆನಿಯು ಇಂಡ್ ಎಎಸ್ 17ರ ಅಗತ್ಯದಂತೆ ಪ್ರಕಟಣಾ ಅಗತ್ಯಗಳನ್ನು ಪೂರೈಸಿರುವುದಿಲ್ಲ.	ಈಗಿನವರೆಗೂ ಇದ್ದಂತೆ ಜೆಸ್ಕಾಂ ತನ್ನ ಯಾವುದೇ ಆಸ್ತಿಯನ್ನು ಗುತ್ತಿಗೆಗೆ ನೀಡಿರುವುದಿಲ್ಲ. ಗುತ್ತಿಗೆಗೆ ತೆಗೆದುಕೊಂಡಿರುವ ಆಸ್ತಿಗಳಿಗೆ ಸಂಬಂಧಿಸಿದ ಬೇಡಿಕೆಗಳನ್ನು ಕುರಿತಂತೆ ಕಂಪನಿಯು ಈ ಬೇಡಿಕೆಗಳನ್ನು ಸ್ವೀಕರಿಸಿರುವುದಿಲ್ಲ ಮತ್ತು ಹಾಗಾಗಿ ಲೆಕ್ಕದಲ್ಲಿ ತೋರಿಸಿರುವುದಿಲ್ಲ.ಹಣಕಾಸು ಅಂಶಗಳಿಗೆ ಸಂಬಂಧಿಸಿದ ಪ್ರಕಟಣೆಗಳನ್ನು ಹಣಕಾಸು ತಃಖ್ತೆಗಳ ಟಿಪ್ಪಣಿ 41ರಲ್ಲಿ ಒದಗಿಸಲಾಗಿದೆ.
10.	ಭಾರತೀಯ ಲೇಖಾ ಪ್ರಮಾಣ (ಇಂಡ್ ಎಎಸ್) 20 – ಸರ್ಕಾರದ ಅನುದಾನಗಳುಬಂಡವಾಳ ಕಾಮಗಾರಿಗಳಿಗೆಂದು ಸರ್ಕಾರದಿಂದ ಮತ್ತು ಇತರ ಪ್ರಾಧಿಕಾರಗಳಿಂದ ಪಡೆಯಲಾದ ಅನುದಾನಗಳು/ಸಹಾಯಧನಗಳು ಮತ್ತು ಬಂಡವಾಳ ಕಾಮಗಾರಿಗಳಿಗೆಂದು ಗ್ರಾಹಕರಿಂದ ಸ್ವೀಕರಿಸಲಾದ ಕೊಡುಗೆಗಳನ್ನು ಪ್ರಾರಂಭಿಕವಾಗಿ ಮುಂದೂಡಲಾದ ಆದಾಯ	ಹಣಕಾಸು ತಃಖ್ತೆಗಳ ಟಿಪ್ಪಣಿ 2ರ ಕಲಮು 2.7ರ ಅನ್ವಯ ಅಗತ್ಯ ಪ್ರಕಟಣೆಗಳನ್ನು ಮಾಡಲಾಗಿದೆ.

ಕ್ರ.ಸಂ.	ಲೆಕ್ಕಪರಿಶೋಧಕರ ಪರಿಶೀಲನೆ	ಆಡಳಿತ ಮಂಡಳಿಯ ಉತ್ತರ
7.	**ಇಂಡ್ ಎಎಸ್ 113 – ನ್ಯಾಯಯುತ ಮೌಲ್ಯದ ಲೆಕ್ಕಾಚಾರ ಮತ್ತು ಇಂಡ್ ಎಎಸ್ 109 – ಹಣಕಾಸು ಸಾಧನಗಳು**	
	ಎಂದು ಪರಿಗಣಿಸಿ ಇಂತಹ ಅನುದಾನಗಳು/ಸಹಾಯಧನವನ್ನು ಯಾವ ಆಸ್ತಿ ವರ್ಗಕ್ಕೆಂದು ಪಡೆಯಲಾಗಿದೆಯೋ ಅದಕ್ಕೆ ವಿಧಿಸಲಾದ ಸವಕಳಿಯನ್ನು ಆಧರಿಸಿ ಆದಾಯವೆಂದು ತೆಗೆದುಕೊಳ್ಳಲಾಗುತ್ತದೆ. ಆದರೆ, ಇಂಡ್ ಎಎಸ್ 20ರ ಪ್ರಕಾರ ಮುಂದೂಡಲಾದ ಆದಾಯದಿಂದ ಲಾಭ ಮತ್ತು ನಷ್ಟದ ತಃಖ್ತೆಗೆ ಬಿಡುಗಡೆ ಮಾಡುವಾಗ ಆಸ್ತಿಯ ಉಪಯುಕ್ತ ಆಯುಷ್ಯದ ವ್ಯವಸ್ಥಿತ ಆಧಾರದ ಮೇಲೆ ಮಾಡಬೇಕಾಗುತ್ತದೆ. ಕಂಪನಿಯು ಪ್ರತಿ ಆಸ್ತಿಗೆ ಪ್ರತಿಯಾಗಿ ಬಂಡವಾಳ ಅನುದಾನವನ್ನು ಪ್ರತ್ಯೇಕಿಸುವ ಸ್ಥಿತಿಯಲ್ಲಿಲ್ಲ. ಇದಕ್ಕನುಗುಣವಾಗಿ, ಮುಂದೂಡಲಾದ ಆದಾಯದಿಂದ ಲಾಭ ಮತ್ತು ನಷ್ಟದ ತಃಖ್ತೆಗೆ ಹೆಚ್ಚಾಗಿ ಅಥವಾ ಕಡಿಮೆಯಾಗಿ ವಿಧಿಸುವುದರ ಪರಿಣಾಮವನ್ನು ತಿಳಿಯಲು ಸಾಧ್ಯವಾಗಿಲ್ಲ. ಜೊತೆಗೆ, ಕಂಪನಿಯು ಮುಂದೂಡಲಾದ ಆದಾಯವನ್ನು ಚಾಲ್ತಿ ಮತ್ತು ಚಾಲ್ತಿಯಲ್ಲದ ಭಾಗಗಳಾಗಿ ಪ್ರತ್ಯೇಕಿಸುವ ಬಗ್ಗೆ ಯಾವುದೇ ಮಾಹಿತಿಯನ್ನು ಹೊಂದಿಲ್ಲ ಮತ್ತು ಹಾಗಾಗಿ ಮುಂದೂಡಲಾದ ಆದಾಯದ ಇಡೀ ಶಿಲ್ಕನ್ನು ಚಾಲ್ತಿಯಲ್ಲದ ಆದಾಯಗಳಲ್ಲಿ ತೋರಿಸಲಾಗಿದೆ. ಇದಕ್ಕನುಗುಣವಾಗಿ ಹಣಕಾಸು ತಃಖ್ತೆಗಳಲ್ಲಿ ಚಾಲ್ತಿ ಮತ್ತು ಚಾಲ್ತಿಯಲ್ಲದ ಭಾಗಗಳಾಗಿ ಪ್ರತ್ಯೇಕಿಸುವಿಕೆಯ ಮೇಲಿನ ಇದರ ಪ್ರಸ್ತುತ ಪರಿಣಾಮವನ್ನು ಕುರಿತು ಅಭಿಪ್ರಾಯ ವ್ಯಕ್ತಪಡಿಸುವುದು ನಮಗೆ ಸಾಧ್ಯವಿರುವುದಿಲ್ಲ.	
11.	ಭಾರತೀಯ ಲೇಖಾ ಪ್ರಮಾಣ (ಇಂಡ್ ಎಎಸ್) 115 – ಗ್ರಾಹಕರೊಂದಿಗೆ ಗುತ್ತಿಗೆಗ್ರಾಹಕರು ಬಂಡವಾಳ ಆಸ್ತಿಗಳಿಗೆ ಮಾಡಿದ ಕೊಡುಗೆಗಳಿಗೆ ಮೇಲ್ವಿಚಾರಣೆ ಶುಲ್ಕಗಳನ್ನು ಕಂಪನಿಯು ವಿಧಿಸಿರುವ ಬಗ್ಗೆ: ಕಂಪನಿಯು ಈ ಬಗೆಯ ಮೇಲ್ವಿಚಾರಣಾ ಶುಲ್ಕಗಳ ಮೇಲಿನ ಆದಾಯವನ್ನು ಕಂಪನಿಯು ಗ್ರಾಹಕರಿಂದ ಪಡೆದ ಅರ್ಜಿಯ ಆಧಾರದ ಮೇಲೆ ಗುರುತಿಸುತ್ತದೆ. ಎಎಸ್ – 115ರ ಅಡಿ ಅಗತ್ಯವಾಗಿರುವಂತೆ ಗ್ರಾಹಕರೊಂದಿಗಿನ ಗುತ್ತಿಗೆಯಿಂದ ನಿಷ್ಪನ್ನವಾದಂತೆ ಸಾಧನೆಯ ತೃಪ್ತಿ ಹೊಣೆಯ ಅವಧಿಯನ್ನು ಕಂಪನಿಯು ನಿರ್ಧರಿಸುವುದಿಲ್ಲ. ಮೇಲಿನ ಪಥಾಂತರದ ಪರಿಣಾಮವನ್ನು ಅಂದಾಜುಮಾಡಲು ಕಂಪನಿಯು ಪ್ರಸ್ತುತವಾದ ಮಾಹಿತಿಯನ್ನು ಹೊಂದಿರುವುದಿಲ್ಲ. ಇದಕ್ಕನುಗುಣವಾಗಿ ಹಣಕಾಸು ತಃಖ್ತೆಯ ಮೇಲಿನ ಪ್ರಸ್ತುತ ಪರಿಣಾಮದ ಮೇಲೆ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ನಮಗೆ ಸಾಧ್ಯವಿರುವುದಿಲ್ಲ.	ಮೇಲ್ವಿಚಾರಣಾ ಶುಲ್ಕಗಳ ರಸೀದಿಯನ್ನು ಸೃಷ್ಟಿಸುವಾಗ ಸೇವೆಯನ್ನು ಒದಗಿಸಿದ ದಿನಾಂಕವನ್ನು ತಿಳಿಯುವುದು ಸಾಧ್ಯವಿರುವುದಿಲ್ಲ. ಕಾಮಗಾರಿಗಳ ಪ್ರಗತಿ ಮತ್ತು ಮುಕ್ತಾಯವು ಗ್ರಾಹಕರು ನೀಡಿರುವ ಗುತ್ತಿಗೆಯನ್ನು ಪೂರ್ಣವಾಗಿ ಅವಲಂಬಿಸಿದ್ದು ಕಂಪನಿಯು ಕಾಮಗಾರಿಯ ಪೂರ್ಣಗೊಳಿಸುವಿಕೆಯ ಅವಧಿಯ ನಿರ್ದಿಷ್ಟತೆಯ ಮೇಲೆ ಯಾವ ನಿಯಂತ್ರಣವನ್ನೂ ಹೊಂದಿರುವುದಿಲ್ಲ. ಹಾಗಾಗಿ, ಇದನ್ನೇ ರಸೀದಿಯ ಮೂಲ ಆದಾಯವಾಗಿ ತೆಗೆದುಕೊಳ್ಳಲಾಗುತ್ತದೆ.

ಕ್ರ.ಸಂ.	ಲೆಕ್ಕಪರಿಶೋಧಕರ ಪರಿಶೀಲನೆ	ಆಡಳಿತ ಮಂಡಳಿಯ ಉತ್ತರ
7.	**ಇಂಡ್ ಎಎಸ್ 113 – ನ್ಯಾಯಯುತ ಮೌಲ್ಯದ ಲೆಕ್ಕಾಚಾರ ಮತ್ತು ಇಂಡ್ ಎಎಸ್ 109 – ಹಣಕಾಸು ಸಾಧನಗಳು**	
12.	ವರ್ಷದ ಕೊನೆಗೆ ಇದ್ದಂತೆ "ಅಂತರ್ ಘಟಕ ಖಾತೆಗಳು" (ಐಯುಟಿ) ಶೀರ್ಷಿಕೆಯಡಿ "ಇತರ ಚಾಲ್ತಿ ಹೊಣೆಗಳು" ಅಡಿಯಲ್ಲಿ ತೋರಿಸಲಾಗಿರುವ ರೂ. 1504.21 ಲಕ್ಷ (ಜಮಾ) ಮೊತ್ತವು [ಹಿಂದಿನ ವರ್ಷ ರೂ. 685.44 ಲಕ್ಷ (ಖರ್ಚು)] ನಿಧಿ ವರ್ಗಾವಣೆ, ಸಾಮಗ್ರಿ ವರ್ಗಾವಣೆ, ಆಸ್ತಿ ವರ್ಗಾವಣೆ, ವಿಭಾಗಗಳ ಬೇರ್ಪಡಿಸುವಿಕೆಯ ನಮೂದುಗಳು ಮತ್ತು ಇತರ ಸಿಬ್ಬಂದಿ ವರ್ಗಾವಣೆ ಸಂಬಂಧಿತ ನಮೂದುಗಳಿಗೆ ಸಂಬಂಧಿಸಿದ ಹೊಂದಾಣಿಕೆಯಾಗದ ಶಿಲ್ಕುಗಳಾಗಿವೆ. ಈ ಶಿಲ್ಕುಗಳ ಹೊಂದಾಣಿಕೆಯ ಅನುಪಸ್ಥಿತಿಯಲ್ಲಿ ಹಣಕಾಸು ವಿವರಣಾ ತಃಖ್ತೆಗಳ ಮೇಲೆ ಹೊಂದಾಣಿಕೆಯಾಗದ ಐಯುಟಿ ಶಿಲ್ಕುಗಳ ಪರಿಣಾಮವನ್ನು ತಿಳಿಯಲಾಗಿಲ್ಲ.	ಅಂತರ್ ಘಟಕ ಖಾತೆಗಳ ವಹಿವಾಟುಗಳ ಹೊಂದಾಣಿಕೆ ಪ್ರಗತಿಯಲ್ಲಿದೆ. ಆದರೆ, ಸಂಪೂರ್ಣವಾಗಿ ವ್ಯತ್ಯಾಸವನ್ನು ಹೊಂದಿಸುವುದು ಸಾಧ್ಯವಾಗಿಲ್ಲ. ಐಯುಎ ಯಲ್ಲಿನ ಕೆಲವು ವ್ಯತ್ಯಾಸಗಳು ಎಸ್ಕಾಂಗಳ ರಚನೆಯ ಪೂರ್ವದಲ್ಲಿ ಪ್ರಾರಂಭಿಸಿ ಕಂಪನಿಯ ರಚನೆಯ ನಂತರ ಮುಕ್ತಾಯಗೊಳಿಸಲಾದ ವಹಿವಾಟುಗಳ ಕಾರಣದಿಂದ ಆಗಿರುತ್ತದೆ. ವಿವರಗಳನ್ನು ಪತ್ತೆಮಾಡಲು ಮತ್ತು ಐಯುಎ ಯಲ್ಲಿನ ವ್ಯತ್ಯಾಸಗಳನ್ನು ಹೊಂದಿಸಲು ಪ್ರಯತ್ನಗಳು ಸಾಗಿವೆ.
13.	ಎಲ್‌ಟಿ ಗ್ರಾಹಕರ ಪ್ರಕರಣದಲ್ಲಿ ವರ್ಷದ ಕೊನೆಯ ಹೊತ್ತಿಗೆ ಬಾಕಿ ಇರುವ ವಿದ್ಯುತ್ ಮಾರಾಟಕ್ಕಾಗಿನ ವಿವಿಧ ಗ್ರಾಹಕರ ಶಿಲ್ಕಿನ ಮೇಲೆ 4% ದಂತೆ (ಇಎಸ್‌ಎಎರ್, 1985ರ ಅನುಬಂಧ 5, ಕಂಡಿಕೆ 4.2ರ ಪ್ರಕಾರ) ವಸೂಲಾಗದ ಮತ್ತು ಸಂಶಯಾಸ್ಪದ ಸಾಲಗಳಿಗಾಗಿನ ಹವಣಿಕೆಯನ್ನು ಕಂಪನಿ ಮಾಡುತ್ತದೆ. ಕಂಪನಿಯು 31.07.2008ಕ್ಕೆ ಪೂರ್ವದ ಅವಧಿಗೆ ಸಂಬಂಧಿಸಿದ, ಕರ್ನಾಟಕ ಸರ್ಕಾರದಿಂದ ವಸೂಲಾಗದ (ಸಹಾಯಧನ ಕಾಲಾವಧಿಯ ಪೂರ್ವದ ಬಾಬ್ತನ್ನು ಅಂತಿಮ ಗ್ರಾಹಕರಿಂದ ಸಂಗ್ರಹಿಸಬೇಕಾದುದು) ರೂ. 70628.96 ಲಕ್ಷ ಮೊತ್ತದ ಹಳೆಯ ವಸೂಲಾಗಬೇಕಿರುವ ಬಾಕಿಗಳನ್ನು (ಎಲ್‌ಟಿ ವರ್ಗದಡಿ) ಐಪಿ ಸೆಟ್ ಅನುಷ್ಠಾನಗಳಿಂದ – ಹವಣಿಸಲಾದ ಬಡ್ಡಿಯೂ ಸೇರಿ – ಉಳಿಸಿಕೊಂಡಿದೆ. ಕಂಪನಿಯು ಈ ಬಾಕಿಗಳ ಮೇಲೆ 10% ದಂತೆ ಹವಣಿಕೆಯನ್ನು ಮಾಡಿದ್ದು ಇಡೀ ಬಾಕಿಗಳು ಸಂಶಯಾಸ್ಪದವಾಗಿರುವ ಕಾರಣ ಈ ಹವಣಿಕೆಯು ಪರ್ಯಾಪ್ತವಾಗಿ ಕಂಡುಬರುವುದಿಲ್ಲ. ಸಂತುಲನ ಪಟ್ಟಿಯ ದಿನಾಂಕದಂದು ಇದ್ದಂತೆ, ಬಾಕಿಗಳ ಪೈಕಿ ಹವಣಿಸದ ಭಾಗ ರೂ. 43868.56 ಲಕ್ಷ ಆಗಿತ್ತು. ಇದಕ್ಕನುಗುಣವಾಗಿ, ಪೂರ್ಣವಾದ ಹವಣಿಕೆಯನ್ನು ಮಾಡಿದ್ದರೆ ಲಾಭ ಮತ್ತು ನಷ್ಟದ ತಃಖ್ತೆಯ ಅಡಿಯ ಲಾಭ ರೂ. 43868.56 ಲಕ್ಷದಷ್ಟು ಕಡಿಮೆ ಇರುತ್ತಿತ್ತು ಮತ್ತು ಇತರ ಹಣಕಾಸು ಆಸ್ತಿಗಳ ಶಿಲ್ಕು ಅದೇ ಮಟ್ಟಿಗೆ ಕಡಿಮೆ ಇರುತ್ತಿತ್ತು.	ಒಟ್ಟು ರೂ. 1438.61ಕೋಟಿ ಮೊತ್ತದ ಬಾಕಿಗಳಲ್ಲಿ ಬೀದಿ ದೀಪ ಅನುಷ್ಠಾನಗಳಿಗೆ ಸಂಬಂಧಿಸಿದಂತೆ ಪ್ರಧಾನವಾದ ಪಾಲು ಸೇರಿದ್ದು ಇದು ಸರ್ಕಾರಿ ಇಲಾಖೆಗಳಿಂದ ಬಾಕಿ ಇದೆ ಹಾಗೂ ವಸೂಲಾಗುವುದೆಂದು ಪರಿಗಣಿತವಾಗಿದೆ.ಐಪಿ ಸೆಟ್ ಸ್ಥಾವರಗಳು, ಬಿಜೆ/ಕೆಜೆ, ಬೀದಿ ದೀಪ ಮತ್ತು ನೀರು ಪೂರೈಕೆ ಸ್ಥಾವರಗಳಿಗೆ ಸಂಬಂಧಿಸಿದಂತೆ ರೂ. 1013.60 ಕೋಟಿ ಮೊತ್ತ ಬಾಕಿ ಇದೆ. ಮೇಲಿನ ಬಾಕಿಗಳು ಕಂಪನಿಯ ಬಳಿ ಇರುವ ಗ್ರಾಹಕ ಭದ್ರತಾ ಠೇವಣಿಗಳ ರೂಪದಲ್ಲಿ ರೂ. 531.79 ಕೋಟಿ ಮೊತ್ತದವರೆಗೆ ಸಂಪೂರ್ಣವಾಗಿ ಭದ್ರತೆ ಹೊಂದಿರುವ ಅಂಶವನ್ನು ಗಮನಿಸಬೇಕು. ಮೇಲಿನದಲ್ಲದೆ ಜೆಸ್ಕಾಂ ವಸೂಲಾಗದ ಮತ್ತು ಸಂಶಯಾಸ್ಪದ ಬಾಕಿಗಳಿಗೆಂದು ರೂ. 423.75 ಕೋಟಿ ಮೊತ್ತವನ್ನು ಹವಣಿಸಿದೆ. ಇದರಲ್ಲಿ ಐಪಿ ಸೆಟ್ ಬಾಕಿಗಳಿಗೆ ಸಂಬಂಧಿಸಿದ ರೂ. 267.60 ಕೋಟಿ ಸೇರಿದ್ದು ಇದಕ್ಕಾಗಿ ಹಣಕಾಸು ವರ್ಷ 2016 ಮತ್ತು ಆನಂತರದಿಂದ ಜಾರಿಗೆ ಬರುವಂತೆ ಪ್ರತಿ ವರ್ಷ 10%ಕ್ಕೆ ಬದ್ಧವಾಗಿ ಹವಣಿಕೆಯನ್ನು 100% ದಷ್ಟು ಹೆಚ್ಚಿಸಲಾಗಿದೆ.ಒಟ್ಟು ಬಾಕಿಗಳಲ್ಲಿ ಕರ್ನಾಟಕ ಸರ್ಕಾರದ ಇಲಾಖೆಗಳಿಂದ ಬರಬೇಕಿರುವ ಬಾಕಿಗಳನ್ನು ಪರಿಗಣಿಸಿದರೆ ಕಂಪನಿ ಮಾಡಿರುವ ಹವಣಿಕೆಗಳು ಪರ್ಯಾಪ್ತವಾಗಿವೆ.

ಕ್ರ.ಸಂ.	ಲೆಕ್ಕಪರಿಶೋಧಕರ ಪರಿಶೀಲನೆ	ಆಡಳಿತ ಮಂಡಳಿಯ ಉತ್ತರ
7.	**ಇಂಡ್ ಎಎಸ್ 113 – ನ್ಯಾಯಯುತ ಮೌಲ್ಯದ ಲೆಕ್ಕಾಚಾರ ಮತ್ತು ಇಂಡ್ ಎಎಸ್ 109 – ಹಣಕಾಸು ಸಾಧನಗಳು**	
14.	ಶಿಲ್ಕುಗಳ ಸ್ಥಿರೀಕರಣ/ಹೊಂದಾಣಿಕೆ: ಕಂಪನಿಯು ಕೆಪಿಟಿಸಿಎಲ್, ಕೆಪಿಸಿಎಲ್ ಮತ್ತು ಇತರ ಎಸ್ಕಾಂಗಳು, ಇತರ ವಸೂಲಾಗಬೇಕಾಗಿರುವುದು, ಇತರ ಸಾಲಗಾರರು, ಮುಂಗಡಗಳಿಗೆ/ಗಳಿಂದ ಸರಬರಾಜುದಾರರು/ಗುತ್ತಿಗೆದಾರರು/ಸರ್ಕಾರದ ಪ್ರಾಧಿಕಾರಗಳು/ಗ್ರಾಹಕರು/ನೌಕರರಿಗೆ/ರಿಂದ ಠೇವಣಿಗಳು, ಸಾಲಗಳು ಮತ್ತು ವಿವಿಧ ಪಕ್ಷಗಳಿಂದ ಉತರ ಸ್ವೀಕೃತಿಗಳಿಗೆ ಸಂಬಂಧಿಸಿದಂತೆ ಶಿಲ್ಕುಗಳ ಸ್ಥಿರೀಕರಣ ಮತ್ತು ಹೊಂದಾಣಿಕೆಯನ್ನು ಪಡೆದುಕೊಳ್ಳುವ ಪ್ರಕ್ರಿಯೆಯನ್ನು ಹೊಂದಿರುವುದಿಲ್ಲ. ಹಳೆಯ ಬಾಕಿಗಳ ಹೊಂದಾಣಿಕೆ ಮತ್ತು ಇತ್ಯರ್ಥದಿಂದಾಗುವ ಹೊಂದಾಣಿಕೆ ಮತ್ತು ಇಂತಹ ಬಾಕಿಗಳ ವಸೂಲಾಗದಿರುವಿಕೆ ಅಥವಾ ಭಾಗಶಃ ವಸೂಲಾಗುವಿಕೆಯಿಂದ ಉದ್ಭವಿಸಬಹುದಾದ ನಷ್ಟದ ಪರಿಣಾಮವನ್ನು ತಿಳಿಯಲು ಸಾಧ್ಯವಾಗಿಲ್ಲ. ಇದಕ್ಕನುಗುಣವಾಗಿ ಈ ಬಗೆಯ ಹವಣಿಕೆಯು ಲಾಭ ಮತ್ತು ನಷ್ಟದ ತಃಖ್ತೆಯ ಮೇಲೆ ಬೀರಬಹುದಾದ ಪರಿಣಾಮವನ್ನು ಕುರಿತು ಅಭಿಪ್ರಾಯ ವ್ಯಕ್ತಪಡಿಸವುದು ನಮಗೆ ಸಾಧ್ಯವಿರುವುದಿಲ್ಲ.	ಕಂಪನಿಯು ಸುಮಾರು 30 ಲಕ್ಷ ಗ್ರಾಹಕರಿಗೆ ಸೇವೆಗಳನ್ನು ಒದಗಿಸುತ್ತಿದೆ ಮತ್ತು ಗಣನೀಯ ಸಂಖ್ಯೆಯ ಸಣ್ಣ ಮತ್ತು ದೊಡ್ಡ ಗುತ್ತಿಗೆದಾರರು ವಿವಿಧ ಬಗೆಯ ಕಾಮಗಾರಿಗಳನ್ನು ಕೈಗೊಳ್ಳುತ್ತಾರೆ ಹಾಗೂ ಇವರುಗಳಿಂದ ಶಿಲ್ಕಿನ ಸ್ಥಿರೀಕರಣವನ್ನು ಪಡೆದುಕೊಳ್ಳವುದು ವಿಪರೀತ ಕಷ್ಟಸಾಧ್ಯವಾದ ಕಾರ್ಯವಾಗಿದೆ. ಯಾವುದೇ ವ್ಯಾಜ್ಯಗಳಿಲ್ಲದೆ ಗ್ರಾಹಕರಿಂದ ಪಾವತಿಗಳನ್ನು ಪಡೆಯುತ್ತಿರುವುದು ಅಥವಾ ಪಾವತಿಗಳ ಸ್ವೀಕಾರವನ್ನು ಸೈರೀಕರಣವೆಂದು ಪರಿಗಣಿಸಲಾಗಿದೆ. ಎಲ್ಲ ವಿದ್ಯುತ್ ಉತ್ಪಾದಕರಿಂದ ಸ್ಥಿರೀಕರಣವನ್ನು ಪಡೆಯುವ ಪ್ರಯತ್ನ ಇರುವುದಾದರೂ ಎಲ್ಲ ವಿದ್ಯುತ್ ಉತ್ಪಾದಕರೂ ಶಿಲ್ಕುಗಳನ್ನು ಸ್ಥಿರೀಕರಿಸುವುದಿಲ್ಲ. ಆದರೆ, ಹಣಕಾಸು ತಃಖ್ತೆಗಳ ಟಿಪ್ಪಣಿ 52ರ ಮೂಲಕ ಅಗತ್ಯ ಪ್ರಕಟಣೆಗಳನ್ನು ಮಾಡಲಾಗಿದೆ.
15.	ಸಾಮಗ್ರಿ ದರ ವ್ಯತ್ಯಾಸ: ಲೆಕ್ಕ ನೀತಿಗಳ ಟಿಪ್ಪಣಿ ಸಂಖ್ಯೆ 2.20ರಲ್ಲಿ ವಿವರಿಸಲಾಗಿರುವಂತೆ ಸಾಮಗ್ರಿ ದರ ವ್ಯತ್ಯಾಸವನ್ನು ಲಾಭ ಮತ್ತು ನಷ್ಟದ ತಃಖ್ತೆಗೆ ಖರ್ಚುಹಾಕುವ ಬದಲಿಗೆ ಮುಡಿಪುಗಳು ಮತ್ತು ಹೆಚ್ಚಳಕ್ಕೆ ಹೊಂದಿಸಲಾಗುತ್ತಿದ್ದು ಇದು ಸಾಮಾನ್ಯವಾಗಿ ಒಪ್ಪಿತವಾದ ಲೇಖಾ ಸಿದ್ಧಾಂತಗಳಿಗೆ ಅನುಗುಣವಾಗಿರುವುದಿಲ್ಲ.	ಕಂಪನಿಯು ನೀತಿಯು ವಿದ್ಯುಚ್ಛಕ್ತಿ (ಸರಬರಾಜು) (ವಾರ್ಷಿಕ ಲೆಕ್ಕಪತ್ರಗಳು) ನಿಯಮಗಳು, 1985ರಲ್ಲಿ ಹೇಳಲಾಗಿರುವ ವಾಣಿಜ್ಯ ಲೆಕ್ಕ ವ್ಯವಸ್ಥೆಗೆ ಅನುಗುಣವಾಗಿ ಇದೆ. ಸಾಮಗ್ರಿ ದರ ವ್ಯತ್ಯಾಸವನ್ನು ಪ್ರತಿ ಹಣಕಾಸು ವರ್ಷದ ಕೊನೆಯ ಹೊತ್ತಿಗೆ ಮುಡಿಪುಗಳು ಮತ್ತು ಹೆಚ್ಚಳಕ್ಕೆ ಹೊಂದಿಸಲಾಗುತ್ತದೆ. ಮಹತ್ವದ ಲೇಖಾ ಕಾರ್ಯನೀತಿ 2.20ರಲ್ಲೂ ಸಹ ಇದನ್ನು ಪ್ರಕಟಿಸಲಾಗಿದೆ.
16.	ಇತರ ಚಾಲ್ತಿಯಲ್ಲದ ಹಣಕಾಸು ಹೊಣೆಗಳಲ್ಲಿ ಗ್ರಾಹಕರಿಗೆಂದು ಕರ್ನಾಟಕ ಸರ್ಕಾರವು ಮಾಡಿದ ರೂ. 596.95 ಲಕ್ಷ ಮೊತ್ತದ ಹವಣಿಕೆ, ಕರ್ನಾಟಕ ಸರ್ಕಾರ ಎಸ್ಎಂಐಓಆರ್ಇಗೆ ಸಂಬಂಧಿಸಿದಂತೆ ನೀಡಿದ ಬಿ.ಆರ್.ಪಿ 2 ಹೊಂದಾಣಿಕೆಯಾದ ರೂ. 1293.06 ಲಕ್ಷ ಮತ್ತು ಕರ್ನಾಟಕ ಸರ್ಕಾರಕ್ಕೆ ಇತರ ಪಾವತಿಗಳಾದ ರೂ. 335.28 ಲಕ್ಷ ಸೇರುತ್ತದೆ. ಈ ಶಿಲ್ಕುಗಳು ಬಹಳ ವರ್ಷಗಳಿಂದ ಬಾಕಿ ಇದ್ದು ಕಂಪೆನಿಗೆ ಇವುಗಳ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಇದಕ್ಕನುಗುಣವಾಗಿ, ಈ ಶಿಲ್ಕುಗಳ ಅಡಿಯಲ್ಲಿ	ನಾವು ಈ ಶಿಲ್ಕುಗಳನ್ನು ಕಂಪನಿಯ ಪ್ರಾರಂಭಿಕ ಶಿಲ್ಕುಗಳಲ್ಲಿ ಪಡೆದಿರುತ್ತೇವೆ. ಇವು 31.5.2000ರಂದು ಇದ್ದಂತೆ ಬಾಕಿ ಇದ್ದ ವಿವಿಧ ವಸೂಲಾಗಬೇಕಿರುವ ಮೊತ್ತಕ್ಕೆ ಪ್ರತಿಯಾಗಿ ಇದ್ದು ಇವಕ್ಕೆ ಕರ್ನಾಟಕ ಸರ್ಕಾರವು 100% ಹವಣಿಕೆಯನ್ನು ಮಾಡಿ ಗ್ರಾಹಕರ ಬಾಕಿಗಳಿಗೆ ಪ್ರತಿಯಾಗಿ ಅವರು ಪಾವತಿಸಿದ ತರುವಾಯದಲ್ಲಿ ಹೊಂದಾಣಿಕೆಗಾಗಿ ಕಂಪನಿಗೆ ವರ್ಗಾಯಿಸಿತು.

ಕ್ರ.ಸಂ.	ಲೆಕ್ಕಪರಿಶೋಧಕರ ಪರಿಶೀಲನೆ	ಆಡಳಿತ ಮಂಡಳಿಯ ಉತ್ತರ
7.	**ಇಂಡ್ ಎಎಸ್ 113 – ನ್ಯಾಯಯುತ ಮೌಲ್ಯದ ಲೆಕ್ಕಾಚಾರ ಮತ್ತು ಇಂಡ್ ಎಎಸ್ 109 – ಹಣಕಾಸು ಸಾಧನಗಳು**	
ಮಾಡಬೇಕಿರುವ ಯಾವುದೇ ಮರುಬರಹ ಅಥವಾ ಯಾವದೇ ಹವಣಿಕೆಯ ಬಗ್ಗೆ ಮತ್ತು ಹಣಕಾಸು ತಃಖ್ತೆಯ ಮೇಲಿನ ಅದರ ಪರಿಣಾಮದ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವುದು ನಮಗೆ ಸಾಧ್ಯವಿರುವುದಿಲ್ಲ.		
17.	ಇತರ ಚಾಲ್ತಿಯಲ್ಲದ ಹೊಣೆಗಳಲ್ಲಿ 31 ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷಕ್ಕೆ ರೂ. 75.86 ಲಕ್ಷದಷ್ಟು ಋಣಾತ್ಮಕ ಮೊತ್ತದ ಠೇವಣಿ ಕೊಡುಗೆ ಕಾಮಗಾರಿ ಸೇರಿದೆ. ಈ ಮೊತ್ತವು ಋಣಾತ್ಮಕವಾಗಲು ಕಾರಣವೇನೆಂಬ ಬಗ್ಗೆ ಕಂಪೆನಿಯು ಮಾಹಿತಿಯನ್ನು ಹೊಂದಿಲ್ಲ ಮತ್ತು ಇದಕ್ಕನುಗುಣವಾಗಿ ಹಣಕಾಸು ತಃಖ್ತೆಯ ಮೇಲಿನ ಇದರ ಪ್ರಸ್ತುತ ಪರಿಣಾಮವನ್ನು ಕುರಿತು ಅಭಿಪ್ರಾಯವನ್ನು ವ್ಯಕ್ತಪಡಿಸುವುದು ನಮಗೆ ಸಾಧ್ಯವಿರುವುದಿಲ್ಲ.	ಬರ/ಪ್ರವಾಹ ಮೊದಲಾದ ಸಂದರ್ಭಗಳಲ್ಲಿ ಸರ್ಕಾರದ ನಿರ್ದೇಶನಗಳ ಮೇರೆಗೆ ಜೆಸ್ಕಾಂ ನೀರು ಸರಬರಾಜು ಸ್ಥಾವರ ವಿದ್ಯುತ ಪೂರೈಕೆ ಮೂಲಸೌಕರ್ಯ ಸೃಷ್ಟಿ ಮುಂತಾದ ಸಾವಾಜಿಕ ಹೊಣೆಯ ಹಲವು ಕಾಮಗಾರಿಗಳನ್ನು ಕೈಗೊಳ್ಳುತ್ತದೆ. ಸದರಿ ಹಣವು ಈ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಸ್ಥಳೀಯ ಸಂಸ್ಥೆಗಳಿಂದ ಬಾಕಿ ಇರುವ ಮೊತ್ತಗಳಾಗಿವೆ. ಸಂಬಂಧಿತ ಠೇವಣಿಗಳಿಲ್ಲದೆ ಈ ಖಾತೆಗಳಡಿಯಲ್ಲಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತದೆ ಮತ್ತು ಹಾಗಾಗಿ ಈ ಖಾತೆಗಳು ಋಣಾತ್ಮಕ ಶಿಲ್ಕನ್ನು ಸೂಚಿಸುತ್ತವೆ.
18.	"ಇತರ ಖರ್ಚುಗಳು" ಅಡಿ ವಿಂಗಡಿಸಿರುವ ಕೆಳಗಿನ ಖರ್ಚುಗಳ ಲೆಕ್ಕ ಶೀರ್ಷಿಕೆಗಳು ಋಣಾತ್ಮಕ ಶೀಲ್ಕುಗಳನ್ನು ತೋರಿಸುತ್ತಿವೆ. ಇವುಗಳಿಗೆ ತೃಪ್ತಿಕರವಾದ ಕಾರಣಗಳನ್ನು ಒದಗಿಸಿರುವುದಿಲ್ಲ. ಈ ಮೊತ್ತಗಳನ್ನು ಆದಾಯ ಲೆಕ್ಕ ಶೀರ್ಷಿಕೆಗಳ ಅಡಿ ವಿಮಗಡಿಸಬೇಕಿತ್ತು: 1. ಸಾಗಣೆ ಮತ್ತು ಇತರ ಸಾಮಗ್ರಿ ಸಂಬಂಧಿತ ಖರ್ಚುಗಳು – ರೂ. 376.26 ಲಕ್ಷ (ಹಿಂದಿನ ವರ್ಷ – 83.42 ಲಕ್ಷ)2. ಇತರೆ ನಷ್ಟಗಳು – ರೂ. 516.29 ಲಕ್ಷ (ಹಿಂದಿನ ವರ್ಷ – ಅನ್ವಯವಾಗುವುದಿಲ್ಲ)	ಈ ಲೆಕ್ಕಗಳಡಿಯ ಹಿಂದಿನ ವರ್ಷದ ಹೆಚ್ಚುವರಿ ಹವಣಿಕೆಗಳನ್ನು ವ್ಯತಿರಿಕ್ತಗೊಳಿಸಿರುವುದು ಈ ಖಾತೆಗಳಲ್ಲಿನ ಋಣಾತ್ಮಕ ಶಿಲ್ಕುಗಳಿಗೆ ಕಾರಣವಾಗಿವೆ. ಹಿಂದಿನ ವರ್ಷಗಳಲ್ಲಿ ಮಾಡಲಾದ ಹವಣಿಕೆಗಳು ವರ್ಷದಲ್ಲಿ ಪಡೆಯಲಾದ ನೈಜ ದರಪಟ್ಟಿಗಳಿಗಿಂತಲೂ ಹೆಚ್ಚಿದ್ದಲ್ಲಿ ಇಂತಹ ವ್ಯವಹಾರಗಳನ್ನು ಆದಾಯವೆಂದು ಮರುವಿಂಗಡಿಸಲು ಸೂಚನೆಗಳನ್ನು ನೀಡಲಾಗುವುದು.
19.	2011 ರಿಂದ 2018ರ ಅವಧಿಗೆ ಸಂಬಂಧಿಸಿದಂತೆ ವಿದ್ಯುತ್ ಉತ್ಪಾದಕರು ಹಕ್ಕುಸಲ್ಲಿಸಿದ ರೂ. 467.69 ಲಕ್ಷ ಮೊತ್ತದ ಬಡ್ಡಿಗೆ ಕಂಪನಿಯು ಹವಣಿಕೆಯನ್ನು ಮಾಡಿರುವುದಿಲ್ಲ ಮತ್ತು ಈ ಸಂಬಂಧ ಒದಗಿಸಲಾದ ಉತ್ತರಗಳು ತೃಪ್ತಿದಾಯಕವಾಗಿರುವುದಿಲ್ಲ.	ಕಂಪನಿಯು ಬಡ್ಡಿ ಲೆಕ್ಕಾಚಾರವನ್ನು ಒಪ್ಪದಿರುವ ಹಿನ್ನೆಲೆಯಲ್ಲಿ ಬಡ್ಡಿ ಹಕ್ಕುಸಲ್ಲಿಕೆಗಳ ಸಾಕ್ಷಾತ್ಕಾರದ ಅನುಪಸ್ಥಿತಿಯಲ್ಲಿ ಹಕ್ಕುಸಲ್ಲಿಕೆಗಳನ್ನು ಪರಿಶೀಲನೆಯಲ್ಲಿರುವ ವರ್ಷದ ಲೆಕ್ಕಪತ್ರಗಳಲ್ಲಿ ಸೇರಿಸಿರುವುದಿಲ್ಲ.
20.	3 ವರ್ಷಗಳಿಗೂ ಹೆಚ್ಚು ಅವಧಿಗೆ ಬ್ಯಾಂಕ್ ತಃಖ್ತೆಯಲ್ಲಿ ಗುರುತಿಸಲಾಗದ ಜಮೆಗಳಾಗಿ ಉಳಿದ ಬಾಬ್ತುಗಳಿಗಾಗಿ ಕಂಪನಿಯು ರೂ. 618.36 ಲಕ್ಷ ಮೊತ್ತವನ್ನು ಹಿಂದಕ್ಕೆ ಬರೆದಿದೆ. ಈ ಕ್ರಮವು ಇಂತಹ ಜಮಾ ನಮೂದುಗಳ	ಕಾರ್ಯನೀತಿಯ ಪ್ರಕಾರ 3 ವರ್ಷಗಳಿಗೂ ಹೆಚ್ಚು ಕಾಲ ಹೊಣೆಗಳ ಖಾತೆಗಳಲ್ಲಿ ಉಳಿದ ಮೊತ್ತಗಳನ್ನು ಸಂತುಲನ ಪಟ್ಟಿಯ ದಿನಂಕದಂದು ಇದ್ದಂತೆ ತಾಕ್ಷಣಿಕವಾಗಿ ಹಿಂದಕ್ಕೆ ಬರೆಯಲಾಗುತ್ತದೆ ಮತ್ತು ಈ ಹೊಣೆಗಳನ್ನು ಮುಂದುವರೆಸಲು ಹಾಗೂ ಅದಕ್ಕೆ ಕಾರಣಗಳನ್ನು ಒದಗಿಸಲು ವೈಯಕ್ತಿಕ

ಕ್ರ.ಸಂ.	ಲೆಕ್ಕಪರಿಶೋಧಕರ ಪರಿಶೀಲನೆ	ಆಡಳಿತ ಮಂಡಳಿಯ ಉತ್ತರ
7.	**ಇಂಡ್ ಎಎಸ್ 113 – ನ್ಯಾಯಯುತ ಮೌಲ್ಯದ ಲೆಕ್ಕಾಚಾರ ಮತ್ತು ಇಂಡ್ ಎಎಸ್ 109 – ಹಣಕಾಸು ಸಾಧನಗಳು**	
ವೈಯಕ್ತಿಕ	ಆಯುಷ್ಯ ಹೆಚ್ಚಾಗುವಿಕೆಯನ್ನು ಆಧರಿಸಿಲ್ಲ ಮತ್ತು ಹಾಗಾಗಿ ಈ ಪ್ರಕ್ರಿಯೆಯ ಸೂಕ್ತತೆಯ ಬಗ್ಗೆ ನಾವು ಅಭಿಪ್ರಾಯ ವ್ಯಕ್ತಪಡಿಸುವುದು ಸಾಧ್ಯವಿರುವುದಿಲ್ಲ.	ವ್ಯವಹಾರಗಳನ್ನು ಪರೀಕ್ಷಿಸಲು ಘಟಕಗಳಿಗೆ ಸೂಚನೆ ನೀಡಲಾಗುತ್ತದೆ. ಅಂತಹ ವ್ಯವಹಾರಗಳನ್ನು ಘಟಕಗಳು ಪರಿಶೀಲಿಸಿ ಮುಂದಿನ ವರ್ಷದಲ್ಲಿ ಹಿಂದಕ್ಕೆ ಬರೆಯುತ್ತವೆ ಮತ್ತು ಈ ಪರಿಣಾಮವನ್ನು ನಗಣ್ಯವಾಗಿಸಲು ಕಾರ್ಪೊರೇಟ್ ಕಛೇರಿಯಲ್ಲಿ ತಾಕ್ಷಣಿಕ ನಮೂದನ್ನು ಮಾಡಲಾಗುತ್ತದೆ.
21.	ಭಾರತೀಯ ಲೇಖಾ ಪ್ರಮಾಣ (ಇಂಡ್ ಎಎಸ್) 33 – ಪ್ರತಿ ಷೇರಿನ ಮೇಲೆ ಗಳಿಕೆಎಲ್ಲ ಪಥಾಂತರಗಳು/ ಪರಿಶೀಲನೆಗಳ ಕಾರಣ ವರ್ಷದ ಲಾಭ, ಆದಾಯದ ಮೇಲಿನ ತೆರಿಗೆ, ನಿವ್ವಳ ಆದಾಯ ಮತ್ತು ಷೇರುದಾರರ ನಿಧಿಗಳು ಹಾಗೂ ವರ್ಷದ ನಗದು ಪ್ರವಹನ ತಃಖ್ತೆಯ ಮೇಲಿನ ಸಂಚಿತ ಪ್ರಭಾವವನ್ನು ತಿಳಿಯಲು ಸಾಧ್ಯವಾಗಿಲ್ಲ. ಜೊತೆಗೆ, ಇಂಡ್ ಎಎಸ್ – 33 ರ ಪ್ರಕಾರ ಅಗತ್ಯವಾಗಿರುವಂತೆ ಪ್ರತಿ ಷೇರಿನ ಮೇಲೆ ಗಳಿಕೆ ಮತ್ತು ಪ್ರಕಟಣೆಗಳ ಮೇಲಿನ ಪರಿಣಾಮವನ್ನು ತಿಳಿಯಲಾಗಿಲ್ಲ.	ವಾಸ್ತವಿಕ
22.	**ಕಂಪನಿ ಕಾಯ್ದೆ 2013ರ ಅನುಸೂಚಿ IIIರ ಅಗತ್ಯಗಳನ್ನು ಅನುಸರಿಸದಿರುವುದು**	
ಎ.	ಕಂಪನಿ ಕಾಯ್ದೆ 2013ರ ಅನುಸೂಚಿ III ರಂತೆ ಸ್ವೀಕಾರವಾಗಬೇಕಿರುವ ಬಾಬ್ತೊಂದನ್ನು ಅದು ವ್ಯಾಪಾರದ ಸಾಧಾರಣ ನಡೆಯಲ್ಲಿ ಮಾರಲಾದ ಸರಕುಗಳು ಅಥವಾ ಸಲ್ಲಿಸಲಾದ ಸೇವೆಗಳ ಕಾರಣದಿಂದಾಗಿ ಉಳಿದಿರುವ ಬಾಕಿಗೆ ಸಂಬಂಧಿಸಿದ್ದಾದರೆ ಅದನ್ನು 'ವ್ಯಾಪಾರದಲ್ಲಿ ಬರಬೇಕಾದವು" ಎಂದು ವರ್ಗೀಕರಿಸಬೇಕು. ಆದರೆ, ಐಪಿ ಸೆಟ್‌ಗಳು/ಬಿಜೆಕೆಜೆ ಸ್ಥಾವರಗಳು/ಆರ್‌ಡಿಪಿಆರ್ ಬಾಕಿಗಳ ಗ್ರಾಹಕರ ಪರವಾಗಿ ಸರ್ಕಾರವು ಪಾವತಿಸುವ ವಿದ್ಯುಚ್ಛಕ್ತಿ ಮಾರಾಟಕ್ಕೆ ಸಂಬಂಧಿಸಿದಂತೆ ಸರ್ಕಾರದಿಂದ ಬರಬೇಕಿರುವ ರೂ. 1,39.019.28 ಲಕ್ಷ ಮೊತ್ತವನ್ನು, ಸಂತುಲನ ಪಟ್ಟಿಯ ದಿನಾಂಕದಂದು ಇದ್ದಂತೆ, ಕಂಪನಿಯು "ವ್ಯಾಪಾರದಲ್ಲಿ ಬರಬೇಕಾದವು" ಎಂದು ವರ್ಗೀಕರಿಸುವುದಕ್ಕೆ ಪ್ರತಿಯಾಗಿ "ಇತರ ಹಣಕಾಸು ಆಸ್ತಿಗಳು" ಅಡಿಯಲ್ಲಿ ವರ್ಗೀಕರಿಸಿದೆ. ನಮ್ಮ ಅಭಿಪ್ರಾಯದಲ್ಲಿ ವ್ಯಾಪಾರದಲ್ಲಿ ಬರಬೇಕಾದವನ್ನು ಕಡಿಮೆ ತೋರಿಸಲಾಗಿದೆ ಮತ್ತು ಇತರ ಹಣಕಾಸು ಆಸ್ತಿಗಳನ್ನು ಮೇಲೆ ಹೇಳಿದ ಮೊತ್ತದಷ್ಟು ಹೆಚ್ಚಿಗೆ ತೋರಿಸಲಾಗಿದೆ.	ನೀತಿಯಂತೆ ಬಳಸಲಾದ ವಿದ್ಯುತ್ತಿಗೆ ಕಂಪನಿಯು ಗ್ರಾಹಕರ ಹೆಸರಿಗೆ ಬಿಲ್ಲನ್ನು ಸೃಷ್ಟಿಸುವುದು ಅಗತ್ಯವಾಗಿದೆ ಮತ್ತು ಈ ಮೊತ್ತವನ್ನು ಸರ್ಕಾರದ ಖಾತೆಗೆ ವರ್ಗಾಯಿಸುವ ಮೂಲಕ ಸಂಗ್ರಹ ಎಂದು ಪರಿಗಣಿಸಲಾಗುತ್ತದೆ. ಈ ಸ್ಥಾವರಗಳು ಗ್ರಾಹಕರ ಹೆಸರಿನಲ್ಲಿ ಇದ್ದು ಇವು ಯಾವ ಶಿಲ್ಕನ್ನೂ ತೋರಿಸುವುದಿಲ್ಲ. ಐಪಿ ಸೆಟ್ ಸಹಾಯಧನದ ಉದ್ದೇಶಕ್ಕೆ ಸರಕಾರವು ನಮ್ಮ ನೈಜ ಗ್ರಾಹಕ ಅಲ್ಲ. ಈ ಉದ್ದೇಶಕ್ಕಾಗಿ ಎಲ್ಲ ಖರ್ಚು ಖಾತೆಗಳನ್ನೂ ವ್ಯಾಪಾರದಲ್ಲಿ ಬರಬೇಕಾದವುಗಳಲ್ಲಿ ತೋರಿಸಲಾಗಿದೆ, ಗ್ರಾಹಕರ ಪರವಾಗಿ ಪಾವತಿಸುವ ಸರ್ಕಾರವನ್ನಲ್ಲ.

ಕ್ರ.ಸಂ.	ಲೆಕ್ಕಪರಿಶೋಧಕರ ಪರಿಶೀಲನೆ	ಆಡಳಿತ ಮಂಡಳಿಯ ಉತ್ತರ
7.	**ಇಂಡ್ ಎಎಸ್ 113 – ನ್ಯಾಯಯುತ ಮೌಲ್ಯದ ಲೆಕ್ಕಾಚಾರ ಮತ್ತು ಇಂಡ್ ಎಎಸ್ 109 – ಹಣಕಾಸು ಸಾಧನಗಳು**	
ಬಿ.	ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಹಂತದ ಉದ್ಯಮಗಳ ಅಭಿವೃದ್ಧಿ ಕಾಯ್ದೆ, 2006ರ ವ್ಯಾಪ್ತಿಗೆ ಬರುವ ಸರಬರಾಜುದಾರರನ್ನು ಗುರುತಿಸಲು ಕಂಪನಿಯು ಅನುಸರಿಸುವ ವಿಧಾನ ಮತ್ತು ಅವುಗಳಿಗೆ ಪಾವತಿಯಲ್ಲಿನ ವಿಳಂಬವನ್ನು ದಾಖಲಿಸಲಾಗಿಲ್ಲ ಮತ್ತು ಇವು ಪರ್ಯಾಪ್ತವಾಗಿ ಕಾಣುವುದಿಲ್ಲ, ಪರಿಶೀಲಿಸಲು ಸಾಧ್ಯವಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಎಂ.ಎಸ್.ಎಂ.ಇ.ಡಿ ಕಾಯ್ದೆ 2006ರ ಅನುಸರಣೆಯ ಮತ್ತು ಕಂಪನಿ ಕಾಯ್ದೆ 2013ರ ಅನುಸೂಚಿ III ರ ಪ್ರಕಾರದ ಪ್ರಕಟಣಾ ಅಗತ್ಯಗಳ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವುದು ಸಾಧ್ಯವಿರುವುದಿಲ್ಲ.	ಕಾಯ್ದೆಯ ಪ್ರಕಾರ ಎಂಎಸ್ಎಇ ಗಾಗಿನ ಬಾಕಿಗಳು ಶೂನ್ಯ ಎಂದು ಖಚಿತಗೊಳಿಸಿಕೊಂಡ ನಂತರವಷ್ಟೇ ಪ್ರಕಟಣೆಯನ್ನು ಮಾಡಲಾಗಿದೆ.
ಸಿ.	ಕಂಪನಿ ಕಾಯ್ದೆ 2013ರ ಅನುಸೂಚಿ III ರ ಪ್ರಕಾರ ನಿಗದಿಪಡಿಸಿರುವಂತೆ ವರ್ಷದ ಕೊನೆಯ ಹೊತ್ತಿಗೆಬಂಡವಾಳ ಮತ್ತು ಇತರ ಬದ್ಧತೆಗಳನ್ನು ಕುರಿತಾದ ಪ್ರಕಟಣೆಯನ್ನು ಪ್ರಸ್ತುತ ದತ್ತಾಂಶದ ಅನುಪಸ್ಥಿತಿಯಲ್ಲಿ ಮಾಡಲಾಗಿಲ್ಲ.	ಈ ಪ್ರಕಟಣೆಗಳಿಗೆ ಅಗತ್ಯವಾದ ದತ್ತಾಂಶಗಳನ್ನು ಸಂಗ್ರಹಿಸಲು ಪ್ರಯತ್ನಗಳನ್ನು ತೊಡಗಿಸಲಾಗುವುದು.
ಡಿ.	ಕಂಪನಿಗಳ (ಭಾರತೀಯ ಲೇಖಾ ಪ್ರಮಾಣಗಳು) ನಿಯಮಗಳು, 2015ರ ಅನುಸರಣೆಯಲ್ಲಿ ಸಿದ್ಧಪಡಿಸಲಾದ ಹಣಕಾಸು ತಃಖ್ತೆಗಳಲ್ಲಿ ಪ್ರಕಟವಾಗುವ ಅಂಕಿ–ಅಂಶಗಳನ್ನು, ವಹಿವಾಟು ಒಂದು ನೂರು ಕೋಟಿಗಿಂತಲೂ ಹೆಚ್ಚಿದ್ದ ಪಕ್ಷದಲ್ಲಿ, ಹತ್ತಿರದ ಲಕ್ಷ, ದಶಲಕ್ಷ ಅಥವಾ ಕೋಟಿಗಳಿಗೆ, ಅಥವಾ ದಶಮಂಶಗಳಿಗೆ ಸರಿಹೊಂದಿಸಲಾಗುತ್ತದೆ. ಆದರೆ, ಕಂಪನಿಯು ಹಣಕಾಸು ತಃಖ್ತೆಗಳನ್ನು ಅಂಕಿ–ಅಂಶಗಳು ರೂಪಾಯಿಯಲ್ಲಿ ಪ್ರಕಟವಾಗುವಂತೆ ಸಿದ್ಧಪಡಿಸಿದೆ.	ವಾಸ್ತವಿಕ
ಇ.	ಕಂಪನಿಯು ಕರ್ನಾಟಕ ಸರ್ಕಾರದಿಂದ ಷೇರು ಅರ್ಜಿ ಹಣವನ್ನು ಪಡೆದಿದ್ದು ಇಂತಹ ಮೊತ್ತಗಳನ್ನು ಹಣವು ಸ್ವೀಕೃತವಾದ 60 ದಿನಗಳ ನಂತರದಲ್ಲಿ ಷೇರುಗಳ ಹಂಚಿಕೆ ಬಾಕಿ ಇರಿಸಿ ಷೇರು ಠೇವಣಿ ಅಡಿಯಲ್ಲಿ ಇರಿಸಲಾಗಿದೆ. ಇದು ಕಂಪನಿ ಕಾಯ್ದೆ 2013ರ ಪರಿಚ್ಛೇದ 42ರ ಉಪಬಂಧಗಳಿಗೆ ಅನುಸಾರವಾಗಿ ಇಲ್ಲ.	ಕಂಪನಿಯು ಷೇರು ಬಂಡವಾಳವನ್ನು ರೂ. 1200 ಕೋಟಿಯಿಂದ ರೂ. 2000 ಕೋಟಿಗೆ ಹೆಚ್ಚಿಸಲು ಷೇರುದಾರರಿಂದ ಅಂಗೀಕಾರವನ್ನು ಪಡೆದುಕೊಂಡಿದೆ. ಆದರೆ, ಅಂಗೀಕಾರ ಪ್ರಕ್ರಿಯೆ ಮತ್ತು ಸ್ಟಾಂಪ್ ಶುಲ್ಕದ ಪಾವತಿ ಮುಂತಾದ ಔಪಚಾರಿಕತೆಗಳನ್ನು ಹಣಕಾಸು ವರ್ಷ 19–20ರಲ್ಲಿ ಪೂರೈಸಬಹುದಾಗಿದೆ. ಹಾಗಾಗಿ, ಷೇರುಗಳ ನೀಡಿಕೆಯನ್ನು ಹಣಕಾಸು ವರ್ಷ 2020ರಲ್ಲಿ ಸಂಸ್ಕರಿಸಲಾಗುತ್ತಿದೆ.

ಕ್ರ.ಸಂ.	ಲೆಕ್ಕಪರಿಶೋಧಕರ ಪರಿಶೀಲನೆ	ಆಡಳಿತ ಮಂಡಳಿಯ ಉತ್ತರ
7.	**ಇಂಡ್ ಎಎಸ್ 113 – ನ್ಯಾಯಯುತ ಮೌಲ್ಯದ ಲೆಕ್ಕಾಚಾರ ಮತ್ತು ಇಂಡ್ ಎಎಸ್ 109 – ಹಣಕಾಸು ಸಾಧನಗಳು**	
23.	ಕಂಪನಿಯು ಸಿದ್ಧಪಡಿಸಿರುವ ನಗದು ಪ್ರವಹನ ತಃಖ್ತೆಯು, ಮೇಲೆ ಪಟ್ಟಿಮಾಡಲಾಗಿರುವ ಪರಿಶೀಲನೆಗಳ ಫಲವಾಗಿ ಹಣಕಾಸು ತಃಖ್ತೆಯ ಮೇಲೆ ಬೀರಬಹುದಾದ ಪರಿಣಾಮದ ಮಟ್ಟಿಗೆ, ಇಂಡ್ ಎಎಸ್ – 7 ರ ಅನುಸಾರವಾಗಿ ಇರುವುದಿಲ್ಲ. ಅಂತೆಯೇ, ಮೇಲಿನ ಪರಿಶೀಲನೆಗಳ ಪರಿಣಾಮದ ಮಟ್ಟಿಗೆ ಕಾರ್ಯಾಚರಣೆ, ಹಣಕಾಸು, ಹೂಡಿಕೆ ಚಟುವಟಿಕೆಗಳಿಂದ ಉದ್ಭವವಾಗುವ ನಗದು ಪ್ರವಹನದ ಯುಕ್ತತೆಯ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಸಾಧ್ಯವಿರುವುದಿಲ್ಲ.	ವಾಸ್ತವಿಕ
24.	ಕಂಪನಿಯು ಕುಟುಂಬ ಕಲ್ಯಾಣ ನಿಧಿಗೆ ಹವಣಿಕೆಯಾಗಿ ರೂ. 4.66 ಕೋಟಿಯನ್ನು ಒದಗಿಸಿದೆ. ಆದರೆ, 31 ಮಾರ್ಚ್ 2019ಕ್ಕೆ ಕೊನೆಗೊಂಡ ಅವಧಿಯ ವಿಮಾಗಣಕ ವರದಿಯ ಪ್ರಕಾರ ರೂ. 5.53 ಕೋಟಿ ಮೊತ್ತವನ್ನು ಚಾಲ್ತಿಯಲ್ಲದ ಹೊಣೆಯಾಗಿ ಗುರುತಿಸಬೇಕಿತ್ತು. ಇದರಿಂದಾಗಿ ಚಾಲ್ತಿಯಲ್ಲದ ಹವಣಿಕೆಗಳು, ಸಿಬ್ಬಂದಿ ವೆಚ್ಚವನ್ನು 0.86 ಕೋಟಿಯಷ್ಟು ಕಡಿಮೆ ಹಾಗೂ ವರ್ಷದ ಲಾಭವನ್ನು ಅದೇ ಮಟ್ಟಿಗೆ ಹೆಚ್ಚಿಗೆ ತೋರಿಸಲಾಗಿದೆ. ಜೊತೆಗೆ, ಇದು ಇಂಡ್ ಎಎಸ್ 19ರ ಅನನುಸರಣೆಯಾಗಿದೆ.	ಎಫ್‌ಬಿಎಫ್ ಹೊಣೆಯ ಗುರುತಿಸುವಿಕೆಯಲ್ಲಿ ಅಗತ್ಯ ತಿದ್ದುಪಡಿಯನ್ನು ಹಣಕಾಸು ವರ್ಷ 2020ರಲ್ಲಿ ಮಾಡಲಾಗುವುದು.
25.	ವಿಳಂಬದ ಪಾವತಿಗಳಿಗಾಗಿ ಸರಬರಾಜುದಾರರಿಂದ ಬಂದಿರುವ ಹಕ್ಕುಸಲ್ಲಿಕೆಗಳಿಗಾಗಿ ಕಂಪನಿಯು ರೂ. 3.54 ಕೋಟಿ ಮೊತ್ತವನ್ನು ಹವಣಿಸಿರುವುದಿಲ್ಲ. ಇದರಿಂದಾಗಿ ಹಣಕಾಸು ವೆಚ್ಚ ಮತ್ತು ಚಾಲ್ತಿ ಹವಣಿಕೆಗಳನ್ನು ಅದೇ ಮಟ್ಟಿಗೆ ಕಡಿಮೆತೋರಿಸಲಾಗಿದೆ ಹಾಗೂ ವರ್ಷದ ಲಾಭವನ್ನು ಹೆಚ್ಚಾಗಿ ತೋರಿಸಲಾಗಿದೆ.	ಸಂತುಲನ ಪಟ್ಟಿಯ ದಿನಾಂಕದಂದು ಇದ್ದಂತೆ ಬಡ್ಡಿ ಹಕ್ಕುಸಲ್ಲಿಕೆಗಳನ್ನು ಕಂಪೆನಯು ಒಪ್ಪಿರುವುದಿಲ್ಲ ಹಾಗೂ ಈ ಕಾರಣದಿಂದಾಗಿ ಪರಿಶೀಲನೆಯಲ್ಲಿರುವ ವರ್ಷದಲ್ಲಿ ಇವನ್ನು ಲೆಕ್ಕಕ್ಕೆ ಸೇರಿಸರುವುದಿಲ್ಲ. ಕಂಪೆನಯು ಬಡ್ಡಿ ಹಕ್ಕುಸಲ್ಲಿಕೆಗಳನ್ನು ಒಪ್ಪಿದ ಒಡನೆಯೇ ಆಗತ್ಯ ಲೆಕ್ಕ ನಮೂದುಗಳನ್ನು 2020ರ ಹಣಕಾಸು ತಃಖ್ತೆಗಳಲ್ಲಿ ಸೇರಿಸಲಾಗುವುದು.
26.	ಗ್ರಾಮಪಂಚಾಯಿತಿಗೆ ನೀರು ಸರಬರಾಜು ಹಾಗೂ ಸಾರ್ವಜನಿಕೆ ದೀಪಗಳಿಗೆ ವಿದ್ಯುತ್ ವಾರಾಟಕ್ಕೆ ಸಂಬಂಧಿಸದಂತೆ ಕಂಪೆನಯು ಕರ್ನಾಟಕ ಸರ್ಕಾರದಿಂದ ರೂ. 2061.3 ಕೋಟಿ ಮೊತ್ತವನ್ನು ಬಡ್ಡಿ ಎಂದು ಲೆಕ್ಕತೋರಿಸಿದೆ. ಕರ್ನಾಟಕ ಸರ್ಕಾರವು ತನ್ನ ಆದೇಶ ಸಂಖ್ಯೆ ಇಎನ್ ಪಿಎಸ್‌ಆರ್ 2106/ಪಿ3 ದಿನಾಂಕ 31.3.2017ರ ಅನ್ವಯ ರೂ. 748.48 ಕೋಟಿ ಮೊತ್ತದ ಗ್ರಾಮಪಂಚಾಯಿತಿ ಬಾಕಿಗಳನ್ನು (ಬಡ್ಡಿ ಸೇರಿ) ಸುಭದ್ರಗೊಳಿಸಲು ಅಂಗೀಕಾರ ನೀಡಿತು. ಕಂಪೆನಯು ಒದಗಿಸಲಾದ ನಧಿಯ ಮೊತ್ತಕ್ಕೆ ರೂ. 206.13 ಕೋಟಿ	ಬಾಕಿ ಮೊತ್ತಗಳ ಮೇಲೆ ಬಡ್ಡಿಯನ್ನು ವಿಧಿಸುವ ಸಂಬಂಧ ಕೆಳಗಿನ ಕೆಇಆರ್‌ಸಿ ಆದೇಶಗಳು/ನಿಬಂಧನೆಗಳತ್ತ ಗಮನಸೆಳೆಯುತ್ತಿದ್ದೇವೆ: ಎ. ಕೆಇಆರ್‌ಸಿ ಅಧಿಸೂಚನೆ ಸಂ. ವೈ/02/7 ದಿನಾಂಕ 19 ಫೆಬ್ರವರಿ 2008ರ ಕಲಮು 5(5) ಹೇಳುವಂತೆ, ಈ ನಿಬಂಧನೆಗಳ ದಿನಾಂಕದಂದು ಇದ್ದಂತೆ, ಶುಲ್ಕವೊಂದಕ್ಕೆ ಸಂಬಂಧಿಸಿದಂತೆ ಯಾವುದೇ ಗ್ರಾಹಕ ಅಥವಾ ಗ್ರಾಹಕ ವರ್ಗವು ಬಾಕಿಗಳನ್ನು (ಅಸಲು ಮತ್ತು ಬಡ್ಡಿ) ಪಾವತಿಸಬೇಕಿದ್ದರೆ ಹಾಗೂ ಆ ಬಾಕಿಗಳನ್ನು ಕರ್ನಾಟಕ

ಕ್ರ.ಸಂ.	ಲೆಕ್ಕಪರಿಶೋಧಕರ ಪರಿಶೀಲನೆ	ಆಡಳಿತ ಮಂಡಳಿಯ ಉತ್ತರ
7.	**ಇಂಡ್ ಎಎಸ್ 113 – ನ್ಯಾಯಯುತ ಮೌಲ್ಯದ ಲೆಕ್ಕಾಚಾರ ಮತ್ತು ಇಂಡ್ ಎಎಸ್ 109 – ಹಣಕಾಸು ಸಾಧನಗಳು**	
	ಬಡ್ಡಿಯನ್ನು ವಿಧಿಸಿ ಅದನ್ನು ಕರ್ನಾಟಕ ಸರ್ಕಾರದಿಂದ ಬರಬೇಕಾದ್ದು ಎಂದು ತೋರಿಸಿತು. ಈ ವಿಷಯವನ್ನು ಕರ್ನಾಟಕ ಸರ್ಕಾರವು ಮಾನ್ಯಮಾಡಿರುವುದಿಲ್ಲ. ನಮಗೆ ತಿಳಿಸಲಾದಂತೆ, ಸಹಾಯಧನದ ಬಾಕಿಗಳಿಗೆ ಬಡ್ಡಿ ವಿಧಿಸುವುದನ್ನು ಜೆಸ್ಕಾಂ ಕೈಗೆತ್ತಿಕೊಂಡು ಸರ್ಕಾರದೊಂದಿಗೆ ಮಾತುಕತೆ ನಡೆಸಲಿದೆ, ಏಕೆಂದರೆ ಸಹಾಯಧನವು ಬಿಡುಗಡೆಯಾಗದಿದ್ದರೆ ಹೊಣೆಗಳನ್ನು ನಭಾಯಿಸಲು ಇತರ ಮೂಲಗಳಿಂದ ಸಾಲವನ್ನು ಪಡೆದು ಅದಕೆ ಬಡ್ಡಿ ಪಾವತಿಸಬೇಕಾಗುತ್ತದೆ ಮತ್ತು ಈ ಹೊಣೆಯನ್ನು ಗ್ರಾಹಕರಿಗೆ ವರ್ಗಾಯಿಸಲು ಸಾಧ್ಯವಿರುವುದಿಲ್ಲ. ಈ ಸಂಬಂಧವಾಗಿ, ಬಾಕಿ ಇರುವ ಸಹಾಯಧನ ಮತ್ತು ಅದರ ಮೇಲಿನ ಬಡ್ಡಿಯು ಬಿಡುಗಡೆಗಾಗಿ ಕೋರುತ್ತ ಟಿ.ಓ ಪತ್ರಸಂಖ್ಯೆ ಜೆಸ್ಕಾಂ/ಎಫ್ಎ/ಸಿಎ/ಡಿಸಿಎ/ಎಓ/ಎಎಓ/(ಡಿಸಿಬಿ)18–19/14843 ದಿನಾಂಕ 28.06.2018 ರ ಅನ್ವಯ ಕರ್ನಾಟಕ ಸರ್ಕಾರಕ್ಕೆ ಪತ್ರವೊಂದನ್ನು ಬರೆಯಲಾಯಿತು. ಈ ವಿಷಯದ ನರ್ಧಾರ ಬಾಕಿ ಇರುವ ಕಾರಣ ಪಡೆಯಬೇಕಿರುವ ಮೊತ್ತದ ಅಂತಿಮ ವಸೂಲಿಸಾಧ್ಯತೆಯ ಬಗ್ಗೆ ನಾವು ಅಭಿಪ್ರಾಯ ವ್ಯಕ್ತಪಡಿಸುವುದು ಸಾಧ್ಯವಿರುವುದಿಲ್ಲ.	ಸರ್ಕಾರವು ಮನ್ನಾಮಾಡಿದ್ದರೆ ಮನ್ನಾಮಾಡಿದ ದಿನಾಂಕದಿಂದ 3 ತಿಂಗಳ ಒಳಗೆ ಕರ್ನಾಟಕ ಸರ್ಕಾರವು ಬಾಧಿತವ್ಯಕ್ತಿ/ಪರವಾನಗಿದಾರರ ಬಾಧ್ಯತೆಯನ್ನು ತುಂಬಿಕೊಡುತ್ತದೆ." ಬಿ. ಕರ್ನಾಟಕ ರಾಜ್ಯದಲ್ಲಿ ಹಂಚಿಕೆ ಪರವಾನಗೀದಾರರಿಗೆ ವಿದ್ಯುಚ್ಛಕ್ತಿ ಸರಬರಾಜಿಗೆ ಷರತ್ತುಗಳ ಕಲಮು 29.05 (i) ಅನುಸಾರ "ವಿಳಂಬಿತ ಪಾವತಿಯ ಸಂದರ್ಭದಲ್ಲಿ, ಎಲ್‌ಟಿ ಸ್ಥಾವರಗಳಿಗೆ ಕನಿಷ್ಠ ರೂ. 1 ರಂತೆ ಮತ್ತು ಎಚ್‌ಟಿ ಸ್ಥಾವರಗಳಿಗೆ ಕನಿಷ್ಠ ರೂ. 100 ರಂತೆ ಕನಿಷ್ಠ ಮೊತ್ತಕ್ಕೆ ಬದ್ಧವಾಗಿ, ಬಾಕಿ ಇದ್ದ ದಿನಾಂಕದಿಂದ ಇರುವ ನೈಜ ಸಂಖ್ಯೆಯ ದಿನಗಳ ಮೇಲೆ ತಿಂಗಳಿಗೆ % ದರದಲ್ಲಿ ಶುಲ್ಕವನ್ನು ವಿಧಿಸಲಾಗುತ್ತದೆ" ಸಿ. ಮಾನ್ಯ ಕೆಇಆರ್‌ಸಿ ಜೆಸ್ಕಾಂ ಶುಲ್ಕ ಆದೇಶ 2018, ಅಧ್ಯಾಯ – 3, ಅನುಬಂಧ – 1ರಲ್ಲಿ ಆಕ್ಷೇಪಣೆ ಸಂಖ್ಯೆ 29ರ ಅಡಿಯಲ್ಲಿ ಹೀಗೆ ನಿರ್ದೇಶನ ನೀಡಿದೆ: "ಉತ್ತರವನ್ನು ಗುರುತುಮಾಡಿಕೊಳ್ಳಲಾಗಿದೆ. ಸಹಾಯಧನದ ಬಾಕಿಗಳಿಗೆ ಬಡ್ಡಿ ವಿಧಿಸುವುದನ್ನು ಜೆಸ್ಕಾಂ ಕೈಗೆತ್ತಿಕೊಂಡು ಸರ್ಕಾರದೊಂದಿಗೆ ಮಾತುಕತೆ ನಡೆಸಲಿದೆ, ಏಕೆಂದರೆ ಸಹಾಯಧನವು ಬಿಡುಗಡೆಯಾಗದಿದ್ದರೆ ಹೊಣೆಗಳನ್ನು ನಿಭಾಯಿಸಲು ಇತರ ಮೂಲಗಳಿಂದ ಸಾಲವನ್ನು ಪಡೆದು ಅದಕೆ ಬಡ್ಡಿ ಪಾವತಿಸಬೇಕಾಗುತ್ತದೆ ಮತ್ತು ಈ ಹೊಣೆಯನ್ನು ಗ್ರಾಹಕರಿಗೆ ವರ್ಗಾಯಿಸಲು ಸಾಧ್ಯವಿರುವುದಿಲ್ಲ." ಈ ಸಂಬಂಧವಾಗಿ, ಬಾಕಿ ಇರುವ ಸಹಾಯಧನ ಮತ್ತು ಅದರ ಮೇಲಿನ ಬಡ್ಡಿಯು ಬಿಡುಗಡೆಗಾಗಿ ಕೋರುತ್ತ ಟಿ.ಓ ಪತ್ರಸಂಖ್ಯೆ ಜೆಸ್ಕಾಂ/ಎಫ್ಎ/ಸಿಎ/ಡಿಸಿಎ/ಎಓ/ಎಎಓ/(ಡಿಸಿಬಿ)18–19/14843 ದಿನಾಂಕ 28.06.2018 ರ ಅನ್ವಯ ಕರ್ನಾಟಕ ಸರ್ಕಾರಕ್ಕೆ ಪತ್ರವೊಂದನ್ನು ಬರೆಯಲಾಯಿತು. ಮೇಲಿನ ಕಾರಣಗಳ ಹಿನ್ನೆಲೆಯಲ್ಲಿ, ಗ್ರಾಮಪಂಚಾಯತಿಗೆ ನೀರು ಸರಬರಾಜು ಮತ್ತು ಸಾರ್ವಜನಿಕ ಬೀದಿದೀಪಗಳಿಗೆ ವಿದ್ಯುತ್ ಪೂರೈಕೆಯ ಮೇಲಿನ ಬಾಕಿಗಳ ಮೇಲೆ ಬಡ್ಡಿಯನ್ನು ವಿಧಿಸಿತು. ಸರ್ಕಾರಿ ಇಲಾಖೆಯು ಜೆಸ್ಕಾಂ ಗ್ರಾಹಕರಲ್ಲಿ ಒಂದಾಗಿದ್ದು ಯಾವುದೇ ಗ್ರಾಹಕರ ಪರವಾಗಿ ಪಕ್ಷಪಾತದ ಧೋರಣೆ ಇರಲು ಸಾಧ್ಯವಿರುವುದಿಲ್ಲ ಮತ್ತು ಬಡ್ಡಿಯನ್ನು ಮನ್ನಾಮಾಡುವುದು ಹೊರೆಯನ್ನು ಗ್ರಾಹಕರಿಗೆ ವರ್ಗಾಯಿಸಿದಂತೆ ಆಗುತ್ತದೆ ಎನ್ನುವ ಕಾರಣದಿಂದಾಗಿ ಹೀಗೆ ಮಾಡಲಾಯಿತು. ಸುಭದ್ರಗೊಳಿಸುವ ಪ್ರಕ್ರಿಯೆ ಮತ್ತು ನಡಾವಳಿಗಳ ಸ್ವೀಕೃತಿಯಲ್ಲಿ ವಿಳಂಬವಾದ ಕಾರಣ ಕಂಪನಿಯು ಬಡ್ಡಿಯನ್ನು ವಿಧಿಸಿದ್ದು ಸರಿಯಾಗಿದೆ ಮತ್ತು ಕೆಇಆರ್‌ಸಿ ನಿರ್ದೇಶನಗಳಿಗೆ ಅನುಸಾರವಾಗಿದೆ.

ಕ್ರ.ಸಂ.	ಲೆಕ್ಕಪರಿಶೋಧಕರ ಪರಿಶೀಲನೆ	ಆಡಳಿತ ಮಂಡಳಿಯ ಉತ್ತರ
7.	**ಇಂಡ್ ಎಎಸ್ 113 – ನ್ಯಾಯಯುತ ಮೌಲ್ಯದ ಲೆಕ್ಕಾಚಾರ ಮತ್ತು ಇಂಡ್ ಎಎಸ್ 109 – ಹಣಕಾಸು ಸಾಧನಗಳು**	
27.	ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಸಿಎಲ್‌ಟಿಡಿ) ನಲ್ಲಿರುವ ನಿಶ್ಚಿತ ಠೇವಣಿಗಳು ಮತ್ತು ಸಂವಾದಿ ಬಡ್ಡಿಯನ್ನು ಶೀಲ್ಕುಗಳಪುಸ್ತಕಗಳಲ್ಲಿ ಹೊಂದಿಸಿರುವುದಿಲ್ಲ. ಪರ್ಯಾಪ್ತವಲ್ಲದ ಮಾಹಿತಿಯ ಕಾರಣ ವರ್ಷದ ಕೊನೆಯ ಹೊತ್ತಿಗೆ ಇದ್ದಂತೆ ಬಡ್ಡಿ ಆದಾಯ, ಪ್ರಾಪ್ತ ಬಡ್ಡಿ ಮತ್ತು ನಿಶ್ಚಿತ ಠೇವಣಿಗಳ ಮೊತ್ತದ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸುವುದ ಸಾಧ್ಯವಿರುವುದಿಲ್ಲ. ಜೊತೆಗೆ, ಪ್ರಗತಿ ಕೃಷ್ಣ ಗ್ರಾಮೀಣ ಬ್ಯಾಂಕ್ ನಲ್ಲಿರುವ ನಿಶ್ಚಿತ ಠೇವಣಿಗೆ ಸಂಬಂಧಿಸಿದಂತೆ ಮುಂಚಿನ ವರ್ಷಗಳ ಪ್ರಾಪ್ತ ಬಡ್ಡಿಯನ್ನು ವ್ಯತಿರಿಕ್ತಗೊಳಿಸದ ಕಾರಣ ಬಡ್ಡಿಯನ್ನು ರೂ. 2.09 ಕೋಟಿಯಷ್ಟು ಹೆಚ್ಚಿಗೆ ತೋರಿಸಲಾಗಿದೆ ಮತ್ತು ಬಡ್ಡಿ ಆದಾಯ/ಲಾಭವನ್ನು ಮುಂಚಿನ ವರ್ಷಗಳಿಗೆ ಸಂಬಂಧಿಸಿದ ಬಡ್ಡಿಯ ಗುರುತಿಸುವಿಕೆಯಿಂದಾಗಿ ರೂ. 3.15 ಕೋಟಿಯಷ್ಟು ಹೆಚ್ಚಾಗಿ ತೋರಿಸಲಾಗಿದೆ.	ಪ್ರಾಪ್ತ ಬಡ್ಡಿ ಮತ್ತು ಹಣಕಾಸು ವರ್ಷದಲ್ಲಿ ಮಾಡಲಾದ ವ್ಯತಿರಿಕ್ತ ಪ್ರಕ್ರಿಯೆಯ ಹೊಂದಾಣಿಕೆ ಪ್ರಗತಿಯಲ್ಲಿದೆ. ಅಗತ್ಯ ತಿದ್ದುಪಡಿಯನ್ನು ಹಣಕಾಸು ವರ್ಷ 2020ರಲ್ಲಿ ಸೇರಿಸಲಾಗುವುದು.
28.	ಚಾಲ್ತಿ ಹಣಕಾಸು ವರ್ಷಕ್ಕೆ ಸಂಬಂಧಿಸಿದಂತೆ, ಪಿಜಿಸಿಐಎಲ್ ಮತ್ತು ಪಿಸಿಕೆಎಲ್ ಹಕ್ಕುಸಲ್ಲಿಸಿದ ಮುಕ್ತ ಲಭ್ಯಾವಕಾಶ ಶುಲ್ಕ (ಪಿಓಸಿ ಶುಲ್ಕಗಳು) ಮತ್ತು ಯುಐ ಶುಲ್ಕಗಳಿಗಾಗಿನ (ಗ್ಲೋಬಲ್ ಎನರ್ಜಿ ಪ್ರೈವೇಟ್ ಲಿ., ನಿಂದ ವಿದ್ಯುತ್ ಖರೀದಿಗೆ ಸಂಬಂಧಿಸಿದ್ದು) ರೂ. 6.33 ಕೋಟಿ ಮೊತ್ತಕ್ಕೆ ಕಂಪನಿಯು ಹವಣಿಕೆ ಮಾಡಿರುವುದಿಲ್ಲ. ಇದರಿಂದಾಗಿ ವಿದ್ಯುತ್ ಖರೀದಿಯು ವೆಚ್ಚವು ಅಷ್ಟರಮಟ್ಟಿಗೆ ಕಡಿಮೆತೋರಿಸಲಾಗಿದೆ. ಆಡಳಿತ ಮಂಡಳಿಯು ಅಭಿಪ್ರಾಯದಲ್ಲಿ, ಇದು ವರ್ಷದ ನಿಬಂಧನಾ ಆದಾಯವನ್ನು ಅದೇ ಮಟ್ಟಕ್ಕೆ ಹೆಚ್ಚಿಸಲು ಕಾರಣವಾಗುವುದರಿಂದ ವರ್ಷದ ನವ್ವಳ ಲಾಭದ ಮೇಲೆ ಇದು ಪರಿಣಾಮವನ್ನು ಹೊಂದಿರುವುದಿಲ್ಲ.	ಜೆಸ್ಕಾಂ 2109–20ರ ದ್ವಿತೀಯ ತ್ರೈಮಾಸಿಕ ಅವಧಿಯಲ್ಲಿ ಬಿಲ್ಲುಗಳನ್ನು ಪಡೆಯಿತು ಮತ್ತು ಹಾಗಾಗಿ ಸಂಬಂಧಿತ ಲೆಕ್ಕಪತ್ರಗಳಲ್ಲಿ ಇದನ್ನು ಸೇರಿಸಲಾಗಲಿಲ್ಲ. ಆದರೆ, ಕಂಪನಿಯು ನೈಜ ಮತ್ತು ಅಂಗೀಕೃತ ವಿದ್ಯುತ್ ಖರೀದಿ ವೆಚ್ಚದ ವ್ಯತ್ಯಾಸದ ಮಟ್ಟಿಗೆ ನಿಬಂಧನಾ ಆದಾಯವನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತಿದೆ. ಅಂತೆಯೇ, ವಿದ್ಯುತ್ ಖರೀದಿ ವೆಚ್ಚದಲ್ಲಿನ ಯಾವುದೇ ಬದಲಾವಣೆಗಳು ನಿಬಂಧನಾ ಆದಾಯ ಲೆಕ್ಕಾಚಾರದಲ್ಲಿ ಸಮಾನವಾದ ಪ್ರತಿ–ಪರಿಣಾಮವನ್ನು ಹೊಂದಿದ್ದು ಲಾಭಗಳ ಮೇಲೆ ಯಾವುದೇ ಪರಿಣಾಮಗಳು ಉಂಟಾಗುವುದಿಲ್ಲ.

ನಮೂನೆ ಸಂಖ್ಯೆ ಎಂಆರ್ – 3 **ಅನುಬಂಧ–4**

ಕಾರ್ಯದರ್ಶಿಯ ಲೆಕ್ಕಪರಿಶೋಧನಾ ವರದಿ

31.03.2019ಕ್ಕೆ ಕೊನೆಗೊಂಡ ಹಣಕಾಸು ವರ್ಷಕ್ಕೆ

[(ಕಂಪನಿ ಕಾಯ್ದೆ, 2013ರ ಪರಿಚ್ಛೇದ 204(1)ರಅನುಸಾರ ಮತ್ತು ಕಂಪೆನಿ (ವ್ಯವಸ್ಥಾಪನಾ ಸಿಬ್ಬಂದಿಯ ನೇಮಕಾತಿ ಮತ್ತು ಸಂಭಾವನೆ) ನಿಯಮಗಳು, 2014ಕ್ಕೆ ಹೊಂದುವಂತೆ]

ಇವರಿಗೆ,

ಸದಸ್ಯರು, ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ,

ನೋಂದಾಯಿತ ಕಛೇರಿ: ಗುಲ್ಬರ್ಗಾ ಮುಖ್ಯ ರಸ್ತೆ, ಗುಲ್ಬರ್ಗಾ 585 102

ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ, ಸಂಸ್ಥೆಯಲ್ಲಿ (ಇನ್ನು ಮುಂದೆ 'ಕಂಪನಿ') ಅನ್ವಯವಾಗುವ ಶಾಸನಬದ್ಧ ಉಪಬಂಧಗಳ ಅನುಸರಣೆ ಮತ್ತು ಉತ್ತಮ ಕಾರ್ಪೊರೇಟ್ ಆಚರಣೆಗಳ ಬಗೆಗಿನ ಬದ್ಧತೆಗೆ ಸಂಬಂಧಿಸಿದಂತೆ ನಾನು ಕಾರ್ಯದರ್ಶೀಯ ಲೆಕ್ಕಪರಿಶೋಧನೆಯನ್ನು ಕೈಗೊಂಡಿರುತ್ತೇನೆ. ಕಾರ್ಪರೇಟ್ ನಡವಳಿಕೆ/ಶಾಸನಬದ್ಧ ಅನುಸರಣೆಗಳ ಮೌಲ್ಯಮಾಪನ ನಡೆಸಲು ಮತ್ತು ಆ ಬಗ್ಗೆ ನನ್ನ ಅಭಿಪ್ರಾಯಗಳನ್ನು ವ್ಯಕ್ತಪಡಿಸಲು ಸೂಕ್ತವಾದ ಆಧಾರವನ್ನುಒದಗಿಸುವ ವಿಧಾನದಲ್ಲಿ ಕಾರ್ಯದರ್ಶೀಯ ಲೆಕ್ಕಪರಿಶೋಧನೆಯನ್ನು ನಡೆಸಲಾಯಿತು.

ಲೆಕ್ಕಪುಸ್ತಕಗಳು, ದಾಖಲೆಗಳು, ನಡಾವಳಿ ಪುಸ್ತಕಗಳು, ಸಲ್ಲಿಸಲಾದ ನಮೂನೆ ಮತ್ತು ಸಲ್ಲಿಕೆಗಳು ಹಾಗೂ ಕಂಪೆನಿ ನಿರ್ವಹಿಸಿರುವ ಇತರ ದಾಖಲೆಗಳ ಪರಿಶೀಲನೆಯಆಧಾರದ ಮೇಲೆ ಮತ್ತು ಕಂಪೆನಿ, ಅದರ ಅಧಿಕಾರಿಗಳು, ಅಭಿಕರ್ತರು ಮತ್ತುಅಧಿಕೃತ ಪ್ರತಿನಿಧಿಗಳು ಕಾರ್ಯದರ್ಶೀಯ ಲೆಕ್ಕಪರಿಶೋಧನೆಯನ್ನು ನಡೆಸುವಾಗ ಒದಗಿಸಿದ ಮಾಹಿತಿಯ ಆಧಾರದ ಮೇಲೆ ನಾನು ಹೀಗೆ ವರದಿ ಮಾಡುತ್ತಿದ್ದೇವೆ: ನನ್ನ ಅಭಿಪ್ರಾಯದಲ್ಲಿ, 31.03.2019ಕ್ಕೆ ಕೊನೆಗೊಂಡ ಹಣಕಾಸು ವರ್ಷವನ್ನು ಒಳಗೊಳ್ಳುವ ಲೆಕ್ಕಪರಿಶೋಧನೆಯಅವಧಿಯಲ್ಲಿ ಕೆಳಗೆ ಪಟ್ಟಿಮಾಡಲಾಗಿರುವ ಶಾಸನಬದ್ಧ ಉಪಬಂಧಗಳನ್ನು ಅನುಸರಿಸಿದೆ ಮತ್ತುಇಲ್ಲಿಂದಾಚೆಗೆ ಮಾಡಿರುವ ವರದಿಗೆ ಬದ್ಧವಾಗಿ ಮತ್ತು ಆ ಮಟ್ಟಿಗೆ ಸೂಕ್ತವಾದ ಮಂಡಳಿ–ಪ್ರಕ್ರಿಯೆಗಳು ಮತ್ತು ಅನುಸರಣಾಕಾರ್ಯತಂತ್ರವನ್ನು ಸಹ ಹೊಂದಿದೆ.

ನಾವು, ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ, ಸಂಸ್ಥೆಯ 31.03.2019ಕ್ಕೆ ಕೊನೆಗೊಂಡ ಹಣಕಾಸು ವರ್ಷದ ಲೆಕ್ಕಪುಸ್ತಕಗಳು, ದಾಖಲೆಗಳು, ನಡಾವಳಿ ಪುಸ್ತಕಗಳು, ಸಲ್ಲಿಸಲಾದ ನಮೂನೆ ಮತ್ತುಸಲ್ಲಿಕೆಗಳು ಹಾಗೂ ಕಂಪನಿ ನಿರ್ವಹಿಸಿರುವ ಇತರ ದಾಖಲೆಗಳ ಕೆಳಗಿನ ಉಪಬಂಧಗಳ ಅನ್ವಯ ಪರಿಶೀಲಿಸಿರುತ್ತೇನೆ:

1. ಕಂಪನಿ ಕಾಯ್ದೆ, 2013 (ಕಾಯ್ದೆ) ಮತ್ತು ತತ್ಸಂಬಂಧಿತ ನಿಯಮಗಳು
2. ಈ ಕಂಪನಿಯು ಒಂದು ಲಿಸ್ಟ್ ಆಗದ ಸಾರ್ವಜನಿಕ ಸರ್ಕಾರಿ ಕಂಪೆನಿಯಾದ ಮತ್ತು ಪೂರ್ಣವಾಗಿ ಕರ್ನಾಟಕ ಸರ್ಕಾರದ ಸ್ವಾಮ್ಯಕ್ಕೆ ಒಳಪಡುವ ಕಾರಣ ಕೆಳಗಿನ ಕಾಯ್ದೆಗಳು ಇದಕ್ಕೆ ಅನ್ವಯವಾಗುವುದಿಲ್ಲ:
   (i) ಭದ್ರತಾ ಕರಾರುಗಳ (ನಿಬಂಧನೆ) ಕಾಯ್ದೆ, 1956 ('ಎಸ್‌ಸಿಆರ್‌ಎ) ಮತ್ತು ಅದರಡಿ ರೂಪಿಸಲಾದ ನಿಯಮಗಳು;
   (ii) ಡೆಪಾಸಿಟರೀಸ್ ಕಾಯ್ದೆ, 1996 ಮತ್ತುಅದರಡಿ ರೂಪಿಸಲಾದ ನಿಬಂಧನೆಗಳು ಮತ್ತು ಉಪಕಾನೂನುಗಳು;
3. ಮೇಲೆ ಕ್ರ.ಸಂ 2 ರಲ್ಲಿ ಹೇಳಿರುವ ಕಾರಣಗಳಿಗಾಗಿ, ಭಾರತೀಯ ಭದ್ರತೆಗಳು ಮತ್ತು ವಿನಿಮಯ ಮಂಡಳಿ ಕಾಯ್ದೆ, 1992 ('ಸೆಬಿ ಕಾಯ್ದೆ') ಅಡಿ ನಿಗದಿಪಡಿಸಲಾಗಿರುವ ಕೆಳಗಿನ ನಿಬಂಧನೆಗಳು ಮತ್ತು ಮಾರ್ಗಸೂಚಿಗಳು ಈ ಕಂಪನಿಗೆ ಅನ್ವಯವಾಗುವುದಿಲ್ಲ:
   (ಎ) ಭಾರತೀಯ ಭದ್ರತೆಗಳು ಮತ್ತು ವಿನಿಮಯ ಮಂಡಳಿ (ಷೇರುಗಳ ಗಣನೀಯ ಸ್ವಾಧೀನ ಮತ್ತು ವಹಿಸಿಕೊಳ್ಳುವಿಕೆ) ನಿಬಂಧನೆಗಳು, 2011;
   (ಬಿ) ಭಾರತೀಯ ಭದ್ರತೆಗಳು ಮತ್ತು ವಿನಿಮಯ ಮಂಡಳಿ (ಒಳವ್ಯಾಪಾರ ನಿಷೇಧ) ನಿಬಂಧನೆಗಳು, 1992;
   (ಸಿ) ಭಾರತೀಯ ಭದ್ರತೆಗಳು ಮತ್ತು ವಿನಿಮಯ ಮಂಡಳಿ (ಬಂಡವಾಳ ನೀಡಿಕೆ ಮತ್ತು ಪ್ರಕಟಣೆ ಅಗತ್ಯಗಳು) ನಿಬಂಧನೆಗಳು, 2009;
   (ಡಿ) ಭಾರತೀಯ ಭದ್ರತೆಗಳು ಮತ್ತು ವಿನಿಮಯ ಮಂಡಳಿ (ಸಿಬ್ಬಂದಿ ಸ್ಟಾಕ್ ಆಯ್ಕೆ ಯೋಜನೆ ಮತ್ತು ಸಿಬ್ಬಂದಿ ಸ್ಟಾಕ್ ಖರೀದಿ ಯೋಜನೆ) ನಿಬಂಧನೆಗಳು, 1999;
   (ಇ) ಭಾರತೀಯ ಭದ್ರತೆಗಳು ಮತ್ತು ವಿನಿಮಯ ಮಂಡಳಿ (ಸಾಲ ಭದ್ರತೆಗಳ ನೀಡಿಕೆ ಮತ್ತು ಲಿಸ್ಟಿಂಗ್) ನಿಬಂಧನೆಗಳು, 2008;
   (ಎಫ್) ಭಾರತೀಯ ಭದ್ರತೆಗಳು ಮತ್ತು ವಿನಿಮಯ ಮಂಡಳಿ ನೀಡಿಕೆಗಳಿಗೆ ನೋಂದಣಿ ಅಧಿಕಾರಿ ಮತ್ತು ಷೇರು ವರ್ಗಾವಣೆ ಅಭಿಕರ್ತ್ಯಗಳು) ನಿಬಂಧನೆಗಳು, 1993, ಕಂಪೆನಿ ಕಾಯ್ದೆಗೆ ಸಂಬಂಧಿಸಿದಂತೆ ಮತ್ತು ಗ್ರಾಹಕರೊಂದಿಗೆ ವ್ಯವಹರಿಸುವಾಗ;

(ಜಿ) ಭಾರತೀಯ ಭದ್ರತೆಗಳು ಮತ್ತು ವಿನಿಮಯ ಮಂಡಳಿ (ಈಕ್ವಿಟಿ ಷೇರುಗಳ ಡಿಲಿಸ್ಟಿಂಗ್) ನಿಬಂಧನೆಗಳು, 2009; ಮತ್ತು

(ಎಚ್) ಭಾರತೀಯ ಭದ್ರತೆಗಳು ಮತ್ತು ವಿನಿಮಯ ಮಂಡಳಿ (ಭದ್ರತೆಗಳನ್ನು ಹಿಂದಕ್ಕೆ ಖರೀದಿಸುವುದು) ನಿಬಂಧನೆಗಳು, 1998;

4. ಕಂಪನಿಯು ಪರಿಶೀಲನೆಯಲ್ಲಿರುವ ಅವಧಿಯಲ್ಲಿ ಯಾವುದೇ ವಿದೇಶೀ ವಿನಿಮಯ ಸಂಬಂಧಿತ ವ್ಯವಹಾರಗಳನ್ನು ನಡೆಸಿರುವುದಿಲ್ಲ ಮತ್ತು ಹಾಗಾಗಿ ವಿದೇಶೀ ವಿನಿಮಯ ನಿರ್ವಹಣಾ ಕಾಯ್ದೆ, 1999 ಹಾಗೂ ಅದರಡಿ ರೂಪಿಸಲಾದ ನಿಯಮಗಳು ಮತ್ತು ನಿಬಂಧನೆಗಳ ಅಡಿಯಲ್ಲಿ ವರದಿಮಾಡುವಂಥದ್ದು ಏನೂ ಇರುವುದಿಲ್ಲ.

5. ಕಂಪನಿಗೆ ಅನ್ವಯವಾಗುವ ನಿರ್ದಿಷ್ಟ ಕಾಯ್ದೆ ಎಂದರೆ ಕರ್ನಾಟಕ ವಿದ್ಯುಚ್ಛಕ್ತಿ ಕಾಯ್ದೆ ಮತ್ತು ಅದರಡಿಯಲ್ಲಿ ರೂಪಿಸಲಾದ ನಿಯಮಗಳಾಗಿವೆ. ಕಂಪೆನಿಯು ಕಾಯ್ದೆ ಮತ್ತು ಸಂಬಂಧಿತ ನಿಯಮಗಳ ಉಪಬಂಧಗಳನ್ನು ಅನುಸರಿಸಿದೆ.

6. ಮೇಲೆ ಹೇಳಲಾದ ಕಾಯ್ದೆ ಮತ್ತು ನಿಯಮಗಳಲ್ಲದೆ ಅನುಬಂಧ II ರಲ್ಲಿ ಹೇಳಲಾಗಿರುವ ಕಾಯ್ದೆಯ ಉಪಬಂಧಗಳೂ ಸಹ ಕಂಪನಿಗೆ ಅನ್ವಯವಾಗುತ್ತವೆ ಮತ್ತು ಕಂಪೆನಿಯು ಈ ಕಾಯ್ದೆಯ ಉಪಬಂಧಗಳು ಹಾಗೂ ಅದರಡಿ ರೂಪಿಸಲಾದ ನಿಯಮಗಳನ್ನು ಅನುಸರಿಸಿದೆ. ಅನುಬಂಧ IIನ್ನು ಈ ವರದಿಗೆ ಲಗತ್ತಿಸಲಾಗಿದೆ.

ದಿ ಇನ್ಸ್‌ಟಿಟ್ಯೂಟ್ ಆಫ್ ಕಂಪೆನಿ ಸೆಕ್ರೆಟರೀಸ್ ಆಫ್ ಇಂಡಿಯಾ ಹೊರಡಿಸಿರುವ ಕಾರ್ಯದರ್ಶಿಯ ಪ್ರಮಾಣಗಳ ಅನ್ವಯವಾಗುವಂತಹ ಕಲಮುಗಳ ಅನುಸರಣೆಯನ್ನೂ ಸಹ ನಾನು ಗಮನಿಸಿರುತ್ತೇನೆ.

ಮುಂದುವರೆಯುತ್ತ ನಾವು ಹೀಗೆ ವರದಿ ಮಾಡುತ್ತಿದ್ದೇವೆ:

ಕಂಪೆನಿಯು ನಿರ್ದೇಶಕ ಮಂಡಳಿಯು ಕಾರ್ಯನಿರ್ವಾಹಕ ನಿರ್ದೇಶಕರು, ಕಾರ್ಯನಿರ್ವಾಹಕೇತರ ನಿರ್ದೇಶಕರು ಮತ್ತು ಸ್ವತಂತ್ರ ನಿರ್ದೇಶಕರ ಸೂಕ್ತ ಸಂತುಲನದೊಂದಿಗೆ ಯುಕ್ತವಾಗಿ ರಚನೆಗೊಂಡಿದೆ. ಪರಿಶೀಲನೆಯಲ್ಲಿರುವಅವಧಿಯಲ್ಲಿ ನಿರ್ದೇಶಕ ಮಂಡಳಿಯಲ್ಲಿನ ರಚನೆಯಲ್ಲಿ ಘಟಿಸಿದ ಬದಲಾವಣೆಗಳನ್ನು ಕಾಯ್ದೆಯ ಉಪಬಂಧಗಳ ಅನ್ವಯ ಮಾಡಲಾಯಿತು.

ಕಂಪನಿಯು ಕೇಂದ್ರ ಖರೀದಿ ಸಮಿತಿಯನ್ನು ರಚಿಸಿದ್ದು ಈ ಸಮಿತಿಯು ಲೆಕ್ಕಪರಿಶೋಧನಾ ಅವಧಿಯಲ್ಲಿ ಏಳು ಸಭೆಗಳನ್ನು ನಡೆಸಿದೆ. ಇತರ ಸಮಿತಿಗಳು ಸಭೆಗಳನ್ನು ನಡೆಸಿರುವುದಿಲ್ಲ.

ಮಂಡಳಿ ಸಭೆಗಳನ್ನು ನಡೆಸುವ ಬಗೆಗಿನ ನೋಟೀಸನ್ನುಎಲ್ಲ ನಿರ್ದೇಶಕರಿಗೆ ನೀಡಲಾಗಿದೆ, ಕಾರ್ಯಸೂಚಿ ಮತ್ತುಕಾರ್ಯಸೂಚಿಯ ಮೇಲಿನ ವಿವರವಾದ ಟಿಪ್ಪಣಿಗಳನ್ನು ಕನಿಷ್ಠ ಏಳು ದಿನಗಳ ಮುಂಚಿತವಾಗಿಯೇತಲುಪಿಸಲಾಗಿತ್ತು ಹಾಗೂ ಸಭೆಗೆ ಮುಂಚೆಯೇ ಕಾರ್ಯಸೂಚಿಯ ಅಂಗಗಳ ಮೇಲೆ ಹೆಚ್ಚಿನ ಮಾಹಿತಿ ಮತ್ತು ಸ್ಪಷ್ಟನೆಯನ್ನು ಬೇಡುವ ಹಾಗೂ ಪಡೆದುಕೊಳ್ಳುವ ಮತ್ತು ಸಭೆಯಲ್ಲಿಅರ್ಥಪೂರ್ಣವಾಗಿ ಪಾಲ್ಗೊಳ್ಳುವುದನ್ನು ಸಾಧ್ಯವಾಗಿಸುವ ವ್ಯವಸ್ಥೆಯೊಂದನ್ನು ಕಂಪೆನಿ ಹೊಂದಿದೆ.

ಮಂಡಳಿ ಮತ್ತು ಸಮಿತಿ ಸಭೆಗಳ ನಡಾವಳಿಗಳ ಪರಿಶೀಲನೆಯಿಂದ ತಿಳಿದುಬರುವಂತೆ ಬಹುಮತದ ನಿರ್ಣಯವನ್ನು ಸಭೆಗಳಲ್ಲಿ ಅಂಗೀಕರಿಸಲಾಗಿದೆ ಹಾಗೂ ಮಂಡಳಿಯ ಮತ್ತು ಸಮಿತಿಗಳ ಸದಸ್ಯರಿಂದ ಭಿನ್ನಮತದ ನಿಲುವುಗಳು ಪ್ರಕಟವಾಗಿರುವುದಿಲ್ಲ.

ಅನ್ವಯವಾಗುವ ಕಾನೂನುಗಳು, ನಿಬಂಧನೆಗಳು ಮತ್ತು ಮಾರ್ಗಸೂಚಿಗಳ ಅನುಸರಣೆಯನ್ನುಖಚಿತಪಡಿಸಲು ಮತ್ತು ಅವುಗಳ ಮೇಲೆ ನಿಗಾವಹಿಸಲು ಸಾಧ್ಯವಾಗುವಂತೆ, ಕ್ರ.ಸಂ. 3ರಲ್ಲಿನ ನನ್ನ ಪರಿಶೀಲನೆಗಳಿಗೆ ಬದ್ಧವಾಗಿ, ಕಂಪನಿಯು ತನ್ನ ಗಾತ್ರ ಮತ್ತು ಕಾರ್ಯಾಚರಣೆಗಳಿಗೆ ಹೊಂದುವಂತಹ ಪರ್ಯಾಪ್ತ ವ್ಯವಸ್ಥೆಗಳು ಮತ್ತು ಪ್ರಕ್ರಿಯೆಗಳನ್ನು ಹೊಂದಿರುತ್ತದೆಎಂದು ನನಗೆ ಒದಗಿಸಲಾದ ವಿವರಣೆಗಳು ಮತ್ತು ಆಡಳಿತ ಮಂಡಳಿ ಒದಗಿಸಿದ ದಾಖಲೆಗಳ ಆಧಾರದ ಮೇಲೆ ವರದಿಮಾಡುತ್ತಿದ್ದೇನೆ.

ಗಮನಿಕೆಗಳು/ಪರಿಶೀಲನೆಗಳು:

(ಎ) ಎಂಜಿಟಿ– 1 ಮತ್ತು ಷೇರು ವರ್ಗಾವಣೆ ಲೆಡ್ಜರ್‌ಗಳನ್ನು ಕಂಪನಿಯ ನೋಂದಾಯಿತ ಕಛೇರಿಯಲ್ಲಿ ಇರಿಸಿ ನಿರ್ವಹಿಸಿರುವುದಿಲ್ಲ. ಕಂಪೆನಿ ಕಾಯ್ದೆ 1956 ಪ್ರಕಾರ ಖಾಯಂ ದಾಖಲೆಯಾಗಿ ಇರಿಸ, ನಿರ್ವಹಿಸಿ, ಸಂರಕ್ಷಿಸಬೇಕಾದ ಶಾಸನಬದ್ಧ ಪುಸ್ತಕಗಳನ್ನು ನಮಗೆ ತೋರಿಸಲು ಕಂಪನಿಗೆ ಸಾಧ್ಯವಾಗಲಿಲ್ಲ.

(ಬಿ) ಲೆಕ್ಕಪರಿಶೋಧನೆಯ ಸಂದರ್ಭದಲ್ಲಿ ಪಡೆದುಕೊಳ್ಳಲಾದ ಮಾಹಿತಿಯ ಪ್ರಕಾರ ಷೇರು ಪ್ರಮಾಣಪತ್ರಗಳ ಹಿಂಭಾಗದಲ್ಲಿ ವರ್ಗಾವಣೆಯನ್ನು ಸೂಚಿಸುವ ಅನುಮೋದನೆಯನ್ನು ಮಾಡಲಾಗಿಲ್ಲ.

(ಸಿ) ಕಂಪನಿಯು ತನ್ನ ಸಂಘ ನಿಯಮಾವಳಿಗಾಗಿ ಕೋಷ್ಟಕ 'ಎಫ್' ಅಳವಡಿಕೆಯನ್ನು ಇನ್ನೂ ಮಾಡಿರುವುದಿಲ್ಲ.

(ಡಿ) ಎಸ್‌ಎಸ್–1 ಮತ್ತು ಎಸ್‌ಎಸ್–2 ರ ಜಾರಿಯಲ್ಲಿ ಸುಧಾರಣೆಗೆ ಅವಕಾಶವಿದೆ.

(ಇ) ಎಂಬಿಪಿ ಯನ್ನು ಹಣಕಾಸು ವರ್ಷದ ಮೊದಲ ಮಂಡಳಿ ಸಭೆಯಲ್ಲಿ ಎಲ್ಲ ನಿರ್ದೇಶಕರುಗಳಿಗೆ ಇರಿಸಬೇಕಿರುವ ಅಗತ್ಯಕ್ಕೆ ಪ್ರತಿಯಾಗಿ ಕೇವಲ ಐದು ನಿರ್ದೇಶಕರಿಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನಾ

ಅವಧಿಯ ಎರಡನೆಯ ಬಿಎಂ ಅವಧಿಯಲ್ಲಿ ಇರಿಸಲಾಯಿತು.

(ಎಫ್) ಕಂಪನಿಯ ಸ್ವರೂಪ ಮತ್ತು ಗಾತ್ರವು ಕಾಯ್ದೆ ಪರಿಚ್ಛೇದ 178ರ ಅಡಿಯಲ್ಲಿ ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿಯ ರಚನೆ ಹಾಗೂ ಪರಿಚ್ಛೇದ 177ರ ಅಡಿಯಲ್ಲಿ ಕಣ್ಗಾವಲು ಕಾರ್ಯವಿಧಾನ ವ್ಯವಸ್ಥೆಯ ಸ್ಥಾಪನೆಯನ್ನು ಬೇಡುತ್ತದೆ.

(ಜಿ) ಕಂಪನಿ ಕಾಯ್ದೆ, 2013ರ ಪರಿಚ್ಛೇದ 203ರ ಅಡಿ ಅಗತ್ಯವಿರುವಂತೆ ಕಂಪನಿಯು ಪೂರ್ಣಾವಧಿ ಕಂಪನಿ ಕಾರ್ಯದರ್ಶಿಯನ್ನು ನೇಮಿಸಿರುವುದಿಲ್ಲ ಮತ್ತು ಇದು ಸದರಿ ಕಾಯ್ದೆಯ ಉಪಬಂಧಗಳ ಉಲ್ಲಂಘನೆಯಾಗಿದೆ.

(ಎಚ್) ಕಂಪೆನಿಯು ACTIVE – INC-22A ಇ–ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಮತ್ತು ಈ ಕಾರಣದಿಂದಾಗಿ ಎಂಸಿಎ ವೆಬ್‌ಸೈಟಿನಲ್ಲಿ ಕಂಪನಿಯ ಹಾಗೂ ನಿರ್ದೇಶಕರುಗಳ ಸ್ಥಿತಿಗತಿಯನ್ನು "ACTIVE Non-Compliant"ಎಂದು ಪ್ರಕಟಿಸಲಾಗಿದೆ. ಈ ಅರ್ಜಿಯನ್ನು ಸಲ್ಲಿಸಲು ಇರುವ ಪೂರ್ವ ಅಗತ್ಯವೆಂದರೆ ಕಾಯ್ದೆಯ ಪರಿಚ್ಛೇದ 203ರ ಅನುಸರಣೆ, ಅರ್ಥಾತ್ ಅರ್ಹ ಪೂರ್ಣಾವಧಿ ಕಂಪೆನಿ ಕಾರ್ಯದರ್ಶಿಯ ನೇಮಕವಾಗಿದೆ.

(ಐ) ನಿರ್ದೇಶಕರ ನೇಮಕಾತಿಯು ಕರ್ನಾಟಕ ಸರ್ಕಾರವು ಹೊರಡಿಸುವ ಅಧಿಸೂಚನೆಯನ್ನು ಆಧರಿಸಿದೆ. ಅಧಿಸೂಚನೆಯ ಪ್ರಕಾರ ನೇಮಕವಾದ ನಿರ್ದೇಶಕರ ಪದನಾಮವು "ನಾಮನಿರ್ದೇಶಿತ ನಿರ್ದೇಶಕರು" ಎಂದಿರಬೇಕು ಮತ್ತು 'ಸ್ವತಂತ್ರ', 'ಪೂರ್ಣಾವಧಿ', ವ್ಯವಸ್ಥಾಪಕ ನಿರ್ದೇಶಕರು', 'ಕಾರ್ಯನಿರ್ವಾಹಕ', 'ಕಾರ್ಯನಿರ್ವಾಹಕೇತರ' ಮುಂತಾದ ಇತರ ಪರಿಭಾಷೆಯು ಸಂದರ್ಭಾನುಸಾರ ಇರಬಹುದು. ಕರ್ನಾಟಕ ಸರ್ಕಾರವು ಎಲ್ಲ ನಿರ್ದೇಶಕರನ್ನೂ ನಾಮನಿರ್ದೇಶನ ಮಾಡುವ ಕಾರಣ ಎಲ್ಲ ನಿರ್ದೇಶಕರ ಮೂಲ ಲಕ್ಷಣವು 'ನಾಮನಿರ್ದೇಶಿತ ನಿರ್ದೇಶಕರು' ಎಂದಾಗಿರುತ್ತದೆ.

(ಜೆ) ಕಂಪನಿಯು ತನ್ನ ವೆಬ್‌ವಿಳಾಸದಲ್ಲಿ ಕಡ್ಡಾಯವಾಗಿ ವಾರ್ಷಿಕ ಸಲ್ಲಿಕೆಗಳು ಮತ್ತು ಸಿಎಸ್‌ಆರ್ ನೀತಿಯ ಪ್ರತಿಯನ್ನು ಪ್ರಕಟಿಸಬೇಕು, ಆದರೆ ಇವುಗಳನ್ನು ಪ್ರಕಟಿಸಲಾಗಿಲ್ಲ.

(ಕೆ) ಪ್ರತಿಯೊಂದು ಇ–ಅರ್ಜಿಯನ್ನು ಸಲ್ಲಿಸುವಾಗ ನಿರ್ದಿಷ್ಟ ನಿರ್ದೇಶಕರು ತಮ್ಮ ಡಿಜಿಟಲ್ ಸಹಿಯನ್ನು ಬಳಸಲು ಮಂಡಳಿಯಿಂದ ಅಧಿಕಾರವನ್ನು ಪಡೆದಿರಬೇಕು ಮತ್ತು ಇ–ಅರ್ಜಿಗಳಲ್ಲಿ ಬಿಎಂ ದಿನಾಂಕ ಮತ್ತು ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. ಗಮನಿಸಲಾಗಿರುವಂತೆ, ಇ–ಅರ್ಜಿಗಳಲ್ಲಿ ಕೆಲವು ದಿನಾಂಕಗಳನ್ನು ನಮೂದಿಸಲಾಗಿದೆ, ಆದರೆ ಅವುಗಳಲ್ಲಿ ಕೆಲವು ದಿನಾಂಕಗಳು 2016ಕ್ಕೆ ಸಂಬಂಧಪಟ್ಟಿದ್ದು ಆ ಸಂದರ್ಭದಲ್ಲಿ ಯಾವುದೇ ಅಧಿಕಾರವನ್ನೂ ನಿರ್ದೇಶಕರಿಗೆ ನೀಡಲಾಗಿರುವುದಿಲ್ಲ. 18.6.2018 ರಂದು ಒಂದು ಪ್ರಕರಣದಲ್ಲಿ ಅಧಿಕಾರವನ್ನು ನೀಡಲಾಗಿದೆಯಾದರೂ ಬಿಎಂ ಆ ದಿನಾಂಕದಂದು ನಡೆದಿಲ್ಲ ಎನ್ನುವ ಅಂಶವನ್ನು ಗಮನಿಸಲಾಗಿದೆ.

(ಎಲ್) ಕಂಪನಿ ಕಾಯ್ದೆ 2013ರ ಪರಿಚ್ಛೇದ 149(6) ಪ್ರಕಾರ ಕಂಪನಿಯ ಮಂಡಳಿಯಲ್ಲಿ ಒಟ್ಟು ನಿರ್ದೇಶಕರ ಪೈಕಿ 1/3 ರಷ್ಟು ಸಂಖ್ಯೆಯಲ್ಲಿ ಸ್ವತಂತ್ರ ನಿರ್ದೇಶಕರನ್ನು ಕಂಪನಿ ಹೊಂದಿರಬೇಕು. ಯಾವ ನಿರ್ದೇಶಕರ ಸ್ಥಾನಮಾನವನ್ನೂ "ಸ್ವತಂತ್ರ ಎಂದು ಪರಿಗಣಿಸಿರುವುದಿಲ್ಲ.

(ಎಂ) ಘನತೆವೆತ್ತ ರಾಜ್ಯಪಾಲರು ಕಂಪೆನಿಯು ಷೇರುದಾರರಾಗಿರುವ ಕಾರಣ ಕಂಪನಿಯು ಇಜಿಎಂ ಮತ್ತು ಎಜಿಎಂ ನೋಟೀಸುಗಳನ್ನು ರಾಜ್ಯಪಾಲರ ಕಛೇರಿಗೆ ಕಳಿಸಬೇಕು. ಇದನ್ನು ಪಾಲಿಸಲಾಗಿಲ್ಲ.

ಪಿ ಕೆ ಪಾಂಡೆ ಅಸೋಸಿಯೇಟ್ಸ್
ಕಂಪನಿ ಕಾರ್ಯದರ್ಶಿಗಳು

ಪಿ ಕೆ ಪಾಂಡೆ – ಮಾಲೀಕರು
ಸದಸ್ಯತ್ವ ಸಂಖ್ಯೆ: 5487
ಸ್ಥಳ : ಬೆಂಗಳೂರು
ದಿನಾಂಕ : 20/09/2019

'ಅನುಬಂಧ–I'

ಇವರಿಗೆ,
ಸದಸ್ಯರು,
ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ,
ಗುಲ್ಬರ್ಗಾ ಮುಖ್ಯ ರಸ್ತೆ,
ಗುಲಬರ್ಗಾ – 585102

ನಮ್ಮ ಇದೇ ದಿನಾಂಕದ ವರದಿಯನ್ನು ಈ ಪತ್ರದೊಂದಿಗೆ ಪರಿಗಣಿಸುವುದು.

1. ಕಾರ್ಯದರ್ಶಿಯ ದಾಖಲೆಗಳ ನಿರ್ವಹಣೆಕಂಪನಿಯ ಆಡಳಿತ ಮಂಡಳಿಯ ಜವಾಬ್ದಾರಿಯಾಗಿದೆ. ನಮ್ಮ ಲೆಕ್ಕಪರಿಶೋಧನೆಯಆಧಾರದ ಮೇಲೆ ಈ ಕಾರ್ಯದರ್ಶಿಯ ದಾಖಲೆಗಳ ಮೇಲೆ ಅಭಿಪ್ರಾಯ ವ್ಯಕ್ತಪಡಿಸುವುದು ನಮ್ಮಜವಾಬ್ದಾರಿಯಾಗಿದೆ.

2. ಕಾರ್ಯದರ್ಶಿಯ ದಾಖಲೆಗಳ ವಸ್ತುವಿಷಯದ ಸೂಕ್ತತೆಯ ಬಗ್ಗೆ ಯುಕ್ತವಾದ ಭರವಸೆಯನ್ನು ಪಡೆದುಕೊಳ್ಳಲು ಪರ್ಯಾಪ್ತವಾದ ಲೆಕ್ಕಪರಿಶೋಧನಾ ಪದ್ಧತಿಗಳು ಮತ್ತು ಪ್ರಕ್ರಿಯೆಗಳನ್ನು ನಾವು ಅನುಸರಿಸಿದ್ದೇವೆ. ಕಾರ್ಯದರ್ಶಿಯ ದಾಖಲೆಗಳಲ್ಲಿ ಸೂಕ್ತವಾದ ವಾಸ್ತವಾಂಶಗಳು ಪ್ರತಿಫಲಿತವಾಗಿದೆಎನ್ನುವುದನ್ನು ಖಚಿತಗೊಳಿಸಿಕೊಳ್ಳಲು ಪರೀಕ್ಷಾಆಧಾರದ ಮೇಲೆ ಪರಿಶೀಲನೆಯನ್ನು ನಡೆಸಲಾಯಿತು. ನಮ್ಮಅಭಿಪ್ರಾಯಕ್ಕೆ ನಾವು ಅನುಸರಿಸಿದ ಪದ್ಧತಿಗಳು ಮತ್ತು ಪ್ರಕ್ರಿಯೆಗಳು ಯುಕ್ತವಾದಆಧಾರವನ್ನುಒದಗಿಸುವುದೆಂದು ನಾವು ನಂಬಿದ್ದೇವೆ.

3. ಕಂಪನಿಯ ಹಣಕಾಸು ದಾಖಲೆಗಳು ಮತ್ತುಲೆಕ್ಕಪತ್ರಗಳ ಸೂಕ್ತತೆ ಮತ್ತು ಪರ್ಯಾಪ್ತತೆಯನ್ನು ನಾವು ಪರಿಶೀಲಿಸಿರುವುದಿಲ್ಲ.

4. ಅನ್ವಯವಾಗುವ ಕಾನೂನುಗಳು, ನಿಯಮಗಳು ಮತ್ತು ನಿಬಂಧನೆಗಳ ಅನುಸರಣೆ ಹಾಗೂ ಘಟಿಸುತ್ತಿರುವ ಸಂಗತಿಗಗಳ ಬಗ್ಗೆ, ಅಗತ್ಯವಾದೆಡೆಗಳಲ್ಲಿ ನಾವು ಆಡಳಿತ ಮಂಡಳಿಯ ಸಮರ್ಥನೆಗಳನ್ನು ಪಡೆದುಕೊಂಡಿದ್ದೇವೆ.

5. ಕಾರ್ಪೊರೇಟ್ ಮತ್ತುಇತರಅನ್ವಯವಾಗುವ ಕಾನೂನುಗಳು, ನಿಯಮಗಳು, ನಿಬಂಧನೆಗಳು, ಪ್ರಮಾಣಗಳ ಅನುಸರಣೆ ಆಡಳಿತ ಮಂಡಳಿಯ ಜವಾಬ್ದಾರಿಯಾಗಿದೆ. ಪರೀಕ್ಷಾ ಆಧಾರದ ಮೇಲೆ ಪ್ರಕ್ರಿಯೆಗಳ ಪರಿಶೀಲನೆಗೆ ನಮ್ಮ ಪರಿಶೀಲನೆ ಸೀಮಿತವಾಗಿತ್ತು.

6. ಕಾರ್ಯದರ್ಶಿಯ ಲೆಕ್ಕಪರಿಶೋಧನಾ ವರದಿಯು ಕಂಪನಿಯ ಭವಿಷ್ಯದಕಾರ್ಯಸಾಧ್ಯತೆಯ ಬಗ್ಗೆಗಾಗಲೀ ಅಥವಾ ಆಡಳಿತ ಮಂಡಳಿಯು ಕಂಪೆನಿಯು ವ್ಯವಹಾರಗಳನ್ನು ಎಷ್ಟು ಸಮರ್ಥವಾಗಿ ಅಥವಾ ಪರಿಣಾಮಕಾರಿಯಾಗಿ ನಿರ್ವಹಿಸಿದೆ ಎನ್ನುವುದರ ಬಗ್ಗೆಗಾಗಲೀ ಯಾವುದೇರೀತಿಯ ಭರವಸೆಯಾಗಿರುವುದಿಲ್ಲ.

ಪಿ ಕೆ ಪಾಂಡೆ ಅಸೋಸಿಯೇಟ್ಸ್
ಕಂಪನಿ ಕಾರ್ಯದರ್ಶಿಗಳು

ಪಿ ಕೆ ಪಾಂಡೆ – ಮಾಲೀಕರು
ಸದಸ್ಯತ್ವ ಸಂಖ್ಯೆ: 5487

ಸ್ಥಳ : ಬೆಂಗಳೂರು
ದಿನಾಂಕ : 20/09/2019

ಅನುಬಂಧ –II

ಅನ್ವಯವಾಗುವ ಇತರ ಕಾಯ್ದೆಗಳ ಪಟ್ಟಿ

1. ವಿದ್ಯುಚ್ಛಕ್ತಿ ಕಾಯ್ದೆ, 2003 ಮತ್ತು ಅದರಡಿ ರೂಪಿಸಲಾದ ನಿಯಮಗಳು ಮತ್ತು ವಿಶೇಷವಾಗಿ ಕರ್ನಾಟಕ ವಿದ್ಯುಚ್ಛಕ್ತಿ ನಿಬಂಧನಾ ಆಯೋಗದೊಂದಿಗಿನ ವಾರ್ಷಿಕ ಸಾಧನಾ ಪರಿಶೀಲನೆ ಮತ್ತು ನಿಬಂಧನಾ ಕಾರ್ಯವಿಧಾನ.
2. ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರದ (ವಿದ್ಯುತ್ ಸ್ಥಾವರಗಳು ಮತ್ತು ವಿದ್ಯುತ್ ಲೈನುಗಳ ನಿರ್ಮಾಣಕ್ಕೆ ತಾಂತ್ರಿಕ ಪ್ರಮಾಣಗಳು) ನಿಬಂಧನೆಗಳು, 2010.
3. ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರದ (ವಿದ್ಯುತ್ ಸರಬರಾಜಿಗೆ ಸಂಬಂಧಿಸಿದಂತೆ ಸುರಕ್ಷಾ ಕ್ರಮಗಳು) ನಿಬಂಧನೆಗಳು, 2010 (2015ರಲ್ಲಿ ತಿದ್ದುಪಡಿಯಾದಂತೆ).
4. ಕೇಂದ್ರ ವಿದ್ಯುಚ್ಛಕ್ತಿ ಪ್ರಾಧಿಕಾರದ (ವಿದ್ಯುತ್ ಸ್ಥಾವರಗಳು ಮತ್ತು ವಿದ್ಯುತ್ ಲೈನುಗಳ ನಿರ್ಮಾಣ, ಕಾರ್ಯಾಚರಣೆ ಮತ್ತು ನಿರ್ವಹಣೆಯ ಸುರಕ್ಷಾ ಅಗತ್ಯಗಳು) ನಿಬಂಧನೆಗಳು, 2011.
5. ಭಾರತೀಯ ವಿದ್ಯುಚ್ಛಕ್ತಿ ಗ್ರಿಡ್ ಸಂಕೇತ ನಿಬಂಧನೆಗಳು 2010
6. ಇಂಧನ ಸಂರಕ್ಷಣಾ ಕಾಯ್ದೆ, 2011
7. ಅರಣ್ಯ (ಸಂರಕ್ಷಣಾ) ಕಾಯ್ದೆ, 1980
8. ಭಾರತೀಯ ಗುತ್ತಿಗೆ ಕಾಯ್ದೆ
9. ಕರ್ನಾಟಕ ಆವಶ್ಯಕ ಸೇವೆಗಳ ನಿರ್ವಹಣಾ ಕಾಯ್ದೆ, 1994

ಕಂಪೆನಿಗೆ ಅನ್ವಯವಾಗುವ ಕಾಯ್ದೆಗಳು, ಕಾನೂನುಗಳು, ನಿಯಮಗಳು, ನಿಬಂಧನೆಗಳು, ಮಾರ್ಗಸೂಚಿಗಳ ಅಡಿಯಲ್ಲಿನ ಅನುಸರಣೆಗಳನ್ನು ಖಚಿತಗೊಳಿಸಿಕೊಳ್ಳಲು ಕಂಪನಿಯು ಸ್ಥಾಪಿಸಿರುವ ವ್ಯವಸ್ಥೆಗಳು ಮತ್ತು ಕಾರ್ಯವಿಧಾನಗಳನ್ನು ಸಹ ನಾನು ಪರಿಶೀಲಿಸಿರುತ್ತೇನೆ ಮತ್ತು ಅವುಗಳನ್ನು ಕೆಳಗಿನಂತೆ ಪ್ರಧಾನ ಶೀರ್ಷಿಕೆಗಳ/ಗುಂಪುಗಳ ಅಡಿಯಲ್ಲಿ ವರ್ಗೀಕರಿಸಿರುತ್ತೇನೆ:

1. ವಾಯು (ಮಾಲಿನ್ಯದ ತಡೆಗಟ್ಟುವಿಕೆ ಮತ್ತು ನಿಯಂತ್ರಣ) ಕಾಯ್ದೆ, 1961
2. ಜಲ (ಮಾಲಿನ್ಯದ ತಡೆಗಟ್ಟುವಿಕೆ ಮತ್ತು ನಿಯಂತ್ರಣ) ಕಾಯ್ದೆ, 1974
3. ಜಲ (ಮಾಲಿನ್ಯದ ತಡೆಗಟ್ಟುವಿಕೆ ಮತ್ತು ನಿಯಂತ್ರಣ) ಉಪಕರ ಕಾಯ್ದೆ, 1977
4. ಪರಿಸರ (ಸಂರಕ್ಷಣಾ) ಕಾಯ್ದೆ, 1986
5. ಕೆಲಸದ ಸ್ಥಳಗಳಲ್ಲಿ ಮಹಿಳೆಯರ ಮೇಲೆ ಲೈಂಗಿಕ ದೌರ್ಜನ್ಯ (ತಡೆಗಟ್ಟುವಿಕೆ, ನಿಷೇಧ ಮತ್ತು ನಿವಾರಣೆ) ಕಾಯ್ದೆ, 2013
6. ಗ್ರಾಹಕ ಸಂರಕ್ಷಣಾ ಕಾಯ್ದೆ, 1986
7. ಪ್ರಶಿಕ್ಷಕ ಕಾಯ್ದೆ, 1961
8. ಕಾರ್ಖಾನೆಗಳ ಕಾಯ್ದೆ 1948 ಮತ್ತು ನಿಯಮಗಳು
9. ಕೈಗಾರಿಕಾ ವಿವಾದಗಳ ಕಾಯ್ದೆ, 1947
10. ಹೆರಿಗೆ ಸವಲತ್ತು ಕಾಯ್ದೆ (ಇಎಸ್ಐ ವ್ಯಾಪ್ತಿಯ ಹೊರಗಿರುವ ಮಹಿಳಾ ನೌಕರರಿಗೆ ಅನ್ವಯವಾಗುವಂಥದ್ದು)
11. ಗುತ್ತಿಗೆಕಾರ್ಮಿಕ (ನಿಯಂತ್ರಣ ಮತ್ತು ನಿಷೇಧ) ಕಾಯ್ದೆ 1970
12. ಗುತ್ತಿಗೆಕಾರ್ಮಿಕ(ನಿಯಂತ್ರಣ ಮತ್ತು ನಿಷೇಧ) ಕರ್ನಾಟಕ ನಿಯಮಗಳು 1974
13. ಬೋನಸ್ ಪಾವತಿಕಾಯ್ದೆ, 1965
14. ಕೂಲಿ ಪಾವತಿಕಾಯ್ದೆ, 1936
15. ವರ್ಕ್‌ಮೆನ್ ಪರಿಹಾರಕಾಯ್ದೆ, 1923
16. ಕೆಇಆರ್‌ಸಿ (ಸಾಮಾನ್ಯ & ನಡಾವಳಿಗಳ ನಡೆಸುವಿಕೆ) ನಿಬಂಧನೆಗಳು 2000
17. ಕೆಇಆರ್‌ಸಿ (ಪರವಾನಗಿ) ನಿಬಂಧನೆಗಳು 2000
18. ಕೆಇಆರ್‌ಸಿ (ಶುಲ್ಕ) ನಿಬಂಧನೆಗಳು 2016
19. ಕೆಇಆರ್‌ಸಿ (ದರ) ನಿಬಂಧನೆಗಳು 2000
20. ಕೆಇಆರ್‌ಸಿ (ವಿದ್ಯುಚ್ಛಕ್ತಿ ಸರಬರಾಜಿನ ವೆಚ್ಚದ ವಸೂಲಿ) ನಿಬಂಧನೆಗಳು 2004
21. ಕೆಇಆರ್‌ಸಿ (ವಿದ್ಯುಚ್ಛಕ್ತಿ ಸರಬರಾಜು) ಸಂಹಿತೆ 2004
22. ಕರ್ನಾಟಕ (ವಿದ್ಯುಚ್ಛಕ್ತಿ ಸರಬರಾಜು) ಸಂಹಿತೆ 2004
23. ಕರ್ನಾಟಕವಿದ್ಯುಚ್ಛಕ್ತಿ ಮಂಡಳಿ ನೌಕರರ ಸೇವಾ ನಿಬಂಧನೆಗಳು
24. ಕರ್ನಾಟಕರಾಜ್ಯದಲ್ಲಿ ಹಂಚಿಕೆ ಪರವಾನಗಿದಾರಿಗೆ ವಿದ್ಯುಚ್ಛಕ್ತಿ ಸರಬರಾಜಿಗೆ ಷರತ್ತುಗಳು, ಗೆಝೆಟ್‌ಅಧಿಸೂಚನೆ, ದಿನಾಂಕ 17.06.2006.
25. ಕೆಇಆರ್‌ಸಿ ಅಧಿಸೂಚನೆ ಸಂ. ಕೆಇಆರ್‌ಸಿ/ಸಿಓಎಸ್/ಡಿ/07/10 ದಿನಾಂಕ 01.07.2016
26. ಕರ್ನಾಟಕ ವಿದ್ಯುಚ್ಛಕ್ತಿಮಂಡಳಿ ನೇಮಕಾತಿ ಮತ್ತು ಬಡ್ತಿ ನಿಬಂಧನೆಗಳು, ನೌಕರರ (ಪರೀಕ್ಷಾರ್ಥಕಅವಧಿ) ನಿಬಂಧನೆ ಮತ್ತು ನೌಕರರ (ಹಿರಿತನ) ನಿಬಂಧನೆಗಳು
27. ನೌಕರರರಾಜ್ಯ ವಿಂಆ ಕಾಯ್ದೆ, 1948
28. ನೌಕರರ ಭವಿಷ್ಯ ನಿಧಿ & ಇತರೆ ಉಪಬಂಧಗಳ ಕಾಯ್ದೆ,1952
29. ನೌಕರಿ ವಿನಿಮಯಗಳ ಕಾಯ್ದೆ, 1959
30. ಸಮಾನ ಸಂಭಾವನೆ ಕಾಯ್ದೆ, 1976
31. ಕನಿಷ್ಠ ಕೂಲಿ ಕಾಯ್ದೆ, 1947
32. ಸಂಪತ್ತಿಕರ

ಸ್ಥಳ : ಬೆಂಗಳೂರು
ದಿನಾಂಕ : 20/09/2019

ಪಿ ಕೆ ಪಾಂಡೆ ಅಸೋಸಿಯೇಟ್ಸ್
ಕಂಪನಿ ಕಾರ್ಯದರ್ಶಿಗಳು

ಪಿ ಕೆ ಪಾಂಡೆ – ಮಾಲೀಕರು
ಸದಸ್ಯತ್ವ ಸಂಖ್ಯೆ: 5487

ಅನುಬಂಧ–5

ಹಣಕಾಸು ವರ್ಷ 2018–19ರ ತಮ್ಮ ವರದಿಯಲ್ಲಿ ಕಾರ್ಯದರ್ಶೀಯ ಲೆಕ್ಕಪರಿಶೋಧಕರು ಮಾಡಿರುವ ಗಮನಿಕೆಗಳು/ಪರಿಶೀಲನೆಗಳಿಗೆ ಉತ್ತರಗಳು

ಕ್ರ ಸಂ.	ಕಾರ್ಯದರ್ಶೀಯ ಲೆಕ್ಕಪರಿಶೋಧಕರ ಗಮನಿಕೆಗಳು/ಪರಿಶೀಲನೆಗಳು	ಆಡಳಿತ ಮಂಡಳಿಯ ಉತ್ತರ
1.	ಎಂಜಿಟಿ– 1 ಮತ್ತು ಷೇರು ವರ್ಗಾವಣೆ ಲೆಡ್ಜರ್‌ಗಳನ್ನು ಕಂಪೆನಿಯು ನೋಂದಾಯಿತ ಕಛೇರಿಯಲ್ಲಿ ಇರಿಸಿ ನಿರ್ವಹಿಸಿರುವುದಿಲ್ಲ. ಕಂಪನಿ ಕಾಯ್ದೆ 1956 ಪ್ರಕಾರ ಖಾಯಂ ದಾಖಲೆಯಾಗಿ ಇರಿಸ, ನಿರ್ವಹಿಸಿ, ಸಂರಕ್ಷಿಸಬೇಕಾದ ಶಾಸನಬದ್ಧ ಪುಸ್ತಕಗಳನ್ನು ನಮಗೆ ತೋರಿಸಲು ಕಂಪನಿಗೆ ಸಾಧ್ಯವಾಗಲಿಲ್ಲ.	ಅನುಸರಣೆಗಾಗಿ ಗುರುತುಮಾಡಿಕೊಳ್ಳಲಾಗಿದೆ. ಕಂಪನಿಯ ಎಲ್ಲ ಶಾಸನಬದ್ಧ ರಿಜಿಸ್ಟರ್‌ಗಳನ್ನು ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತದಲ್ಲಿ ನಿರ್ವಹಿಸಲಾಗುತ್ತಿದ್ದು ಅಲ್ಲಿಯೇ ಕಂಪನಿ ಕಾಯ್ದೆಯ ಅಡಿಯ ಎಲ್ಲ ಅನುಸರಣೆಗಳನ್ನೂ ನಡೆಸಲಾಗುತ್ತಿತ್ತು. ಕಂಪನಿ ಕಾಯ್ದೆ, 2013ರ ಪರಿಚ್ಛೇದ 203ರ ಅಗತ್ಯದಂತೆ ಪೂರ್ಣಾವಧಿ ಕಂಪನಿ ಕಾರ್ಯದರ್ಶಿಯನ್ನು ಕಂಪನಿಯು ನೇಮಿಸಿರುವ ಕಾರಣ ಈ ಶಾಸನಬದ್ಧ ದಾಖಲೆಗಳನ್ನು ಇನ್ನುಮುಂದೆ ಕಂಪನಿಯ ಕಛೇರಿಯಲ್ಲಿ ನಿರ್ವಹಿಸಲಾಗುವುದು.
2.	ಲೆಕ್ಕಪರಿಶೋಧನೆಯ ಸಂದರ್ಭದಲ್ಲಿ ಪಡೆದುಕೊಳ್ಳಲಾದ ಮಾಹಿತಿಯು ಪ್ರಕಾರ ಷೇರು ಪ್ರಮಾಣಪತ್ರಗಳ ಹಿಂಭಾಗದಲ್ಲಿ ವರ್ಗಾವಣೆಯನ್ನು ಸೂಚಿಸುವ ಅನುಮೋದನೆಯನ್ನು ಮಾಡಲಾಗಿಲ್ಲ.	ಅನುಸರಣೆಗಾಗಿ ಗುರುತುಮಾಡಿಕೊಳ್ಳಲಾಗಿದೆ.
3.	ಕಂಪನಿಯು ತನ್ನ ಸಂಘ ನಿಯಮಾವಳಿಗಾಗಿ ಕೋಷ್ಟಕ 'ಎಫ್' ಅಳವಡಿಕೆಯನ್ನು ಇನ್ನೂ ಮಾಡಿರುವುದಿಲ್ಲ.	ಅನುಸರಣೆಗಾಗಿ ಗುರುತುಮಾಡಿಕೊಳ್ಳಲಾಗಿದೆ. ಕಂಪೆನಿಯು ಇದನ್ನು ಅನುಸರಿಸುವ ಪ್ರಕ್ರಿಯೆಯಲ್ಲಿ ತೊಡಗಿದೆ.
4.	ಎಸ್‌ಎಸ್–1 ಮತ್ತು ಎಸ್‌ಎಸ್–2 ರ ಜಾರಿಯಲ್ಲಿ ಸುಧಾರಣೆಗೆ ಅವಕಾಶವಿದೆ.	ಗುರುತುಮಾಡಿಕೊಳ್ಳಲಾಗಿದೆ.
5.	ಎಂಬಿಪಿ ಯನ್ನು ಹಣಕಾಸು ವರ್ಷದ ಮೊದಲ ಮಂಡಳಿ ಸಭೆಯಲ್ಲಿ ಎಲ್ಲ ನಿರ್ದೇಶಕರುಗಳಿಗೆ ಇರಿಸಬೇಕಿರುವ ಅಗತ್ಯಕ್ಕೆ ಪ್ರತಿಯಾಗಿ ಕೇವಲ ಐದು ನಿರ್ದೇಶಕರಿಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧನಾ ಅವಧಿಯ ಎರಡನೆಯ ಬಿಎಂ ಅವಧಿಯಲ್ಲಿ ಇರಿಸಲಾಯಿತು.	ವಿಳಂಬವು ಅನುದ್ದೇಶಿತವಾದುದಾಗಿದೆ. ಕಾಯ್ದೆಯ ಉಪಬಂಧಗಳ ಅನುಸರಣೆಯಲ್ಲಿ ಯುಕ್ತವಾದ ಎಚ್ಚರವನ್ನು ಇನ್ನು ಮುಂದೆ ತೆಗೆದುಕೊಳ್ಳಲಾಗುವುದು.
6.	ಕಂಪನಿಯ ಸ್ವರೂಪ ಮತ್ತು ಗಾತ್ರವು ಕಾಯ್ದೆ ಪರಿಚ್ಛೇದ 178ರ ಅಡಿಯಲ್ಲಿ ನಾಮನಿರ್ದೇಶನ ಮತ್ತು ಸಂಭಾವನೆ ಸಮಿತಿಯ ರಚನೆ ಹಾಗೂ ಪರಿಚ್ಛೇದ 177ರ ಅಡಿಯಲ್ಲಿ ಕಣ್ಗಾವಲು ಕಾರ್ಯವಿಧಾನ ವ್ಯವಸ್ಥೆಯ ಸ್ಥಾಪನೆಯನ್ನು ಬೇಡುತ್ತದೆ.	ಅನುಸರಣೆಗಾಗಿ ಗುರುತುಮಾಡಿಕೊಳ್ಳಲಾಗಿದೆ. ಕಂಪನಿಯು ಇದನ್ನು ಅನುಸರಿಸುವ ಪ್ರಕ್ರಿಯೆಯಲ್ಲಿ ತೊಡಗಿದೆ.
7.	ಕಂಪನಿ ಕಾಯ್ದೆ, 2013ರ ಪರಿಚ್ಛೇದ 203ರ ಅಡಿ ಅಗತ್ಯವಿರುವಂತೆ ಕಂಪನಿಯು ಪೂರ್ಣಾವಧಿ ಕಂಪನಿ ಕಾರ್ಯದರ್ಶಿಯನ್ನು ನೇಮಿಸಿರುವುದಿಲ್ಲ ಮತ್ತು ಇದು ಸದರಿ ಕಾಯ್ದೆಯ ಉಪಬಂಧಗಳ ಉಲ್ಲಂಘನೆಯಾಗಿದೆ.	ಕಂಪನಿ ಕಾಯ್ದೆ, 2013ರ ಪರಿಚ್ಛೇದ 203ರ ಅಗತ್ಯದಂತೆ ಪೂರ್ಣಾವಧಿ ಕಂಪನಿ ಕಾರ್ಯದರ್ಶಿಯನ್ನು ಕಂಪನಿಯು ನೇಮಿಸಿದೆ ಮತ್ತು ಸದರಿ ಕಂಪೆನಿ ಕಾರ್ಯದರ್ಶಿಯು 18 ಸೆಪ್ಟೆಂಬರ್ 2019ರಿಂದ ಕರ್ತವ್ಯಕ್ಕೆ ಹಾಜರಾಗಿದ್ದಾರೆ.
8.	ಕಂಪನಿಯು ACTIVE – INC-22AE-ಅರ್ಜಿಯನ್ನು ಸಲ್ಲಿಸಿರುವುದಿಲ್ಲ ಮತ್ತು ಈ ಕಾರಣದಿಂದಾಗಿ ಎಂಸಿಎ ವೆಬ್‌ಸೈಟಿನಲ್ಲಿ ಕಂಪನಿಯ ಹಾಗೂ ನಿರ್ದೇಶಕರುಗಳ ಸ್ಥಿತಿಗತಿಯನ್ನು "ACTIVE Non-Compliant" ಎಂದು ಪ್ರಕಟಿಸಲಾಗಿದೆ. ಈ ಅರ್ಜಿಯನ್ನು ಸಲ್ಲಿಸಲು ಇರುವ ಪೂರ್ವ ಅಗತ್ಯವೆಂದರೆ ಕಾಯ್ದೆಯ ಪರಿಚ್ಛೇದ 203ರ ಅನುಸರಣೆ, ಅರ್ಥಾತ್ ಅರ್ಹ ಪೂರ್ಣಾವಧಿ ಕಂಪನಿ ಕಾರ್ಯದರ್ಶಿಯ ನೇಮಕವಾಗಿದೆ.	ಅನುಸರಣೆಗಾಗಿ ಗುರುತುಮಾಡಿಕೊಳ್ಳಲಾಗಿದೆ. ಕಂಪೆನಿ ಕಾರ್ಯದರ್ಶಿಯನ್ನು ಕಂಪನಿಯು ನೇಮಿಸಿರುವ ಕಾರಣ – ಐಎನ್‌ಸಿ 22ಎ ಸಲ್ಲಿಸಲು ಇರುವ ಪೂರ್ವ ಅಗತ್ಯಗಳಲ್ಲಿ ಇದೂ ಒಂದು – ಆರ್‌ಓಸಿ ಯಲ್ಲಿ ಐಎನ್‌ಸಿ 22ಎ ಸಲ್ಲಿಸಲಾಗುವುದು.

ಕ್ರ.ಸಂ.	ಕಾರ್ಯದರ್ಶಿಯ ಲೆಕ್ಕಪರಿಶೋಧಕರ ಗಮನಿಕೆಗಳು/ಪರಿಶೀಲನೆಗಳು	ಆಡಳಿತ ಮಂಡಳಿಯ ಉತ್ತರ
9.	ನಿರ್ದೇಶಕರ ನೇಮಕಾತಿಯು ಕರ್ನಾಟಕ ಸರ್ಕಾರವು ಹೊರಡಿಸುವ ಅಧಿಸೂಚನೆಯನ್ನು ಆಧರಿಸಿದೆ. ಅಧಿಸೂಚನೆಯ ಪ್ರಕಾರ ನೇಮಕವಾದ ನಿರ್ದೇಶಕರ ಪದನಾಮವು "ನಾಮನಿರ್ದೇಶಿತ ನಿರ್ದೇಶಕರು" ಎಂದಿರಬೇಕು ಮತ್ತು 'ಸ್ವತಂತ್ರ', 'ಪೂರ್ಣಾವಧಿ', ವ್ಯವಸ್ಥಾಪಕ ನಿರ್ದೇಶಕರು', 'ಕಾರ್ಯನಿರ್ವಾಹಕ', 'ಕಾರ್ಯನಿರ್ವಾಹಕೇತರ' ಮುಂತಾದ ಇತರ ಪರಿಭಾಷೆಯು ಸಂದರ್ಭಾನುಸಾರ ಇರಬಹುದು. ಕರ್ನಾಟಕ ಸರ್ಕಾರವು ಎಲ್ಲ ನಿರ್ದೇಶಕರನ್ನೂ ನಾಮನಿರ್ದೇಶನ ಮಾಡುವ ಕಾರಣ ಎಲ್ಲ ನಿರ್ದೇಶಕರ ಮೂಲ ಲಕ್ಷಣವು 'ನಾಮನಿರ್ದೇಶಿತ ನಿರ್ದೇಶಕರು' ಎಂದಾಗಿರುತ್ತದೆ.	ಕಂಪನಿಯ ಸಂಘ ನಿಯಮಾವಳಿಯ ನಿಯಮ 74ರ ಅಡಿ ನಿಹಿತವಾಗಿರುವ ಅಧಿಕಾರವನ್ನು ಬಳಸಿ ಕರ್ನಾಟಕ ಸರ್ಕಾರವು ಕಂಪನಿಯ ಮಂಡಳಿಗೆ ನಿರ್ದೇಶಕರನ್ನು ನೇಮಿಸುತ್ತದೆ. ಹೀಗೆ ಮಂಡಳಿಗೆ ನೇಮಕವಾಗುವ ನಿರ್ದೇಶಕರು ಸರ್ಕಾರವು ಅವರನ್ನು ನಾಮನಿರ್ದೇಶಿತ ನಿರ್ದೇಶಕರು ಎಂದು ನೇಮಿಸದ ಪಕ್ಷದಲ್ಲಿ ನಾಮನಿರ್ದೇಶಿತ ನಿರ್ದೇಶಕರಾಗಿ ಇರಬೇಕಿಲ್ಲ. ಕಂಪನಿಯ ಸಂಘ ನಿಯಮಾವಳಿಯ ನಿಯಮ 76 ನಾಮನಿರ್ದೇಶಿತ ನಿರ್ದೇಶಕರನ್ನು ಕುರಿತದ್ದಾಗಿದೆ ಮತ್ತು ಹಣಕಾಸು ಸಂಸ್ಥೆಗಳು/ನಿಗಮಗಳು ನಾಮನಿರ್ದೇಶಿತ ನಿರ್ದೇಶಕರನ್ನು ನೇಮಿಸಬಹುದೆಂದು ನಿಗದಿಪಡಿಸುತ್ತದೆ. ಹಾಗಾಗಿ, ಕಂಪನಿಯ ಎಲ್ಲ ನಿರ್ದೇಶಕರಿಗೂ ನಾಮನಿರ್ದೇಶಿತ ನಿರ್ದೇಶಕರೆಂದು ಮರುಪದನಾಮ ನೀಡುವುದು ಸೂಕ್ತವಾದುದಲ್ಲ. ವ್ಯವಸ್ಥಾಪಕ ನಿರ್ದೇಶಕರು, ಸ್ವತಂತ್ರ ನಿರ್ದೇಶಕರುಗಳ ಮರುಪದನಾಮ ನಿಯುಕ್ತಿಗೆ ಸಂಬಂಧಿಸಿದಂತೆ ಅಗತ್ಯ ಅನುಸರಣೆಯನ್ನು ಮಾಡಲಾಗುವುದು.
10.	ಕಂಪನಿಯು ತನ್ನ ವೆಬ್‌ವಿಳಾಸದಲ್ಲಿ ಕಡ್ಡಾಯವಾಗಿ ವಾರ್ಷಿಕ ಸಲ್ಲಿಕೆಗಳು ಮತ್ತು ಸಿಎಸ್‌ಆರ್ ನೀತಿಯ ಪ್ರತಿಯನ್ನು ಪ್ರಕಟಿಸಬೇಕು, ಆದರೆ ಇವುಗಳನ್ನು ಪ್ರಕಟಿಸಲಾಗಿಲ್ಲ.	ಅನುಸರಣೆಗಾಗಿ ಗುರುತುಮಾಡಿಕೊಳ್ಳಲಾಗಿದೆ.
11.	ಪ್ರತಿಯೊಂದು ಇ-ಅರ್ಜಿಯನ್ನು ಸಲ್ಲಿಸುವಾಗ ನಿರ್ದಿಷ್ಟ ನಿರ್ದೇಶಕರು ತಮ್ಮ ಡಿಜಿಟಲ್ ಸಹಿಯನ್ನು ಬಳಸಲು ಮಂಡಳಿಯಿಂದ ಅಧಿಕಾರವನ್ನು ಪಡೆದಿರಬೇಕು ಮತ್ತು ಇ-ಅರ್ಜಿಗಳಲ್ಲಿ ಬಿಎಂ ದಿನಾಂಕ ಮತ್ತು ನೋಂದಣಿ ಸಂಖ್ಯೆಯನ್ನು ನಮೂದಿಸಬೇಕು. ಗಮನಿಸಲಾಗಿರುವಂತೆ, ಇ-ಅರ್ಜಿಗಳಲ್ಲಿ ಕೆಲವು ದಿನಾಂಕಗಳನ್ನು ನಮೂದಿಸಲಾಗಿದೆ, ಆದರೆ ಅವುಗಳಲ್ಲಿ ಕೆಲವು ದಿನಾಂಕಗಳು 2016ಕ್ಕೆ ಸಂಬಂಧಪಟ್ಟಿದ್ದು ಆ ಸಂದರ್ಭದಲ್ಲಿ ಯಾವುದೇ ಅಧಿಕಾರವನ್ನೂ ನಿರ್ದೇಶಕರಿಗೆ ನೀಡಲಾಗಿರುವುದಿಲ್ಲ. 18.6.2018 ರಂದು ಒಂದು ಪ್ರಕರಣದಲ್ಲಿ ಅಧಿಕಾರವನ್ನು ನೀಡಲಾಗಿದೆಯಾದರೂ ಬಿಎಂ ಆ ದಿನಾಂಕದಂದು ನಡೆದಿಲ್ಲ ಎನ್ನುವ ಅಂಶವನ್ನು ಗಮನಿಸಲಾಗಿದೆ.	ಅನುಸರಣೆಗಾಗಿ ಗುರುತುಮಾಡಿಕೊಳ್ಳಲಾಗಿದೆ. ಇದು ಅನುದ್ದೇಶಿತ ಲೋಪವಾಗಿದೆ. ಸಚಿವಾಲಯಕ್ಕೆ ಇ-ಅರ್ಜಿಗಳನ್ನು ಸಲ್ಲಿಸುವಾಗ ಯುಕ್ತವಾದ ಎಚ್ಚರವನ್ನು ವಹಿಸಲಾಗುವುದು.
12.	ಕಂಪನಿ ಕಾಯ್ದೆ 2013ರ ಪರಿಚ್ಛೇದ 149(6) ಪ್ರಕಾರ ಕಂಪನಿಯ ಮಂಡಳಿಯಲ್ಲಿ ಒಟ್ಟು ನಿರ್ದೇಶಕರ ಪೈಕಿ 1/3 ರಷ್ಟು ಸಂಖ್ಯೆಯಲ್ಲಿ ಸ್ವತಮತ್ರ ನಿರ್ದೇಶಕರನ್ನು ಕಂಪೆನಿ ಹೊಂದಿರಬೇಕು. ಯಾವ ನಿರ್ದೇಶಕರ ಸ್ಥಾನಮಾನವನ್ನೂ "ಸ್ವತಂತ್ರ ಎಂದು ಪರಿಗಣಿಸಿರುವುದಿಲ್ಲ.	ಕಂಪನಿ ಕಾಯ್ದೆ, 2013ರ ಪರಿಚ್ಛೇದ 149(4)ರ ಉಪಬಂಧಗಳ ಅನುಸಾರ ಪ್ರತಿಯೊಂದು ಲಿಸ್ಟೆಡ್ ಕಂಪೆನಿಯೂ ಒಟ್ಟು ನಿರ್ದೇಶಕರ ಪೈಕಿ 1/3ರಷ್ಟು ನಿರ್ದೇಶಕರನ್ನು ಸ್ವತಂತ್ರ ನಿರ್ದೇಶಕರನ್ನಾಗಿ ಹೊಂದಿರಬೇಕು. ಕಂಪೆನಿಗಳ (ನೇಮಕಾತಿ ಮತ್ತು ನಿರ್ದೇಶಕರ ಅರ್ಹತೆ) ನಿಯಮಗಳ ನಿಯಮ-4 ತಿದ್ದುಪಡಿಯಾದಂತೆ – ಸದರಿ ನಿಯಮದಡಿ ಪ್ರತಿ ಸಾರ್ವಜನಿಕ ಕಂಪೆನಿಯ ಸಭಾ ಮಾನದಂಡವು ಕನಿಷ್ಠ 2 (ಇಬ್ಬರು) ನಿರ್ದೇಶಕರನ್ನು ಸ್ವತಂತ್ರ ನಿರ್ದೇಶಕರನ್ನಾಗಿ ಹೊಂದಿರುವುದನ್ನು ನಿಗದಿಪಡಿಸುತ್ತದೆ. ನಮ್ಮ ಕಂಪೆನಿಯು ಲಿಸ್ಟೆಡ್ ಕಂಪೆನಿಯಾಗಿರದ ಕಾರಣ 1/3ರಷ್ಟು ನಿರ್ದೇಶಕರನ್ನು ಸ್ವತಂತ್ರ ನಿರ್ದೇಶಕರನ್ನಾಗಿ

ಕ್ರ.ಸಂ.	ಕಾರ್ಯದರ್ಶಿಯ ಲೆಕ್ಕಪರಿಶೋಧಕರ ಗಮನಿಕೆಗಳು/ಪರಿಶೀಲನೆಗಳು	ಆಡಳಿತ ಮಂಡಳಿಯ ಉತ್ತರ
		ನೇಮಿಸುವುದು ಕಂಪೆನಿಗೆ ಅನ್ವಯವಾಗುವುದಿಲ್ಲ. ಆದರೆ, ಕಂಪನಿಗಳ (ನೇಮಕಾತಿ ಮತ್ತು ನಿರ್ದೇಶಕರ ಅರ್ಹತೆ) ನಿಯಮಗಳು, 2014ರ ನಿಯಮ 4 ರ ಅನುಸಾರ ಕಂಪೆನಿಯು ಈಗಾಗಲೇ ಸ್ವತಂತ್ರ ನಿರ್ದೇಶಕರನ್ನು ನೇಮಿಸಿದೆ. ಸ್ವತಂತ್ರ ನಿರ್ದೇಶಕರ ಸ್ಥಾನಮಾನಗಳನ್ನು ಎಂಸಿಎ ವೆಬ್‌ಸೈಟ್ ಪ್ರಕಟಿಸುವುದನ್ನು ಖಚಿತಪಡಿಸಿಕೊಳ್ಳಲು ಅಗತ್ಯ ಔಪಚಾರಿಕತೆಗಳನ್ನು ಪೂರ್ಣಗೊಳಿಸಲಾಗುವುದು.
13.	ಘನತೆವೆತ್ತ ರಾಜ್ಯಪಾಲರು ಕಂಪೆನಿಯು ಷೇರುದಾರರಾಗಿರುವ ಕಾರಣ ಕಂಪೆನಿಯು ಇಜಿಎಂ ಮತ್ತು ಎಜಿಎಂ ನೋಟೀಸುಗಳನ್ನು ರಾಜ್ಯಪಾಲರ ಕಛೇರಿಗೆ ಕಳಿಸಬೇಕು. ಇದನ್ನು ಪಾಲಿಸಲಾಗಿಲ್ಲ.	ಅನುಸರಣೆಗಾಗಿ ಗುರುತುಮಾಡಿಕೊಳ್ಳಲಾಗಿದೆ.

ನಿರ್ದೇಶಕರು (ತಾಂತ್ರಿಕ)
ಜೆಸ್ಕಾಂ

ವ್ಯವಸ್ಥಾಪಕ ನಿರ್ದೇಶಕರು
ಜೆಸ್ಕಾಂ

ವೆಚ್ಚ ಲೆಕ್ಕಪರಿಶೋಧನಾ ವರದಿ

ನಾವು, ಎಸ್ ಕೆ ಟಿಕಾರೆ & ಕೊ, ವೆಚ್ಚ ಲೆಕ್ಕಿಗರು, ಸ್ಟೇಶನ್ ರಸ್ತೆ, ಗುಲ್ಬರ್ಗಾ, ಕರ್ನಾಟಕ–585102 – ಇಲ್ಲಿ ನೋಂದಾಯಿತ ಕಛೇರಿಯನ್ನು ಹೊಂದಿದ್ದು ಕಂಪನಿ ಕಾಯ್ದೆ 2013 (2013ರ 18) ಪರಿಚ್ಛೇದ 148(3)ರ ಅಡಿ ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ (ಇನ್ನು ಮುಂದೆ ಕಂಪೆನಿ) – ಇದರ ವೆಚ್ಚಲೆಕ್ಕಪರಿಶೋಧಕರಾಗಿ ನೇಮಕಗೊಂಡಿದ್ದು ಕಾಯ್ದೆಯ ಪರಿಚ್ಛೇದ 148ರ ಅಡಿ ಕಂಪನಿ ನಿರ್ವಹಿಸಿರುವ ವೆಚ್ಚ ದಾಖಲೆಗಳನ್ನು ಕಂಪನಿ ನಿರ್ವಹಿಸಿರುವ ವಿದ್ಯುಚ್ಛಕ್ತಿ ಉದ್ಯಮ – 2018–19ರ ವರ್ಷದ ವಿದ್ಯುಚ್ಛಕ್ತಿ ಹಂಚಿಕೆ ಮತ್ತು ಚಿಲ್ಲರೆ ಸರಬರಾಜು – ಇದಕ್ಕೆ ಸಂಬಂಧಿಸಿದ ವೆಚ್ಚ ಲೆಕ್ಕಪರಿಶೋಧನಾ ಪ್ರಮಾಣಗಳ ಅನುಸಾರ ಲೆಕ್ಕಪರಿಶೋಧಿಸಿದ್ದು ಕಂಡಿಕೆ 2ರಲ್ಲಿನ ನಮ್ಮ ಪರಿಶೀಲನೆಗಳು ಮತ್ತು ಸೂಚನೆಗಳ ಜೊತೆಗೆ ಹೀಗೆ ವರದಿಮಾಡುತ್ತಿದ್ದೇವೆ:

1) ಈ ಲೆಕ್ಕಪರಿಶೋಧನೆಯ ಉದ್ದೇಶಕ್ಕೆ ಅಗತ್ಯವೆಂದು ನಮ್ಮ ಅತ್ಯುತ್ತಮ ತಿಳುವಳಿಕೆ ಮತ್ತು ನಂಬಿಕೆಗೆ ತೋರಿದ ಎಲ್ಲ ಮಾಹಿತಿ ಮತ್ತು ವಿವರಣೆಗಳನ್ನು ಪಡೆದುಕೊಂಡಿರುತ್ತೇವೆ.

2) ನಮ್ಮ ಅಭಿಪ್ರಾಯದಲ್ಲಿ, ಕಂಪೆನಿಗಳ (ವೆಚ್ಚ ದಾಖಲೆಗಳು ಮತ್ತು ಲೆಕ್ಕಪರಿಶೋಧನೆ) ನಿಯಮಗಳು, 2014ರ ಪ್ರಕಾರ ಉಲ್ಲೇಖದಲ್ಲಿರುವ ಸೇವೆಗಳಿಗೆ ಸಂಬಂಧಿಸಿದಂತೆ ಕಂಪನಿಯು ಸೂಕ್ತ ವೆಚ್ಚ ದಾಖಲೆಗಳನ್ನು ನಿರ್ವಹಿಸಿರುತ್ತದೆ (ತಮ್ಮ ಪತ್ರದ ಮೂಲಕ ಕಂಪೆನಿಯಿಂದ ಇದನ್ನು ಸ್ಥಿರೀಕರಿಸಿರುತ್ತದೆ).

3) ನಮ್ಮ ಅಭಿಪ್ರಾಯದಲ್ಲಿ, ನಾವು ಸಂದರ್ಶಿಸಿದ ಶಾಖೆಗಳಿಂದ ವೆಚ್ಚ ಲೆಕ್ಕಪರಿಶೋಧನೆಯ ಉದ್ದೇಶಕ್ಕೆ ಪರ್ಯಾಪ್ತವಾದ ಸೂಕ್ತ ಸಲ್ಲಿಕೆಗಳು/ದಾಖಲೆಗಳನ್ನು ನಾವು ಪಡೆದಿರುತ್ತೇವೆ.

4) ನಮ್ಮ ಅಭಿಪ್ರಾಯದಲ್ಲಿ ಹಾಗೂ ನಮ್ಮ ಅತ್ಯುತ್ತಮ ತಿಳುವಳಿಕೆಯ ಪ್ರಕಾರ ಹೇಳಲಾದ ಲೆಕ್ಕಪುಸ್ತಕಗಳು ಹಾಗೂ ದಾಖಲೆಗಳು ಕಂಪನಿ ಕಾಯ್ದೆ 2013ರ ಅಗತ್ಯದಂತೆ ಹಾಗೂ ಅಗತ್ಯವಿರುವ ವಿಧದಲ್ಲಿ ಮಾಹಿತಿಯನ್ನು ನೀಡುತ್ತವೆ.

5) ನಮ್ಮ ಅಭಿಪ್ರಾಯದಲ್ಲಿ, ಕಂಪನಿಯು ತನ್ನ ವ್ಯಾಪಾರದ ಸ್ವರೂಪ ಮತ್ತು ಗಾತ್ರಕ್ಕೆ ಹೊಂದುವಂತೆ ವೆಚ್ಚ ದಾಖಲೆಗಳ ಪರ್ಯಾಪ್ತವಾದ ಆಂತರಿಕ ಲೆಕ್ಕಪರಿಶೋಧನಾ ವ್ಯವಸ್ಥೆಯನ್ನು ಹೊಂದಿರುತ್ತದೆ (ತಮ್ಮ ಪತ್ರದ ಮೂಲಕ ಕಂಪನಿಯಿಂದ ಇದನ್ನು ಸ್ಥಿರೀಕರಿಸಿರುತ್ತದೆ).

6) ನಮ್ಮ ಅಭಿಪ್ರಾಯದಲ್ಲಿ, ಈ ವೆಚ್ಚ ಲೆಕ್ಕಪರಿಶೋಧನಾ ವರದಿಯ ಅನುಬಂಧದಲ್ಲಿ ನೀಡಲಾಗಿರುವ ಮಾಹಿತಿ ಮತ್ತು ತಃಖ್ತೆಗಳು ಉಲ್ಲೇಖದಲ್ಲಿರುವ ಸೇವೆಗಳಿಗೆ ಸಂಬಂಧಿಸಿದಂತೆ ಸೇವೆಯನ್ನು ಒದಗಿಸುವಲ್ಲಿನ ವೆಚ್ಚ, ಮಾರಾಟಗಳ ವೆಚ್ಚ, ಅಂತರ ಮತ್ತು ಇತರ ಮಾಹಿತಿಯನ್ನು ಕುರಿತಂತೆ ನಿಜವಾದ ಮತ್ತು ನ್ಯಾಯಯುತವಾದ ಚಿತ್ರವನ್ನು ಒದಗಿಸುತ್ತದೆ.

7) ಕಂಪೆನಿಯ ಉಲ್ಲೇಖದಲ್ಲಿರುವ ಸೇವೆಗಳಿಗೆ ಸಂಬಂಧಿಸಿದಂತೆ ವಿವರವಾದ ಘಟಕವಾರು ಮತ್ತು ಉತ್ಪನ್ನವಾರು ವೆಚ್ಚ ತಃಖ್ತೆಗಳು ಮತ್ತು ಅನುಸೂಚಿಗಳನ್ನು ಯುಕ್ತವಾಗಿ ಲೆಕ್ಕಪರಿಶೋಧಿಸಲಾಗಿದ್ದು ಅವನ್ನು ಪ್ರಮಾಣೀಕರಿಸಿ ಕಂಪೆನಿಯಲ್ಲಿ ಇರಿಸಲಾಗಿದೆ.

2 (i) ಪರಿಶೀಲನೆಗಳು: ಯಾವುದೂ ಇಲ್ಲ.
2 (ii) ಸೂಚನೆಗಳು : ಯಾವುದೂ ಇಲ್ಲ.

2018–19			
	ಮಿಲಿಯನ್ ಯುನಿಟ್‌ಗಳು	ಕೋಟಿ ರೂ.ಗಳು	ಪ್ರತಿ ಘಟಕದ ದರ (ರೂ.)
ಖರೀದಿಸಲಾದ ವಿದ್ಯುತ್	8796.04	3949.241	4.48
ಮಾರಾಟ ಮಾಡಿದ ಮತ್ತು ಬಿಲ್ ಮಾಡಿದ ವಿದ್ಯುತ್	7528.30	5078.440	6.75
ವಿತರಣಾ ನಷ್ಟ	1267.74 (14.41)		

ವಿತರಣಾ ನಷ್ಟವು ನಗರ ವಿತರಣೆ ಹೋಲಿಸಿದರೆ ಗ್ರಾಮೀಣ ಹಂಚಿಕೆಯಲ್ಲಿ ಹೆಚ್ಚಿರುವುದು ಗಮನಕ್ಕೆ ಬಂದಿರುತ್ತದೆ. ಕಂಪನಿಯ ಕಾರ್ಯಾಚರಣೆ ಫಲಿತಾಂಶಗಳನ್ನು ಸುಧಾರಿಸುವ ನಿಟ್ಟಿನಲ್ಲಿ ವಿತರಣಾ ನಷ್ಟಗಳನ್ನು ತಗ್ಗಿಸಲು ಪ್ರಯತ್ನಗಳನ್ನು ತೊಡಗಿಸಬೇಕಿರುತ್ತದೆ.

ಗಮನಿಕೆ :

ಎ) ಭಾರತೀಯ ವೆಚ್ಚ ಲೆಕ್ಕಿಗರ ಸಂಸ್ಥೆಯ ಗುಣಮಟ್ಟ ಪರಿಶೀಲನಾ ಮಂಡಳಿಯು ಹೊರಡಿಸಿರುವ ಲೆಕ್ಕ ಪರಿಶೋಧನಾ ಮಾರ್ಗಸೂಚಿ ಕೈಪಿಡಿಯ ಅನುಸಾರ ನಾವು ಲೆಕ್ಕಪರಿಶೋಧನೆಯನ್ನು ಕೈಗೊಂಡಿರುತ್ತೇವೆ. ಲೆಕ್ಕಪರಿಶೋಧನೆಯು ಪರೀಕ್ಷಾ ಆಧಾರದ ಮೇಲೆ ವಿವಿಧ ವೆಚ್ಚ ಲೆಕ್ಕದಾಖಲೆಗಳು, ಉತ್ಪನ್ನ ವೆಚ್ಚ ತಃಖ್ತೆಗಳು ಮತ್ತು ವೆಚ್ಚ ಲೆಕ್ಕಪರಿಶೋಧನಾ ವರದಿಯ ಅನುಬಂಧಗಳ ಪರಿಶೀಲನೆಯನ್ನು ಒಳಗೊಳ್ಳುತ್ತದೆ. ನಮ್ಮ ಲೆಕ್ಕಪರಿಶೋಧನೆಯು ನಮ್ಮ ಅಭಿಪ್ರಾಯಗಳಿಗೆ ಸೂಕ್ತವಾದ ಆಧಾರಗಳನ್ನು ಒದಗಿಸುವುದೆಂದು ನಂಬಿರುತ್ತೇವೆ.

ಬಿ) ಕಂಪನಿಯ ವೆಚ್ಚ ಲೆಕ್ಕ ದಾಖಲೆಗಳನ್ನು ನಿಯಮಗಳ ಸಿಆರ್ಎ–1 ಅನುಸಾರ ನಿರ್ವಹಿಸಲಾಗಿದ್ದು ಅವು, ಸೂಕ್ತ ಮತ್ತು ಅನ್ವಯಿಸಬಹುದೆಂದು ತೋರುವ ಮಟ್ಟಿಗೆ, ಸಾಮಾನ್ಯವಾಗಿ ಒಪ್ಪಿತವಾದ ವೆಚ್ಚ ಲೇಖಾ ಸಿದ್ಧಾಂತಗಳಿಗೆ ಹಾಗೂ ಭಾರತೀಯ ವೆಚ್ಚ ಲೆಕ್ಕಿಗರ ಸಂಸ್ಥೆಯು ಹೊರಡಿಸಿರುವ ವೆಚ್ಚ ಲೇಖಾ ಪ್ರಮಾಣಗಳಿಗೆ ಹೊಂದುವಂತೆ ಇವೆ.

ಸಿ) ನಮ್ಮ ಅಭಿಪ್ರಾಯದಲ್ಲಿ ಕಂಪನಿಯು ಉತ್ತಮವಾಗಿ ಸ್ಥಾಪಿತವಾದ ಆಯವ್ಯಯ ನಿಯಂತ್ರಣ ವ್ಯವಸ್ಥೆಯನ್ನು ಹೊಂದಿದೆ (ತಮ್ಮ ಪತ್ರದ ಮೂಲಕ ಕಂಪನಿಯಿಂದ ಇದನ್ನು ಸ್ಥಿರೀಕರಿಸಿರುತ್ತದೆ).

ಡಿ) ವೆಚ್ಚ ಲೆಕ್ಕಪರಿಶೋಧನಾ ವರದಿಯ ಅನುಬಂಧವು ಈ ವರದಿಯ ಅಂತರ್ಗತ ಭಾಗವಾಗಿದೆ.

ಇ) ವಿವಿಧ ಸೇವೆಗಳಿಗೆ ಸಂಬಂಧಿಸಿದಂತೆ, ಅನ್ವಯವಾಗುವೆಡೆಗಳಲ್ಲಿ, ಭಾಗ ಸಿ –1 ರಲ್ಲಿ ಪ್ರಕಟಿಸಿರುವ ಮಾಹಿತಿಯನ್ನು ಆಡಳಿತ ಮಂಡಳಿಯು ಪ್ರಮಾಣೀಕರಿಸಿದೆ.

ಎಫ್) ಕಂಪನಿಯ ಪರೋಕ್ಷ ತೆರಿಗೆಗಳ ಹೊಂದಾಣಿಕೆ (ಭಾಗ ಡಿ– 6) ಕಂಪನಿಯು ವಿವಿಧ ಪ್ರಾಧಿಕಾರಗಳಿಗೆ ಸಲ್ಲಿಸಿದ ಮಾಸಿಕ ಸಲ್ಲಿಕೆಗಳನ್ನು ಆಧರಿಸಿದ್ದು ಮೇಲ್ನೋಟಕ್ಕೆ ನಮ್ಮ ಪರಿಶೀಲನೆಗೆ ಒಳಗಾಗಿವೆ. ಅವುಗಳ ವಿವರವಾದ ಲೆಕ್ಕಪರಿಶೋಧನೆಯನ್ನು ನಾವು ಕೈಗೊಂಡಿರುವುದಿಲ್ಲ.

ಜಿ) ವೆಚ್ಚ ಲೆಕ್ಕಪರಿಶೋಧನಾ ವರದಿ ಮತ್ತು ಅನುಬಂಧಗಳನ್ನು ಶಾಸನಬದ್ಧ ಲೆಕ್ಕಪರಿಶೋಧಕರು ಮತ್ತು ಸಿ & ಎಜಿ ಅವರು ಲೆಕ್ಕಪರಿಶೋಧಿಸಿದ 2018–19ರ ಲೆಕ್ಕಪತ್ರಗಳನ್ನು ಆಧರಿಸಿ, ರೂ. 5,07,844.00 ಲಕ್ಷ ವಹಿವಾಟು ಮತ್ತು ರೂ. 34,806.336 ಲಕ್ ಲಾಭವನ್ನು ಪರಿಗಣಿಸಿ ಹಾಗೂ ಕಂಪನಿಯಿಂದ ಪಡೆಯಲಾದ ಸ್ಥಿರೀಕರಣ ಪತ್ರವನ್ನು ಆಧರಿಸಿ ಸಿದ್ಧಪಡಿಸಲಾಗಿದೆ.

ಎಚ್) ಚಾಲ್ತಿ ವರ್ಷದ ವರ್ಗೀಕರಣ/ಪ್ರಕಟಣೆಗೆ ಹೊಂದಿಸುವ ಉದ್ದೇಶದಿಂದ ಅಗತ್ಯವಾದೆಡೆಗಳಲ್ಲಿ ಹಿಂದಿನ ವರ್ಷದ ಅಂಕಿ–ಅಂಶಗಳನ್ನು ಪರಿಷ್ಕರಿಸಲಾಗಿದೆ/ ಮರುವಿಂಗಡಿಸಲಾಗಿದೆ/ಮರುವರ್ಗೀಕರಿಸಲಾಗಿದೆ.

ಐ) ಕಂಪನಿಯು 2018–19ರ ಲೆಕ್ಕಪತ್ರಗಳು ಇಂಡ್ ಎಎಸ್ ಅನುಸಾರವಾಗಿವೆ ಎಂದು ಕಂಪನಿಯು ದೃಢೀಕರಿಸಿದ್ದು ಯುಕ್ತವಾದ ಹೋಲಿಕೆಯ ಉದ್ದೇಶದಿಂದ ಆದಾಯ, ವೆಚ್ಚ, ಆಸ್ತಿಗಳು ಮತ್ತು ಹೊಣೆಗಳ ಮರುವರ್ಗೀಕರಣ/ ಮರುವಿಂಗಡಣೆಯ ಮೂಲಕ 2017–18ರ ಲೆಕ್ಕಪತ್ರಗಳನ್ನೂ ಸಹ ಇಂಡ್ ಎಎಸ್ ಅನುಸಾರವಾಗಿ ರೂಪಿಸಲಾಗಿದೆ.

ದಿನಾಂಕ : 29–11–2019
ಸ್ಥಳ : ಧಾರವಾಡ

ಎಸ್ ಕೆ ಟಿಕಾರೆ & ಕೊ. ಪರವಾಗಿ
ವೆಚ್ಚ ಲೆಕ್ಕಿಗರು

ಸಿಎಂಎ. ಸಂಜಯ್ ಕೆ ಟಿಕಾರೆ
ಸದಸ್ಯತ್ವ ಸಂಖ್ಯೆ : 20794, ಸಂಸ್ಥೆ ಸಂಖ್ಯೆ : 101039
ಯುಡಿಐಎನ್ : 1920794ಝಿಡಿಝಿಡಿಎನ್‌ಡಿಈಪಿಟಿಟಿ70ಕ್ಯೂ

ನಿರ್ದೇಶಕ ವರದಿಯ ಅನುಬಂಧ–7

ನಮೂನೆ ಸಂ. ಎಂಜಿಟಿ – 9

ವಾರ್ಷಿಕ ಸಲ್ಲಿಕೆಯ ಉದ್ಧೃತ ಭಾಗ

31 ಮಾರ್ಚ್, 2019ಕ್ಕೆ ಕೊನೆಗೊಂಡ ವರ್ಷದ್ದು

[ಕಂಪನಿ ಕಾಯ್ದೆ, 2013ರ ಪರಿಚ್ಛೇದ 92(3) ಮತ್ತು ಕಂಪನಿಗಳ (ನಿರ್ವಹಣೆ ಮತ್ತು ಆಡಳಿತ) ನಿಯಮಗಳು, 2014ರ ನಿಯಮ 12(1)ರ ಅನುಸಾರ]

I. ನೋಂದಣಿ ಮತ್ತು ಇತರ ವಿವರಗಳು :

i.	ಸಿಐಎನ್	ಯು34010ಕೆಎ2002ಎಸ್‌ಜಿಸಿ030436
ii.	ನೋಂದಣಿ ದಿನಾಂಕ	30.04.2002
iii.	ಕಂಪನಿಯ ಹೆಸರು	ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ
iv.	ಕಂಪನಿಯ ವರ್ಗ/ಉಪವರ್ಗ	ಸರ್ಕಾರಿ ಕಂಪನಿ/ಷೇರುಗಳಿಂದ ಮಿತಗೊಂಡ ಕಂಪನಿ
v.	ನೋಂದಾಯಿತ ಕಛೇರಿಯ ವಿಳಾಸ ಮತ್ತು ಸಂಪರ್ಕ ವಿವರಗಳು	ನಿಗಮ ಕಛೇರಿ, ಸ್ಟೇಷನ್ ಮುಖ್ಯರಸ್ತೆ, ಗುಲಬರ್ಗಾ–585 102
vi.	ಲಿಸ್ಟೆಡ್ ಕಂಪನಿಯೇ	ಅಲ್ಲ
vii.	ನೋಂದಣಿ ಅಧಿಕಾರಿ ಮತ್ತು ರವಾನೆ ಅಭಿಕರ್ತರ ಹೆಸರು, ವಿಳಾಸ ಮತ್ತು ಸಂಪರ್ಕ ವಿವರಗಳು, ಇದ್ದಲ್ಲಿ	ಅನ್ವಯವಾಗುವುದಿಲ್ಲ

II. ಕಂಪನಿಯ ಪ್ರಧಾನ ವ್ಯಾಪಾರ ಚಟುವಟಿಕೆಗಳು

ಕಂಪನಿಯ ಒಟ್ಟಾರೆ ವಹಿವಾಟಿನಲ್ಲಿ 10% ಅಥವಾ ಹೆಚ್ಚಿನ ಪ್ರಮಾಣದ ಕೊಡುಗೆ ಸಲ್ಲಿಸುವ ಎಲ್ಲ ವ್ಯಾಪಾರ ಚಟುವಟಿಕೆಗಳನ್ನು ತಿಳಿಸುವುದು :–

ಕ್ರಮ ಸಂಖ್ಯೆ	ಪ್ರಧಾನ ಉತ್ಪನ್ನಗಳು/ಸೇವೆಗಳ ಹೆಸರು ಮತ್ತು ವಿವರಣೆ	ಉತ್ಪನ್ನ/ಸೇವೆಯ ಎನ್‌ಐಸಿ ಸಂಕೇತ	ಕಂಪನಿಯ ಒಟ್ಟಾರೆ ವಹಿವಾಟಿನ %
1	ವಿದ್ಯುಚ್ಛಕ್ತಿಯ ವಿತರಣೆ	35109	100

III. ಗುತ್ತಿಗೆ, ಅಧೀನ ಮತ್ತು ಸಹಯೋಗಿ ಸಂಸ್ಥೆಗಳ ವಿವರಗಳು:

ಕ್ರಮ ಸಂಖ್ಯೆ	ಕಂಪನಿಯ ಹೆಸರು ಮತ್ತು ವಿಳಾಸ	ಸಿಐಎನ್/ ಜಿಎಲೆನ್	ಗುತ್ತಿಗೆ/ ಅಧೀನ / ಸಹಯೋಗಿ	ಹೊಂದಿರುವ ಷೇರುಗಳ ಸಂಖ್ಯೆ	ಅನ್ವಯವಾಗುವ ಪರಿಚ್ಛೇದ
1	ಅನ್ವಯವಾಗುವುದಿಲ್ಲ	ಅನ್ವಯವಾಗುವುದಿಲ್ಲ	ಅನ್ವಯವಾಗುವುದಿಲ್ಲ	ಅನ್ವಯವಾಗುವುದಿಲ್ಲ	ಅನ್ವಯವಾಗುವುದಿಲ್ಲ

ಕಂಪನಿಯು ಯಾವುದೇ ಅಧೀನ/ಸಹಯೋಗಿ ಸಂಸ್ಥೆಗಳನ್ನು ಹೊಂದಿಲ್ಲದ ಕಾರಣ ಅನ್ವಯವಾಗುವುದಿಲ್ಲ.

IV. ಷೇರು ಹಿಡುವಳಿ ವಿನ್ಯಾಸ (ಒಟ್ಟುಈಕ್ವಿಟಿಯ ಪ್ರತಿಶತವಾಗಿಈಕ್ವಿಟಿ ಷೇರು ಬಂಡವಾಳ ವಿಂಗಡಣೆ)

i. ವರ್ಗವಾರು ಷೇರು ಹಿಡುವಳಿ

ಷೇರುದಾರರ ವರ್ಗ	ವರ್ಷದ ಪ್ರಾರಂಭದ ಹೊತ್ತಿಗೆ ಷೇರುಗಳ ಸಂಖ್ಯೆ, ಪ್ರತಿಯೊಂದೂ ರೂ. 10/– ರಂತೆ				ವರ್ಷದ ಕೊನೆಯ ಹೊತ್ತಿಗೆ ಷೇರುಗಳ ಸಂಖ್ಯೆ				ವರ್ಷದಲ್ಲಿನ ಬದಲಾವಣೆಯ %
	ಡಿಮ್ಯಾಟ್	ಭೌತಿಕ	ಒಟ್ಟು	ಒಟ್ಟು ಷೇರುಗಳ %	ಡಿಮ್ಯಾಟ್	ಭೌತಿಕ	ಒಟ್ಟು	ಒಟ್ಟು ಷೇರುಗಳ %	
ಎ. ಪ್ರೋತ್ಸಾಹಕರು									
(1) ಭಾರತೀಯ									
ಎ) ವ್ಯಕ್ತಿ/ಎಚ್‌ಯುಎಫ್									
ಬಿ) ಕೇಂದ್ರ ಸರ್ಕಾರ									
ಸಿ) ರಾಜ್ಯ ಸರ್ಕಾರ (ಗಳು)	-	1114956104	1114956104	100%	–	1114956104	1114956104	100%	
ಡಿ) ಕಾರ್ಪೊರೇಟ್ ಕಾಯಗಳು									
ಇ) ಬ್ಯಾಂಕುಗಳು/ ಹಣಕಾಸು ಸಂಸ್ಥೆಗಳು									
ಎಫ್) ಇತರ ಯಾವುದೆ									
ಉಪ–ಮೊತ್ತ (ಎ)(1)	-	1114956104	1114956104	100%	–	1114956104	1114956104	100%	
(2) ವಿದೇಶೀ									
ಜಿ) ಎನ್‌ಆರ್‌ಐ – ವ್ಯಕ್ತಿಗಳು									
ಎಚ್) ಇತರ – ವ್ಯಕ್ತಿಗಳು									
ಐ) ಕಾರ್ಪೊರೇಟ್ ಸಂಸ್ಥೆಗಳು									
ಜೆ) ಬ್ಯಾಂಕುಗಳು/ ಹಣಕಾಸು ಸಂಸ್ಥೆಗಳು									
ಕೆ) ಇತರ ಯಾವುದೆ									
ಉಪ–ಮೊತ್ತ (ಎ)(2)	–	–	–	–	–	–	–	–	–
ಬಿ. ಸಾರ್ವಜನಿಕ ಷೇರು ಹಿಡುವಳಿ									
1. ಸಂಸ್ಥೆಗಳು									
ಎ) ಮ್ಯೂಚುಯಲ್ ನಿಧಿಗಳು									
ಬಿ) ಬ್ಯಾಂಕುಗಳು/ ಸಂಸ್ಥೆಗಳು									
ಸಿ) ಕೇಂದ್ರ ಸರ್ಕಾರ									
ಡಿ) ರಾಜ್ಯ ಸರ್ಕಾರ(ಗಳು)									
ಇ) ವೆಂಚರ್ ಬಂಡವಾಳ ನಿಧಿಗಳು									

ಎಫ್) ವಿಮಾ ಕಂಪನಿಗಳು									
ಜಿ) ಎಫ್ಐಐ ಗಳು									
ಎಚ್) ವಿದೇಶೀ ಉಪಕ್ರಮ ಬಂಡವಾಳ ನಿಧಿಗಳು									
ಐ) ಒತರೆ (ನಿರ್ದಿಷ್ಟಗೊಳಿಸಿ)									
ಉಪ–ಮೊತ್ತ (ಬಿ)(1)	-	-	-	-	-	-	-	-	-
2. ಸಂಸ್ಥೆಗಳಲ್ಲದವು									
ಎ) ಕಾರ್ಪರೇಟ್ ಸಂಸ್ಥೆಗಳು									
1) ಭಾರತೀಯ									-
2) ವಿದೇಶಿ									-
ಬಿ) ವ್ಯಕ್ತಿಗಳು									
1) ರೂ. 1 ಲಕ್ಷದವರೆಗೆ ನಾಮಮಾತ್ರ ಷೇರು ಬಂಡವಾಳ ಹೊಂದಿರುವ ವೈಯಕ್ತಿಕ ಷೇರುದಾರರು									
2) ರೂ. 1 ಲಕ್ಷಕ್ಕಿಂತ ಹೆಚ್ಚಿನ ನಾಮಮಾತ್ರ ಷೇರು ಬಂಡವಾಳ ಹೊಂದಿರುವ ವೈಯಕ್ತಿಕ ಷೇರುದಾರರು									
ಸಿ) ಇತರ (ನಿರ್ದಿಷ್ಟಗೊಳಿಸಿ) ಉಪಮೊತ್ತ (ಬಿ)(2)	-	-	-	-	-	-	-	-	-
ಒಟ್ಟು ಸಾರ್ವಜನಿಕ ಷೇರು ಹಿಡುವಳಿ (ಬಿ)= (ಬಿ)(1)+(ಬಿ)(2)	-	-	-	-	-	-	-	-	-
ಸಿ. ಜಿಡಿಆರ್ & ಎಡಿಆರ್ ಅಭಿರಕ್ಷಕರು ಇರಿಸಿಕೊಂಡಿರುವ ಷೇರುಗಳು	-	-	-	-	-	-	-	-	-
ಒಟ್ಟು ಮೊತ್ತ (ಎ+ಬಿ+ಸಿ)		1114956104	1114956104	100%	–	1114956104	1114956104	100%	

ii. ಪ್ರೋತ್ಸಾಹಕರ ಷೇರು ಹಿಡುವಳಿ

ಕ್ರ. ಸಂ.	ಷೇರುದಾರರ ಹೆಸರು	ವರ್ಷದ ಪ್ರಾರಂಭದ ಹೊತ್ತಿಗೆ ಷೇರು ಹಿಡುವಳಿ			ವರ್ಷದ ಕೊನೆಯ ಹೊತ್ತಿಗೆ ಷೇರು ಹಿಡುವಳಿ			ಷೇರು
		ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ ಪ್ರತಿಶತ	ಒಟ್ಟು ಷೇರುಗಳ ಪೈಕಿ ಅಡವಿರಿಸಿದ/ ಋಣಭಾರ ಇರಿಸಿದ ಷೇರು %	ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ ಪ್ರತಿಶತ	ಒಟ್ಟು ಷೇರುಗಳ ಪೈಕಿ ಅಡವಿರಿಸಿದ/ ಋಣಭಾರ ಇರಿಸಿದ ಷೇರು %	ವರ್ಷದಲ್ಲಿ ಷೇರು ಹಿಡುವಳಿ -ಯಲ್ಲಿನ ಪ್ರತಿಶತ ಬದಲಾವಣೆ
1	ರಾಜ್ಯಪಾಲರು	1114956095	100%		1114956095	–	–	100%
2	ಶ್ರೀ ಜಾವೇದ್‌ಅಖ್ತರ್	01			00			–100%
3	ಡಾ. ಎಸ್. ಸೆಲ್ವಕುಮಾರ್	00			01			+100%
4	ಶ್ರೀ ಚಿಕ್ಕನಂಜಪ್ಪ	01			00			–100%
5	ಡಾ. ಆರ್. ರಾಗಪ್ರಿಯಾ	00			01			–100%
6	ಶ್ರೀ ಆರ್. ಜಯಕುಮಾರ್	01			00			–100%
7	ಶ್ರೀ ಅನಿಲ್‌ಕುಮಾರ್ ಎಸ್ ಬಬಲೇಶ್ವರ	00			01			+100%
8	ಶ್ರೀ ಎಂ. ರಾಮಕೃಷ್ಣ	01			00			–100%
9	ಡಾ. ಎಚ್. ಎನ್. ಗೋಪಾಲಕೃಷ್ಣ	00			01			+100%
10	ಶ್ರೀ ಪಿ. ಸುನಿಲ್ ಕುಮಾರ್	01			00			–100%
11	ಡಾ. ರಾಜಾ.ಪಿ.	00			01			+100%
12	ರಾಜಕುಮಾರ್ ಎಸ್. ಬಿರಾದರ್	01			01			
13	ಎ.ಎನ್. ಜಯರಾಜ್	01			01			
14	ಟಿ.ಆರ್.ರಾಮಕೃಷ್ಣಯ್ಯ	01			01			
15	ಪವನ್‌ಕುಮಾರ್ ಮಲಪತಿ	01			00			–100%
16	ಪುರುಷೋತ್ತಮ್ ಸಿಂಗ್	**00**			**01**			+100%
	ಒಟ್ಟು	**1114956104**			**1114956104**			

iii. ಪ್ರೋತ್ಸಾಹಕರ ಷೇರು ಹಿಡುವಳಿಯಲ್ಲಿನ ಬದಲಾವಣೆ (ಯಾವುದೇ ಬದಲಾವಣೆ ಇಲ್ಲದಿದ್ದರೆ ಸೂಚಿಸುವುದು):

ಕ್ರ. ಸಂ.		ವರ್ಷದ ಪ್ರಾರಂಭದ ಹೊತ್ತಿಗೆ ಷೇರು ಹಿಡುವಳಿ		ವರ್ಷದ ಕೊನೆಯ ಹೊತ್ತಿಗೆ ಸಂಚುತ ಷೇರು ಹಿಡುವಳಿ	
		ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ %	ಷೇರುಗಳ ಸಂಖ್ಯೆ	ಕಂಪನಿಯ ಒಟ್ಟು ಷೇರುಗಳ %
	ವರ್ಷದ ಪ್ರಾರಂಭದ ಹೊತ್ತಿಗೆ	1114956104	100%	1114956104	100%
	ವರ್ಷದಲ್ಲಿ ಪ್ರೋತ್ಸಾಹಕರ ಷೇರು ಹಿಡುವಳಿಯಲ್ಲಿನ ದಿನಾಂಕವಾರು ಏರಿಕೆ/ಇಳಿಕೆ, ಏರಿಕೆ/ಇಳಿಕೆಗೆ ಕಾರಣಗಳನ್ನು ಸೂಚಿಸುವುದು (ಉದಾ: ಹಂಚಿಕೆ/ವರ್ಗಾವಣೆ/ಬೋನಸ್/ ಸ್ಟೆಟ್ ಈಕ್ವಿಟಿ ಮುಂ.)	—	---	---	---
	ವರ್ಷದ ಕೊನೆಯ ಹೊತ್ತಿಗೆ	**1114956104**	**100%**	**1114956104**	**100%**

(iii) ಷೇರುದಾರಿಕೆ ಮಾದರಿ ಮತ್ತುಅತಿ ಹೆಚ್ಚಿನ ಷೇರುಗಳನ್ನು ಹೊಂದಿರುವವರ ಪೈಕಿ ಮೊದಲ ಹತ್ತು ಸ್ಥಾನದಲ್ಲಿರುವವರು – ಇಲ್ಲ

(iii) ನಿರ್ದೇಶಕರು ಮತ್ತು ಪ್ರಧಾನ ವ್ಯವಸ್ಥಾಪನಾ ಸಿಬ್ಬಂದಿಯ ಷೇರುದಾರಿಕೆ :– ಭಾಗ iv(ii) ರಲ್ಲಿ ಇರುವಂತೆ

V. ಋಣಬದ್ಧತೆ :

ಹಾಣಕಾಸು ವರ್ಷ 2019ರಲ್ಲಿ ಬಾಕಿ ಇರುವ/ಪ್ರಾಪ್ತವಾದ ಆದರೆ ಸಂದಾಯ ಬಾಕಿ ಇರದ ಬಡ್ಡಿಯೂ ಸೇರಿಕಂಪನಿಯ ಋಣಗಳು

	ಸುಭದ್ರ ಸಾಲಗಳು	ಅಭದ್ರ ಸಾಲಗಳು	ಠೇವಣಿಗಳು	ಒಟ್ಟು ಋಣಬದ್ಧತೆ
ಹಣಕಾಸು ವರ್ಷದ ಪ್ರಾರಂಭದ ಹೊತ್ತಿಗೆ ಋಣಬದ್ಧತೆ				
i) ಅಸಲು ಮೊತ್ತ	702,67,83,015	5,37,33,654	492,56,62,798	1200,61,79,467
ii) ಬಾಕಿ ಇರುವ ಆದರೆ ಸಂದಾಯವಾಗದ ಬಡ್ಡಿ	---	---	---	---
iii) ಪ್ರಾಪ್ತವಾದ ಆದರೆ ಬಾಕಿ ಇರದ ಬಡ್ಡಿ	23,37,43,616	---	66,31,62,107	89,69,05,723
ಒಟ್ಟು (i+ ii+iii)	726,05,26,631	5,37,33,654	558,882,49,05	1290,30,85,190
ಚಾಲ್ತಿ ಹಣಕಾಸು ವರ್ಷದಲ್ಲಿ ಋಣಬದ್ಧತೆಯಲ್ಲಿ ಬದಲಾವಣೆ				
–ಸೇರ್ಪಡೆ	263,50,88,929	---	45,23,82,254	308,74,71,183
–ಇಳಿಕೆ	89,33,50,651	1,25,63,903	---	90,59,14,554
ನಿವ್ವಳ ಬದಲಾವಣೆ	174,17,38,278	(1,25,63,903)	45,23,82,254	218,15,56,629
ಹಣಕಾಸು ವರ್ಷದ ಕೊನೆಯ ಹೊತ್ತಿಗೆ ಋಣಬದ್ಧತೆ				
i) ಅಸಲು ಮೊತ್ತ	881,67,62,886	4,11,69,751	531,79,30,623	1417,58,63,260
ii) ಬಾಕಿ ಇರುವ ಆದರೆ ಸಂದಾಯವಾಗದ ಬಡ್ಡಿ	–	–	–	–
iii) ಪ್ರಾಪ್ತವಾದ ಆದರೆ ಬಾಕಿ ಇರದ ಬಡ್ಡಿ	18,55,02,023	–	72,32,76,536	90,87,78,559
ಒಟ್ಟು (i+ ii+iii)	**900,22,64,909**	**4,11,69,751**	**604,12,07,159**	**1508,46,41,819**

ನಿರ್ದೇಶಕರು ಮತ್ತು ಪ್ರಧಾನ ವ್ಯವಸ್ಥಾಪನಾ ಸಿಬ್ಬಂದಿಯ ಸಂಭಾವನೆ

ಎ. ವ್ಯವಸ್ಥಾಪಕ ನಿರ್ದೇಶಕರು, ಪೂರ್ಣಾವಧಿ ನಿರ್ದೇಶಕರು ಮತ್ತು /ಅಥವಾ ಪ್ರಬಂಧಕರ ಸಂಭಾವನೆ:

ವ್ಯವಸ್ಥಾಪಕ ನಿರ್ದೇಶಕರು, ಪೂರ್ಣಾವಧಿ ನಿರ್ದೇಶಕರು, ಪ್ರಬಂಧಕರ ಹೆಸರು			ಸಂಭಾವನೆಯ ವಿವರಗಳು								ಒಟ್ಟು ಮೊತ್ತ	
ಕ್ರ. ಸಂ	ನಿರ್ದೇಶಕರ ಹೆಸರು	ಈ ದಿನಾಂಕದಿಂದ	ಒಟ್ಟು ವೇತನ	ಎ. ಆದಾಯ ತೆರಿಗೆಕಾಯ್ದೆ, 1961 ಪರಿಚ್ಛೇದ 17(1)ರ ಉಪ ಬಂಧಗಳ ಪ್ರಕಾರ ವೇತನ	ಬಿ. ಆದಾಯ ತೆರಿಗೆಕಾಯ್ದೆ, 1961 ಪರಿಚ್ಛೇದ 17(2)ರ ಉಪ ಬಂಧಗಳ ಪ್ರಕಾರ ವಿಶೇಷ ಸವಲತ್ತು	ಸಿ. ಆದಾಯ ತೆರಿಗೆ ಕಾಯ್ದೆ, 1961 ಪರಿಚ್ಛೇದ 17(3)ರ ಉಪಬಂಧಗಳ ಪ್ರಕಾರ ವೇತನದ ಸ್ಥಾನದಲ್ಲಿ ಲಾಭಗಳು	ಸ್ಟಾಕ್ ಆಯ್ಕೆ	ಸ್ವೆಟ್ ಈಕ್ವಿಟಿ	ದಲಾಲಿ – ಲಾಭ, ಇತರೆ – ಇದರ ಪ್ರತಿಶತವಾಗಿ, ನಿರ್ದಿಷ್ಟಗೊಳಿಸಿ..	ಇತರೆ, ನಿರ್ದಿಷ್ಟಗೊಳಿಸಿ	ಒಟ್ಟು (ಎ)	ಕಾಯ್ದೆಯ ಪ್ರಕಾರ ಮೇಲ್ಮಿತಿ
1	ಶ್ರೀ ಚಿಕ್ಕನಂಜಪ್ಪ, ವ್ಯವಸ್ಥಾಪಕ ನಿರ್ದೇಶಕರು	01.04.2018 ರಿಂದ 16.04.2018	1,10,061.00	–	–	–	–	–	–	37,360.00	1,47,421.00	
2	ಡಾ. ಆರ್. ರಾಗಪ್ರಿಯಾ (ಭಾಆಸೇ) ವ್ಯವಸ್ಥಾಪಕ ನಿರ್ದೇಶಕರು	10.08.2018 ರಿಂದ 31.03.2019	6,51,876.00	–	–	–	–	–	–	-	6,51,876.00	
3	ಶ್ರೀ ಆರ್. ಜಯಕುಮಾರ್ ನಿರ್ದೇಶಕರು (ತಾಂತ್ರಿಕ)	01.04.2018 ರಿಂದ 31.05.2018	97,671.00	–	–	–	–	–	–	42,761	1,40,432.00	
4	ಶ್ರೀ ಉದಯ್‌ಕುಮಾರ್ ಭೋಸಗಿ ನಿರ್ದೇಶಕರು (ತಾಂತ್ರಿಕ)	17.04.2018 ರಿಂದ 31.05.2018	4,27,202.00	–	–	–	–	–	–	-	4,27,202.00	
5	ಶ್ರೀ ವಿನೋದ್ ಜಿ ಹಾವನಗಿ ನಿರ್ದೇಶಕರು (ತಾಂತ್ರಿಕ)	01.06.2018 ರಿಂದ 16.08.2018	–	–	–	–	–	–	–	25,860.00	25,860.00	
6	ಶ್ರೀ ಅನಿಲ್‌ಕುಮಾರ್ ಎಸ್ ಬಬಲೇಶ್ವರ್‌ರಿಂದ ನಿರ್ದೇಶಕರು (ತಾಂತ್ರಿಕ)	16.08.2018 31.03.2019	14,64,655.00	–	–	–	–	–	–	93,876.00	15,58,531.00	
		ಒಟ್ಟು	27,49,465.00	–	–	–	–	–	–	1,99,857.00	29,51,322.00	

ಬಿ. ಇತರ ನಿರ್ದೇಶಕರಿಗೆ ಸಂಭಾವನೆ:

ಕ್ರ ಸಂ	ಸಂಭಾವನೆಯ ವಿವರಗಳು	ವ್ಯವಸ್ಥಾಪಕ ನಿರ್ದೇಶಕರು, ಪೂರ್ಣಾವಧಿ ನಿರ್ದೇಶಕರು, ಪ್ರಬಂಧಕರ ಹೆಸರು		ಒಟ್ಟು ಮೊತ್ತ (ರೂ)
1	ಸ್ವತಂತ್ರ ನಿರ್ದೇಶಕರು- ಮಂಡಳಿ /ಸಮಿತಿ ಸಭೆಗಳಲಿನ ಹಾಜರಾತಿಗೆ ಶುಲ್ಕ- ದಲ್ಲಾಳಿ	ನಿರ್ದೇಶಕರ ಹೆಸರು	ಸಭಾ ಭತ್ಯೆ	
		ಶ್ರೀ ಡಾ. ಎಚ್. ಎನ್. ಗೋಪಾಲಕೃಷ್ಣ ಭಾಆಸೇ	1000/–	8000.00
		ಶ್ರೀ ಪುರುಷೋತ್ತಮ್ ಸಿಂಗ್ ಬಿ. ಎಚ್	2000/–	
		ಶ್ರೀ ರಾಜಕುಮಾರ್ ಎಸ್. ಬಿರಾದರ್	5000/–	
		ಒಟ್ಟು	**8000.00**/–	
	ಒಟ್ಟು –(ಎ) **1**			**8000.00**
2	ಇತರಕಾರ್ಯಕಾರಿಯಲ್ಲದ ನಿರ್ದೇಶಕರು- ಮಂಡಳಿ /ಸಮಿತಿ ಸಭೆಗಳಲ್ಲಿನ ಹಾಜರಾತಿಗೆ ಶುಲ್ಕ- ದಲ್ಲಾಳಿ- ಇತರೆ, ನಿರ್ದಿಷ್ಟಗೊಳಿಸಿ **ಒಟ್ಟು (ಬಿ) 2**	ನಿರ್ದೇಶಕರ ಹೆಸರು	ಸಭಾ ಭತ್ಯೆ	ಒಟ್ಟು
		ಶ್ರೀ ಜಾವೇದ್ ಅಖ್ತರ್, ಭಾಆಸೇ	500/–	
		ಶ್ರೀ ಡಾ. ಎಸ್. ಸೆಲ್ವಕುಮಾರ್, ಭಾಆಸೇ	1500/–	
		ಶ್ರೀ ಎ. ಎನ್. ಜಯರಾಜ್	2000/–	
		ಶ್ರೀ ಟಿ. ಆರ್. ರಾಮಕೃಷ್ಣಯ್ಯ	2000/–	
		ಒಟ್ಟು	6000/–	
				6000.0
	ಒಟ್ಟು (ಬಿ)=(1+2)			14,000.00
	ಒಟ್ಟು ವ್ಯವಸ್ಥಾಪನಾ ಸಂಭಾವನೆ (ಎ+ಬಿ)			29,65,322.00
	ಕಾಯ್ದೆಯ ಪ್ರಕಾರ ಒಟ್ಟಾರೆ ಮೇಲ್ಮಿತಿ			

ಸಿ. ವ್ಯವಸ್ಥಾಪಕ ನಿರ್ದೇಶಕರು, ಪೂರ್ಣಾವಧಿ ನಿರ್ದೇಶಕರು,ಪ್ರಬಂಧಕರ ಹೊರತಾಗಿಇತರ ಪ್ರಧಾನ ವ್ಯವಸ್ಥಾಪನಾ ಸಿಬ್ಬಂದಿಯ ಸಂಭಾವನೆ:

ಕ್ರ ಸಂ	ಸಂಭಾವನೆಯ ವಿವರಗಳು	ಸಿಎಫ್ಓ	ಒಟ್ಟು ಮೊತ್ತ
1	ಒಟ್ಟು ವೇತನ ಎ. ಆದಾಯತೆರಿಗೆಕಾಯ್ದೆ, 1961 ಪರಿಚ್ಛೇದ 17(1)ರ ಉಪಬಂಧಗಳ ಪ್ರಕಾರ ವೇತನಬಿ. ಬಿ. ಆದಾಯತೆರಿಗೆಕಾಯ್ದೆ, 1961 ಪರಿಚ್ಛೇದ 17(2)ರ ಉಪಬಂಧಗಳ ಪ್ರಕಾರ ವಿಶೇಷ ಸವಲತ್ತುಡಿಎ/ ಎಚ್ಆರ್ಎ ಬಾಕಿ, ಇಎಲ್ಎಸ್ಸಿ. ಸಿ. ಆದಾಯತೆರಿಗೆಕಾಯ್ದೆ, 1961 ಪರಿಚ್ಛೇದ 17(3)ರ ಉಪಬಂಧಗಳ ಪ್ರಕಾರ ವೇತನದ ಸ್ಥಾನದಲ್ಲಿ ಲಾಭಗಳು	ಶ್ರೀ ಬಿ. ಅಬ್ದುಲ್ ವಾಜೀದ್ ಮುಖ್ಯ ಆರ್ಥಿಕ ಅಧಿಕಾರಿ	ರೂ. **31,45,496.00** --
2	ಒಟ್ಟು ವೇತನ ಎ. ಆದಾಯತೆರಿಗೆಕಾಯ್ದೆ, 1961 ಪರಿಚ್ಛೇದ 17(1)ರ ಉಪಬಂಧಗಳ ಪ್ರಕಾರ ವೇತನ ಬಿ. ಆದಾಯತೆರಿಗೆಕಾಯ್ದೆ, 1961 ಪರಿಚ್ಛೇದ 17(2)ರ ಉಪಬಂಧಗಳ ಪ್ರಕಾರ ವಿಶೇಷ ಸವಲತ್ತುಸಿ. ಸಿ. ಆದಾಯತೆರಿಗೆಕಾಯ್ದೆ, 1961 ಪರಿಚ್ಛೇದ 17(3)ರ ಉಪಬಂಧಗಳ ಪ್ರಕಾರ ವೇತನದ ಸ್ಥಾನದಲ್ಲಿ ಲಾಭಗಳು		-- -- --
3	ಸ್ಟಾಕ್ಆಯ್ಕೆ		
4	ಸ್ವೆಟ್ಈಕ್ವಿಟಿ		
5	ದಲಾಲಿ- ಲಾಭದ ಪ್ರತಿಶತವಾಗಿ- ಇತರೆ, ನಿರ್ದಿಷ್ಟಗೊಳಿಸಿ		
6	ಇತರೆ, ನಿರ್ದಿಷ್ಟಗೊಳಿಸಿ		
	ಒಟ್ಟು		**ರೂ. 31,45,496.00**

VI. ಅಪರಾಧಗಳಿಗೆ ಸಂಬಂಧಿಸಿದಂತೆ ದಂಡಗಳು/ಶಿಕ್ಷೆ/ರಾಜಿಕಬೂಲಿ:

ವಿಧ	ಕಂಪನಿ ಕಾಯ್ದೆಯ ಪರಿಚ್ಛೇದ	ಸಂಕ್ಷಿಪ್ತ ವಿವರಣೆ	ವಿಧಿಸಲಾದದಂಡಗಳು/ ಶಿಕ್ಷೆ/ರಾಜಿಕಬೂಲಿಯ ವಿವರಗಳು	ಪ್ರಾಧಿಕಾರ [ಆರ್ಡಿ/ ಎನ್ಸಿಎಲ್ಟಿ/ ನ್ಯಾಯಾಲಯ]	ಮೇಲ್ಮನವಿ, ಯಾವುದಾದರೂಇದ್ದ ಪಕ್ಷದಲ್ಲಿ(ವಿವರಗಳನ್ನು ಒದಗಿಸಿ)
ಎ. ಕಂಪನಿ		ಇಲ್ಲ			
ದಂಡ					
ಶಿಕ್ಷೆ					
ರಾಜಿಕಬೂಲಿ					
ಬಿ. ನಿರ್ದೇಶಕರು		ಇಲ್ಲ			
ದಂಡ					
ಶಿಕ್ಷೆ					
ರಾಜಿಕಬೂಲಿ					
ಸಿ. ತಪ್ಪು ಮಾಡಿರುವಇತರ ಅಧಿಕಾರಿಗಳು		ಇಲ್ಲ			
ದಂಡ					
ಶಿಕ್ಷೆ					
ರಾಜಿಕಬೂಲಿ					

ಸ್ವತಂತ್ರ ಲೆಕ್ಕಪರಿಶೋಧಕರ ವರದಿ

ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ, (ಜೆಸ್ಕಾಂ) ಕಲ್ಬುರ್ಗಿ– 585 102 ಸಂಸ್ಥೆಯ ಸದಸ್ಯರಿಗೆ ಪ್ರತ್ಯೇಕ ಭಾರತೀಯ ಲೇಖಾ ಪ್ರಮಾಣಗಳ (ಇಂಡ್ ಎಎಸ್)ಹಣಕಾಸು ತಃಖ್ತೆಗಳ ಮೇಲಿನ ಪರಿಷ್ಕೃತ ವರದಿ:

ಪರಿಶೀಲನಾತ್ಮಕ ಅಭಿಪ್ರಾಯ :

1. ನಾವು ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ ಸಂಸ್ಥೆಯ ("ಜೆಸ್ಕಾಂ" ಅಥವಾ "ಕಂಪನಿ") ಪ್ರತ್ಯೇಕ ಹಣಕಾಸು ತಃಖ್ತೆಗಳನ್ನು ಲೆಕ್ಕಪರಿಶೋಧಿಸಿದ್ದೇವೆ. ಈ ತಃಖ್ತೆಗಳಲ್ಲಿ 31 ಮಾರ್ಚ್ 2019ರಂದು ಇದ್ದಂತೆ ಸಂತುಲನ ಪಟ್ಟಿ, ಅದೇ ದಿನಾಂಕಕ್ಕೆ ಕೊನೆಗೊಂಡ ವರ್ಷದ ಇತರ ಸಮಗ್ರ ಆದಾಯವೂ ಸೇರಿದಂತೆ ಲಾಭ ಮತ್ತು ನಷ್ಟದ ತಃಖ್ತೆ, ಈಕ್ವಿಟಿಯಲ್ಲಿನ ಬದಲಾವಣೆಯ ವಿವರಣಾ ತಃಖ್ತೆ ಹಾಗೂ ನಗದು ಪ್ರವಹನ ತಃಖ್ತೆ ಮತ್ತು ಮಹತ್ವದ ಲೇಖಾ ಕಾರ್ಯನೀತಿಗಳ ಸಾರ ಹಾಗೂ ಇತರ ವಿವರಣಾತ್ಮಕ ಮಾಹಿತಿ ಸೇರುತ್ತವೆ (ಇಲ್ಲಿಂದ ಮುಂದಕ್ಕೆ "ಪ್ರತ್ಯೇಕ ಇಂಡ್ ಏಎಸ್ ಹಣಕಾಸು ತಃಖ್ತೆಗಳು" ಎಂದು ಇದನ್ನು ಉಲ್ಲೇಖಿಸಲಾಗುತ್ತದೆ). ನಾವು 30 ಆಗಸ್ಟ್ 2019ರಂದು ಹಣಕಾಸು ತಃಖ್ತೆಗಳ ಮೇಲಿನ ನಮ್ಮ ಲೆಕ್ಕಪರಿಶೋಧನಾ ವರದಿಯನ್ನುನೀಡಿದ್ದೆವು ಮತ್ತು ನಿರ್ದೇಶಕ ಮಂಡಳಿಯು 30 ಆಗಸ್ಟ್ 2019ರಂದು ಅದನ್ನು ಅಂಗೀಕರಿಸಿತು. ಭಾರತದ ನಿಯಂತ್ರಕರು ಮತ್ತು ಮಹಾಲೇಖಾಪಾಲರು ನಡೆಸಿದ ಪೂರಕ ಲೆಕ್ಕಪರಿಶೋಧನೆಯಿಂದ ಪ್ರಕಟವಾದ ಪರಿಶೀಲನೆಗಳ ಹಿನ್ನೆಲೆಯಲ್ಲಿ ನಾವು ಪರಿಷ್ಕೃತ ಲೆಕ್ಕಪರಿಶೋಧನಾ ವರದಿಯನ್ನು ನೀಡುತ್ತಿದ್ದೇವೆ. ಈ ವರದಿಯು ನಮ್ಮ ಹಿಂದಿನ ವರದಿಯನ್ನು ಗೌಣವಾಗಿಸುತ್ತದೆ. ಈ ಪರಿಷ್ಕೃತ ವರದಿಯನ್ನು 30 ಆಗಸ್ಟ್ 2019ರ ಹಣಕಾಸು ತಃಖ್ತೆಗಳೊಂದಿಗೆ ಜೊತೆಯಾಗಿರಿಸಿ ನೋಡಬೇಕಾಗುತ್ತದೆ.

ನಮ್ಮ ಅಭಿಪ್ರಾಯದಲ್ಲಿ ಹಾಗೂ ನಮ್ಮ ಮಾಹಿತಿಗೆ ಅನುಗುಣವಾಗಿ ಮತ್ತು ನಮಗೆ ಒದಗಿಸಲಾದ ವಿವರಣೆಗಳ ಪ್ರಕಾರ, ನಮ್ಮ ವರದಿಯ ಪರಿಶೀಲನಾತ್ಮಕ ಅಭಿಪ್ರಾಯಕ್ಕೆ ಆಧಾರಗಳು ವಿಭಾಗದಲ್ಲಿ ವಿವರಿಸಲಾಗಿರುವ ವಿಷಯಗಳ ಪರಿಣಾಮವನ್ನು ಹೊರತುಪಡಿಸಿ, ಮೇಲೆ ಪ್ರಸ್ತಾಪಿಸಲಾಗಿರುವ ಹಣಕಾಸು ತಃಖ್ತೆಗಳು ಭಾರತದಲ್ಲಿ ಸಾಮಾನ್ಯವಾಗಿ ಒಪ್ಪಿತವಾಗಿರುವ ಲೇಖಾ ಸಿದ್ಧಾಂತಗಳಿಗೆ ಹೊಂದುವಂತೆ ಕಂಪೆನಿಯ ನೈಜ ಮತ್ತು ನ್ಯಾಯಯುತ ಚಿತ್ರವನ್ನು ಕಂಪೆನಿ ಕಾಯ್ದೆ 2013ರ ಅಗತ್ಯಗಳಿಗೆ ಅನುಸಾರವಾಗಿ 31 ಮಾರ್ಚ್ 2109ರಂದು ಇದ್ದಂತೆ ಕಂಪನಿಯ ಸ್ಥಿತಿಗತಿ, ಮತ್ತು ಅದೇ ದಿನಾಂಕಕ್ಕೆ ಕೊನೆಗೊಂಡ ವರ್ಷದ ಕಂಪೆನಿಯ ಲಾಭ, ಈಕ್ವಿಟಿಯಲ್ಲಿನ ಬದಲಾವಣೆ ಮತ್ತು ನಗದು ಪ್ರವಹನಗಳ ಚಿತ್ರವನ್ನು ಒದಗಿಸುತ್ತವೆ.

ಪರಿಶೀಲನಾತ್ಮಕ ಅಭಿಪ್ರಾಯಗಳಿಗೆ ಆಧಾರ :

ನಾವು ನಮ್ಮ ಲೆಕ್ಕಪರಿಶೋಧನೆಯನ್ನು ಕಂಪನಿ ಕಾಯ್ದೆ, 2013ರ ಪರಿಚ್ಛೇದ 143(10)ರ ಅಡಿ ನಿರ್ದಿಷ್ಟಗೊಳಿಸಲಾಗಿರುವ ಲೆಕ್ಕಪರಿಶೋಧನಾ ಪ್ರಮಾಣಗಳ (ಎಸ್ಎಗಳು) ಅನುಸಾರ ನಡೆಸಿರುತ್ತೇವೆ. ಆ ಪ್ರಮಾಣಗಳ ಅಡಿಯಲ್ಲಿನ ನಮ್ಮ ಜವಾಬ್ದಾರಿಗಳನ್ನು ನಮ್ಮ ವರದಿಯ ಹಣಕಾಸು ತಃಖ್ತೆಗಳ ಲೆಕ್ಕಪರಿಶೋಧನೆಯಲ್ಲಿ ಲೆಕ್ಕಪರಿಶೋಧಕರ ಜವಾಬ್ದಾರಿಗಳು ವಿಭಾಗದಲ್ಲಿ ಮತ್ತಷ್ಟು ವಿವರಿಸಲಾಗಿದೆ. ಇನ್ಸ್ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ಹೊರಡಿಸಿರುವ ನೀತಿ ಸಂಹಿತೆಯ ಅನುಗುಣವಾಗಿ ಮತ್ತು ಕಂಪೆನಿ ಕಾಯ್ದೆ, 2013ರ ಉಪಬಂಧಗಳ ಅನ್ವಯ ಹಣಕಾಸು ತಃಖ್ತೆಗಳ ನಮ್ಮ ಲೆಕ್ಕಪರಿಶೋಧನೆಗೆ ಪ್ರಸ್ತುತವಾಗುವ ನೈತಿಕ ಅಗತ್ಯಗಳಿಗೆ ಸಂಗತವಾಗಿ ನಾವು ಕಂಪೆನಿಯಿಂದ ಸ್ವತಂತ್ರರಾಗಿರುತ್ತೇವೆ ಹಾಗೂ ನಾವು ಈ ಅಗತ್ಯಗಳು ಮತ್ತು ಐಸಿಎಐ ನ ನೀತಿ ಸಂಹಿತೆಗಳಿಗೆ ಅನುಗುಣವಾಗಿ ನಮ್ಮ ನೈತಿಕ ಜವಾಬ್ದಾರಿಗಳನ್ನು ಪೂರೈಸಿದ್ದೇವೆ. ನಾವು ಪಡೆದುಕೊಂಡ ಲೆಕ್ಕಪರಿಶೋಧನಾ ಸಾಕ್ಷ್ಯವು ಪರ್ಯಾಪ್ತವಾಗಿದ್ದು ನಮ್ಮ ಪರಿಶೀಲನಾತ್ಮಕ ಅಭಿಪ್ರಾಯಗಳಿಗೆ ಆಧಾರವಾಗಿದೆ ಎಂದು ನಾವು ನಂಬಿದ್ದೇವೆ.

1. **ಪ್ರಾಪ್ತತೆ ಲೆಕ್ಕ ವ್ಯವಸ್ಥೆ:**

ಕಂಪನಿ ಕಾಯ್ದೆ, 2013ರ ಪರಿಚ್ಛೇದ 129(1)ರ ಉಪಬಂಧದ ಅನುಸಾರ ಲೆಕ್ಕಪುಸ್ತಕಗಳು ಪ್ರಾಪ್ತತೆಯ ಆಧಾರದಲ್ಲಿ ಇರದಿದ್ದರೆ ಹಾಗೂ ದ್ವಿ–ನಮೂದು ಲೆಕ್ಕ ವಿಧಾನಕ್ಕೆ ಅನುಗುಣವಾಗಿ ಇರದಿದ್ದರೆ ಸೂಕ್ತ ಲೆಕ್ಕಪುಸ್ತಗಳನ್ನು ಇರಿಸಿರುವುದಿಲ್ಲ ಎಂದು ಅರ್ಥ. ಕಂಪನಿಯ ಲೆಕ್ಕ ನೀತಿಯಂತೆ ಕಂಪೆನಿಯು ಕೆಳಗಿನ ವ್ಯವಹಾರಗಳನ್ನು ಸ್ವೀಕೃತಿ ಆಧಾರದ ಮೇಲೆ ಗುರುತಿಸುತ್ತದೆ ಮತ್ತು ಇದು ಕಂಪನಿ ಕಾಯ್ದೆ 2013ರಲ್ಲಿ ನಿಗದಿಪಡಿಸಿರುವ ಪ್ರಾಪ್ತತೆ ವಿಧಾನಕ್ಕೆ ವ್ಯತಿರಿಕ್ತವಾಗಿದೆ:

ಎ. ಬಂಡವಾಳ ಆಸ್ತಿಗಳಿಗೆ ಸಂಬಂಧಿಸಿದಂತೆ ಸರ್ಕಾರದಿಂದ ಅನುದಾನಗಳು ಮತ್ತು ಸಹಾಯಧನಗಳು

ಬಿ. ಸರಬರಾಜುದಾರರಿಗೆ ವಿಳಂಬಿತ ಪಾವತಿಗಳ ಮೇಲೆ ಬಡ್ಡಿ

ಸಿ. ಗುತ್ತಿಗೆದಾರರಿಂದ ದಂಡಗಳು ಮತ್ತು ಹಾನಿಗಳ ವಸೂಲಿ

2. **ಲೆಕ್ಕ ಮತ್ತು ದಾಖಲೆ ಪುಸ್ತಕಗಳು :**

ಎ. ಕಂಪನಿಯು ಕೆಪಿಟಿಸಿಎಲ್ ಅನುಸರಿಸುತ್ತಿರುವ ಲೆಕ್ಕ

ನೀತಿಗಳು ಮತ್ತು ವಿಧಾನಗಳನ್ನು ಅಳವಡಿಸಿಕೊಂಡಿದ್ದು ಈಗ ವಿದ್ಯುಚ್ಛಕ್ತಿ ನಿಯಮಗಳು, 2003 – ಇದರ ಮೂಲಕ ರದ್ದಾದ ವಿದ್ಯುಚ್ಛಕ್ತಿ (ಸರಬರಾಜು) ಕಾಯ್ದೆ, 1948 (1948ರ 54) ಅಡಿಯಲ್ಲಿ ರೂಪಿಸಲಾದ ವಿದ್ಯುಚ್ಛಕ್ತಿ (ಸರಬರಾಜು) ವಾರ್ಷಿಕ ಲೆಕ್ಕಪತ್ರಗಳ ನಿಯಮಗಳು, 1985 – ಇಲ್ಲಿ ಹೇಳಲಾಗಿರುವ ಲೆಕ್ಕ ವ್ಯವಸ್ಥೆಯನ್ನು ನಿಯತವಾಗಿ ಅನುಸರಿಸುತ್ತ ಬಂದಿದೆ. ಕಾಂಪ್ಯೆಂಯ ಪರಿಚ್ಛೇದ 133ರ ಅಡಿಯಲ್ಲಿ ನಿರ್ದಿಷ್ಟಗೊಳಿಸಲಾಗಿರುವ ಭಾರತೀಯ ಲೇಖಾ ಪ್ರಮಾಣಗಳಿಗೆ (ಇಂಡ್ ಎಎಸ್) ಮತ್ತು ಪರಿಷ್ಕೃತವಾದಂತೆ, ಕಂಪನಿಗಳ (ಭಾರತೀಯ ಲೇಖಾ ಪ್ರಮಾಣಗಳು) ನಿಯಮಗಳು, 2015, ಇದಕ್ಕೆ ಸಂಗತವಾಗುವಂತೆ ಹೊಂದಿಕೊಳ್ಳದಿದ್ದರೂ ಲೇಖಾ ನಿಯಮಗಳನ್ನು ಅನುಸರಿಸಲಾಗುತ್ತಿದೆ. ನಿರ್ದಿಷ್ಟ ಪ್ರಕರಣಗಳನ್ನು ನಮ್ಮ ಲೆಕ್ಕಪರಿಶೋಧನಾ ವರದಿಯಲ್ಲಿ ವಿವರಿಸಲಾಗಿರುವ ಉಳಿದ ಪರಿಶೀಲನೆಗಳಲ್ಲಿ ಹೆಚ್ಚು ನಿರ್ದಿಷ್ಟವಾಗಿ ನಿರ್ವಚಿಸಲಾಗಿದೆ.

ಬಿ. ಪ್ರಸ್ತುತ, ಬಿಲ್ಲಿಂಗ್ ಮತ್ತು ಗ್ರಾಹಕರಿಂದ ಸಂಗ್ರಹಹಳಿಗೆ (ಎಚ್‌ಟಿ ಗ್ರಾಹಕರನ್ನು ಹೊರತುಪಡಿಸಿ) ಸಂಬಂಧಿಸಿದ ಕಾರ್ಯಾಚರಣೆಗಳನ್ನು ಮಾತ್ರ ಆದಾಯ ನಿರ್ವಹಣಾ ತಂತ್ರಾಂಶಗಳ ಮೂಲಕ ಗಣಕೀಕೃತಗೊಳಿಸಲಾಗಿದೆ. ಉಳಿದ ಪ್ರಕ್ರಿಯೆಗಳಿಗೆ ಸಂಬಂಧಿಸಿದಂತೆ ವ್ಯವಹಾರಗಳು/ದಾಖಲೆಗಳನ್ನು ಭಾಗಶಃ ಕೈಯಲ್ಲಿ ಮತ್ತು ಭಾಗಶಃ ಎಂಎಸ್ ಎಕ್ಸೆಲ್ ವರ್ಕ್‌ಶೀಟ್‌ಗಳಲ್ಲಿ ನಿರ್ವಹಿಸಲಾಗುತ್ತಿದೆ. ಪ್ರಾರಂಭಿಕ ನಮೂದಿನ ಹಂತದಿಂದ ಟ್ರಯಲ್ ಶಿಲ್ಕಿನ ಸೃಷ್ಟಿಯವರೆಗಿನ ವ್ಯವಹಾರ ಸಂಸ್ಕರಣೆ ಮೈಕ್ರೋಸಾಫ್ಟ್ ಎಕ್ಸೆಲ್ ಮೂಲಕ ಆಗುತ್ತಿದೆ. ಈ ಬಗೆಯ ಲೆಕ್ಕವಿಧಾನವು ಗಟ್ಟಿಯಾದುದಲ್ಲ, ಸಮಗ್ರವಾದುದಲ್ಲ ಮತ್ತು ಮಾನವ ತಪ್ಪುಗಳು ಹಾಗೂ ದೋಷಗಳಿಗೆ ಆಸ್ಪದಮಾಡಿಕೊಡುತ್ತದೆ. ಜೊತೆಗೆ, ಎಂಎಸ್–ಎಕ್ಸೆಲ್ ತನ್ನಲ್ಲೇ ಒಂದು ಲೆಕ್ಕ ತಂತ್ರಾಂಶವಲ್ಲ. ಅಲ್ಲದೆ, ಎಕ್ಸೆಲ್ ತಂತ್ರಾಂಶ ಸೃಷ್ಟಿಸುವ ಟ್ರಯಲ್ ಶುಲ್ಕಗಳು ಕಂಪನಿಯ ಉದ್ದಕ್ಕೂ ಸಮಾನರೂಪಿಯಾಗಿಲ್ಲ ಮ್ತು ಹೆಚ್ಚಿನ ಪ್ರಕರಣಗಳಲ್ಲಿ ನಗದು ಮತ್ತು ಜರ್ನಲ್ ಪುಸ್ತಕಗಳು ಲೆಕ್ಕ ಸಂಕೇತಗಳನ್ನು ಮಾತ್ರ ಹೊಂದಿದ್ದು ಯಾವುದೇ ಲೆಕ್ಕ ವಿವರಣೆಗಳನ್ನು ಹೊಂದಿಲ್ಲ. ಈ ಹಿನ್ನೆಲೆಯಲ್ಲಿ ವ್ಯವಹಾರಗಳ ಸಂಸ್ಕರಣೆಗಾಗಿ ಸೂಕ್ತವಾದ ಮತ್ತು ಸಮಗ್ರವಾದ ಲೆಕ್ಕ ತಂತ್ರಾಂಶದ ಅಗತ್ಯವಿದೆ.

ಸಿ. ನಮ್ಮ ಪರೀಕ್ಷಾ ಪರಿಶೀಲನೆಗಳಲ್ಲಿ ಗಮನಿಸಲಾದಂತೆ ಇತರ ಸಾಲಿಗರು, ಮುಂಗಡಗಳು, ಆವರ್ತಕ ಖರ್ಚಿನ ಲೆಡ್ಜರ್‌ಗಳೇ ಮೊದಲಾದ ಪೂರಕ ಲೆಡ್ಜರ್ ಖಾತೆಗಳನ್ನು (ಟಿಎಂಆರ್ ತಂತ್ರಾಂಶದಲ್ಲಿರುವ ಗ್ರಾಹಕ ಲೆಡ್ಜರ್‌ಗಳನ್ನು ಹೊರತುಪಡಿಸಿ) ಸರಿಯಾಗಿ ನಿರ್ವಹಿಸಿರುವುದಿಲ್ಲ/ಪರಿಷ್ಕರಿಸಿರುವುದಿಲ್ಲ. ಹಾಗಾಗಿ, ನಾವು ಲೆಡ್ಜರ್ ಖಾತೆಗಳ ಪರಿಶೀಲನೆಯನ್ನು ನಡೆಸಲು ಸಾಧ್ಯವಾಗಿರುವುದಿಲ್ಲ.

3. **ಭಾರತೀಯ ಲೇಖಾ ಪ್ರಮಾಣ (ಇಂಡ್ ಎಎಸ್) 2–ದಾಸ್ತಾನುಗಳು :**

ಎ. ಇಂಡ್‌ಎಎಸ್ 2 ರ ಅನುಸಾರ ಕಂಪನಿಯು ತನ್ನ ದಾಸ್ತಾನುಗಳನ್ನು ನಿವ್ವಳ ಸಾಕ್ಷಾತ್ಕಾರ ಮೌಲ್ಯದ ವೆಚ್ಚದಲ್ಲಿ ಕಡಿಮೆಯಾದುದಕ್ಕೆ ಮೌಲ್ಯಹಾಕಬೇಕಾಗುತ್ತದೆ. ಆದರೆ, ಕಂಪನಿಯು ಖರೀದಿಗಳ ಲೆಕ್ಕಕ್ಕೆ ಪ್ರಮಾಣೀತ ವೆಚ್ಚವನ್ನು ಹಾಗೂ ಮುಕ್ತಾಯದ ದಾಸ್ತಾನಿನ ಮೌಲ್ಯಮಾಪನಕ್ಕೆ ಸರಾಸರಿ ವೆಚ್ಚವನ್ನು ಬಳಸುತ್ತಿದೆ. ದಾಸ್ತಾನಿನಲ್ಲಿ ತೊಡೆದುಹಾಕಲಾದ ಆಸ್ತಿಗಳು, ದೋಷಪೂರಿತ ಮತ್ತು ಮರುಬಳಕೆಗೆಂದು ಕೆಡವಲಾದ ಆಸ್ತಿಗಳು ಮತ್ತು ರಿಪೇರಿ ಮಾಡಿ ಉತ್ತಮ ಸಾಮಗ್ರಿಗಳು ಸೇರಿದ್ದು ಇವನ್ನು ನಮೂದಿಸಲಾದ ಮೌಲ್ಯದಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗುತ್ತದೆ. ಇದು ಕಂಪೆನಿ ಕಾಯ್ದೆ, 2013ರ ಪರಿಚ್ಛೇದ 133 ರ ಅಡಿಯಲ್ಲಿ ನಿಗದಿಪಡಿಸಲಾಗಿರುವ ಭಾರತೀಯ ಲೆಖಾ ಪ್ರಮಾಣಗಳಿಗೆ ಅನುಸಾರವಾಗಿರುವುದಿಲ್ಲ. ಆಡಳಿತ ಮಂಡಳಿಯು ಪರಿಣಾಮದ ವಿಶ್ಲೇಷಣೆಯನ್ನು ನಡೆಸಿರದ ಕಾರಣದಿಂದಾಗಿ ಈ ಪಥಾಂತರದಿಂದಾಗಿ ಹಣಕಾಸು ತಃಖ್ತೆಗಳ ಮೇಲೆ ಘಟಿಸಿರುವ ಪರಿಣಾಮವನ್ನು ತಿಳಿಯಲು ಸಾಧ್ಯವಾಗಿರುವುದಿಲ್ಲ.

ಬಿ. ಬಳಕೆತಪ್ಪಿದ ಮತ್ತು ಬಳಸದಿರುವ ದಾಸ್ತಾನಿಗೆ ಹವಣಿಕೆಯನ್ನು ಒದಗಿಸುವ ಸಲುವಾಗಿ ವಿವಿಧ ನೆಲೆಗಳಲ್ಲಿ ಕಂಪನಿಯು ಹೊಂದಿರುವ ದಾಸ್ತಾನಿನ ಆಯುಷ್ಯ ತೀರುವಿಕೆ, ಉಪಯುಕ್ತತೆ ಮತ್ತು ಸೇವಾಯುಕ್ತತೆಯ ಅಂದಾಜಿನ ಅಗತ್ಯವಿದೆ. ಆಡಳಿತ ಮಂಡಳಿಯು ಇಂತಹ ಯಾವುದೇ ಅಂದಾಜನ್ನು ನಡೆಸಿರದ ಕಾರಣ ಬಳಕೆತಪ್ಪಿದ ಮತ್ತು ಬಳಸದಿರುವ ದಾಸ್ತಾನಿಗೆ ಸಂಬಂಧಿಸಿದಂತೆ ಹವಣಿಕೆಯ ಅಗತ್ಯವನ್ನು ಕುರಿತಂತೆ ಹಾಗೂ ಹಣಕಾಸು ತಃಖ್ತೆಗಳ ಮೇಲಿನ ಅದರ ಪರಿಣಾಮದ ಬಗ್ಗೆಯಾಗಲೀ ನಾವು ನಮ್ಮ ಅಭಿಪ್ರಾಯವನ್ನು ಒದಗಿಸುವುದು ಸಾಧ್ಯವಿರುವುದಿಲ್ಲ.

ಸಿ. ಸಿಬ್ಬಂದಿಯೊಂದಿಗೆ ಉಳಿದಿರುವ (ಸಾಮಗ್ರಿ ಕೈಹಣ ಖಾತೆ) ಮತ್ತು ದಾಸ್ತಾನುಗಳ ಭಾಗವಾಗಿ ತೋರಿಸಿರುವ ರೂ 216.44 ಲಕ್ಷ (ಹಿಂದಿನ ವರ್ಷ 180.11 ಲಕ್ಷ) ಮೊತ್ತದ ಸಾಮಗ್ರಿಗಳಲ್ಲಿ ಸಕ್ರಮಗೊಳಿಸಬೇಕಿರುವ ಹಳೆಯ ಸಾಮಗ್ರಿಗಳು ಸೇರುತ್ತವೆ. ಸಿಬ್ಬಂದಿಯೊಂದಿಗೆ ಉಳಿದಿರುವ ಈ ಸಾಮಗ್ರಿಗಳ ಸಕ್ರಮಗೊಳಿಸುವಿಕೆಯು ಬಾಕಿ ಇರುವ ಕಾರಣ ಹಣಕಾಸು ತಃಖ್ತೆಗಳ ಮೇಲಿನ ಇದರ ಪರಿಣಾಮವನ್ನು ಕುರಿತು ನಾವು ಯಾವುದೇ

ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಸಾಧ್ಯವಾಗಿರುವುದಿಲ್ಲ.

ಡಿ. ಕಂಪನಿಯು ದಾಸ್ತಾನಿನ ಲೆಡ್ಜರ್ ಒಂದನ್ನು ನಿರ್ವಹಿಸಿದ್ದು ಇದರಲ್ಲಿ ಸೇವೆಗಳ ಸರಬರಾಜಿನ ಸಂದರ್ಭದಲ್ಲಿ ಅಂತಿಮವಾಗಿ ಬಳಕೆಯಾಗುವ ಹಾಗೂ ಒಂದ್ಕಕಿಂತ ಹೆಚ್ಚಿನ ಅವಧಿಗೆ ಬಳಕೆಗೆ ತೊಡಗಿಸಲು ಉದ್ದೇಶಿಸಿರುವ ಸಾಮಗ್ರಿಗಳು ಸೇರುತ್ತವೆ. ದಾಸ್ತಾನಿನಲ್ಲಿರುವ ಇಂತಹ ಸಾಮಗ್ರಿಗಳ ಉದ್ದೇಶ/ಅಂತಿಮ ಬಳಕೆಯು "ಸ್ಥಾವರ ಸಲಕರಣೆ"ಯ ಸೃಷ್ಟಿಗಾಗಿ ಇರುವುದರಿಂದ ಇದನ್ನು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ ಎಂದು ಪ್ರತ್ಯೇಕವಾಗಿ ಗುರುತಿಸಿ ವರ್ಗೀಕರಿಸಬೇಕಾಗುತ್ತದೆ.

ಇ. ಕಂಪನಿಯ ದಾಸ್ತಾನುಗಳಲ್ಲಿ ಗುತ್ತಿಗೆದಾರರಿಗೆ/ಸಿಬ್ಬಂದಿಗೆ ತಾತ್ಕಾಲಿಕ ಅನುಷ್ಠಾನಗಳಿಗೆಂದು ಬಿಡುಗಡೆ ಮಾಡಲಾಗಿರುವ ರೂ. 195.73 ಲಕ್ಷ (ಹಿಂದಿನ ವರ್ಷ ರೂ. 186.08 ಲಕ್ಷ) ಮೌಲ್ಯದ ಸಾಮಗ್ರಿ ಸೇರಿದೆ ಮತ್ತು ಇವು ವಾಸ್ತವದಲ್ಲಿ ಕಾಮಗಾರಿ ನೆಲೆಯಲ್ಲಿ ಉಳಿದಿವೆ/ ಬಳಕೆಯಾಗುತ್ತಿವೆ. ಕಾಮಗಾರಿ ನೆಲೆಯಲ್ಲಿನ ಇಂತಹ ಸಾಮಗ್ರಿಯನ್ನು ಚಾಲ್ತಿ ಆಸ್ತಿಗಳ ಅಡಿಯಲ್ಲಿ "ಗುತ್ತಿಗೆದಾರರು ಹೊಂದಿರುವ ಸಾಮಗ್ರಿ" ಎಂಬ ಶೀರ್ಷಿಕೆಯಡಿ ದಾಸ್ತಾನು ಎಂದು ವರ್ಗೀಕರಿಸಲಾಗಿದೆ. ನಮ್ಮ ಅಭಿಪ್ರಾಯದಲ್ಲಿ ಈ ವರ್ಗೀಕರಣ ಸೂಕ್ತವಾದುದಲ್ಲ. ಏಕೆಂದರೆ, ಗುತ್ತಿಗೆದಾರರಿಗೆ ಒದಗಿಸಲಾಗಿರುವ ಸಾಮಗ್ರಿಯು ಕಂಪನಿಯ ದಾಸ್ತಾನು ದಾಖಲೆಗಳಲ್ಲಿನ ಒಂದು ಕಾಲ್ಪನಿಕ ನಮೂದಾಗಿದ್ದು ಇದನ್ನು ಪ್ರಗತಿಯಲ್ಲಿರುವ ಕಾಮಗಾರಿ ಎಂದು ಪ್ರಕಟಿಸಬೇಕಾಗುತ್ತದೆ. ಈ ಕಾರಣದಿಂದಾಗಿ, ಚಾಲ್ತಿ ಆಸ್ತಿಗಳ ಮೌಲ್ಯವು ಹೆಚ್ಚಾಗಿ ಪ್ರಕಟವಾಗಿದೆ ಮತ್ತು ಪ್ರಗತಿಯಲ್ಲಿರುವ ಕಾಮಗಾರಿ/ಗ್ರಾಹ್ಯ ಆಸ್ತಿಗಳ ಮೌಲ್ಯವು ಮೇಲೆ ನಿರ್ದಿಷ್ಟಗೊಳಿಸಲಾಗಿರುವಷ್ಟರ ಮಟ್ಟಿಗೆ ಕಡಿಮೆಯಾಗಿ ಪ್ರಕಟವಾಗಿದೆ.

4. **ನಗದು ಮತ್ತು ನಗದು ಸಮಾನಗಳು :**

ನಗದು ಮತ್ತು ನಗದು ಸಮಾನಗಳಲ್ಲಿ ಚೆಕ್ಕುಗಳಿಗೆ/ಡಿಡಿಗಳಿಗೆ ಸಂಬಂಧಿಸಿದ ಆದರೆ ಸಾಕಾರಗೊಳ್ಳದ ಮೊತ್ತಗಳು, ಸಕ್ರಮಗೊಳ್ಳದ ನೌಕರರ ನಗದು ಅನಿಶ್ಚಿತ ಶಿಲ್ಕುಗಳು, ಟ್ರಯಲ್ ಶಿಲ್ಕು ವ್ಯತ್ಯಾಸಗಳು ಮತ್ತು ತನಿಖೆ ಬಾಕಿ ಇರಿಸಿ ನಗದು ಅವ್ಯವಹಾರಗಳು ಸೇರುತ್ತವೆ. ವಿವರಗಳು ಕೆಳಗಿನಂತಿವೆ:

ಲೆಕ್ಕ ಘಟಕದ ಹೆಸರು	ವ್ಯತ್ಯಾಸದ ಸ್ವರೂಪ	ಲಕ್ಷ ರೂ.ಗಳು	ಈ ವರ್ಷಕ್ಕೆ ಸಂಬಂಧಿಸಿದ್ದು
i ಗುಲ್ಬರ್ಗಾ ಓ & ಎಂ ವಿಭಾಗ	ಟ್ರಯಲ್ ಶಿಲ್ಕು ಮತ್ತು ನಗದು ಬ್ಯಾಂಕ್ ಖಾತೆ ಮೊತ್ತದ ನಡುವಿನ ವ್ಯತ್ಯಾಸ	95.57	ಪ್ರತ್ಯೇಕವಾದ ಬಳಿಕ ಕಂಪನಿಯ ರಚನೆಯಾದ ದಿನದಿಂದ
ii ವಿವಿಧ ಲೆಕ್ಕ ಘಟಕಗಳು	ವಿಶೇಷ ಲೆಕ್ಕಪರಿಶೋಧನೆಯ ಪ್ರಕಾರ ಮೋಸಗಳ ಕಾರಣದಿಂದಾಗಿ ತನಿಖೆ ಬಾಕಿ ಉಳಿಸಿ	678.78	2012–13 ರಿಂದ 2018–19

ಈ ಕಾರಣದಿಂದಾಗಿ, ನೈಜ ಶಿಲ್ಕುಗಳಿಗೆ ಪ್ರತಿಯಾಗಿ ನಗದು ಮತ್ತು ನಗದು ಸಮಾನಗಳನ್ನು ಹೆಚ್ಚಿಗೆ ತೋರಿಸಲಾಗಿದೆ ಮತ್ತು ವಿಷಯಗಳು ಇತ್ಯರ್ಥವಾಗದೆ ಬಾಕಿ ಉಳಿದಿರುವ ಕಾರಣ ಸಂಭಾವ್ಯ ವಸೂಲಾಗದಿರುವಿಕೆಯ ಕಾರಣದಿಂದಾಗಿ ಆಗಿರವು ನಷ್ಟಕ್ಕಾಗಿ ಹವಣಿಕೆಯನ್ನು ಮಾಡಿರುವುದಿಲ್ಲ. ನಗದು ಮತ್ತು ನಗದು ಸಮಾನಗಳನ್ನು ಹೆಚ್ಚಿಗೆ ತೋರಿಸಲಾಗಿರುವ ಮಟ್ಟಿಗೆ ನಗದು ಪ್ರವಹನ ತಃಖ್ತೆಯು ಇಂಡ್ ಎಎಸ್ – 7, "ನಗದು ಪ್ರವಹನಗಳ ತಃಖ್ತೆ" ಯ ಅನುಸಾರವಾಗಿಲ್ಲ.

ಬಿ. ಲೆಕ್ಕ ಸಂಕೇತ 24.3 (ನಗದು ಶಿಲ್ಕು) ಕ್ಕೆ ಸಂಬಂಧಿಸಿದಂತೆ, ಸಹಕಾರೇತರ ಬ್ಯಾಂಕ್ ಖಾತೆಗಳ ಹೊಂದಾಣಿಕೆಯ ಲೆಕ್ಕವಿಡುವಿಕೆ, ವರದಿಮಾಡುವಿಕೆ ಮತ್ತು ಪ್ರಕ್ರಿಯೆಯ ವಿಧಾನವನ್ನು ಪರಿಶೀಲಿಸುವುದು ಅಗತ್ಯವಾಗಿದೆ, ಏಕೆಂದರೆ, ಬ್ಯಾಂಕ್ ಹೊಂದಾಣಿಕೆ ತಃಖ್ತೆ (ಬಿಆರ್ಎಸ್)ಯ ನಮೂನೆಯು ಹೊಂದಾಣಿಕೆಯ ದಿನಾಂಕದಂದು ಇದ್ದಂತೆ ಸಾಕ್ಷತ್ಕಾರವಾಗದ ಚೆಕ್ಕುಗಳ ಸಂಚಿತ ಮೌಲ್ಯವನ್ನು ನೀಡುವುದಿಲ್ಲ. ಅಲ್ಲದೆ, ಏಕ ಸಮಾನ ಸಂಕೇತ 24.3ರ ಮೂಲಕ ಪ್ರಕಟಿಸುವುದರ ಬದಲಿಗೆ ಲೆಕ್ಕ ಘಟಕ ಹಂತಗಳಲ್ಲಿನ ಟ್ರಯಲ್ ಶಿಲ್ಕು ಪ್ರತಿ ಸಹಕಾರೇತರ ಬ್ಯಾಂಕ್ ಖಾತೆಯನ್ನು ಪ್ರತಿಫಲಿಸಬೇಕಾಗುತ್ತದೆ. ಏಕರೂಪವಾದ ಬಿಆರ್ಎಸ್ ನಮೂನೆಯನ್ನು ಸಹಕಾರಿ ಮತ್ತು ಸಹಕಾರೇತರ ಬ್ಯಾಂಕ್ ಖಾತೆಗಳೆರಡಕ್ಕೂ ಬಳಸುವುದು ಅಗತ್ಯವಾಗಿದೆ.

ಸಿ. ಕಂಪನಿಯು ಗ್ರಾಹಕರಿಂದ ಪಡೆದುಕೊಳ್ಳಲಾಗುವ ವೆಬ್ ಆಧಾರಿತ ವಿದ್ಯುನ್ಮಾನ ಪಾವತಿಗಳಿಗೆಂದು ವಿವಿಧ ವಿದ್ಯುನ್ಮಾನ ಸೇವಾ ಸರಬರಾಜುದಾರರೊಂದಿಗೆ ಕೈಜೋಡಿಸಿದೆ. ನಾವು ಭೇಟಿ ನೀಡಿದ ಲೆಕ್ಕ ಘಟಕಗಳ ಪರಿಕ್ಷೆಗಳ ಆಧಾರದ ಮೇಲೆ ಹೇಳುವುದಾದರೆ, ಈ ಪಾವತಿಗಳನ್ನು ಬ್ಯಾಂಕ್ ಖಾತೆಗೆ ಕಾಲಕಾಲಕ್ಕೆ ಹೊಂದಿಸದಿರುವುದು ಗಮನಕ್ಕೆ ಬಂದಿರುತ್ತದೆ. ಕೆಲವು ಪ್ರಕರಣಗಳಲ್ಲಿ ವ್ಯತ್ಯಾಸಗಳನ್ನು "ಆನ್ಲೈನ್

(ಆರ್‌ಟಿಜಿಎಸ್) ಖಾತೆ ಸಂಕೇತ 46.973 – ಇಲ್ಲಿಂದ ಬ್ಯಾಂಕಿನ ದೋಷಯುಕ್ತ ಜಮೆಗಳು" (ಕೊಪ್ಪಳ ಘಟಕ) – ಇಲ್ಲಿ ಇರಿಸಲಾಗಿದೆ. ಈ ವ್ಯವಹಾರಗಳ ಕಾಲಕಾಲಿಕ ಹೊಂದಾಣಿಕೆ ಮತ್ತು ಮೇಲ್ವಿಚಾರಣೆಯ ಅಗತ್ಯ ಕಾಣುತ್ತಿದೆ.

5. ಸ್ವತ್ತು, ಸ್ಥಾವರ ಮತ್ತು ಸಲಕರಣೆಯ ಮೇಲೆ ಭಾರತೀಯ ಲೇಖಾ ಪ್ರಮಾಣ (ಇಂಡ್ ಎಎಸ್ 16)

ಎ. ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ ಎಂದು ರೂ. 30032.07 ಲಕ್ಷ ಮೊತ್ತವನ್ನು ಹಾಗೂ ಬೆಳವಣಿಗೆಯಲ್ಲಿರುವ ಅಗ್ರಾಹ್ಯ ಆಸ್ತಿಗಳ ಅಡಿಯಲ್ಲಿ ರೂ. 749.23 ಲಕ್ಷ ಮೊತ್ತವನ್ನು ತೋರಿಸಲಾಗಿದೆ. ಹಣಕಾಸು ತಃಖ್ತೆಗಳಲ್ಲಿ ಪ್ರಕಟಿಸಲಾದ ಪ್ರಗತಿಯಲ್ಲಿರುವ ಕಾಮಗಾರಿಯ ಮೌಲ್ಯದ ವಿವರವಾದ ಪಟ್ಟಿಮಾಡುವಿಕೆಯನ್ನು/ವಿಶ್ಲೇಷಣೆಯಯನ್ನು, ಉದಾ. ಬಾಕಿ ಇರುವ ಕಾಮಗಾರಿ ಆದೇಶಗಳ ಆಯುಷ್ಯ ತೀರುವಿಕೆ, ಸಂಬಂಧಿಸಿದ ಮೊತ್ತಗಳು, ಕಾಮಗಾರಿ ಆದೇಶದ ಪ್ರಕಾರ ಪೂರ್ಣಗೊಳಿಸುವಿಕೆಯ ದಿನಾಂಕ ಮತ್ತು ವರದಿಯ ದಿನಾಂಕದಂದು ಇದ್ದಂತೆ ನೈಜ ಪ್ರಗತಿ – ಈ ವಿವರಗಳನ್ನು ಕಂಪೆನಿಯು ಹೊಂದಿರುವುದಿಲ್ಲ. ಇದರಿಂದಾಗಿ, ಈಗಾಗಲೇ ಆಸ್ತಿಗಳನ್ನು ಬಳಕೆಗೆ ತೊಡಗಿಸಿದ್ದರೂ ಬಂಡವಾಳೀಕರಣವಾಗದಿರುವ ಸಾಧ್ಯತೆ ಇರುತ್ತದೆ. ಜೊತೆಗೆ, ರೂ. 33608.73 ಲಕ್ಷ ಮೊತ್ತದ ಬಂಡವಾಳ ಮುಂಗಡಕ್ಕೆ ಸಂಬಂಧಿಸಿದ ಮಾಹಿತಿಯು ಪರ್ಯಾಪ್ತವಾಗಿರದ ಕಾರಣ ಈ ವರ್ಗೀಕರಣದ ಯುಕ್ತತೆಯ ಬಗ್ಗೆ ನಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಸಾಧ್ಯವಿರುವುದಿಲ್ಲ, ಏಕೆಂದರೆ, ಈ ಮುಂಗಡಗಳಿಗೆ ಪ್ರತಿಯಾದ ಕಾಮಗಾರಿಗಳ ಮೌಲ್ಯವನ್ನು ಅರಿಯಲು ಅದನ್ನು ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಯಾಗಿ ಪರಿವರ್ತಿಸುವುದು ಅಥವಾ ಸ್ವತ್ತು, ಸ್ಥಾವರ ಮತ್ತು ಸಲಕರಣೆಯಾಗಿ ಅದರ ವರ್ಗೀಕರಣವನ್ನು ಅಗತ್ಯವಾಗಿಸುತ್ತದೆ. ಹೀಗಾಗಿ ನಾವು ವರ್ಗೀಕರಣದ ಯುಕ್ತತೆ, ಗ್ರಾಹ್ಯ ಆಸ್ತಿಗಳ ಮೌಲ್ಯ, ಮತ್ತು ಹಣಕಾಸು ತಃಖ್ತೆಗಳ ಮೇಲಿನ ಸವಕಳಿ ಮತ್ತು ದತ್ತಿ ಪರಿಣಾಮವನ್ನು ಕುರಿತು ಅಭಿಪ್ರಾಯ ವ್ಯಕ್ತಪಡಿಸುವುದು ಸಾಧ್ಯವಿರುವುದಿಲ್ಲ.

ಬಿ. ಸ್ವತ್ತು, ಸ್ಥಾವರ ಮತ್ತು ಸಲಕರಣೆಯ ಮೇಲಿನ ಇಂಡ್ ಎಎಸ್ 16 ರ ಪ್ರಕಾರ ಸಾಮಗ್ರಿಯ ಬಂಡವಾಳೀಕರಣದ ವೆಚ್ಚವನ್ನು ಲೆಕ್ಕಹಾಕುವಲ್ಲಿ ಕಳಚುವ ವೆಚ್ಚವನ್ನು ಅಂದಾಜುಮಾಡಿ ಅದನ್ನು ಸೇರಿಸಬೇಕಾಗುತ್ತದೆ. ಕಂಪನಿಯು ಬಂಡವಾಳೀಕರಣದ ವೆಚ್ಚದಲ್ಲಿ ಕಳಚುವ ವೆಚ್ಚವನ್ನು ಅಂದಾಜುಮಾಡಿ ಅದನ್ನು ಸೇರಿಸಿರುವುದಿಲ್ಲ. ಇದು ಹಣಕಾಸು ತಃಖ್ತೆಗಳ ಮೇಲೆ ಬೀರುವ ಪರಿಣಾಮವನ್ನು ತಿಳಿಯುವುದು ಸಾಧ್ಯವಿರುವುದಿಲ್ಲ.

ಸಿ. ಸಕ್ರಿಯ ಬಳಕೆಯಿಂದ ಹಿಂಪಡೆದ ಆಸ್ತಿಗಳನ್ನು ಗುರುತುಮಾಡಲಾದ ಮೌಲ್ಯದಲ್ಲಿ ತೋರಿಸಲಾಗಿದ್ದು ಇವನ್ನು ತುಲನಾತ್ಮಕ ನಿವ್ವಳ ಸಾಕ್ಷಾತ್ಕಾರಗೊಳ್ಳಬಹುದಾದ ಮೌಲ್ಯಕ್ಕೆ ಪರೀಕ್ಷಮಾಡಿರುವುದಿಲ್ಲ. ಬಳಕೆತಪ್ಪಿದ/ತೊಡೆದುಹಾಕಲಾದ ಆಸ್ತಿಗಳ ಡಬ್ಲ್ಯೂಡಿವಿ ಶೀರ್ಷಿಕೆಯ ಅಡಿ ತಪಶೀಲು,ದಾಸ್ತಾನು ಮತ್ತು ಬಿಡಿಭಾಗಗಳು ಎಂದು ಈ ಆಸ್ತಿಗಳನ್ನು ಪ್ರಕಟಿಸಲಾಗಿದೆ. ಈ ಆಸ್ತಿಗಳನ್ನು ದುರಸ್ತಿಯ ನಂತರ ದಾಸ್ತಾನಿನ ಸರಾಸರಿ ವೆಚ್ಚದಲ್ಲಿ ಮರುಬಿಡುಗಡೆಮಾಡಲಾಗುವುದು, ಅದರ ಡಬ್ಲ್ಯೂಡಿವಿ ಯಲ್ಲಲ್ಲ. ಇದು ಸ್ವತ್ತು, ಸ್ಥಾವರ ಮತ್ತು ಸಲಕರಣೆಯ (ಪಿಪಿಇ) ಮೇಲಿನ ಇಂಡ್ ಎಎಸ್ 16 ಭಾರತೀಯ ಲೇಖಾ ಪ್ರಮಾಣದ ಅನುಸಾರವಾಗಿಲ್ಲ. ಲೇಖಾ ನೀತಿಯ ಪ್ರಕಾರ, ಡಿಕಮಿಶನಿಂಗ್ ದಿನಾಂಕದಿಂದ ಆಸ್ತಿಗಳನ್ನು ಮರುಬಿಡುಗಡೆಮಾಡಿ ಬಂಡವಾಳೀಕರಿಸುವವರೆಗೆ ಸವಕಳಿಯ ಮೇಲಿನ ಖರ್ಚನ್ನು ವಿಧಿಸಲಾಗುವುದಿಲ್ಲ. ಮರುಬಿಡುಗಡೆಮಾಡಲಾದ ಇಂತಹ ಆಸ್ತಿಯನ್ನು ಸರಾಸರಿ ವೆಚ್ಚದಲ್ಲಿ ಬಂಡವಾಳೀಕರಿಸಿ ಅವುಗಳ ಮೂಲ ಆಯುಷ್ಯದ ಅವಧಿಗೆ ಸವಕಳಿಯನ್ನು ವಿಧಿಸಲಾಗುವುದು, ಅವುಗಳ ಉಳಿಕೆ ಉಪಯುಕ್ತ ಆಯುಷ್ಯಕ್ಕಲ್ಲ. ಈ ಪದ್ಧತಿಯು ಇಂಡ್ ಎಎಸ್ 16ರ ಅನುಸಾರ ಇರುವುದಿಲ್ಲ. ಇದು ಹಣಕಾಸು ತಃಖ್ತೆಗಳ ಮೇಲೆ ಬೀರುವ ಪರಿಣಾಮವನ್ನು ತಿಳಿಯುವುದು ಸಾಧ್ಯವಿರುವುದಿಲ್ಲ.

ಡಿ. ಕಂಪನಿಯು ಅಂತಿಮ ಬಿಲ್ಲುಗಳ ಸ್ವೀಕೃತಿ ಮತ್ತು ಸಕ್ಷಮ ಅಧಿಕಾರದಿಂದ ಅವುಗಳ ಅಂಗೀಕಾರದ ನಂತರ ಆಸ್ತಿಗಳನ್ನು ಬಂಡವಾಳೀಕರಿಸುತ್ತದೆ. ಇದು ಇಂಡ್ಯೆ ಎಎಸ್ 16 ರ ಅನುಸಾರ ಇಲ್ಲ. ಜೊತೆಗೆ, ಸ್ಥಿರಾಸ್ತಿಗಳನ್ನು ಬಂಡವಾಳೀಕ ರಿಸುವಲ್ಲಿ ಮತ್ತು ಸವಕಳಿಯನ್ನು ಆಸ್ತಿಗಳು ಉದ್ದೇಶಿತ ಬಳಕೆಗೆ ಸಿದ್ಧವಾದ ದಿನಾಂಕದಿಂದಲ್ಲದೆ ಬಂಡವಾಳೀಕರಣದ ದಿನಾಂಕದಿಂದ ಸವಕಳಿಯನ್ನು ಒದಗಿಸುವಲ್ಲಿ ಸಹ ವಿಳಂಬವಿರುತ್ತದೆ. ಆಸ್ತಿಯು ಉದ್ದೇಶಿತ ಬಳಕೆಗೆ ಸಿದ್ಧವಿದ್ದ ನೈಜ ದಿನಾಂಕವನ್ನು ತಿಳಿಸುವ ದಾಖಲೆಗಳ ಅನುಪಸ್ಥಿತಿಯಲ್ಲಿ ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಕೊರತೆ ಸವಕಳಿಯ ವಿಧಿಸುವಿಕೆಯ ಪರಿಣಾಮವನ್ನು ತಿಳಿಯುವುದು ಸಾಧ್ಯವಿರುವುದಿಲ್ಲ.

ಇ. 31.03.2018ಕ್ಕೆ ಕೊನೆಗೊಂಡ ಹಣಕಾಸು ವರ್ಷದ ಲೆಕ್ಕಪರಿಶೋಧನಾ ವರದಿಯಲ್ಲಿ ಹಿಂದಿನ ಲೆಕ್ಕಪರಿಶೋಧಕರು ವರದಿಮಾಡಿದಂತೆ ಕೊಪ್ಪಳ ವಿಭಾಗದಲ್ಲಿ ಕೈಗೊಳ್ಳಲಾಗಿದ್ದ ಮರುವಾಕಹ ಪ್ರಕ್ರಿಯೆ ಮತ್ತು ಸ್ಕಾಡಾ ಕಾಮಗಾರಿಗಳನ್ನು ನಿಲ್ಲಿಸಲಾಗಿತ್ತು ಮತ್ತು ತನಿಖೆಯನ್ನು ಪ್ರಾರಂಭಿಸಲಾಗಿತ್ತು. 31 ಮಾರ್ಚ್ 2015ರಂದು ಇದ್ದಂತೆ ಹೀಗೆ ನಿಲ್ಲಿಸಲಾದ ಕಾಮಗಾರಿಗಳ ಒಟ್ಟು ಮೌಲ್ಯವು ರೂ. 2,225.01

ಲಕ್ಷವಾಗಿತ್ತು ಮತ್ತು ಇವನ್ನು ವ್ಯಾಜ್ಯಗಳು ಬಾಕಿ ಇದ್ದ ಕಾರಣ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ ಎಂದು ತೋರಿಸಲಾಗಿತ್ತು. ಮತ್ತು ಈ ಆಸ್ತಿಗಳನ್ನು ಬಳಕೆಗೆ ತೊಡಗಿಸಿದ್ದರೂ ಬಂಡವಾಳೀಕರಿಸಲಾಗಿರಲಿಲ್ಲ ಮತ್ತು ಸೂಕ್ತ ಸವಕಳಿಯನ್ನು ವಿಧಿಸಿರಲಿಲ್ಲ. ಈ ಸಂಬಂಧ ಪರಿಷ್ಕೃತ ಸ್ಥಿತಿಗತಿಯ ಬಗ್ಗೆ ಯಾವುದೇ ದಾಖಲೆಯ ಸಾಕ್ಷ್ಯವೂ ವರ್ಷದ ಹಣಕಾಸು ತಃಖ್ತೆಗಳ ದಿನಾಂಕದಂದು ಇದ್ದಂತೆ ಪರಿಶೀಲಿಸಲು ನಮಗೆ ಲಭ್ಯವಿರುವುದಿಲ್ಲ. ಹಾಗಾಗಿ ಇದು ವರ್ಷದ ಹಣಕಾಸು ತಃಖ್ತೆಗಳ ಮೇಲೆ ಬೀರುವ ಪರಿಣಾಮವನ್ನು ತಿಳಿಯುವುದು ಸಾಧ್ಯವಿರುವುದಿಲ್ಲ.

ಎಫ್. 31.03.2018ಕ್ಕೆ ಕೊನೆಗೊಂಡ ಹಣಕಾಸು ವರ್ಷದ ಲೆಕ್ಕಪರಿಶೋಧನಾ ವರದಿಯಲ್ಲಿ ಹಿಂದಿನ ಲೆಕ್ಕಪರಿಶೋಧಕರು ಕೆಳಗಿನ ಪರಿಶೀಲನೆಯನ್ನು ಮಾಡಿದ್ದರು:

"2015–16ರ ಹಣಕಾಸು ವರ್ಷದಲ್ಲಿ ಅನೇಕ ವಿಭಾಗಗಳು ಟ್ರಾನ್ಸ್‌ಫಾರ್ಮರ್ ಜೋಡಣೆ ಮತ್ತು ಏರಿಯಲ್ ಫ್ಯೂಸ್ ಜೋಡಣೆಯ ಕಾಮಗಾರಿಗಳಿಗೆ ಸಂಬಂಧಿಸಿದಂತೆ ಬೃಹತ್ ಮೊತ್ತದ ಕಾಮಗಾರಿ ಗುತ್ತಿಗೆಗಳ ಹಂಚಿಕೆಯಲ್ಲಿ ಅವ್ಯವಹಾರ ಆಗಿದೆಯೆಂಬ ಆರೋಪವಿತ್ತು ಮತ್ತು ಈ ಸಂಬಂಧ ಕರ್ನಾಟಕ ಸರ್ಕಾರವು ತನಿಖೆಯನ್ನು ಆದೇಶಿಸಿತ್ತು. ತನಿಖೆ ಪೂರ್ಣಗೊಂಡು ಆದೇಶವನ್ನು ನಿರೀಕ್ಷಿಸಲಾಗಿತ್ತು. ಈ ನಡುವೆ ಎಲ್ಲ ಬಾಕಿ ಕಾಮಗಾರಿಗಳನ್ನೂ ನಿಲ್ಲಿಸಲಾಗಿತ್ತು. ಈ ಕಾಮಗಾರಿ ಗುತ್ತಿಗೆಯ ಸ್ವರೂಪ, ಮೌಲ್ಯ ಮತ್ತು ವಹಿಸುವಿಕೆ, ವಿಧಿಸಲಾದ ವಿಧಿವಿಧಾನಗಳ ಉಲ್ಲಂಘನೆ ಮತ್ತು ಕರ್ನಾಟಕ ಸರ್ಕಾರದಿಂದ ತನಿಖೆ ಆದೇಶ– ಇವುಗಳ ಬಗ್ಗೆ ವಿವರವಾದ ಮಾಹಿತಿಯ ಅನುಪಸ್ಥಿತಿಯಲ್ಲಿ ಅವ್ಯವಹಾರದ ಸ್ವರೂಪದ ಬಗ್ಗೆ ಮತ್ತು ಕಂಪನಿಯ ಹಣಕಾಸು ತಃಖ್ತೆಗಳ ಮೇಲಿನ ಅದರ ಪರಿಣಾಮದ ಬಗ್ಗೆ ನಾವು ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಸಾಧ್ಯವಿರುವುದಿಲ್ಲ."

ವರ್ಷದ ಹಣಕಾಸು ತಃಖ್ತೆಗಳ ದಿನಾಂಕದಂದು ಇದ್ದಂತೆ ಈ ವಿಷಯದ ಮೇಲೆ ಪರಿಷ್ಕೃತ ಸ್ಥಿತಿಗತಿಯೂ ಸೇರಿದಂತೆ ಯಾವುದೇ ಸಾಕ್ಷ್ಯಾಧಾರಗಳೂ ನಮ್ಮ ಪರಿಶೀಲನೆಗಾಗಿ ಲಭ್ಯವಿರಲಿಲ್ಲ. ಹಾಗಾಗಿ, ವರ್ಷದ ಹಣಕಾಸು ತಃಖ್ತೆಗಳ ಮೇಲೆ ಈ ಅಂಶದ ಪರಿಣಾಮವನ್ನು ಕುರಿತು ಅಭಿಪ್ರಾಯ ವ್ಯಕ್ತಪಡಿಸುವುದು ನಮಗೆ ಸಾಧ್ಯವಿರುವುದಿಲ್ಲ.

6. ಪವರ್ ಫೈನಾನ್ಸ್ ಕಾರ್ಪೊರೇಶನ್‌ನಿಂದ ಪಡೆದ ಸಾಲಕ್ಕೆ ಸಂಬಂಧಿಸಿದಂತೆ (ಆರ್‌ಎಪಿಡಿಆರ್‌ಪಿ – ಮೂಲದಲ್ಲಿ ಒದಗಿಸಲಾದ ಮೊತ್ತ ರೂ. 3604 ಲಕ್ಷ ಮತ್ತು 31.2.2019ರಂದು ಇದ್ದಂತೆ ಉಳಿಕೆ ರೂ. 1261.92 ಲಕ್ಷ), ನಮಗೆ ನೀಡಲಾದ ಮಾಹಿತಿಯಂತೆ, ಸಾಲವು ಅನುದಾನಕ್ಕೆ ಪರಿವರ್ತಿತವಾಗುವ ಯೋಜನೆಯ ಅಡಿ ಇತ್ತು. ಕಂಪನಿಯು ವರ್ಷದ ಬಡ್ಡಿ ವೆಚ್ಚವಾಗಿ ರೂ. 9.27 ಕೋಟಿ ಮೊತ್ತವನ್ನು ಗುರುತಿಸಿದೆ ಮತ್ತು ಪಿಎಫ್‌ಸಿ ಒದಗಿಸಿದ ಸಾಲ ಶಿಲ್ಕು ಸ್ಥಿರೀಕರಣದ ಆಧಾರದ ಮೇಲೆ ಮುಂಚಿನ ವರ್ಷಗಳಲ್ಲಿ ಗುರುತಿಸಿದ ರೂ. 7.21 ಕೋಟಿಯಷ್ಟು ಬಡ್ಡಿ ವೆಚ್ಚವನ್ನು ವ್ಯತಿರಿಕ್ತಗೊಳಿಸಿದೆ. ಸಾಲದ ಪರಿವರ್ತನೆ/ಹಿಂದಿನ ವರ್ಷಗಳ ಬಡ್ಡಿಯ ವ್ಯತಿರಿಕ್ತಗೊಳಿಸುವಿಕೆಯ ಅಂಗೀಕಾರ ಮತ್ತು ಚಾಲ್ತಿ ವರ್ಷದ ಬಡ್ಡಿಯನ್ನು ಮನ್ನಾಮಾಡುವ ಬಗ್ಗೆ ಯಾವುದೇ ನಿರ್ದಿಷ್ಟ ಸ್ಥಿರೀಕರಣವಿಲ್ಲ. ಇದು ವರ್ಷದ ಹಣಕಾಸು ವೆಚ್ಚವನ್ನು ರೂ. 16.48 ಕೋಟಿಯಷ್ಟು ಕಡಿಮೆ ತೋರಿಸಲು ಹಾಗೂ ಅದೇ ಮಟ್ಟಿಗೆ ಲಾಭವನ್ನು ಹೆಚ್ಚಿಗೆ ತೋರಿಸಲು ಕಾರಣವಾಗಿದೆ.

7. ಭಾರತೀಯ ಲೇಖಾ ಪ್ರಮಾಣ (ಇಂಡ್ ಎಎಸ್ 12) – ಆದಾಯ ತೆರಿಗೆಗಳು:

ಎ. ಕಂಪನಿಯು ಆದಾಯ ತೆರಿಗೆ ಕಾಯ್ದೆಯ ಅಡಿಯಲ್ಲಿ ಸವಕಳಿ, ಪಾವತಿ ಆಧಾರದ ಮೇಲೆ ತೆರಿಗೆ ಉದ್ದೇಶಗಳಿಗೆಂದು ಅವಕಾಶ ನೀಡಲಾದ ಸಿಬ್ಬಂದಿ ಸಂಬಂಧಿತ ವೆಚ್ಚಗಳು, ಭವಿಷ್ಯದ ಲಾಭಗಳಿಗೆ ಪ್ರತಿಯಾಗಿ ಹೊಂದಿಸಬಹುದಾದ ಮುಂದೂಡಲಾದ ಆದಾಯ ಬಾಬ್ತುಗಳು ಮತ್ತು ಮುಂದಕ್ಕೆ ಒಯ್ಯಲಾದ ನಷ್ಟಗಳ ಕಾರಣ ಉಂಟಾದ ಕಾಲ ವ್ಯತ್ಯಾಸಗಳಿಗೆ ಸಂಬಂಧಿಸಿದಂತೆ ಮುಂದೂಡಲಾದ ತೆರಿಗೆ ಆಸ್ತಿಗಳು/ಹೊಣೆಗಳನ್ನು ಸೃಷ್ಟಿಸಿಲ್ಲ. ಸೂಕ್ತ ದತ್ತಾಂಶ ಮತ್ತು ಮಾಹಿತಿಯ ಅನುಪಸ್ಥಿತಿಯಲ್ಲಿ ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಮುಂದೂಡಲಾದ ತೆರಿಗೆಯ ಪ್ರಸ್ತುತ ಪರಿಣಾಮವನ್ನು ಕುರಿತು ಅಭಿಪ್ರಾಯ ವ್ಯಕ್ತಪಡಿಸುವುದು ಸಾಧ್ಯವಿರುವುದಿಲ್ಲ.

ಬಿ. ಜೊತೆಗೆ, ಕಂಪನಿಯು 1.4.2016ರಂದು ಇದ್ದಂತೆ ಸ್ವತಂತ್ರ ಹಿಡುವಳಿ ಭೂಮಿಯ ಮರುಮೌಲ್ಯಮಾಪನ ಮುಡಿಪಿನ ಮೊತ್ತದ ಮೇಲೆ ಮುಂದೂಡಲಾದ ತೆರಿಗೆ ಹೊಣೆಯನ್ನು ಸೃಷ್ಟಿಸಿದೆ. ಈ ಸ್ವತ್ತುಗಳನ್ನು ಹೊಂದಿರುವ ಅಂತಿಮವಾದ ಉದ್ದೇಶವು ಸದ್ಯದ ಭವಿಷ್ಯದಲ್ಲಿ ಅವನ್ನು ಮಾರದೆ ವ್ಯಾಪಾರದಲ್ಲಿ ಬಳಸಿಕೊಳ್ಳುವುದೇ ಆಗಿರುವುದರಿಂದ, ನಮ್ಮ ಅಭಿಪ್ರಾಯದಂತೆ, ಮುಂದೂಡಲಾದ ತೆರಿಗೆ ಹೊಣೆಯ ಸೃಷ್ಟಿಯು ಸೂಕ್ತವಾದದ್ದುಲ್ಲ ಮತ್ತು ಅದನ್ನು ವ್ಯತಿರಿಕ್ತಗೊಳಿಸಬೇಕಿರುತ್ತದೆ. ಈ ಕಾರಣದಿಂದಾಗಿ, ಮುಂದೂಡಲಾದ ತೆರಿಗೆ ಹೊಣೆಯನ್ನು ರೂ. 20,726.93 ಲಕ್ಷದಷ್ಟು ಹೆಚ್ಚಾಗಿ ಮತ್ತು ಮರುಮೌಲ್ಯಮಾಪನ ಮುಡಿಪನ್ನು ಅದೇ ಮಟ್ಟಿಗೆ ಕಡಿಮೆ ತೋರಿಸಲಾಗಿದೆ.

ಸಿ. ಜೊತೆಗೆ, ಆದಾಯ ತರಿಗೆ ಕಾಯ್ದೆಯ ಅಡಿ ಸವಕಳಿಯ ಉದ್ದೇಶಗಳಿಗಾಗಿ ವರ್ಷದಲ್ಲಿ ಸ್ಥಿರಾಸ್ತಿಗಳಿಗೆ ಮಾಡಲಾದ ಎಲ್ಲ ಸೇರ್ಪಡೆಗಳೂ 180ಕ್ಕಿಂತಲೂ ಕಡಿಮೆ ಅವಧಿಗೆ ಸೇರ್ಪಡೆಗಳೆಂದು ಪರಿಗಣಿಸಲಾಗಿದೆ. ಇದರಿಮದಾಗಿ ಆದಾಯ ತೆರಿಗೆ ಕಾಯ್ದೆಯ ಅಡಿ ಕಡಿಮೆ ಸವಕಳಿಯ ಹಕ್ಕನ್ನು ಸಲ್ಲಿಸಲಾಗಿದೆ. ನಾವು ಇಂತಹ ಮೊತ್ತದ

ಪರಿಮಾಣೀಕರಣವನ್ನು ಮಾಡುವುದು ಸಾಧ್ಯವಾಗಿಲ್ಲ ಮತ್ತು ಆಸ್ತಿಗಳಿಗೆ ದಿನವಹಿ ಸೇರ್ಪಡೆಗಳ ವಿವರಗಳ ಅನುಪಸ್ಥಿತಿಯಲ್ಲಿ ಮುಂದೂಡಲಾದ ತೆರಿಗೆಗಳು ಮತ್ತು ಲಾಭ ಮತ್ತು ನಷ್ಟದ ತಃಖ್ತೆಯ ಮೇಲಿನ ಸಂಬಂಧಿತ ಪರಿಣಾಮವನ್ನು ನಿರ್ಧರಿಸುವುದು ಸಾಧ್ಯವಿರುವುದಿಲ್ಲ.

8. ಭಾರತೀಯ ಲೇಖಾ ಪ್ರಮಾಣ (ಇಂಡ್ ಎಎಸ್) 36– ಆಸ್ತಿಗಳಿಗೆ ಬಾಧೆತಟ್ಟುವಿಕೆ :

ಕಂಪನಿಯು ಹಾನಿಗೊಳಗಾದ ಆಸ್ತಿಗಳನ್ನು ಗುರುತಿಸುವ ಪ್ರಕ್ರಿಯೆಯನ್ನು ಲೇಖಾ ಪ್ರಮಾಣ 36ರ ಅನುಸಾರ ಮತ್ತು ಹಾಗಾಗಿ ನಾವು ಪ್ರಸ್ತುತ ಅನುಸರಣೆ ಮತ್ತು ಹಣಕಾಸು ತಃಖ್ತೆಗಳ ಮೇಲಿನ ಇದರ ಪರಿಣಾಮವನ್ನು ಕುರಿತಾಗಿ ಅಭಿಪ್ರಾಯ ವ್ಯಕ್ತಪಡಿಸುವ ಸ್ಥಿತಿಯಲ್ಲಿ ಇರುವುದಿಲ್ಲ.

9. ಸಿಬ್ಬಂದಿ ಸವಲತ್ತುಗಳ ಮೇಲಿನ ಭಾರತೀಯ ಲೇಖಾ ಪ್ರಮಾಣ (ಇಂಡ್ ಎಎಸ್) 19 ಇಂಡ್ ಎಎಸ್ 19

ಎ. ಕಂಪನಿಯು ವೇತನದ ಪ್ರತಿಶತವನ್ನು ಆಧರಿಸಿ ಗ್ರಾಚುಟಿ ಮತ್ತು ಪಿಂಚಣಿ ಹೊಣೆಗಾಗಿ ಕಾಲದಿಂದ ಕಾಲಕ್ಕೆ ಮಾಹಿತಿ ಒದಗಿಸಲಾದಂತೆ ಪಿಂಚಣಿ ಮತ್ತು ಗ್ರಾಚುಟಿ ನ್ಯಾಸಕ್ಕೆ ಪಾವತಿಗಳನ್ನು ಮಾಡುತ್ತ ಬಂದಿದೆ. ನ್ಯಾಸವು ಸದರಿ ವರ್ಷಕ್ಕಾಗಿ ಮಾಡಿದ ವಿಮಾಗಣಕ ಮೌಲ್ಯಮಾಪನದ ವಿವರಗಳನ್ನು ಕಂಪೆನಿಯು ಹೊಂದಿರುವುದಿಲ್ಲ ಮತ್ತು ಇದಕ್ಕನುಗುಣವಾಗಿ ಇಂತಹ ಸಿಬ್ಬಂದಿ ಸವಲತ್ತುಗಳಿಗೆ ಪ್ರತಿಯಾಗಿ ಹಣಕಾಸು ತಃಖ್ತೆಗಳಲ್ಲಿ ಯಾವುದೇ ವಿಮಾಗಣಕ ಮೌಲ್ಯಮಾಪನ ಹವಣಿಕೆಯನ್ನು ಹೊಂದಿರುವುದಿಲ್ಲ. ಇದರಿಂದಾಗಿ, ವಿಮಾಗಣಕ ಮೌಲ್ಯಮಾಪನದ ಪ್ರಕಾರ ಲಾಭ ಮತ್ತು ನಷ್ಟದ ತಃಖ್ತೆಗೆ ಖರ್ಚುಹಾಕಲಾದ ಸಿಬ್ಬಂದಿ ಸವಲತ್ತು ವೆಚ್ಚಗಳ ಯುಕ್ತತೆಯ ಬಗ್ಗೆ ಹಾಗೂ ಹಣಕಾಸು ತಃಖ್ತೆತಗಳಲ್ಲಿ ಇಂಡ್ ಎಎಸ್ – 19 ಅಗತ್ಯವಾಗಿಸುವ ಪ್ರಕಟಣೆಗಳ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ನಮಗೆ ಸಾಧ್ಯವಿರುವುದಿಲ್ಲ.

ಬಿ. ಎನ್‌ಡಿಸಿಪಿಎಸ್ ಯೋಜನೆಯ ಭಾಗವಾಗಿರುವ ನೌಕರರಿಗೆ ಗ್ರಾಚುಟಿ ಪಾವತಿಯ ಪುಬಂಧಗಳ ಅನ್ವಯವನ್ನು ಕಂಪೆನಿಯು ತಿಳಿದುಕೊಂಡಿರುವುದಿಲ್ಲ. ನಮಗೆ ತಿಳಿಸಲಾದಂತೆ, ಇಂತಹ ನೌಕರರಿಗೆ ಗ್ರಾಚುಟಿ ಅನ್ವಯದ ಬಗ್ಗೆ ಸ್ಪಷ್ಟವಾದ ನಿರ್ದೇಶನಗಳು ಇರುವುದಿಲ್ಲ ಮತ್ತು ಹಾಗಾಗಿ ಪ್ರಾಪ್ತ ಗ್ರಾಚುಟಿ ಹಿಣೆಗಾಗಿ, ಅವು ಇದ್ದಲ್ಲಿ, ಯಾವುದೇ ಹವಣಿಕೆಯನ್ನು ಮಾಡಿರುವುದಿಲ್ಲ.

10. ಭಾರತೀಯ ಲೇಖಾ ಪ್ರಮಾಣ (ಇಂಡ್ ಎಎಸ್) 113 – ನ್ಯಾಯಯುತ ಮೌಲ್ಯದ ಲೆಕ್ಕಾಚಾರ ಮತ್ತು ಭಾರತೀಯ ಲೇಖಾ ಪ್ರಮಾಣ (ಇಂಡ್ ಎಎಸ್ 109) – ಹಣಕಾಸು ಸಾಧನಗಳು

ಎ. ಇಂಡ್ ಎಎಸ್ ವಿಧಾನಕ್ಕೆ ಮಾರ್ಪಾಟಾದ ದಿನದಂದು ಇದ್ದಂತೆ ಸ್ವತಂತ್ರ ಹಿಡುವಳಿಗೆ ಸಂಬಂಧಿಸಿದಂತೆ ಮರುಮೌಲ್ಯಮಾಪನ ಮಾದರಿಯನ್ನು ಕಂಪೆನಿಯು ಅಳವಡಿಸಿಕೊಂಡಿದೆ. ಪ್ರಾರಂಭಿಕ ಲೆಕ್ಕಾಚಾರದ ದಿನದಿಂದ 3 ವರ್ಷಗಳು ಘಟಿಸಿವೆಯಾದ ಕಾರಣ ಸಂತುಲನ ಪಟ್ಟಿಯ ದಿನದಂದು ಇದ್ದಂತೆ ನ್ಯಾಯಯುತ ಮೌಲ್ಯವನ್ನು ಲೆಕ್ಕಾಚಾರ ಹಾಕಲು ಇದನ್ನು ಮತ್ತೆ ಪರಿಶೀಲಿಸುವ ಆಗತ್ಯವಿದೆ. ಲೆಕ್ಕಾಚಾರದ ಅನುಪಸ್ಥಿತಿಯಲ್ಲಿ ವರ್ಷದ ಹಣಕಾಸು ತಃಖ್ತೆಗಳ ಮೇಲೆ ಇದರ ಪರಿಣಾಮವನ್ನು ನಿರ್ಧರಿಸುವುದು ನಮಗೆ ಸಾಧ್ಯವಾಗಿಲ್ಲ.

ಬಿ. ಕಂಪನಿಯು ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್‌ನಲ್ಲಿ ರೂ. 251 ಲಕ್ಷ ಮೊತ್ತದ ಈಕಿಟಿ ಷೇರುಗಳಲ್ಲಿ ಹೂಡಿಕೆ ಮಾಡಿದೆ. ಸಂತುಲನ ಪಟ್ಟಿಯ ದಿನಾಂಕದಂದು ಇದ್ದಂತೆ ಈ ಷೇರುಗಳ ನ್ಯಾಯಯುತ ಮೌಲ್ಯಮಾಪನ ಆಗಿರುವುದಿಲ್ಲ. ಹಾಗಾಗಿ ನಾವು ಇಂಡ್ ಎಎಸ್ ಅನುಸರಣೆ ಮತ್ತು ಹಣಕಾಸು ತಃಖ್ತೆಗಳ ಮೇಲಿನ ಇದರ ಪರಿಣಾಮವನ್ನು ಕುರಿತಾಗಿ ಅಭಿಪ್ರಾಯ ವ್ಯಕ್ತಪಡಿಸುವ ಸ್ಥಿತಿಯಲ್ಲಿ ಇರುವುದಿಲ್ಲ.

ಸಿ. ಗುತ್ತಿಗೆದಾರರು/ಸರಬರಾಜುದಾರರಿಂದ ಪಡೆದ ಭದ್ರತಾ ಠೇವಣಿಗಳು ಮತ್ತು ಗುತ್ತಿಗೆದಾರರಿಂದ ಪಡೆದ ಧಾರಣ ಹಣವನ್ನು ಇಂಡ್ ಎಎಸ್ –109ರ ಅಗತ್ಯದಂತೆ ದತ್ತಿ ವೆಚ್ಚದಲ್ಲಿ ಲೆಕ್ಕತೋರಿಸಿರುವುದಿಲ್ಲ. ನಿರೀಕ್ಷೆಯಂತೆ ಈ ಠೇವಣಿಗಳ ಸಾಕ್ಷಾತ್ಕಾರ ದಿನಾಂಕವನ್ನು ತಿಳಿಯುವುದು ಸಾಧ್ಯವಿರುವುದಿಲ್ಲ. ಇದಕ್ಕನುಗುಣವಾಗಿ, ನಾವು ಠೇವಣಿ ಮತ್ತು ಧಾರಣ ಹಣದ ಪರಿಣಾಮಗಳನ್ನು ಹಾಗೂ ಇವುಗಳು ಲಾಭ ಮತ್ತು ನಷ್ಟದ ತಃಖ್ತೆಯ ಮೇಲೆ ಬೀರಬಹುದಾದ ಪರಿಣಾಮವನ್ನು ಕುರಿತು ಅಭಿಪ್ರಾಯ ವ್ಯಕ್ತಪಡಿಸಲು ಸಾಧ್ಯವಿರುವುದಿಲ್ಲ.

11. ಭಾರತೀಯ ಲೇಖಾ ಪ್ರಮಾಣ (ಇಂಡ್ ಎಎಸ್) 17– ಗುತ್ತಿಗೆಗಳು

ನಮಗೆ ತಿಳಿದಂತೆ ಕಂಪನಿಯು ಚರಾಸ್ತಿಗಳನ್ನು ಗುತ್ತಿಗೆಗೆ ನೀಡಿದೆ/ಪಡೆದುಕೊಂಡಿದೆ. ಕೆಲವು ಪ್ರಕರಣಗಳಲ್ಲಿ (ಕೆಪಿಟಿಸಿಎಲ್ ನೊಂದಿಗೆ ಗುತ್ತಿಗೆ) ಷರತ್ತು ಮತ್ತು ನಿಬಂಧನೆಗಳ ದಾಖಲೆಗಳಿಲ್ಲ. ಗುತ್ತಿಗೆಗೆ ನೀಡಿರುವ ಪಕ್ಷವು ಭೋಗ್ಯದ ಮೊತ್ತಕ್ಕಾಗಿ ಬೇಡಿಕೆಗಳನ್ನು ಇರಿಸಿರುವು ಗಮನಕ್ಕೆ ಬಂದಿರುತ್ತದೆ ಮತ್ತು ಇವನ್ನು ಕಂಪನಿಯು ಲೆಕ್ಕಪುಸ್ತಕಗಳಲ್ಲಿ ಸೇರಿಸಿರುವುದಿಲ್ಲ. ಜೊತೆಗೆ, ಕಂಪನಿಯು ಇಂಡ್ ಎಎಸ್ 17ರ ಅಗತ್ಯದಂತೆ ಪ್ರಕಟಣಾ ಅಗತ್ಯಗಳನ್ನು ಪೂರೈಸಿರುವುದಿಲ್ಲ.

12. ಭಾರತೀಯ ಲೇಖಾ ಪ್ರಮಾಣ (ಇಂಡ್ ಎಎಸ್) 20 – ಸರ್ಕಾರದ ಅನುದಾನಗಳು :

ಬಂಡವಾಳ ಕಾಮಗಾರಿಗಳಿಗೆಂದು ಸರ್ಕಾರದಿಂದ ಮತ್ತು ಇತರ ಪ್ರಾಧಿಕಾರಗಳಿಂದ ಪಡೆಯಲಾದ ಅನುದಾನಗಳು/ ಸಹಾಯಧನಗಳು ಮತ್ತು ಬಂಡವಾಳ ಕಾಮಗಾರಿಗಳಿಗೆಂದು ಗ್ರಾಹಕರಿಂದ ಸ್ವೀಕರಿಸಲಾದ ಕೊಡುಗೆಗಳನ್ನು ಪ್ರಾರಂಭಿಕವಾಗಿ

ಮುಂದೂಡಲಾದ ಆದಾಯ ಎಂದು ಪರಿಗಣಿಸಿ ಇಂತಹ ಅನುದಾನಗಳು/ಸಹಾಯಧನವನ್ನು ಯಾವ ಆಸ್ತಿ ವರ್ಗಕ್ಕೆಂದು ಪಡೆಯಲಾಗಿದೆಯೋ ಅದಕ್ಕೆ ವಿಧಿಸಲಾದ ಸವಕಳಿಯನ್ನು ಆಧರಿಸಿ ಆದಾಯವೆಂದು ತೆಗೆದುಕೊಳ್ಳಲಾಗುತ್ತದೆ. ಆದರೆ, ಇಂಡ್ ಎಎಸ್ 20ರ ಪ್ರಕಾರ ಮುಂದೂಡಲಾದ ಆದಾಯದಿಂದ ಲಾಭ ಮತ್ತು ನಷ್ಟದ ತಃಖ್ತೆಗೆ ಬಿಡುಗಡೆ ಮಾಡುವಾಗ ಆಸ್ತಿಯ ಉಪಯುಕ್ತ ಆಯುಷ್ಯದ ವ್ಯವಸ್ಥಿತ ಆಧಾರದ ಮೇಲೆ ಮಾಡಬೇಕಾಗುತ್ತದೆ. ಕಂಪೆನಿಯು ಪ್ರತಿ ಆಸ್ತಿಗೆ ಪ್ರತಿಯಾಗಿ ಬಂಡವಾಳ ಅನುದಾನವನ್ನು ಪ್ರತ್ಯೇಕಿಸುವ ಸ್ಥಿತಿಯಲ್ಲಿಲ್ಲ. ಇದಕ್ಕನುಗುಣವಾಗಿ, ಮುಂದೂಡಲಾದ ಆದಾಯದಿಂದ ಲಾಭ ಮತ್ತು ನಷ್ಟದ ತಃಖ್ತೆಗೆ ಹೆಚ್ಚಾಗಿ ಅಥವಾ ಕಡಿಮೆಯಾಗಿ ವಿಧಿಸುವುದರ ಪರಿಣಾಮವನ್ನು ತಿಳಿಯಲು ಸಾಧ್ಯವಾಗಿಲ್ಲ.

ಜೊತೆಗೆ, ಕಂಪನಿಯು ಮುಂದೂಡಲಾದ ಆದಾಯವನ್ನು ಚಾಲ್ತಿ ಮತ್ತು ಚಾಲ್ತಿಯಲ್ಲದ ಭಾಗಗಳಾಗಿ ಪ್ರತ್ಯೇಕಿಸುವ ಬಗ್ಗೆ ಯಾವುದೇ ಮಾಹಿತಿಯನ್ನು ಹೊಂದಿಲ್ಲ ಮತ್ತು ಹಾಗಾಗಿ ಮುಂದೂಡಲಾದ ಆದಾಯದ ಇಡೀ ಶಿಲ್ಕನ್ನು ಚಾಲ್ತಿಯಲ್ಲದ ಆದಾಯಗಳಲ್ಲಿ ತೋರಿಸಲಾಗಿದೆ. ಇದಕ್ಕನುಗುಣವಾಗಿ ಹಣಕಾಸು ತಃಖ್ತೆಗಳಲ್ಲಿ ಚಾಲ್ತಿ ಮತ್ತು ಚಾಲ್ತಿಯಲ್ಲದ ಭಾಗಗಳಾಗಿ ಪ್ರತ್ಯೇಕಿಸುವಿಕೆಯ ಮೇಲಿನ ಇದರ ಪ್ರಸ್ತುತ ಪರಿಣಾಮವನ್ನು ಕುರಿತು ಅಭಿಪ್ರಾಯ ವ್ಯಕ್ತಪಡಿಸುವುದು ನಮಗೆ ಸಾಧ್ಯವಿರುವುದಿಲ್ಲ.

13. ಭಾರತೀಯ ಲೇಖಾ ಪ್ರಮಾಣ (ಇಂಡ್ ಎಎಸ್) 115 – ಗ್ರಾಹಕರೊಂದಿಗೆ ಗುತ್ತಿಗೆ :

ಗ್ರಾಹಕರು ಬಂಡವಾಳ ಆಸ್ತಿಗಳಿಗೆ ಮಾಡಿದ ಕೊಡುಗೆಗಳಿಗೆ ಮೇಲ್ವಿಚಾರಣೆ ಶುಲ್ಕಗಳನ್ನು ಕಂಪನಿಯು ವಿಧಿಸಿರುವ ಬಗ್ಗೆ: ಕಂಪನಿಯು ಈ ಬಗೆಯ ಮೇಲ್ವಿಚಾರಣಾ ಶುಲ್ಕಗಳ ಮೇಲಿನ ಆದಾಯವನ್ನು ಕಂಪನಿಯು ಗ್ರಾಹಕರಿಂದ ಪಡೆದ ಅರ್ಜಿಯ ಆಧಾರದ ಮೇಲೆ ಗುರುತಿಸುತ್ತದೆ. ಎಎಸ್ – 115ರ ಅಡಿ ಅಗತ್ಯವಾಗಿರುವಂತೆ ಗ್ರಾಹಕರೊಂದಿಗಿನ ಗುತ್ತಿಗೆಯಿಂದ ನಿಷ್ಪನ್ನವಾದಂತೆ ಸಾಧನೆಯ ತೃಪ್ತಿ ಹೊಣೆಯ ಅವಧಿಯನ್ನು ಕಂಪೆನಿಯು ನಿರ್ಧರಿಸುವುದಿಲ್ಲ. ಮೇಲಿನ ಪಥಾಂತರದ ಪರಿಣಾಮವನ್ನು ಅಂದಾಜುಮಾಡಲು ಕಂಪೆನಿಯು ಪ್ರಸ್ತುತವಾದ ಮಾಹಿತಿಯನ್ನು ಹೊಂದಿರುವುದಿಲ್ಲ. ಇದಕ್ಕನುಗುಣವಾಗಿ ಹಣಕಾಸು ತಃಖ್ತೆಯ ಮೇಲಿನ ಪ್ರಸ್ತುತ ಪರಿಣಾಮದ ಮೇಲೆ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ನಮಗೆ ಸಾಧ್ಯವಿರುವುದಿಲ್ಲ.

14. ವರ್ಷದ ಕೊನೆಗೆ ಇದ್ದಂತೆ "ಅಂತರ್ ಘಟಕ ಖಾತೆಗಳು" (ಐಯುಟಿ) ಶೀರ್ಷಿಕೆಯಡಿ **"ಇತರ ಚಾಲ್ತಿ ಹೊಣೆಗಳು"** ಅಡಿಯಲ್ಲಿ ತೋರಿಸಲಾಗಿರುವ ರೂ. 1504.21 ಲಕ್ಷ (ಜಮಾ) ಮೊತ್ತವು [ಹಿಂದಿನ ವರ್ಷ ರೂ. 685.44 ಲಕ್ಷ (ಖರ್ಚು)] ನಿಧಿ ವರ್ಗಾವಣೆ, ಸಾಮಗ್ರಿ ವರ್ಗಾವಣೆ, ಆಸ್ತಿ ವರ್ಗಾವಣೆ, ವಿಭಾಗಗಳ ಬೇರ್ಪಡಿಸುವಿಕೆಯ ನಮೂದುಗಳು ಮತ್ತು ಇತರ ಸಿಬ್ಬಂದಿ ವರ್ಗಾವಣೆ ಸಂಬಂಧಿತ ನಮೂದುಗಳಿಗೆ ಸಂಬಂಧಿಸಿದ ಹೊಂದಾಣಿಕೆಯಾಗದ ಶಿಲ್ಕುಗಳಾಗಿವೆ. ಈ ಶಿಲ್ಕುಗಳ ಹೊಂದಾಣಿಕೆಯ ಅನುಪಸ್ಥಿತಿಯಲ್ಲಿ ಹಣಕಾಸು ವಿವರಣಾ ತಃಖ್ತೆಗಳ ಮೇಲೆ ಹೊಂದಾಣಿಕೆಯಾಗದ ಐಯುಟಿ ಶಿಲ್ಕುಗಳ ಪರಿಣಾಮವನ್ನು ತಿಳಿಯಲಾಗಿಲ್ಲ.

15. ಎಲ್‌ಟಿ ಗ್ರಾಹಕರ ಪ್ರಕರಣದಲ್ಲಿ ವರ್ಷದ ಕೊನೆಯ ಹೊತ್ತಿಗೆ ಬಾಕಿ ಇರುವ ವಿದ್ಯುತ್ ಮಾರಾಟಕ್ಕಾಗಿನ ವಿವಿಧ ಸಾಲಗಾರರ ಶಿಲ್ಕಿನ ಮೇಲೆ 4% ದಂತೆ (ಇಎಸ್‌ಎಎಆರ್, 1985ರ ಅನುಬಂಧ 5, ಕಂಡಿಕೆ 4.2ರ ಪ್ರಕಾರ) ವಸೂಲಾಗದ ಮತ್ತು ಸಂಶಯಾಸ್ಪದ ಸಾಲಗಳಿಗಾಗಿನ ಹವಣಿಕೆಯನ್ನು ಕಂಪೆನಿ ಮಾಡುತ್ತದೆ. ಕಂಪನಿಯು 31.07.2008ಕ್ಕೆ ಪೂರ್ವದ ಅವಧಿಗೆ ಸಂಬಂಧಿಸಿದ, ಕರ್ನಾಟಕ ಸರ್ಕಾರದಿಂದ ವಸೂಲಾಗದ (ಸಹಾಯಧನ ಕಾಲಾವಧಿಯ ಪೂರ್ವದ ಬಾಬ್ತನ್ನು ಅಂತಿಮ ಗ್ರಾಹಕರಿಂದ ಸಂಗ್ರಹಿಸಬೇಕಾದುದು) ರೂ. 70628.96 ಲಕ್ಷ ಮೊತ್ತದ ಹಳೆಯ ವಸೂಲಾಗಬೇಕಿರುವ ಬಾಕಿಗಳನ್ನು (ಎಲ್‌ಟಿ ವರ್ಗದಡಿ) ಐಪಿ ಸೆಟ್ ಅನುಷ್ಠಾನಗಳಿಂದ – ಹವಣಿಸಲಾದ ಬಡ್ಡಿಯೂ ಸೇರಿ – ಉಳಿಸಿಕೊಂಡಿದೆ. ಕಂಪೆನಿಯು ಈ ಬಾಕಿಗಳ ಮೇಲೆ 10% ದಂತೆ ಹವಣಿಕೆಯನ್ನು ಮಾಡಿದ್ದು ಇಡೀ ಬಕಿಗಳು ಸಂಶಯಾಸ್ಪದವಾಗಿರುವ ಕಾರಣ ಈ ಹವಣಿಕೆಯು ಪರ್ಯಾಪ್ತವಾಗಿ ಕಂಡುಬರುವುದಿಲ್ಲ. ಸಂತುಲನ ಪಟ್ಟಿಯ ದಿನಾಂಕದಂದು ಇದ್ದಂತೆ, ಬಾಕಿಗಳ ಪೈಕಿ ಹವಣಿಸದ ಭಾಗ ರೂ. 43868.56 ಲಕ್ಷ ಆಗಿತ್ತು. ಇದಕ್ಕನುಗುಣವಾಗಿ, ಪೂರ್ಣವಾದ ಹವಣಿಕೆಯನ್ನು ಮಾಡಿದ್ದರೆ ಲಾಭ ಮತ್ತು ನಷ್ಟದ ತಃಖ್ತೆಯ ಅಡಿಯ ಲಾಭ ರೂ. 43868.56 ಲಕ್ಷದಷ್ಟು ಕಡಿಮೆ ಇರುತ್ತಿತ್ತು ಮತ್ತು ಇತರ ಹಣಕಾಸು ಆಸ್ತಿಗಳ ಶಿಲ್ಕು ಅದೇ ಮಟ್ಟಿಗೆ ಕಡಿಮೆ ಇರುತ್ತಿತ್ತು.

16. ಶಿಲ್ಕುಗಳ ಸ್ಥಿರೀಕರಣ/ಹೊಂದಾಣಿಕೆ:

ಕಂಪನಿಯು ಕೆಪಿಟಿಸಿಎಲ್, ಕೆಪಿಸಿಎಲ್, ಪಿಕೆಸಿಎಲ್ ಮತ್ತು ಇತರ ಎಸ್ಕಾಂಗಳು, ಇತರ ಸಾಲದಾರರು, ಇತರ ಸಾಲಗಾರರು, ಮುಂಗಡಗಳಿಗೆ/ಗಳಿಂದ ಸರಬರಾಜುದಾರರು/ಗುತ್ತಿಗೆದಾರರು/ಸರ್ಕಾರದ ಪ್ರಾಧಿಕಾರಗಳು/ಗ್ರಾಹಕರು/ನೌಕರರಿಗೆ/ರಿಂದ ತೇವಣಿಗಳು, ಸಾಲಗಳು ಮತ್ತು ವಿವಿಧ ಪಕ್ಷಗಳಿಂದ ಉತರ ಸ್ವೀಕೃತಿಗಳಿಗೆ ಸಂಬಂಧಿಸಿದಂತೆ ಶಿಲ್ಕುಗಳ ಸ್ಥಿರೀಕರಣ ಮತ್ತು ಹೊಂದಾಣಿಕೆಯನ್ನು ಪಡೆದುಕೊಳ್ಳುವ ಪ್ರಕ್ರಿಯೆಯನ್ನು ಹೊಂದಿರುವುದಿಲ್ಲ. ಹಳೆಯ ಬಾಕಿಗಳ ಹೊಂದಾಣಿಕೆ ಮತ್ತು ಇತ್ಯರ್ಥದಿಂದಾಗುವ ಹೊಂದಾಣಿಕೆ ಮತ್ತು ಇಂತಹ ಬಾಕಿಗಳ ವಸೂಲಾಗದಿರುವಿಕೆ ಅಥವಾ ಭಾಗಶಃ ವಸೂಲಾಗುವಿಕೆಯಿಂದ ಉದ್ಭವಿಸಬಹುದಾದ ನಷ್ಟದ ಪರಿಣಾಮವನ್ನು ತಿಳಿಯಲು ಸಾಧ್ಯವಾಗಿಲ್ಲ. ಇದಕ್ಕನುಗುಣವಾಗಿ ಈ ಬಗೆಯ ಹವಣಿಕೆಯು

ಲಾಭ ಮತ್ತು ನಷ್ಟದ ತಃಖ್ತೆಯ ಮೇಲೆ ಬೀರಬಹುದಾದ ಪರಿಣಾಮವನ್ನು ಕುರಿತು ಅಭಿಪ್ರಾಯ ವ್ಯಕ್ತಪಡಿಸುವುದು ನಮಗೆ ಸಾಧ್ಯವಿರುವುದಿಲ್ಲ.

17. ಸಾಮಗ್ರಿ ದರ ವ್ಯತ್ಯಾಸ:

ಲೆಕ್ಕ ನೀತಿಗಳ ಟಿಪ್ಪಣಿ ಸಂಖ್ಯೆ 2.20ರಲ್ಲಿ ವಿವರಿಸಲಾಗಿರುವಂತೆ ಸಾಮಗ್ರಿ ದರ ವ್ಯತ್ಯಾಸವನ್ನು ಲಾಭ ಮತ್ತು ನಷ್ಟದ ತಃಖ್ತೆಗೆ ಖರ್ಚುಹಾಕುವ ಬದಲಿಗೆ ಮುಡಿಪುಗಳು ಮತ್ತು ಹೆಚ್ಚಳಕ್ಕೆ ಹೊಂದಿಸಲಾಗುತ್ತಿದ್ದು ಇದು ಸಾಮಾನ್ಯವಾಗಿ ಒಪ್ಪಿತವಾದ ಲೇಖಾ ಸಿದ್ಧಾಂತಗಳಿಗೆ ಅನುಗುಣವಾಗಿರುವುದಿಲ್ಲ.

18. ಇತರ ಚಾಲ್ತಿಯಲ್ಲದ ಹಣಕಾಸು ಹೊಣೆಗಳಲ್ಲಿ ಗ್ರಾಹಕರಿಗೆಂದು ಕರ್ನಾಟಕ ಸರ್ಕಾರವು ಮಾಡಿದ ರೂ. 596.95 ಲಕ್ಷ ಮೊತ್ತದ ಹವಣಿಕೆ, ಕರ್ನಾಟಕ ಸರ್ಕಾರ ಎಸ್‌ಎಂಐಓಆರ್‌ಇ ಗೆ ಸಂಬಂಧಿಸಿದಂತೆ ನೀಡಿದ ಬಿಆರ್‌ಪಿ 2 ಹೊಂದಾಣಿಕೆಯಾದ ರೂ. 1293.06 ಲಕ್ಷ ಮತ್ತು ಕರ್ನಾಟಕ ಸರ್ಕಾರಕ್ಕ ಇತರ ಪಾವತಿಗಳಾದ ರೂ. 335.28 ಲಕ್ಷ ಸೇರುತ್ತದೆ. ಈ ಶಿಲ್ಕುಗಳು ಬಹಳ ವರ್ಷಗಳಿಂದ ಬಾಕಿ ಇದ್ದು ಕಂಪೆನಿಗೆ ಇವುಗಳ ಬಗ್ಗೆ ಯಾವುದೇ ಮಾಹಿತಿ ಇರುವುದಿಲ್ಲ. ಇದಕ್ಕನುಗುಣವಾಗಿ, ಈ ಶಿಲ್ಕುಗಳ ಅಡಿಯಲ್ಲಿ ಮಾಡಬೇಕಿರುವ ಯಾವುದೇ ಮರುಬರಹ ಅಥವಾ ಯಾವದೇ ಹವಣಿಕೆಯ ಬಗ್ಗೆ ಮತ್ತು ಹಣಕಾಸು ತಃಖ್ತೆಯ ಮೇಲಿನ ಅದರ ಪರಿಣಾಮದ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವುದು ನಮಗೆ ಸಾಧ್ಯವಿರುವುದಿಲ್ಲ.

19. ಇತರ ಚಾಲ್ತಿಯಲ್ಲದ ಹೊಣೆಗಳಲ್ಲಿ 31 ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷಕ್ಕೆ ರೂ. 75.86 ಲಕ್ಷದಷ್ಟು ಋಣಾತ್ಮಕ ಮೊತ್ತದ ಠೇವಣಿ ಕೊಡುಗೆ ಕಾಮಗಾರಿ ಸೇರಿದೆ. ಈ ಮೊತ್ತವು ಋಣಾತ್ಮಕವಾಗಲು ಕಾರಣವೇನೆಂಬ ಬಗ್ಗೆ ಕಂಪೆನಿಯು ಮಾಹಿತಿಯನ್ನು ಹೊಂದಿಲ್ಲ ಮತ್ತು ಇದಕ್ಕನುಗುಣವಾಗಿ ಹಣಕಾಸು ತಃಖ್ತೆಯ ಮೇಲಿನ ಇದರ ಪ್ರಸ್ತುತ ಪರಿಣಾಮವನ್ನು ಕುರಿತು ಅಭಿರಾಯವನ್ನು ವ್ಯಕ್ತಪಡಿಸುವುದು ನಮಗೆ ಸಾಧ್ಯವಿರುವುದಿಲ್ಲ.

20. "ಇತರ ಖರ್ಚುಗಳು" ಅಡಿ ವಿಂಗಡಿಸಿರುವ ಕೆಳಗಿನ ಖರ್ಚುಗಳ ಲೆಕ್ಕ ಶೀರ್ಷಿಕೆಗಳು ಋಣಾತ್ಮಕ ಶೀಲ್ಕುಗಳನ್ನು ತೋರಿಸುತ್ತಿವೆ. ಇವುಗಳಿಗೆ ತೃಪ್ತಿಕರವಾದ ಕಾರಣಗಳನ್ನು ಒದಗಿಸಿರುವುದಿಲ್ಲ. ಈ ಮೊತ್ತಗಳನ್ನು ಆದಾಯ ಲೆಕ್ಕ ಶೀರ್ಷಿಕೆಗಳ ಅಡಿ ವಿಂಗಡಿಸಬೇಕಿತ್ತು:

1. ಸಾಗಣೆ ಮತ್ತು ಇತರ ಸಾಮಗ್ರಿ ಸಂಬಂಧಿತ ಖರ್ಚುಗಳು – ರೂ. 376.26 ಲಕ್ಷ (ಹಿಂದಿನ ವರ್ಷ – 83.42 ಲಕ್ಷ)
2. ಇತರೆ ನಷ್ಟಗಳು – ರೂ. 516.29 ಲಕ್ಷ (ಹಿಂದಿನ ವರ್ಷ – ಅನ್ವಯವಾಗುವುದಿಲ್ಲ)

21. 2011 ರಿಂದ 2018ರ ಅವಧಿಗೆ ಸಂಬಂಧಿಸಿದಂತೆ ಜನರೇಟರ್‌ಗಳು ಹಕ್ಕುಸಲ್ಲಿಸಿದ ರೂ. 467.69 ಲಕ್ಷ ಮೊತ್ತದ ಬಡ್ಡಿಗೆ ಕಂಪನಿಯು ಹವಣಿಕೆಯನ್ನು ಮಾಡಿರುವುದಿಲ್ಲ ಮತ್ತು ಈ ಸಂಬಂಧ ಒದಗಿಸಲಾದ ಉತ್ತರಗಳು ತೃಪ್ತಿದಾಯಕವಾಗಿರುವುದಿಲ್ಲ.

22. 3 ವರ್ಷಗಳಿಗೂ ಹೆಚ್ಚು ಅವಧಿಗೆ ಬ್ಯಾಂಕ್ ತಃಖ್ತೆಯಲ್ಲಿ ಗುರುತಿಸಲಾಗದ ಜಮೆಗಳಾಗಿ ಉಳಿದ ಬಾಬ್ತುಗಳಿಗಾಗಿ ಕಂಪೆನಿಯು ರೂ. 618.36 ಲಕ್ಷ ಮೊತ್ತವನ್ನು ಹಿಂದಕ್ಕೆ ಬರೆದಿದೆ. ಈ ಕ್ರಮವು ಇಂತಹ ಜಮಾ ನಮೂದುಗಳ ವೈಯಕ್ತಿಕ ಆಯುಷ್ಯ ಹೆಚ್ಚಾಗುವಿಕೆಯನ್ನು ಆಧರಿಸಿಲ್ಲ ಮತ್ತು ಹಾಗಾಗಿ ಈ ಪ್ರಕ್ರಿಯೆಯ ಸೂಕ್ತತೆಯ ಬಗ್ಗೆ ನಾವು ಅಭಿಪ್ರಾಯ ವ್ಯಕ್ತಪಡಿಸುವುದು ಸಾಧ್ಯವಿರುವುದಿಲ್ಲ.

23. ಭಾರತೀಯ ಲೇಖಾ ಪ್ರಮಾಣ (ಇಂಡ್ ಎಎಸ್) 33 – ಪ್ರತಿ ಷೇರಿನ ಮೇಲೆ ಗಳಿಕೆ :

ಎಲ್ಲ ಪಥಾಂತರಗಳು/ಪರಿಶೀಲನೆಗಳ ಕಾರಣ ವರ್ಷದ ಲಾಭ, ಆದಾಯದ ಮೇಲಿನ ತೆರಿಗೆ, ನಿವ್ವಳ ಆದಾಯ ಮತ್ತು ಷೇರುದಾರರ ನಿಧಿಗಳು ಹಾಗೂ ವರ್ಷದ ನಗದು ಪ್ರವಹನ ತಃಖ್ತೆಯ ಮೇಲಿನ ಸಂಚಿತ ಪ್ರಭಾವವನ್ನು ತಿಳಿಯಲು ಸಾಧ್ಯವಾಗಿಲ್ಲ. ಜೊತೆಗೆ, ಇಂಡ್ ಎಎಸ್ –33 ರ ಪ್ರಕಾರ ಅಗತ್ಯವಾಗಿರುವಂತೆ ಪ್ರತಿ ಷೇರಿನ ಮೇಲೆ ಗಳಿಕೆ ಮತ್ತು ಪ್ರಕಟಣೆಗಳ ಮೇಲಿನ ಪರಿಣಾಮವನ್ನು ತಿಳಿಯಲಾಗಿಲ್ಲ.

24. ಕಂಪೆನಿ ಕಾಯ್ದೆ 2013ರ ಅನುಸೂಚಿ IIIರ ಅಗತ್ಯಗಳನ್ನು ಅನುಸರಿಸದಿರುವುದು :

ಎ. ಕಂಪನಿ ಕಾಯ್ದೆ 2013ರ ಅನುಸೂಚಿ III ರಂತೆ ಸ್ವೀಕಾರವಾಗಬೇಕಿರುವ ಬಾಬ್ತೊಂದನ್ನು ಅದು ವ್ಯಾಪಾರದ ಸಾಧಾರಣ ನಡೆಯಲ್ಲಿ ಮಾರಲಾದ ಸರಕುಗಳು ಅಥವಾ ಸಲ್ಲಿಸಲಾದ ಸೇವೆಗಳ ಕಾರಣದಿಂದಾಗಿ ಉಳಿದಿರುವ ಬಾಕಿಗೆ ಸಂಬಂಧಿಸಿದ್ದಾದರೆ ಅದನ್ನು 'ವ್ಯಾಪಾರದಲ್ಲಿ ಬರಬೇಕಾದವು" ಎಂದು ವರ್ಗೀಕರಿಸಬೇಕು. ಆದರೆ, ಐಪಿ ಸೆಟ್‌ಗಳು/ಬಿಜೆಕೆಜೆ ಅನುಷ್ಠಾನಗಳು/ಆರ್‌ಡಿಪಿಆರ್ ಬಾಕಿಗಳ ಗ್ರಾಹಕರ ಪರವಾಗಿ ಸರ್ಕಾರವು ಪಾವತಿಸುವ ವಿದ್ಯುಚ್ಛಕ್ತಿ ಮಾರಾಟಕ್ಕೆ ಸಂಬಂಧಿಸಿದಂತೆ ಸರ್ಕಾರದಿಂದ ಬರಬೇಕಿರುವ ರೂ. 1,39.019.28 ಲಕ್ಷ ಮೊತ್ತವನ್ನು, ಸಂತುಲನ ಪಟ್ಟಿಯ ದಿನಾಂಕದಂದು ಇದ್ದಂತೆ, ಕಂಪನಿಯು "ವ್ಯಾಪಾರದಲ್ಲಿ ಬರಬೇಕಾದವು" ಎಂದು ವರ್ಗೀಕರಿಸುವುದಕ್ಕೆ ಪ್ರತಿಯಾಗಿ "ಇತರ ಹಣಕಾಸು ಆಸ್ತಿಗಳು" ಅಡಿಯಲ್ಲಿ ವರ್ಗೀಕರಿಸಿದೆ. ನಮ್ಮ ಅಭಿಪ್ರಾಯದಲ್ಲಿ ವ್ಯಾಪಾರದಲ್ಲಿ ಬರಬೇಕಾದವನ್ನು ಕಡಿಮೆ ತೋರಿಸಲಾಗಿದೆ ಮತ್ತು ಇತರ ಹಣಕಾಸು ಆಸ್ತಿಗಳನ್ನು ಮೇಲೆ ಹೇಳಿದ ಮೊತ್ತದಷ್ಟು ಹೆಚ್ಚಿಗೆ ತೋರಿಸಲಾಗಿದೆ.

ಬಿ. ಅತಿ ಸಣ್ಣ, ಸಣ್ಣ ಮತ್ತು ಮಧ್ಯಮ ಹಣತದ ಉದ್ಯಮಗಳ ಅಭಿವೃದ್ಧಿ ಕಾಯ್ದೆ, 2006ರ ವ್ಯಾಪ್ತಿಗೆ ಬರುವ

ಸರಬರಾಜುದಾರರನ್ನು ಗುರುತಿಸಲು ಕಂಪೆನಿಯು ಅನುಸರಿಸುವ ವಿಧಾನ ಮತ್ತು ಅವುಗಳಿಗೆ ಪಾವತಿಯಲ್ಲಿನ ವಿಳಂಬವನ್ನು ದಾಖಲಿಸಲಾಗಿಲ್ಲ ಮತ್ತು ಇವು ಪರ್ಯಾಪ್ತವಾಗಿ ಕಾಣುವುದಿಲ್ಲ, ಪರಿಶೀಲಿಸಲು ಸಾಧ್ಯವಿರುವುದಿಲ್ಲ. ಈ ಹಿನ್ನೆಲೆಯಲ್ಲಿ ಎಂಎಸ್ಎಂಇಡಿ ಕಾಯ್ದೆ 2006ರ ಅನುಸರಣೆಯ ಮತ್ತು ಕಂಪನಿ ಕಾಯ್ದೆ 2013ರ ಅನುಸೂಚಿ III ರ ಪ್ರಕಾರದ ಪ್ರಕಟಣಾ ಅಗತ್ಯಗಳ ಬಗ್ಗೆ ಅಭಿಪ್ರಾಯ ವ್ಯಕ್ತಪಡಿಸುವುದು ಸಾಧ್ಯವಿರುವುದಿಲ್ಲ.

ಸಿ. ಕಂಪೆನಿ ಕಾಯ್ದೆ 2013ರ ಅನುಸೂಚಿ III ರ ಪ್ರಕಾರ ನಿಗದಿಪಡಿಸಿರುವಂತೆ ವರ್ಷದ ಕೊನೆಯ ಹೊತ್ತಿಗೆ ಬಂಡವಾಳ ಮತ್ತು ಇತರ ಹೊಡಣಗಳನ್ನು ಕುರಿತಾದ ಪ್ರಕಟಣೆಯನ್ನು ಪ್ರಸ್ತುತ ದತ್ತಾಂಶದ ಅನುಪಸ್ಥಿತಿಯಲ್ಲಿ ಮಾಡಲಾಗಿಲ್ಲ.

ಡಿ. ಕಂಪನಿಗಳ (ಭಾರತೀಯ ಲೇಖಾ ಪ್ರಮಾಣಗಳು) ನಿಯಮಗಳು, 2015ರ ಅನುಸರಣೆಯಲ್ಲಿ ಸಿದ್ಧಪಡಿಸಲಾದ ಹಣಕಾಸು ತಃಖ್ತೆಗಳಲ್ಲಿ ಪ್ರಕಟವಾಗುವ ಅಂಕಿ-ಅಂಶಗಳನ್ನು, ವಹಿವಾಟು ಒಂದು ನೂರು ಕೋಟಿಗಿಂತಲೂ ಹೆಚ್ಚಿದ್ದ ಪಕ್ಷದಲ್ಲಿ, ಹತ್ತಿರದ ಲಕ್ಷ, ದಶಲಕ್ಷ ಅಥವಾ ಕೋಟಿಗಳಿಗೆ, ಅಥವಾ ದಶಮಾಂಶಗಳಿಗೆ ಸರಿಹೊಂದಿಸಲಾಗುತ್ತದೆ. ಆದರೆ, ಕಂಪನಿಯು ಹಣಕಾಸು ತಃಖ್ತೆಗಳನ್ನು ಅಂಕಿ-ಅಂಶಗಳು ರೂಪಾಯಿಯಲ್ಲಿ ಪ್ರಕಟವಾಗುವಂತೆ ಸಿದ್ಧಪಡಿಸಿದೆ.

ಇ. ಕಂಪನಿಯು ಕರ್ನಾಟಕ ಸರ್ಕಾರದಿಂದ ಷೇರು ಅರ್ಜಿ ಹಣವನ್ನು ಪಡೆದಿದ್ದು ಇಂತಹ ಮೊತ್ತಗಳನ್ನು ಹಣವು ಸ್ವೀಕೃತವಾದ 60 ದಿನಗಳ ನಂತರದಲ್ಲಿ ಷೇರುಗಳ ಹಂಚಿಕೆ ಬಾಕಿ ಇರಿಸಿ ಷೇರು ಠೇವಣಿ ಅಡಿಯಲ್ಲಿ ಇರಿಸಲಾಗಿದೆ. ಇದು ಕಂಪನಿ ಕಾಯ್ದೆ 2013ರ ಪರಿಚ್ಛೇದ 42ರ ಉಪಬಂಧಗಳಿಗೆ ಅನುಸಾರವಾಗಿ ಇಲ್ಲ.

25. ಕಂಪನಿಯು ಸಿದ್ಧಪಡಿಸಿರುವ ನಗದು ಪ್ರವಹನ ತಃಖ್ತೆಯು, ಮೇಲೆ ಪಟ್ಟಿಮಾಡಲಾಗಿರುವ ಪರಿಶೀಲನೆಗಳ ಫಲವಾಗಿ ಹಣಕಾಸು ತಃಖ್ತೆಯ ಮೇಲೆ ಬೀರಬಹುದಾದ ಪರಿಣಾಮದ ಮಟ್ಟಿಗೆ, ಇಂಡ್ ಎಎಸ್– 7 ರ ಅನುಸಾರವಾಗಿ ಇರುವುದಿಲ್ಲ. ಅಂತೆಯೇ, ಮೇಲಿನ ಪರಿಶೀಲನೆಗಳ ಪರಿಣಾಮದ ಮಟ್ಟಿಗೆ ಕಾರ್ಯಾಚರಣೆ, ಹಣಕಾಸು, ಹೂಡಿಕೆ ಚಟುವಟಿಕೆಗಳಿಂದ ಉದ್ಭವವಾಗುವ ನಗದು ಪ್ರವಹನದ ಯುಕ್ತತೆಯ ಬಗ್ಗೆ ಅಭಿಪ್ರಾಯವನ್ನು ವ್ಯಕ್ತಪಡಿಸುವುದು ಸಾಧ್ಯವಿರುವುದಿಲ್ಲ.

26. ಕಂಪನಿಯು ಕುಟುಂಬ ಕಲ್ಯಾಣ ನಿಧಿಗೆ ಹವಣಿಕೆಯಾಗಿ ರೂ. 4.66 ಕೋಟಿಯನ್ನು ಒದಗಿಸಿದೆ. ಆದರೆ, 31 ಮಾರ್ಚ್ 2019ಕ್ಕೆ ಕೊನೆಗೊಂಡ ಅವಧಿಯ ವಿಮಾಗಣಕ ವರದಿಯ ಪ್ರಕಾರ ರೂ. 5.53 ಕೋಟಿ ಮೊತ್ತವನ್ನು ಚಾಲ್ತಿಯಲ್ಲದ ಹೊಣೆಯಾಗಿ ಗುರುತಿಸಬೇಕಿತ್ತು. ಇದರಿಂದಾಗಿ ಚಾಲ್ತಿಯಲ್ಲದ ಹವಣಿಕೆಗಳು, ಸಿಬ್ಬಂದಿ ವೆಚ್ಚವನ್ನು 0.86 ಕೋಟಿಯಷ್ಟು ಕಡಿಮೆ ಹಾಗೂ ವರ್ಷದ ಲಾಭವನ್ನು ಅದೇ ಮಟ್ಟಿಗೆ ಹೆಚ್ಚಿಗೆ ತೋರಿಸಲಾಗಿದೆ. ಜೊತೆಗೆ, ಇದು ಇಂಡ್ ಎಎಸ್ 19ರ ಅನುಸರಣೆಯಾಗಿದೆ.

27. ವಿಳಂಬದ ಪಾವತಿಗಳಿಗಾಗಿ ಸರಬರಾಜುದಾರರಿಂದ ಬಂದಿರುವ ಹಕ್ಕುಸಲ್ಲಿಕೆಗಳಿಗಾಗಿ ಕಂಪೆನಿಯು ರೂ. 3.54 ಕೋಟಿ ಮೊತ್ತವನ್ನು ಹವಣಿಸಿರುವುದಿಲ್ಲ. ಇದರಿಂದಾಗಿ ಹಣಕಾಸು ವೆಚ್ಚ ಮತ್ತು ಚಾಲ್ತಿ ಹವಣಿಕೆಗಳನ್ನು ಅದೇ ಮಟ್ಟಿಗೆ ಕಡಿಮೆತೋರಿಸಲಾಗಿದೆ ಹಾಗೂ ವರ್ಷದ ಲಾಭವನ್ನು ಹೆಚ್ಚಾಗಿ ತೋರಿಸಲಾಗಿದೆ.

28. ಗ್ರಾಮಪಂಚಾಯಿತಿಗೆ ನೀರು ಸರಬರಾಜು ಹಾಗೂ ಸಾರ್ವಜನಿಕೆ ದೀಪಗಳಿಗೆ ವಿದ್ಯುತ್ ಮಾರಾಟಕ್ಕೆ ಸಂಬಂಧಿಸದಂತೆ ಕಂಪನಿಯು ಕರ್ನಾಟಕ ಸರ್ಕಾರದಿಂದ ರೂ. 206.13 ಕೋಟಿ ಮೊತ್ತವನ್ನು ಬಡ್ಡಿ ಎಂದು ಲೆಕ್ಕತೋರಿಸಿದೆ. ಕರ್ನಾಟಕ ಸರ್ಕಾರವು ತನ್ನ ಆದೇಶ ಸಂಖ್ಯೆ ಇಎನ್ ಪಿಎಸ್ಆರ್ 2106/ಪಿ3 ದಿನಾಂಕ 31.3.2017ರ ಅನ್ವಯ ರೂ. 748.48 ಕೋಟಿ ಮೊತ್ತದ ಗ್ರಾಮಪಂಚಾಯಿತಿ ಬಾಕಿಗಳನ್ನು (ಬಡ್ಡಿ ಸೇರಿ) ಸುಭದ್ರಗೊಳಿಸಲು ಅಂಗೀಕಾರ ನೀಡಿತು. ಕಂಪನಿಯು ಒದಗಿಸಲಾದ ನಿಧಿಯ ಮೊತ್ತಕ್ಕೆ ರೂ. 206.13 ಕೋಟಿ ಬಡ್ಡಿಯನ್ನು ವಿಧಿಸಿ ಅದನ್ನು ಕರ್ನಾಟಕ ಸರ್ಕಾರದಿಂದ ಬರಬೇಕಾದ್ದು ಎಂದು ತೋರಿಸಿತು. ಈ ವಿಷಯವನ್ನು ಕರ್ನಾಟಕ ಸರ್ಕಾರವು ಮಾನ್ಯಮಾಡಿರುವುದಿಲ್ಲ. ನಮಗೆ ತಿಳಿಸಲಾದಂತೆ, ಸಹಾಯಧನದ ಬಾಕಿಗಳಿಗೆ ಬಡ್ಡಿ ವಿಧಿಸುವುದನ್ನು ಜೆಸ್ಕಾಂ ಕೈಗೆತ್ತಿಕೊಂಡು ಸರ್ಕಾರದೊಂದಿಗೆ ಮಾತುಕತೆ ನಡೆಸಲಿದೆ, ಏಕೆಂದರೆ ಸಹಾಯಧನವು ಬಿಡುಗಡೆಯಾಗದಿದ್ದರೆ ಹೊಣೆಗಳನ್ನು ನಿಭಾಯಿಸಲು ಇತರ ಮೂಲಗಳಿಂದ ಸಾಲವನ್ನು ಪಡೆದು ಅದಕೆ ಬಡ್ಡಿ ಪಾವತಿಸಬೇಕಾಗುತ್ತದೆ ಮತ್ತು ಈ ಹೊಣೆಯನ್ನು ಗ್ರಾಹಕರಿಗೆ ವರ್ಗಾಯಿಸಲು ಸಾಧ್ಯವಿರುವುದಿಲ್ಲ. ಈ ಸಂಬಂಧವಾಗಿ, ಬಾಕಿ ಇರುವ ಸಹಾಯಧನ ಮತ್ತು ಅದರ ಮೇಲಿನ ಬಡ್ಡಿಯ ಬಿಡುಗಡೆಗಾಗಿ ಕೋರುತ್ತ ಪತ್ರಸಂಖ್ಯೆ ಜೆಸ್ಕಾಂ/ಎಫ್ಎ/ಸಿಎ/ಡಿಸಿಎ/ಎಓ/ಎಎಓ/(ಡಿಸಿಬಿ)18–19/14843 ದಿನಾಂಕ 28.06.2018 ರ ಅನ್ವಯ ಕರ್ನಾಟಕ ಸರ್ಕಾರಕ್ಕೆ ಪತ್ರವೊಂದನ್ನು ಬರೆಯಲಾಯಿತು. ಈ ವಿಷಯದ ನಿರ್ಧಾರ ಬಾಕಿ ಇರುವ ಕಾರಣ ಪಡೆಯಬೇಕಿರುವ ಮೊತ್ತದ ಅಂತಿಮ ವಸೂಲಿಸಾಧ್ಯತೆಯ ಬಗ್ಗೆ ನಾವು ಅಭಿಪ್ರಾಯ ವ್ಯಕ್ತಪಡಿಸುವುದು ಸಾಧ್ಯವಿರುವುದಿಲ್ಲ.

29. ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ (ಸಿಎಲ್ಟಿಡಿ) ನಲ್ಲಿರುವ ನಿಶ್ಚಿತ ಠೇವಣಿಗಳು ಮತ್ತು ಸಂವಾದಿ ಬಡ್ಡಿಯನ್ನು ಶೀಲ್ಕುಗಳಪುಸ್ತಕಗಳಲ್ಲಿ ಹೊಂದಿಸಿರುವುದಿಲ್ಲ. ಪರ್ಯಾಪ್ತವಲ್ಲದ ಮಾಹಿತಿಯ ಕಾರಣ ವರ್ಷದ ಕೊನೆಯ ಹೊತ್ತಿಗೆ ಇದ್ದಂತೆ ಬಡ್ಡಿ ಆದಾಯ, ಪ್ರಾಪ್ತ ಬಡ್ಡಿ ಮತ್ತು ನಿಶ್ಚಿತ ಠೇವಣಿಗಳ ಮೊತ್ತದ ಬಗ್ಗೆ ಅಭಿಪ್ರಾಯವನ್ನು

ವ್ಯಕ್ತಪಡಿಸುವುದ ಸಾಧ್ಯವಿರುವುದಿಲ್ಲ. ಜೊತೆಗೆ, ಪ್ರಗತಿ ಕೃಷ್ಣ ಗ್ರಾಮೀಣ ಬ್ಯಾಂಕ್ ನಲ್ಲಿರುವ ನಿಶ್ಚಿತ ಠೇವಣಿಗೆ ಸಂಬಂಧಿಸಿದಂತೆ ಮುಂಚಿನ ವರ್ಷಗಳ ಪ್ರಾಪ್ತ ಬಡ್ಡಿಯನ್ನು ವ್ಯತಿರಿಕ್ತಗೊಳಿಸದ ಕಾರಣ ಬಡ್ಡಿಯನ್ನು ರೂ. 2.09 ಕೋಟಿಯಷ್ಟು ಹೆಚ್ಚಿಗೆ ತೋರಿಸಲಾಗಿದೆ ಮತ್ತು ಬಡ್ಡಿ ಆದಾಯ/ಲಾಭವನ್ನು ಮುಂಚಿನ ವರ್ಷಗಳಿಗೆ ಸಂಬಂಧಿಸಿದ ಬಡ್ಡಿಯ ಗುರುತಿಸುವಿಕೆಯಿಂದಾಗಿ ರೂ. 3.15 ಕೋಟಿಯಷ್ಟು ಹೆಚ್ಚಾಗಿ ತೋರಿಸಲಾಗಿದೆ.

30. ಚಾಲ್ತಿ ಹಣಕಾಸು ವರ್ಷಕ್ಕೆ ಸಂಬಂಧಿಸಿದಂತೆ, ಪಿಜಿಸಿಐಎಲ್ ಮತ್ತು ಪಿಸಿಕೆಎಲ್ ಹಕ್ಕುಸಲ್ಲಿಸಿದ ಮುಕ್ತ ಲಭ್ಯಾವಕಾಶ ಶುಲ್ಕ (ಪಿಓಸಿ ಶುಲ್ಕಗಳು) ಮತ್ತು ಯುಐ ಶುಲ್ಕಗಳಿಗಾಗಿನ (ಗ್ಲೋಬಲ್ ಎನರ್ಜಿ ಪ್ರೈವೇಟ್ ಲಿ., ನಿಂದ ವಿದ್ಯುತ್ ಖರೀದಿಗೆ ಸಂಬಂಧಿಸಿದ್ದು) ರೂ. 6.33 ಕೋಟಿ ಮೊತ್ತಕ್ಕೆ ಕಂಪೆನಿಯು ಹವಣಿಕೆ ಮಾಡಿರುವುದಿಲ್ಲ. ಇದರಿಂದಾಗಿ ವಿದ್ಯುತ್ ಖರೀದಿಯ ವೆಚ್ಚವು ಅಷ್ಟರಮಟ್ಟಿಗೆ ಕಡಿಮೆತೋರಿಸಲಾಗಿದೆ. ಆಡಳಿತ ಮಂಡಳಿಯ ಅಭಿಪ್ರಾಯದಲ್ಲಿ, ಇದು ವರ್ಷದ ನಿಬಂಧನಾ ಆದಾಯವನ್ನು ಅದೇ ಮಟ್ಟಕ್ಕೆ ಹೆಚ್ಚಿಸಲು ಕಾರಣವಾಗುವುದರಿಂದ ವರ್ಷದ ನಿವ್ವಳ ಲಾಭದ ಮೇಲೆ ಇದು ಪರಿಣಾಮವನ್ನು ಹೊಂದಿರುವುದಿಲ್ಲ.

ವಿಷಯದ ಮಹತ್ವ :

ನಮ್ಮ ಅಭಿಪ್ರಾಯವನ್ನು ಮಾರ್ಪಡಿಸಿಕೊಳ್ಳದೆ, ಹೀಗೆ ವರದಿಮಾಡುತ್ತಿದ್ದೇವೆ:

1. ನಿಬಂಧನಾ ಆದಾಯ/(ಖರ್ಚುಗಳು) : ನಿಬಂಧನಾ ಆಸ್ತಿಗಳ ಸೃಷ್ಟಿಯಿಂದಾಗಿ ವರ್ಷದಲ್ಲಿ ಉದ್ಭವಿಸುವ ಆದಾಯದ ಗುರುತಿಸುವಿಕೆಗೆ ಸಂಬಂಧಿಸಿದ ಟಿಪ್ಪಣಿ ಸಂಖ್ಯೆ 15 ಮತ್ತು 42 ರತ್ತ ಗಮನಸೆಳೆಯುತ್ತಿದ್ದೇವೆ. ಆ ಆದಾಯವು ಕೆಇಆರ್‌ಸಿ ಅಂಗೀಕರಿಸಿದ ವಿದ್ಯುತ್ ಖರೀದಿ ವೆಚ್ಚವನ್ನು ಮೀರಿ ನೈಜ ವಿದ್ಯುತ್ ಖರೀದಿ ವೆಚ್ಚದಲ್ಲಿನ ಹೆಚ್ಚಳದ ವಸೂಲಿಗೆ ಸಂಬಂಧಿಸಿದ ಭವಿಷ್ಯದ ಆರ್ಥಿಕ ಲಾಭವಾಗಿದೆ.
2. ಕಂಪನಿಯ ನೌಕರರಿಂದ ಆದ ಮೋಸಗಳಿಗೆ ಸಂಬಂಧಿಸಿದಂತೆ ಹಣಕಾಸು ತಃಖ್ತೆಗಳ ಭಾಗವಾದ ಟಿಪ್ಪಣಿ ಸಂಖ್ಯೆ 55ರತ್ತ ಗಮನಸೆಳೆಯುತ್ತಿದ್ದೇವೆ. ಆಡಳಿತ ಮಂಡಳಿಯು ಕೆಪಿಟಿಸಿಎಲ್ ತನಿಖೆಯನ್ನು ನಡೆಸುತ್ತಿದ್ದು ಅಂತಿಮ ಆದೇಶಗಳನ್ನು ನಿರೀಕ್ಷಿಸಲಾಗುತ್ತಿದೆ ಎಂದು ತಿಳಿಸಿದೆ. ಲೆಕ್ಕಪುಸ್ತಕಗಳಲ್ಲಿ ಈ ಸಂಬಂಧ ಯಾವುದೇ ಹವಣಿಕೆಯನ್ನು ಮಾಡಿರುವುದಿಲ್ಲ.
3. ನಾವು 30 ಆಗಸ್ಟ್ 2019ರಂದು ಹಣಕಾಸು ತಃಖ್ತೆಗಳ ಮೇಲಿನ ನಮ್ಮ ಲೆಕ್ಕಪರಿಶೋಧನಾ ವರದಿಯನ್ನುನೀಡಿದ್ದೆವು ಮತ್ತು ನಿರ್ದೇಶಕ ಮಂಡಳಿಯು 30 ಆಗಸ್ಟ್ 2019ರಂದು ಅದನ್ನು ಅಂಗೀಕರಿಸಿತು. ಭಾರತದ ನಿಯಂತ್ರಕರು ಮತ್ತು ಮಹಾಲೇಖಾಪಾಲರು (ಸಿಎಜಿ) ಕಂಪೆನಿ ಕಾಯ್ದೆ, 2013ರ ಪರಿಚ್ಛೇದ 143(6)(ಬಿ) ಅಡಿ ನಡೆಸಿದ ಪೂರಕ ಲೆಕ್ಕಪರಿಶೋಧನೆಯಿಂದ ಪ್ರಕಟವಾದ ಪರಿಶೀಲನೆಗಳ ಹಿನ್ನೆಲೆಯಲ್ಲಿ ಮತ್ತು 30 ಆಗಸ್ಟ್ 2019ರಂದು ತಾನು ಅಂಗೀಕರಿಸಿದ ಹಣಕಾಸು ತಃಖ್ತೆಗಳನ್ನು ಪರಿಷ್ಕರಿಸದಿರುವ ತನ್ನ ನಿರ್ಧಾರವನ್ನು ಕಂಪೆನಿಯು ತಿಳಿಸಿದ ಹಿನ್ನೆಲೆಯಲ್ಲಿ ಸಿಎಜಿ ಪರಿಶೀಲಿಸಿದ ಹೆಚ್ಚುವರಿ ವಿಷಯಗಳನ್ನು ಸೇರಿಸಬೇಕೆಂಬ ಕಂಪೆನಿಯ ಕೋರಿಕೆಯ ಮೇರೆಗೆ ನಾವು ಈ ಪರಿಷ್ಕೃತ ವರದಿಯನ್ನು ನೀಡುತ್ತಿದ್ದೇವೆ. 30 ಆಗಸ್ಟ್ 2019ರಂದು ಅಂಗೀಕೃತವಾದ ಹಣಕಾಸು ತಃಖ್ತೆಗಳಲ್ಲಿ ಯಾವುದೇ ಬದಲಾವಣೆ ಇರುವುದಿಲ್ಲ. ಹಾಗಾಗಿ ಲೆಕ್ಕಪರಿಶೋಧನಾ ವರದಿಯ "ಪರಿಶೀಲನಾತ್ಮಕ ಅಭಿಪ್ರಾಯಗಳಿಗೆ ಆಧಾರ" ಕಂಡಿಕೆಯ ಕ್ರ.ಸಂ. 6, 26 ರಿಂದ 30 ಮತ್ತು "ಇತರ ವಿಷಯಗಳು" ಭಾಗದ ಕ್ರ.ಸಂ. 13 ರತ್ತ ಗಮನಸೆಳೆಯಲಾಗಿದೆ.

ಇತರ ಮಾಹಿತಿ :

ಇತರ ಮಾಹಿತಿಯ ಜವಾಬ್ದಾರಿಯು ಕಂಪೆನಿಯ ನಿರ್ದೇಶಕರ ಮಂಡಳಿಯದ್ದಾಗಿರುತ್ತದೆ. ಇತರ ಮಾಹಿತಿಯು ಆಡಳಿತ ಮಂಡಳಿ ಚರ್ಚೆ ಮತ್ತು ವಿಶ್ಲೇಷಣೆ, ಷೇರುದಾರರ ಮಾಹಿತಿ ಮತ್ತು ನಿರ್ದೇಶಕರ ವರದಿಯಲ್ಲಿ ಸೇರಿದ ಮಾಹಿತಿಯನ್ನು ಒಳಗೊಳ್ಳುತ್ತದೆ, ಆದರೆ ಪ್ರತ್ಯೇಕ ಇಂಡ್ ಎಎಸ್ ಹಣಕಾಸು ತಃಖ್ತೆಗಳಾಗಲೀ ಸಂವಾದಿ ಲೆಕ್ಕಪರಿಶೋಧಕರ ವರದಿಯಾಗಲೀ ಇದರ ಭಾಗವಾಗಿರುವುದಿಲ್ಲ. ಇಂತಹ ಮಾಹಿತಿಯ ಈ ವರದಿಯ ನೀಡುವಿಕೆಯ ಸಂದರ್ಭದಲ್ಲಿ ಲಭ್ಯವಿರಲಿಲ್ಲ ಮತ್ತು ಈ ಲೆಕ್ಕಪರಿಶೋಧಕರ ವರದಿಯ ದಿನಾಂಕದ ನಂತರ ನಮಗೆ ಇದು ದೊರೆಯುವ ನಿರೀಕ್ಷೆಯಿದೆ.

ಇಂಡ್ ಎಎಸ್ ಹಣಕಾಸು ತಃಖ್ತೆಗಳ ಮೇಲಿನ ನಮ್ಮ ಅಭಿಪ್ರಾಯವು ಇತರ ಮಾಹಿತಿಯನ್ನು ಒಳಗೊಳ್ಳುವುದಿಲ್ಲ ಮತ್ತು ಈ ಸಂಬಂಧವಾಗಿ ನಾವು ಯಾವುದೇ ರೀತಿಯ ಭರವಸೆಯ ತೀರ್ಮಾನವನ್ನೂ ನೀಡುವುದಿಲ್ಲ.

ಹಣಕಾಸು ತಃಖ್ತೆಗಳ ನಮ್ಮ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ, ನಮ್ಮ ಜವಾಬ್ದಾರಿಯು ಮೇಲೆ ಗುರುತಿಸಲಾಗಿರುವ ಇತರ ಮಾಹಿತಿಯನ್ನು ಅದು ಲಭ್ಯವಾದಾಗ ಓದುವುದು, ಮತ್ತು ಹಾಗೆ ಮಾಡುವಾಗ, ಲೆಕ್ಕಪರಿಶೋಧನೆಯಲ್ಲಿ ನಾವು ಪಡೆದುಕೊಂಡ ತಿಳುವಳಿಕೆಯ ಹಿನ್ನೆಲೆಯಲ್ಲಿ ಇತರ ಮಾಹಿತಿಯು ಹಣಕಾಸು ತಃಖ್ತೆಗಳೊಂದಿಗೆ ವಾಸ್ತವಿಕವಾಗಿ ಹೊಂದುತ್ತಿದೆಯೇ ಅಥವಾ ಅಲ್ಲಿ ವಾಸ್ತವಿಕವಾದ ಅಪಹೇಳಿಕೆಗಳು ಇವೆಯೇ ಎಂದು ಪರಿಶೀಲಿಸುವುದಾಗಿದೆ.

ಹಣಕಾಸು ತಃಖ್ತೆಗಳಿಗೆ ಸಂಬಂಧಿಸಿದ ಆಡಳಿತ ಮಂಡಳಿಯ ಜವಾಬ್ದಾರಿಗಳು :

ಕಂಪನಿಯ ಹಣಕಾಸು ಸ್ಥಿತಿಗತಿ, ಇತರ ಸಮಗ್ರ ಆದಾಯ, ನಗದು ಹರಿವುಗಳು ಮತ್ತು ಸೇರಿದಂತೆ ಈಕ್ವಿಟಿಯಲ್ಲಿನ ಬದಲಾವಣೆಗಳ ಬಗ್ಗೆ ನೈಜವಾದ ಮತ್ತು ನಿಷ್ಪಕ್ಷಪಾತವಾದ

ಚಿತ್ರವನ್ನು ನೀಡುವಂತಹ ಈ ಪ್ರತ್ಯೇಕ ಹಣಕಾಸು ತಃಖ್ತೆಗಳ ಸಿದ್ಧಪಡಿಸುವಿಕೆಗೆ ಸಂಬಂಧಿಸಿದಂತೆ "ಕಾಯ್ದೆ"ಯ ಪರಿಚ್ಛೇದ 134(5)ರಲ್ಲಿ ನಿರ್ದಿಷ್ಟಗೊಳಿಸಿರುವ ಅಂಶಗಳಿಗೆ ಬದ್ಧವಾಗಿರುವಂತೆ, ಕಾಯ್ದೆಯ ಪರಿಚ್ಛೇದ 133ರ ಅಡಿ ನಿರ್ದಿಷ್ಟಗೊಳಿಸಲಾಗಿರುವ ಲೇಖಾ ಪ್ರಮಾಣಗಳಿಗೂ ಸೇರಿ ಭಾರತದಲ್ಲಿ ಸಾಮಾನ್ಯವಾಗಿ ಒಪ್ಪಿತವಾದ ಲೇಖಾ ಸಿದ್ಧಾಂತಗಳಿಗೆ ಸಂಗತವಾಗುವಂತೆ ಪ್ರತ್ಯೇಕ ಹಣಕಾಸು ತಃಖ್ತೆಗಳನ್ನು ಸಿದ್ಧಪಡಿಸುವುದು ಕಂಪನಿಯ ನಿರ್ದೇಶಕ ಮಂಡಳಿಯ ಜವಾಬ್ದಾರಿಯಾಗಿದೆ. ಆಸ್ತಿಗಳ ಹಿತರಕ್ಷಣೆಯ ಸಲುವಾಗಿ ಹಾಗೂ ಮೋಸ ಮತ್ತಿತರ ಅಕ್ರಮಗಳನ್ನು ತಡಗಟ್ಟಲು ಮತ್ತು ಪತ್ತೆಮಾಡಲು ಸಾಧ್ಯವಾಗುವಂತೆ ಕಾಯ್ದೆಯ ಉಪಬಂಧಗಳ ಅನುಸಾರ ಪರ್ಯಾಪ್ತ ಲೆಕ್ಕದಾಖಲೆಗಳ ನಿರ್ವಹಣೆ; ಸೂಕ್ತ ಲೇಖಾ ಕಾರ್ಯನೀತಿಗಳ ಆಯ್ಕೆ ಮತ್ತು ಅನ್ವಯ; ಜವಾಬ್ದಾರಿಯುತವೂ ದೂರದೃಷ್ಟಿಯುವೂ ಆದ ತೀರ್ಮಾನಗಳು ಮತ್ತು ಅಂದಾಜುಗಳನ್ನು ಮಾಡುವುದು; ನೈಜ ಮತ್ತು ನಿಷ್ಪಕ್ಷಪಾತವಾದ ನೋಟವನ್ನು ಒದಗಿಸುವ ಹಾಗೂ ಮೇಲೆ ಹೇಳಿದಂತೆ ಕಂಪೆನಿಯ ನಿರ್ದೇಶಕರು ಪ್ರತ್ಯೇಕ ಹಣಕಾಸು ತಃಖ್ತೆಗಳ ಸಿದ್ಧಪಡಿಸುವಿಕೆಯ ಉದ್ದೇಶಕ್ಕೆ ಬಳಸಿಕೊಂಡ ಮೋಸ ಅಥವಾ ತಪ್ಪುಗಳ ಕಾರಣದಿಂದ ಉಂಟಾದ ವಾಸ್ತವಿಕ ಅಪಹೇಳಿಕೆಗಳಿಲ್ಲದ ಇಂಡ್ ಎಎಸ್ ಹಣಕಾಸು ತಃಖ್ತೆಗಳ ಸಿದ್ಧಪಡಿಸುವಿಕೆ ಮತ್ತು ಪ್ರಸ್ತುತಿಗೆ ಸಂಗತವಾಗುವಂತೆ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಆಂತರಿಕ ನಿಯಂತ್ರಣ ವ್ಯವಸ್ಥೆಯ ವಿನ್ಯಾಸ, ಜಾರಿಗೊಳಿಸುವಿಕೆ ಮತ್ತು ನಿರ್ವಹಣೆಯ ಜವಾಬ್ದಾರಿಯನ್ನೂ ಸಹ ಹೊಂದಿರುತ್ತದೆ.

ಹಣಕಾಸು ತಃಖ್ತೆಗಳನ್ನು ಸಿದ್ಧಪಡಿಸುವಾಗ, ಮುಂದುವರೆಯುವ ಸಂಸ್ಥೆಯಾಗಿ ಕಂಪನಿಯ ಸಾಮರ್ಥ್ಯವನ್ನು ಅಂದಾಜುಮಾಡುವುದು, ಅನ್ವಯವಾಗುವೆಡೆಗಳಲ್ಲಿ, ಮುಂದುವರೆಯುತ್ತಿರುವ ಸಂಸ್ಥೆಗೆ ಸಂಬಂಧಿಸಿದ ವಿಷಯಗಳನ್ನು ಪ್ರಕಟಿಸುವುದು ಹಾಗೂ ಆಡಳಿತ ಮಂಡಳಿಯು ಕಂಪೆನಿಯನ್ನು ನಿರಸನಗೊಳಿಸಲು, ಅಥವಾ ಕಾರ್ಯಾಚರಣೆಗಳನ್ನು ನಿಲ್ಲಿಸಲು ಉದ್ದೇಶಿಸದೆ ಇದ್ದಲ್ಲಿ ಅಥವಾ ವ್ಯಾವಹಾರಿಕವೂ ನೈಜವೂ ಆದ ಪರ್ಯಾಯವಾವುದೂ ಅದರ ಮುಂದೆ ಇಲ್ಲದಿರುವ ಸಂದರ್ಭ ಉದ್ಭವಿಸದಿದ್ದಲ್ಲಿ ಲೆಕ್ಕಪ್ರಕ್ರಿಯೆಗೆ ಮುಂದುವರೆಯುತ್ತಿರುವ ಸಂಸ್ಥೆಯ ಸ್ಥಿತಿಯನ್ನು ಬಳಸುವುದು ಕಂಪೆನಿಗಳ ಅನುಕ್ರಮವಾದ ನಿರ್ದೇಶಕ ಮಂಡಳಿಯ ಜವಾಬ್ದಾರಿಯಾಗಿದೆ.

ಕಂಪನಿಯ ಆರ್ಥಿಕ ವರದಿಗಾರಿಕೆಯ ಪ್ರಕ್ರಿಯೆಯೆ ಮೇಲ್ವಿಚಾರಣೆಯೂ ಸಹ ಕಂಪನಿಯ ನಿರ್ದೇಶಕ ಮಂಡಳಿಯ ಜವಾಬ್ದಾರಿಯಾಗಿರುತ್ತದೆ.

ಇಂಡ್ ಎಎಸ್ ಹಣಕಾಸು ತಃಖ್ತೆಗಳ ಲೆಕ್ಕಪರಿಶೋಧನೆಯಲ್ಲಿ ಲೆಕ್ಕಪರಿಶೋಧಕರ ಜವಾಬ್ದಾರಿಗಳು ಹಣಕಾಸು ತಃಖ್ತೆಗಳು, ಒಟ್ಟಾರೆಯಾಗಿ, ಮೋಸ ಅಥವಾ ದೋಷಗಳಿಂದಾಗಿ ಉದ್ಭವಿಸಬಹುದಾದ ವಾಸ್ತವಿಕ ಅಪಹೇಳಿಕೆಗಳಿಂದ ಮುಕ್ತವಾಗಿದೆ ಎನ್ನುವ ಬಗ್ಗೆ ಸೂಕ್ತವಾದ ಭರವಸೆಯನ್ನು ಪಡೆದುಕೊಳ್ಳುವುದು ಮತ್ತು ನಮ್ಮ ಅಭಿಪ್ರಾಯವನ್ನು ಒಳಗೊಳ್ಳುವ ಲೆಕ್ಕಪರಿಶೋಧಕರ ವರದಿಯನ್ನು ನೀಡುವುದು ನಮ್ಮ ಉದ್ದೇಶವಾಗಿದೆ. ಸೂಕ್ತವಾದ ಭರವಸೆ ಭರವಸೆಯ ಉನ್ನತ ಮಟ್ಟವಾಗಿದ್ದರೂ ಎಸ್ಎ ಗಳಿಗೆ ಅನುಸಾರವಾಗಿ ನಡೆಸಲಾದ ಲೆಕ್ಕಪರಿಶೋಧನೆಯು ವಾಸ್ತವಿಕ ಅಪಹೇಳಿಕೆಯನ್ನು, ಅದು ಇದ್ದಲ್ಲಿ, ಪತ್ತೆಹಚ್ಚುತ್ತದೆ ಎನ್ನುವ ಖಾತರಿಯೇನಿರುವುದಿಲ್ಲ. ಅಪಹೇಳಿಕೆಗಳು ಮೋಸ ಅಥವಾ ದೋಷಗಳಿಂದ ಉದ್ಭವಿಸಬಹುದಾಗಿದ್ದು ಈ ಹಣಕಾಸು ತಃಖ್ತೆಗಳ ಆಧಾರದ ಮೇಲೆ ಹೇಳುವುದಾದರೆ ಬಳಕೆದಾರರ ಆರ್ಥಿಕ ನಿರ್ಧಾರಗಳನ್ನು ಅವು ವೈಯಕ್ತಿಕವಾಗಿ ಅಥವಾ ಒಟ್ಟಾಗಿ ತಕ್ಕಮಟ್ಟಿಗೆ ಪ್ರಭಾವಿಸಲು ಸಾಧ್ಯವಿದ್ದ ಪಕ್ಷದಲ್ಲಿ ಅವು ಗಣನೀಯವಾಗುತ್ತವೆ. ಎಸ್ಎ ಗಳ ಅನುಸಾರವಾದ ಲೆಕ್ಕಪರಿಶೋಧನೆಯ ಭಾಗವಾಗಿ ನಾವು ಲೆಕ್ಕಪರಿಶೋಧನೆಯ ಉದ್ದಕ್ಕೂ ವೃತ್ತಿಪರವಾಗಿ ತೀರ್ಮಾನಮಾಡುವಿಕೆ ಮತ್ತು ವೃತ್ತಿಪರವಾದ ಸಂದೇಹಾತ್ಮಕ ದೃಷ್ಟಿಯಿಂದ ಮುಂದುವರೆದಿದ್ದೇವೆ. ಜೊತೆಗೆ,

–ಮೋಸ ಅಥವಾ ದೋಷದ ಕಾರಣದಿಂದಾಗಿ ಉದ್ಭವಿಸಿರುವ, ಕ್ರೋಢೀಕೃತ ಹಣಕಾಸು ತಃಖ್ತೆಗಳಲ್ಲಿನ ವಾಸ್ತವಿಕ ಅಪಹೇಳಿಕೆಗಳ ಅಪಾಯಗಳನ್ನು ಗುರುತಿಸಿ ಅಂದಾಜುಮಾಡಿ ಈ ಅಪಾಯಗಳಿಗೆ ಸ್ಪಂದಿಸುವಂತಹ ಲೆಕ್ಕಪರಿಶೋಧನಾ ಪ್ರಕ್ರಿಯೆಗಳನ್ನು ವಿನ್ಯಾಸಗೊಳಿಸಿ ತೊಡಗಿಸುವುದು ಮತ್ತು ನಮ್ಮ ಅಭಿಪ್ರಾಯಗಳಿಗೆ ಆಧಾರವನ್ನು ಒದಗಿಸಲು ಪರ್ಯಾಪ್ತವೂ ಸೂಕ್ತವೂ ಆದ ಲೆಕ್ಕಪರಿಶೋಧನಾ ಸಾಕ್ಷ್ಯಗಳನ್ನು ಪಡೆದುಕೊಳ್ಳುವುದು. ಮೋಸದಿಂದಾಗಿ ಉದ್ಭವಿಸುವ ವಾಸ್ತವಿಕ ಅಪಹೇಳಿಕೆಗಳನ್ನು ಪತ್ತೆಮಾಡದಿರುವಲ್ಲಿನ ಅಪಾಯವು ದೋಷದಿಂದ ಉದ್ಭವಿಸುವ ವಾಸ್ತವಿಕ ಅಪಹೇಳಿಕೆಗಳನ್ನು ಪತ್ತೆಮಾಡದಿರುವಲ್ಲಿನ ಅಪಾಯಕ್ಕಿಂತಲೂ ಹೆಚ್ಚಿನದಾಗಿದೆ, ಏಕೆಂದರೆ, ಮೋಸವು ದುರುದ್ದೇಶದ ಸಾಂಗತ್ಯ, ಖೋಟಾ ಸಹಿ, ಉದ್ದೇಶಪೂರ್ವಕವಾಗಿ ಕೈಬಿಡುವುದು, ತಪ್ಪಾಗಿ ನಿರೂಪಿಸುವುದು ಅಥವಾ ಆಂತರಿಕ ನಿಯಂತ್ರಣವನ್ನು ಮೀರುವುದು – ಇವನ್ನು ಒಳಗೊಳ್ಳಬಹುದಾಗಿದೆ.

– ಸಂದರ್ಭಕ್ಕೆ ಸೂಕ್ತವಾದ ಲೆಕ್ಕಪರಿಶೋಧನಾ ವಿಧಾನಗಳನ್ನು ವಿನ್ಯಾಸಗೊಳಿಸಲು ಲೆಕ್ಕಪರಿಶೋಧನೆಗೆ ಪ್ರಸ್ತುತವಾಗುವಂತೆ ಆಂತರಿಕ ನಿಯಂತ್ರಣ ವಿಧಾನದ ತಿಳುವಳಿಕೆಯನ್ನು ಹೊಂದುವುದು. ಕಾಯ್ದೆಯ ಪರಿಚ್ಛೇದ 143(3)(i)ರ ಅಡಿ, ಹೋಲ್ಡಿಂಗ್ ಕಂಪನಿಯು ಪರ್ಯಾಪ್ತವಾದ ಆಂತರಿಕ ನಿಯಂತ್ರಣ ವಿಧಾನಗಳನ್ನು ಹೊಂದಿದೆಯೇ ಮತ್ತು ಈ ನಿಯಂತ್ರಣಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿವೆಯೇ ಎಂಬ ಬಗ್ಗೆ ಅಭಿಪ್ರಾಯವನ್ನು

ವ್ಯಕ್ತಪಡಿಸುವ ಜವಾಬ್ದಾರಿಯೂ ನಮ್ಮದಾಗಿದೆ.

– ಆಡಳಿತ ಮಂಡಳಿಯು ಬಳಸಿರುವ ಲೇಖಾ ನೀತಿಗಳ ಸೂಕ್ತತೆ ಹಾಗೂ ಲೇಖಾ ಅಂದಾಜುಗಳ ಮತ್ತು ಸಂಬಂಧಿತ ಪ್ರಕಟಣೆಗಳ ಯುಕ್ತತೆಯನ್ನು ಮೌಲ್ಯಮಾಪನ ಮಾಡುವುದು.

– ಮುಂದುವರೆಯುತ್ತಿರುವ ಸಂಸ್ಥೆ ಆಧಾರದ ಮೇಲೆ ಲೆಕ್ಕಗಳನ್ನು ಸಿದ್ಧಪಡಿಸುವಿಕೆಯ ಆಡಳಿತ ಮಂಡಳಿಯ ನಡೆಯ ಸೂಕ್ತತೆಯನ್ನು ಬಗ್ಗೆ ತೀರ್ಮಾನಮಾಡುವುದು ಮತ್ತು ಪಡೆದುಕೊಳ್ಳಲಾದ ಲೆಕ್ಕಪರಿಶೋಧನಾ ಸಾಕ್ಷ್ಯದ ಆಧಾರದ ಮೇಲೆ ಮುಂದುವರೆಯುವ ಸಂಸ್ಥೆಯಾಗಿ ಮುಂದುವರೆಯುವ ಗುಂಪಿನ ಸಾಮರ್ಥ್ಯದ ಬಗ್ಗೆ ಗಣನೀಯವಾದ ಅನುಮಾನಗಳನ್ನು ಹುಟ್ಟುಹಾಕುವ ಘಟನೆಗಳು ಅಥವಾ ಪರಿಸ್ಥಿತಿಗಳಿಗೆ ಸಂಬಂಧಿಸಿದಂತೆ ವಾಸ್ತವಿಕವಾದ ಅನಿಶ್ಚಿತತೆಯು ಇರುವುದೋ ಎಂಬ ಬಗ್ಗೆ ತೀರ್ಮಾನಮಾಡುವುದು. ವಾಸ್ತವಿಕ ಅನಿಶ್ಚಿತತೆ ಇದೆ ಎಂದು ನಾವು ತೀರ್ಮಾನಮಾಡಿದಲ್ಲಿ ಹಣಕಾಸು ತಃಖ್ತೆಗಳಲ್ಲಿನ ಸಂಬಂಧಿತ ಪ್ರಕಟಣೆಗಳಿಗೆ ನಮ್ಮ ಲೆಕ್ಕಪರಿಶೋಧಕರ ವರದಿಯಲ್ಲಿ ನಾವು ಗಮನವನ್ನು ಸೆಳೆಯಬೇಕಾಗುತ್ತದೆ, ಅಥವಾ ಇಂತಹ ಪ್ರಕಟಣೆಗಳು ಪರ್ಯಾಪ್ತವಾಗಿರದಿದ್ದಲ್ಲಿ ನಾವು ನಮ್ಮ ಅಭಿಪ್ರಾಯವನ್ನು ಮಾರ್ಪಡಿಸಿಕೊಳ್ಳಬೇಕಾಗುತ್ತದೆ. ನಮ್ಮ ತೀರ್ಮಾನಗಳು ನಮ್ಮ ಲೆಕ್ಕಪರಿಶೋಧಕರ ವರದಿಯ ದಿನಾಂಕದವರೆಗೆ ನಾವು ಕಲೆಹಾಕಿರುವ ಲೆಕ್ಕಪರಿಶೋಧನಾ ಸಾಕ್ಷ್ಯವನ್ನು ಆಧರಿಸಿರುತ್ತದೆ. ಆದರೆ, ಭವಿಷ್ಯದ ಘಟನೆಗಳು ಅಥವಾ ಸಂಗತಿಗಳು ಗುಂಪು ಮುಂದುವರೆಯು ಸಂಸ್ಥೆಯಾಗಿ ಉಳಿಯದಿರುವುದಕ್ಕೆ ಕಾರಣವಾಗಬಹುದು.

– ಪ್ರಕಟಣೆಗಳೂ ಸೇರಿದಂತೆ, ಹಣಕಾಸು ತಃಖ್ತೆಗಳ ಒಟ್ಟಾರೆ ಪ್ರಸ್ತುತಿ, ರಚನೆ ಮತ್ತು ವಸ್ತುವಿಷಯದ ಮೌಲ್ಯಮಾಪನ ಮಾಡುವುದು ಮತ್ತು ನ್ಯಾಯಬದ್ಧವಾದ ಪ್ರಸ್ತುತಿಯನ್ನು ಸಾಧಿಸುವ ರೀತಿಯಲ್ಲಿ ಇಂಡ್ ಎಎಸ್ ಹಣಕಾಸು ತಃಖ್ತೆಗಳು ಮೂಲದಲ್ಲಿನ ವ್ಯವಹಾರಗಳು ಮತ್ತು ಆಗುಹೋಗುಗಳನ್ನು ಪ್ರಕಟಿಸುವತ್ತವೆಯೇ ಎಂಬುವುದರತ್ತ ಗಮನಹರಿಸುವುದು.

ನಮ್ಮ ಲೆಕ್ಕಪರಿಶೋಧನೆಯ ಸಂದರ್ಭದಲ್ಲಿ ಗುರುತಿಸಲಾಗುವ ಆಂತರಿಕ ನಿಯಂತ್ರಣದಲ್ಲಿನ ಮಹತ್ವಪೂರ್ಣ ಕೊರತೆಗಳೂ ಸೇರಿದಂತೆ, ಲೆಕ್ಕಪರಿಶೋಧನೆಯ ಯೋಜಿತ ವ್ಯಾಪ್ತಿ ಮತ್ತು ಕಾಲ ಹಾಗೂ ಮಹತ್ವಪೂರ್ಣ ಲೆಕ್ಕಪರಿಶೋಧನಾ ಪರಿಶೀಲನೆಗಳನ್ನು ಸಂಸ್ಥೆಯ ಆಡಳಿತದ ಜವಾಬ್ದಾರಿಯನ್ನು ಹೊಂದಿರುವವರಿಗೆ ತಿಳಿಸುತ್ತೇವೆ.

ಸ್ವಾತಂತ್ರ್ಯಕ್ಕೆ ಸಂಬಂಧಿಸಿದಂತೆ ಪ್ರಸ್ತುತವಾದ ನೈತಿಕ ಅಗತ್ಯಗಳನ್ನು ಪಾಲಿಸಿರುವ ಬಗ್ಗೆ ಒಂದು ಹೇಳಿಕೆಯನ್ನು ಸಹ ಸಂಸ್ಥೆಯ ಆಡಳಿತದ ಜವಾಬ್ದಾರಿಯನ್ನು ಹೊಂದಿರುವವರಿಗೆ ನಾವು ಒದಗಿಸಿರುತ್ತೇವೆ. ಜೊತೆಗೆ, ನಮ್ಮ ಸ್ವಾತಂತ್ರ್ಯದ ಮೇಲೆ ಪರಿಣಾಮವನ್ನು ತಕ್ಕಮಟ್ಟಿಗೆ ಬೀರಬಹುದಾದ ಎಲ್ಲ ಸಂಬಂಧಗಳು ಮತ್ತು ಇತರ ವಿಷಯಗಳ ಬಗ್ಗೆ ಹಾಗೂ ಅನ್ವಯವಾಗುವೆಡೆಗಳಲ್ಲಿ ಸಂಬಂಧಿತ ಸುರಕ್ಷಾಕ್ರಮಗಳ ಬಗ್ಗೆಯೂ ಅವರಿಗೆ ತಿಳಿಸಿರುತ್ತೇವೆ.

ಸಂಸ್ಥೆಯ ಆಡಳಿತದ ಜವಾಬ್ದಾರಿಯನ್ನು ಹೊಂದಿರುವವರಿಗೆ ನಾವು ತಿಳಿಸಿರುವ ವಿಷಯಗಳ ಪೈಕಿ, ಹಣಕಾಸು ತಃಖ್ತೆಗಳ ಲೆಕ್ಕಪರಿಶೋಧನೆಯಲ್ಲಿನ ಅತ್ಯಂತ ಮಹತ್ವಪೂರ್ಣ ಅಂಶಗಳನ್ನು ನಿರ್ಧರಿಸುತ್ತೇವೆ ಹಾಗೂ ಇವು ಪ್ರಧಾನ ಲೆಕ್ಕಪರಿಶೋಧನಾ ವಿಷಯಗಳಾಗುತ್ತವೆ. ಕಾನೂನು ಅಥವಾ ನಿಬಂಧನೆ ವಿಷಯದ ಸಾರ್ವಜನಿಕ ಪ್ರಕಟಣೆಗೆ ಅವಕಾಶವೀಯದ ಸಂದರ್ಭವನ್ನು ಹೊರತುಪಡಿಸಿ ನಾವು ಈ ವಿಷಯಗಳನ್ನು ನಮ್ಮ ಲೆಕ್ಕಪರಿಶೋಧನಾ ವರದಿಯಲ್ಲಿ ವಿವರಿಸುತ್ತೇವೆ. ಅಥವಾ ತೀರ ಅಪರೂಪದ ಸಂದರ್ಭಗಳಲ್ಲಿ, ಕೆಲವು ವಿಷಯಗಳನ್ನು, ಅವುಗಳನ್ನು ತಿಳಿಸಿದಲ್ಲಿ ಸಾರ್ವಜನಿಕ ಹಿತದ ಲಾಭಗಳಿಗಿಂತಲೂ ವ್ಯತಿರಿಕ್ತವಾದ ಪರಿಣಾಮಗಳೇ ಬಹುತೇಕ ಹೆಚ್ಚಾಗಬಹುದಾದ ಸಂದರ್ಭವಿದ್ದಲ್ಲಿ, ತಿಳಿಸಬಾರದೆಂದು ನಾವು ನಿರ್ಧರಿಸುತ್ತೇವೆ.

ಇತರ ವಿಷಯಗಳು :

1. ವಿದ್ಯುತ್ ಖರೀದಿ ಖರ್ಚುಗಳನ್ನು ಆ ದಿನದ ವರೆಗಿನ ಸರಬರಾಜುದಾರರ ದರಪಟ್ಟಿಗಳು ಹಾಗೂ ಎಸ್ಎಲ್ಡಿಸಿಯ ತಾತ್ಕಾಲಿಕ ವಿದ್ಯುತ್ ಹೊಂದಾಣಿಕೆ ತಃಖ್ತೆಯನ್ನು ಆಧರಿಸಿ ಲೆಕ್ಕಕ್ಕೆ ತೆಗದುಕೊಳ್ಳಲಾಗುತ್ತದೆ. ಹಾಗಾಗಿ, ವಿದ್ಯುತ್ ಖರೀದಿ ವೆಚ್ಚವು ಅಂತಿಮ ಹೊಂದಾಣಿಕೆಯ ಕಾರಣದಿಂದಾಗುವ ಪರಿಷ್ಕರಣೆಗೆ ಬದ್ಧವಾಗಿದೆ ಮತ್ತು ವರ್ಷದ ಹಣಕಾಸು ತಃಖ್ತೆಗಳ ಮೇಲೆ ಅದರ ಪರಿಣಾಮವನ್ನು ತಿಳಿಯಲು ಸಾಧ್ಯವಾಗಿಲ್ಲ.
2. ಕರ್ನಾಟಕ ಸರ್ಕಾರದ ಮೂಲಕ ಪವರ್ ಫೈನಾನ್ಸ್ ಕಾರ್ಪೊರೇಶನ್ ನಿಂದ ಪಡೆದಿರುವ ರೂ. 284.53 ಲಕ್ಷ ಮೊತ್ತದ ಸಾಲ ಸ್ಥಿರೀಕರಣಕ್ಕೆ ಬದ್ಧವಾಗಿದೆ.
3. ವಿತರಣಾ ಕಾರ್ಯಾಚರಣೆಯ ಬೇರ್ಪಡಿಸುವಿಕೆಯ ಪರಿಣಾಮವಾಗಿ ಮೆ. ಕೆಪಿಟಿಸಿಎಲ್ ಕಂಪೆನಿಗೆ ವರ್ಗಾಯಿಸಿದದ ಕೆಲವು ಭೂಮಿ, ಕಟ್ಟಡ ಮತ್ತು ವಾಹನಗಳಿಗೆ ಸಂಬಂಧಿಸಿದಂತೆ ಅವುಗಳ ಹಕ್ಕುಪತ್ರಗಳನ್ನು (ಸುಮಾರು 10%) ಕಂಪನಿಯು ತನ್ನ ಹೆಸರಿನಲ್ಲಿ ಹೊಂದಿರುವುದಿಲ್ಲ.
4. ವಿಭಾಗಗಳಲ್ಲಿನ ಸಾಮಾನ್ಯ ಲೆಡ್ಜರ್ ಮತ್ತು ಗ್ರಾಹಕ ಭದ್ರತಾ ಠೇವಣಿಗಳಿಗೆ ಸಂಬಂಧಿಸಿದ ಟಿಆರ್ಎಂ ವ್ಯವಸ್ಥೆಗಳು ಪ್ರಕಟಿಸುವ ನಿಯಂತ್ರಣ ಖಾತೆ ಶಿಲ್ಕುಗಳು ಪೂರ್ಣವಾಗಿ ಹೊಂದಾಣಿಕೆಯಾಗಿಲ್ಲ. ಹಣಕಾಸು ತಃಖ್ತೆಗಳ ಮೇಲಿನ ಇದರ ಪರಿಣಾಮವನ್ನು ತಿಳಿಯಲು ಸಾಧ್ಯವಾಗಿಲ್ಲ.
5. ವ್ಯಾಪಾರಿ ಸಂದಾಯವಾಗಬೇಕಾದವುಗಳು ಮತ್ತು ಡಿಸಿಬಿ ಪ್ರಕಾರ ಶಿಲ್ಕುಗಳ ಅವಧಿ ತೀರುವಿಕೆಯು ವೈಯಕ್ತಿಕ ವಿಭಾಗಗಳು

ಒದಗಿಸಿದ ತಃಖ್ತೆಗಳನ್ನು ಆಧರಿಸಿದ್ದು ಇದನ್ನು ಮೂರನೆಯ ಪಕ್ಷವು ನಿರ್ವಹಿಸುತ್ತಿರುವ ಲೆಡ್ಜರ್‌ನೊಂದಿಗೆ ಹೊಂದಿಸಬೇಕಿದೆ. ಇವುಗಳ ಯುಕ್ತತೆಯ ಬಗ್ಗೆ ನಾವು ಆಡಳಿತ ಮಂಡಳಿಯು ಒದಗಿಸಿದ ಹೇಳಿಕೆಗಳನ್ನು ಆಶ್ರಯಿಸಿರುತ್ತೇವೆ.

6. ಕಂಪನಿಯು ತನ್ನಲ್ಲೇ ಒಂದು ಪ್ರತ್ಯೇಕ ಲಂಬೀಯ ಆಂತರಿಕ ಲೆಕ್ಕಪರಿಶೋಧನಾ ವಿಭಾಗವನ್ನು ಹೊಂದಿದೆ. ಈ ಲೆಕ್ಕಪರಿಶೋಧನೆಯ ವ್ಯಾಪ್ತಿಯು ಪರ್ಯಾಪ್ತವಾಗಿಲ್ಲ. ಉದಾ. ವೋಚರ್‌ಗಳಿಂದ ಪ್ರಾಥಮಿಕ ಲೆಕ್ಕ ಪುಸ್ತಕಗಳಿಗೆ ಮಾಡಲಾದ ನಮೂದುಗಳ ಪರಿಶೀಲನೆ, ಮಾಹಿತಿ ವ್ಯವಸ್ಥೆಗಳ ಲೆಕ್ಕಪರಿಶೋಧನೆ, ದಾಸ್ತಾನು ಮತ್ತು ಸ್ಥಿರಾಸ್ತಿಗಳ ಭೌತಿಕ ಪರಿಶೀಲನೆ, ತೆರಿಗೆ ಕಾನೂನುಗಳು & ಕಾರ್ಮಿಕ ಕಾನೂನುಗಳ ವಿವಿಧ ಉಪಬಂಧಗಳಿಗೆ ಅನುಸರಣೆ ಮತ್ತು ಬದ್ಧವಾಗಿರುವಿಕೆ – ಇವು ಈ ಲೆಕ್ಕಪರಿಶೋಧನೆಯ ವ್ಯಾಪ್ತಿಗೆ ಬರಬೇಕಿರುವ ವಿಷಯಗಳಾಗಿವೆ. ಕಂಪೆನಿಯ ಗಾತ್ರ ಮತ್ತು ಅದರ ವ್ಯಾಪಾರದ ಹರಹನ್ನು ಪರಿಗಣಿಸಿದರೆ, ನಮ್ಮ ಅಭಿಪ್ರಾಯದಲ್ಲಿ, ಪ್ರಸ್ತುತ ವ್ಯವಸ್ಥೆಯು ಗಟ್ಟಿಗೊಳ್ಳಬೇಕಿದೆ ಮತ್ತು ಲೆಕ್ಕ ಪರಿಶೋಧನಾ ವಿಭಾಗವನ್ನು ಪರ್ಯಾಪ್ತವಾದ ಸಿಬ್ಬಂದಿಯೊಂದಿಗೆ ಬಲಪಡಿಸಬೇಕಿದೆ.

7. ಕೆಇಆರ್‌ಸಿ ಅಧಿಸೂಚನೆ/ಸರಬರಾಜುದಾರರ ಮಾಡಿದ ತಪ್ಪುಗಳ ಕಾರಣದಿಂದಾಗಿ ವಿದ್ಯುತ್ ಖರೀದಿಯನ್ನು ಸರಬರಾಜುದಾರರು ಮಾಡಿದ ಬಿಲ್ ಮೊತ್ತಕ್ಕಿಂತಲೂ ಕಡಿಮೆಗೆ ಲೆಕ್ಕಕ್ಕೆ ತೆಗೆದುಕೊಳ್ಳುವ ಪದ್ಧತಿಯನ್ನು ಕಂಪೆನಿ ಹೊಂದಿದೆ. ಆದರೆ, ಸರಬರಾಜುದಾರರ ಮೇಲೆ ಡೆಬಿಟ್ ಚೀಟಿಯನ್ನು ಸೃಷ್ಟಿಸುವ (ಅಥವಾ) ಅವರಿಂದ ಕ್ರೆಡಿಟ್ ಚೀಟಿಯನ್ನು ಪಡೆಯುವ ಮೂಲಕ ಕೊರತೆ ನಮೂದುಗಳನ್ನು ಸರಬರಾಜುದಾರರಿಗೆ ತಿಳಿಸಲಾಗುತ್ತಿಲ್ಲ. ಇದು ಹೊಂದಾಣಿಕೆಯ ಸಮಸ್ಯೆಯನ್ನು ಗಂಭೀರವಾಗಿಸಬಹುದು.

8. ಕಂಪೆನಿಯು 2013ರಲ್ಲಿ ಜುರಾಲಾ ಯೋಜನೆಗೆ ರೂ. 1400 ಲಕ್ಷ ಕೊಡುಗೆ ನೀಡಿದ್ದು ಈ ಮುಂಗಡ/ಕೊಡುಗೆಯ ವಿವಿರವಾದ ಷರತ್ತು ಮತ್ತು ನಿಬಂಧನೆಗಳು ಹಾಗೂ ಅದರ ಪ್ರಸ್ತುತ ಸ್ಥಿತಿಗತಿಗಳ ವಿವರಗಳು ಕಂಪೆನಿಯ ಲೆಕ್ಕಪುಸ್ತಕಗಳಲ್ಲಿ ಅದನ್ನು ತೋರಿಸಲು ಸಾಧ್ಯವಾಗುವಂತೆ ಲಭ್ಯವಿರುವುದಿಲ್ಲ.

9. ಕಂಪನಿಯು ಕರ್ನಾಟಕ ಸರ್ಕಾರದ ಆದೇಶದ ಮೇರೆಗೆ ಗಂಗಾ ಕಲ್ಯಾಣ ಯೋಜನೆಯ ಅಡಿಯಲ್ಲಿ ಬಂಡವಾಳ ವೆಚ್ಚವನ್ನು ಅನುಭವಿಸುತ್ತಿದೆ. ಈ ಯೋಜನೆಯ ಅಡಿ ಕರ್ನಾಟಕ ಸರ್ಕಾರವು ವಿವಿಧ ಇಲಾಖೆಗಳ ಮೂಲಕ ಪ್ರತಿ ಫಲಾನುಭವಿಗೆ ನಿಶ್ಚಿತ ಮೊತ್ತವನ್ನು ಒದಗಿಸುತ್ತ ಬಂದಿದೆ. ಸಂಬಂಧಿತ ಬಂಡವಾಳೀಕೃತ ಆಸ್ತಿಯೊಂದಿಗೆ ಪಡೆಯಲಾದ ಸಹಾಯವನ್ನು ಒಂದಕ್ಕೆ ಪ್ರತಿಯಾಗಿ ಒಂದನ್ನು ಗುರುತಿಸುವುದು ಸಾಧ್ಯವಾಗಿಲ್ಲ. ಕಾರ್ಪೊರೇಟ್ ಕಛೇರಿಯು ಹೊರಡಿಸಿರುವ ಲೆಕ್ಕ ಮಾರ್ಗಸೂಚಿಗಳನ್ನು ಸಹ ಲೆಕ್ಕ ಘಟಕಗಳಲ್ಲಿ ಸಮಾನರೂಪಿಯಾಗಿ ಅನುಸರಿಸಲಾಗಿಲ್ಲ. ಹಾಗಾಗಿ, ಅನುದಾನದಿಂದ ಆದಾಯ ಮತ್ತು ಸಂಬಂಧಿತ ಆಸ್ತಿಯ ಬಂಡವಾಳೀಕರಣ ಹಾಗೂ ಲಾಭ ಮತ್ತು ನಷ್ಟದ ತಃಖ್ತೆಗೆ ಸವಕಳಿ ವಿಧಿಸುವಿಕೆಗಳ ನಡುವೆ ಲೆಕ್ಕಗಳ ಹೊಂದಾಣಿಕೆ ಆಗದಿರುವಿಕೆಯ ಸಾಧ್ಯತೆ ಇರುತ್ತದೆ.

10. ನಾವು ನಡೆಸಿದ ಪರೀಕ್ಷೆಗಳಿಂದ ತಿಳಿದುಬಂದಂತೆ, (ತಂತ್ರಾಂಶದ ಮೂಲಕ) ಸೃಷ್ಟಿಸಲಾದ ಡಿಸಿಬಿ ಮತ್ತು ಎಕ್ಸೆಲ್‌ನಲ್ಲಿ ಸಲ್ಲಿಸಲಾದ ಡಿಸಿಬಿ ನಡುವೆ ಶಿಲ್ಕುಗಳಲ್ಲಿ ವ್ಯತ್ಯಾಸವಿತ್ತು. ಈ ಶಿಲ್ಕುಗಳನ್ನು ಸರಿಹೊಂದಿಸುವುದು ಅಗತ್ಯವಾಗಿದೆ.

11. ಬಿಲ್ಲಿಂಗ್ ತಂತ್ರಾಶದಲ್ಲಿ (ಟಿಆರ್‌ಎಂ – ಟೋಟಲ್ ರೆವಿನ್ಯೂ ಮ್ಯಾನೇಜ್‌ಮೆಂಟ್ ಏಜೆನ್ಸೀಸ್ ಅನುಷ್ಠಾನಗೊಳಿಸಿರುವ ಆರ್‌ಎಪಿಡಿಆರ್‌ಪಿ ಮತ್ತು ತಂತ್ರಾಂಶ) ಎಂಎನ್‌ಆರ್ (ದಾಖಲಾಗದ ಮೀಟರ್), ಎನ್‌ಆರ್‌ಜಿ (ಯಾವುದೇ ರೀಡಿಂಗ್ ದಾಖಲಾಗಿಲ್ಲ) ಮತ್ತು ಶೂನ್ಯ ಬಳಕೆ ಮುಂತಾದ ಆದಾಯ ಸೋರಿಕೆಯ ಮೇಲಿನ ಅಸಾಧಾರಣ ವರದಿಗಳ ಮೇಲೆ ಯಾವುದೇ ನಿಯತವಾದ ಕ್ರಮಗಳನ್ನು ತೆಗೆದುಕೊಂಡಿರುವುದಿಲ್ಲ. ಅಸಾಧಾರಣ ವರದಿಗಳ ಸೂಕ್ಷ್ಮ ಪರಿಶೀಲನೆ ಮತ್ತು ಸಂವಾದಿ ಸಕಾಲಿಕ ಕ್ರಮಗಳು ಆಂತರಿಕ ನಿಯಂತ್ರಣಗಳನ್ನು ಬಲಪಡಿಸಬಹುದಾಗಿದೆ.

12. 31 ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷದ ತುಲನಾತ್ಮಕ ಹಣಕಾಸು ಮಾಹಿತಿ ಮತ್ತು ಈ ಇಂಡ್ ಎಎಸ್ ಹಣಕಾಸು ತಃಖ್ತೆಗಳಲ್ಲಿ ಸೇರಿರುವ, ಇಂಡ್ ಎಎಸ್ ಅನುಸಾರ ಸಿದ್ಧಪಡಿಸಲಾಗಿರುವ 1 ಏಪ್ರಿಲ್, 2016ರಂದು ಇದ್ದಂತೆ ಪರಿವರ್ತನಾ ದಿನಾಂಕದ ಸಂತುಲನ ಪಟ್ಟಿಯನ್ನು 31 ಮಾರ್ಚ್ 2017 ಮತ್ತು 31 ಮಾರ್ಚ್ 2018ಕ್ಕೆ ಕೊನೆಗೊಂಡ ವರ್ಷಗಳ ಶಾಸನಬದ್ಧ ಪ್ರತ್ಯೇಕ ಹಣಕಾಸು ತಃಖ್ತೆಗಳನ್ನು ಲೆಕ್ಕಪರಿಶೋಧಿಸಿದ ಹಿಂದಿನ ಲೆಕ್ಕಪರಿಶೋಧಕರು ಲೆಕ್ಕಪರಿಶೋಧಿಸಿರುತ್ತಾರೆ. 21.11.2018ರ ತಮ್ಮ ಲೆಕ್ಕಪರಿಶೋಧನಾ ವರದಿಯಲ್ಲಿ ಹಿಂದಿನ ಲೆಕ್ಕಪರಿಶೋಧಕರು ಆ ಹಣಕಾಸು ತಃಖ್ತೆಗಳ ಬಗ್ಗೆ ಪರಿಶೀಲನಾತ್ಮಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಿರುತ್ತಾರೆ.

13. ಮೆ. ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್ ನಲ್ಲಿನ ಈಕ್ವಿಟಿ ಷೇರುಗಳ ಹೂಡಿಕೆ ಮೌಲ್ಯ ಮತ್ತು ಸಂಖ್ಯೆ –ಇವು ಸ್ಥಿರೀಕರಣ ಮತ್ತು ಹೊಂದಾಣಿಕೆಗಳಿಗೆ ಬದ್ಧವಾಗಿವೆ. ಜೊತೆಗೆ, ಷೇರುಗಳ ಸಂಖ್ಯೆಯೊಂದಿಗೆ ಪ್ರತಿ ಷೇರಿನ ಮುಖಬೆಲೆಯನ್ನು ಪ್ರಕಟಿಸಲಾಗಿಲ್ಲ.

ಇತರ ಕಾನೂನು ಮತ್ತು ನಿಬಂಧನಾ ಅಗತ್ಯಗಳ ಬಗ್ಗೆ ವರದಿ:

1. ಕಂಪನಿ ಕಾಯ್ದೆ 2013ರ ಪರಿಚ್ಛೇದ 143, ಉಪಪರಿಚ್ಛೇದ (11) ಅನ್ವಯ ಭಾರತದ ಕೇಂದ್ರ ಸರ್ಕಾರ ಹೊರಡಿಸಿದ

ಕಂಪೆನಿಗಳ (ಲೆಕ್ಕಪರಿಶೋಧಕರ ವರದಿ) ಆದೇಶ, 2016ರ ('ಆದೇಶ') ಅಗತ್ಯದಂತೆ, ಮೇಲೆ ಹೇಳಲಾದ ಆದೇಶದ ಕಂಡಿಕೆ 3 ಮತ್ತು 4 ರಲ್ಲಿ ನಿರ್ದಿಷ್ಟಗೊಳಿಸಿರುವ ಅಂಶಗಳ ಮೇಲಿನ ಹೇಳಿಕೆಯನ್ನು ನಾವು ಅನುಬಂಧ ಎ ನಲ್ಲಿ ಸೇರಿಸಿದ್ದೇವೆ.

2. ಕಾಯ್ದೆಯ ಪರಿಚ್ಛೇದ 143(3) ರ ಅಗತ್ಯಾನುಸಾರ ನಾವು ಹೀಗೆ ವರದಿಮಾಡುತ್ತಿದ್ದೇವೆ:

ಎ. ನಮ್ಮ ಅತ್ಯುತ್ತಮ ತಿಳುವಳಿಕೆ ಮತ್ತು ನಂಬಿಕೆಗಳಿಗೆ ತಕ್ಕಂತೆ ನಮ್ಮ ಲೆಕ್ಕಪರಿಶೋಧನೆಯ ಉದ್ದೇಶಕ್ಕೆ ಅಗತ್ಯವೆಂದು ತೋರಿದ ಎಲ್ಲ ಮಾಹಿತಿ ಮತ್ತು ವಿವರಣೆಗಳನ್ನು ನಾವು ಪಡೆದುಕೊಂಡಿದ್ದೇವೆ;

ಬಿ. ನಮ್ಮ ಅಭಿಪ್ರಾಯದಂತೆ, ಕಂಪೆನಿ ನಿರ್ವಹಿಸಿರುವ ಲೆಕ್ಕಪುಸ್ತಕಗಳ ಪರಿಶೀಲನೆಯಿಂದ ತಿಳಿದುಬರುವಂತೆ ಕಂಪೆನಿಯು ಕಾನೂನಿನ ಅಗತ್ಯಗಳಿಗೆ ತಕ್ಕಹಾಗೆ ಸೂಕ್ತವಾದ ಲೆಕ್ಕಪುಸ್ತಕಗಳನ್ನು ನಿರ್ವಹಿಸಿದೆ ಮತ್ತು ನಮ್ಮ ಲೆಕ್ಕಪರಿಶೋಧನೆಗೆ ಅಗತ್ಯವಾದ ಸೂಕ್ತ ಸಲ್ಲಿಕೆಗಳನ್ನು ನಾವು ಭೇಟಿ ನೀಡದ ವಿಭಾಗಗಳಿಂದ ಪಡೆದುಕೊಂಡಿರುತ್ತೇವೆ, ಮೇಲಿನ "ಪರಿಶೀಲನಾ ಅಭಿಪ್ರಾಯಗಳಿಗೆ ಆಧಾರಗಳು" ಭಾಗದ ಕಂಡಿಕೆ 1 & 2ರಲ್ಲಿನ ನಮ್ಮ ಪರಿಶೀಲನೆಗಳಿಗೆ ಬದ್ಧವಾಗಿ.

ಸಿ. ಈ ವರದಿಯ ವ್ಯಾಪ್ತಿಗೆ ಬರುವ ಸಂತುಲನ ಪಟ್ಟಿ, (ಸಮಗ್ರ ಆದಾಯವೂ ಸೇರಿದಂತೆ) ಲಾಭ ಮತ್ತು ನಷ್ಟದ ತಃಖ್ತೆ, ನಗದು ಪ್ರವಹನ ತಃಖ್ತೆ ಹಾಗೂ ಸ್ವಾಮ್ಯದಲ್ಲಿನ ಪ್ರತ್ಯೇಕ ಬದಲಾವಣೆ ತಃಖ್ತೆ ಲೆಕ್ಕಪುಸ್ತಕಗಳೊಂದಿಗೆ ಹೊಂದುತ್ತವೆ.

ಡಿ. ನಮ್ಮ ಅಭಿಪ್ರಾಯದಲ್ಲಿ, ಮೇಲಿನ ಪರಿಶೀಲನಾ ಅಭಿಪ್ರಾಯಗಳಿಗೆ ಆಧಾರ ಕಂಡಿಕೆಯ ಕ್ರಮ ಸಂಖ್ಯೆ 3 ರಿಂದ 5, 7 ರಿಂದ 13, 23, 25 ಮತ್ತು 26ರಲ್ಲಿ ವಿವರಿಸಲಾದುದನ್ನು ಹೊರತುಪಡಿಸಿ ಮೇಲೆ ಹೇಳಿರುವ ಪ್ರತ್ಯೇಕ ಇಂಡ್ ಎಎಸ್ ಹಣಕಾಸು ತಃಖ್ತೆಗಳು ಕಾಯ್ದೆಯ ಪರಿಚ್ಛೇದ 133ರ ಅಡಿಯಲ್ಲಿ ನಿರ್ದಿಷ್ಟಗೊಳಿಸಿರುವ ಲೇಖಾ ಪ್ರಮಾಣಗಳನ್ನು ಕಂಪೆನಿಗಳ (ಭಾರತೀಯ ಲೇಖಾ ಪ್ರಮಾಣಗಳು) ನಿಯಮಗಳು 2015ಕ್ಕೆ ಸಂಗತವಾಗುವಂತೆ ಅನುಸರಿಸಿವೆ.

ಇ. ಭಾರತ ಸರ್ಕಾರವು ಸಾಮಾನ್ಯ ಅಧಿಸೂಚನೆ ಸಂ. ಜಿಎಸ್ಆರ್ 463(ಇ) ದಿ. 05.06.2015 ಅನರ್ಹತೆಯು ಉಪಬಂಧಗಳಿಂದ ಸರ್ಕಾರಿ ಕಂಪೆನಿಗಳ ನಿರ್ದೇಶರುಗಳಿಗೆ ವಿನಾಯಿತಿ ನೀಡಿದೆ. ಹಾಗಾಗಿ ಕಂಪೆನಿ ಕಾಯ್ದೆ, 2013ರ ಪರಿಚ್ಛೇದ 164(2) ಅಡಿ ಸರ್ಕಾರಿ ಕಂಪೆನಿಗಳ ನಿರ್ದೇಶಕರುಗಳ ಅನರ್ಹತೆಯ ಉಪಬಂಧದ ಪ್ರಶ್ನೆ ಅನ್ವಯಿಸುವುದಿಲ್ಲ.

ಎಫ್. ಕಂಪನಿಯ ಆರ್ಥಿಕ ವರದಿಗಾರಿಕೆಯ ಮೇಲಿನ ಅಂತರಿಕ ಹಣಕಾಸು ನಿಯಂತ್ರಣಗಳ ಪರ್ಯಾಪ್ತತೆಯ ಬಗ್ಗೆ ಹಾಗೂ ಇಂತಹ ನಿಯಂತ್ರಣಗಳು ಕಾರ್ಯಾಚರಣೆಯ ನೆಲೆಯಲ್ಲಿ ಎಷ್ಟು ಪರಿಣಾಮಕಾರಿ ಎಂಬ ಬಗ್ಗೆ "ಅನುಬಂಧ ಬಿ" ಯಲ್ಲಿನ ನಮ್ಮ ಪ್ರತ್ಯೇಕ ವರದಿಯನ್ನು ಗಮನಿಸುವುದು.

ಜಿ. ಕಂಪೆನಿಗಳ (ಲೆಕ್ಕಪರಿಶೋಧನೆ ಮತ್ತು ಲೆಕ್ಕಪರಿಶೋಧಕರು) ನಿಯಮಗಳು, 2014ರ ನಿಯಮ 11ರ ಅನುಸಾರ ಲೆಕ್ಕಪರಿಶೋಧಕರ ವರದಿಯಲ್ಲಿ ಸೇರಿಸಬೇಕಿರುವ ಇತರ ಅಂಶಗಳಿಗೆ ಸಂಬಂಧಿಸಿದಂತೆ, ನಮ್ಮ ಅಭಿಪ್ರಾಯದಂತೆ ಹಾಗೂ ನಮಗೆ ಒದಗಿಸಲಾದ ಮಾಹಿತಿ ಮತ್ತು ವಿವರಣೆಗಳ ಅನುಸಾರ:

i) ಕಂಪೆನಿಯು ಹಣಕಾಸು ತಃಖ್ತೆಗಳಿಗೆ ಅನುಬಂಧಿಸಿರುವ ಲೆಕ್ಕಪತ್ರಗಳ ಮೇಲಿನ ಟಿಪ್ಪಣಿಗಳ ಅಡಿಯಲ್ಲಿ, ತನ್ನ ಹಣಕಾಸು ತಃಖ್ತೆಗಳಲ್ಲಿ ತನ್ನ ಹಣಕಾಸು ಸ್ಥಿತಿಗತಿಯ ಮೇಲೆ ಬಾಕಿ ಇರುವ ವ್ಯಾಜ್ಯಗಳ ಪರಿಣಾಮವನ್ನು ಪ್ರಕಟಿಸಿದೆ – ಹಣಕಾಸು ತಃಖ್ತೆಗಳ ಮೇಲಿನ ಟಿಪ್ಪಣಿ 29 ನೋಡುವುದು.

ii) ನಮಗೆ ತಿಳಿಸಲಾದಂತೆ ಕಂಪೆನಿಯು ಮುಂಗಾಣಬಹುದಾದ ಯಾವುದೇ ಗಣನೀಯ ನಷ್ಟಗಳನ್ನು ಒಳಗೊಂಡಿರುವ, ಜನ್ಯ ಗುತ್ತಿಗೆಗಳೂ ಸೇರಿದ, ಯಾವುದೇ ದೀರ್ಘಕಾಲೀನ ಗುತ್ತಿಗೆಗಳನ್ನು ಹೊಂದಿರುವುದಿಲ್ಲ.

iii) ನಮಗೆ ತಿಳಿಸಲಾದಂತೆ, ಕಂಪೆನಿಯು ಹೂಡಿಕೆದಾರರ ಶಿಕ್ಷಣ ಮತ್ತು ಸಂರಕ್ಷಣೆ ನಿಧಿಗೆ ವರ್ಗಾಯಿಸಬೇಕಿರುವ ಮೊತ್ತಗಳನ್ನು ವರ್ಗಾಯಿಸುವಲ್ಲಿ ಯಾವುದೇ ವಿಳಂಬವನ್ನು ಮಾಡಿರುವುದಿಲ್ಲ – ಹಣಕಾಸು ತಃಖ್ತೆಗಳ ಮೇಲಿನ ಟಿಪ್ಪಣಿ 49 ನೋಡುವುದು.

3. ಕಂಪನಿ ಕಾಯ್ದೆ, 2013ರ ಪರಿಚ್ಛೇದ 143(5) ರ ಅಗತ್ಯದಂತೆ ಸದರಿ ಕಂಪೆನಿಗೆ ಭಾರತದ ನಿಯಂತ್ರಕರು ಮತ್ತು ಮಹಾಲೇಖಾಪಾಲರು ನೀಡಿರುವ ನಿರ್ದೇಶನಗಳನ್ನು ಪರಿಗಣಿಸಿದ್ದು, ಅದಕ್ಕನುಗುಣವಾಗಿ ತೆಗೆದುಕೊಂಡ ಕ್ರಮವನ್ನು ಮತ್ತು ಕಂಪನಿಯ ಲೆಕ್ಕಪತ್ರಗಳು ಹಾಗೂ ಹಣಕಾಸು ತಃಖ್ತೆಗಳ ಮೇಲಿನ ಪರಿಣಾಮವನ್ನು "ಅನುಬಂಧ –ಸಿ" ಯಲ್ಲಿ ಒದಗಿಸಿದ್ದೇವೆ.

ಮೆ. ಪಿ. ಜಿ. ಭಾಗವತ್ ಪರವಾಗಿ

ಸನದಿ ಲೆಕ್ಕಿಗರು, ಎಫ್ಆರ್ಎನ್:101118ಡಬ್ಲ್ಯೂ

ಎಸ್ ಪಿ ಪಾಗದ್

ಪಾಲುದಾರರು, ಸದಸ್ಯತ್ವ ಸಂಖ್ಯೆ : 206124

ಯುಡಿಐಎನ್: 1020612ಎಎಎಎಎಫ್ ೞ4933

ಗುಲ್ಬರ್ಗ, ದಿನಾಂಕ 11 ನವಂಬರ್ 2019.

ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ "ಅನುಬಂಧ – ಎ"

ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ, (ಜೆಸ್ಕಾಂ) ಕಲಬುರ್ಗಿ – 585 102, ಸಂಸ್ಥೆಯ ಸದಸ್ಯರಿಗೆ 31 ಮಾರ್ಚ್ 2019ಕ್ಕೆ ಕೊನೆಗೊಂಡ ವರ್ಷಕ್ಕಾಗಿನ ಇದೇ ದಿನಾಂಕದ ನಮ್ಮ ವರದಿಯ "ಇತರ ಕಾನೂನು ಮತ್ತು ನಿಬಂಧನಾ ಅಗತ್ಯಗಳ ಬಗೆಗಿನ ವರದಿ" ಶೀರ್ಷಿಕೆಯ ಅಡಿ ಕಂಡಿಕೆ 1 ರಲ್ಲಿ ಉಲ್ಲೇಖಿಸಲಾದ ಅನುಬಂಧ.

1. ಎ. ಕಂಪನಿ ಸ್ಥಿರಾಸ್ತಿಗಳ ಲೆಕ್ಕಗಳನ್ನು ನಿರ್ವಹಿಸಿದೆ.ಆದರೆ ಸ್ಥಿರಾಸ್ತಿಗಳ ನೋಂದಣಿ ಪುಸ್ತಕವು ಸ್ಥಿರಾಸ್ತಿಗಳ ಪರಿಮಾಣಾತ್ಮಕ ವಿವರಗಳನ್ನು, ಸ್ವಾಧೀನಪಡಿಸಿಕೊಳ್ಳಲು ತಗುಲಿದ ವೆಚ್ಚ ಮತ್ತು ಸ್ಥಿತಿಗತಿಗಳ ವಿವರಗಳನ್ನು ನೀಡುವುದಿಲ್ಲ.

ಬಿ. ನಿಯತವಾಗಿ ಅನುಸರಿಸುತ್ತ ಬಂದಿರುವ ಭೌತಿಕ ಪರಿಶೀಲನೆಯ ಯೋಜನೆಯ ಪ್ರಕಾರ ಪರಿಶೀಲನೆಯ ಅವಧಿಯಲ್ಲಿ ಕಂಪೆನಿಯು ತನ್ನ ಸ್ಥಿರಾಸ್ತಿಗಳ ಭೌತಿಕ ಪರಿಶೀಲನೆಯನ್ನು ನಡೆಸಿರುವುದಾಗಿ ನಮಗೆ ತಿಳಿಸಲಾಗಿದೆ. ಆದರೆ ಈ ನಿಟ್ಟಿನಲ್ಲಿ ದಾಖಲೀಕರಣ ಪರ್ಯಾಪ್ತವಾಗಿರುವುದಿಲ್ಲ. ಹಾಗಾಗಿ, ಭೌತಿಕ ಮತ್ತು ಪುಸ್ತಕದ ಶಿಲ್ಕುಗಳ ನಡುವಿನ ಅಸಾಂಗತ್ಯಗಳ ಬಗ್ಗೆ, ಅವು ಇದ್ದಲ್ಲಿ, ನಾವು ಅಭಿಪ್ರಾಯ ವ್ಯಕ್ತಪಡಿಸುವ ಸ್ಥಿತಿಯಲ್ಲಿ ಇಲ್ಲ.

ಸಿ. ನಮ್ಮ ವರದಿಯ "ಇತರ ವಿಷಯಗಳು" ಭಾಗದಲ್ಲಿನ ಕ್ರ.ಸಂ. 3 ರಲ್ಲಿ ವರದಿಮಾಡಿರುವ ಕೆಲವು ಆಸ್ತಿಗಳಿಗೆ ಸಂಬಂಧಿಸಿದಂತೆ ಸ್ಥಿರಾಸ್ತಿಗಳ ಹಕ್ಕುಗಳನ್ನು ಕಂಪನಿಯು ತನ್ನ ಹೆಸರಿನಲ್ಲಿ ಹೊಂದಿರುವುದಿಲ್ಲ.

2. ಎ. ನಮಗೆ ತಿಳಿಸಲಾದಂತೆ, ಆಡಳಿತ ಮಂಡಳಿಯು ಸದರಿ ವರ್ಷದಲ್ಲಿ ದಾಸ್ತಾನಿನ ಭೌತಿಕ ಪರಿಶೀಲನೆಯನ್ನು ನಡೆಸಿದೆ.

ಬಿ. ಕಂಪನಿಯು ಸೂಕ್ತ ತಪಶೀಲು ದಾಖಲೆಗಳನ್ನು ನಿರ್ವಹಿಸುತ್ತಿದೆ. ನಮಗೆ ಒದಗಿಸಲಾದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಇಂತಹ ತಪಶೀಲಿನಲ್ಲಿ ಭೌತಿಕ ದಾಸ್ತಾನು ಮತ್ತು ಪುಸ್ತಕ ದಾಸ್ತಾನಿನ ನಡುವೆ ಗಮನಿಸಲಾದ ಅಸಾಂಗತ್ಯಗಳನ್ನು ಕಂಪನಿಯ ಲೆಕ್ಕಪುಸ್ತಕಗಳಲ್ಲಿ ಸೂಕ್ತವಾಗಿ ನಿರ್ವಹಿಸಲಾಗಿದೆ.

3. ಕಂಪನಿ ಕಾಯ್ದೆ, 2013ರ ಪರಿಚ್ಛೇದ 189ರ ಅಡಿ ನಿರ್ವಹಿಸಲಾದ ನೋಂದಣಿ ಪುಸ್ತಕದ ವ್ಯಾಪ್ತಿಗೆ ಬರುವ ಯಾವುದೇ ಕಂಪನಿ, ಸಂಸ್ಥೆ ಅಥವಾ ಇತರರಿಗೆ ಆಧಾರಿತ ಅಥವಾ ಆಧಾರರಹಿತವಾದ ಸಾಲಗಳನ್ನು ಕಂಪೆನಿ ನೀಡಿಲ್ಲ, ಅವುಗಳಿಂದ ಸಾಲಗಳನ್ನು ಪಡೆದಿಲ್ಲ ಮತ್ತು ಹಾಗಾಗಿ ಆದೇಶದ ಕಂಡಿಕೆ 3ರ ಕಲಮು (iii), ಕಲಮು (iii)(ಎ), (iii)(ಬಿ) ಮತ್ತು (iii)(ಸಿ) ಅನ್ವಯವಾಗುವುದಿಲ್ಲ;

4. ನಮ್ಮ ಅಭಿಪ್ರಾಯದಲ್ಲಿ ಮತ್ತು ನಮಗೆ ಒದಗಿಸಲಾದ ಮಾಹಿತಿ ಹಾಗೂ ವಿವರಣೆಗಳ ಪ್ರಕಾರ ಕಂಪನಿಯು ಸಾಲಗಳು, ಹೂಡಿಕೆಗಳು, ಖಾತರಿ ಮತ್ತು ಭದ್ರತೆಗಳಿಗೆ ಸಂಬಂಧಿಸಿದಂತೆ ಕಂಪೆನಿ ಕಾಯ್ದೆ, 2013ರ ಪರಿಚ್ಛೇದ 185 ಮತ್ತು 186ರ ಉಪಬಂಧಗಳನ್ನು ಕಂಪನಿ ಅನುಸರಿಸಿದೆ.

5. ಕಂಪನಿಯು ಕಾಯ್ದೆಯ ಪರಿಚ್ಛೇದ 73, 74, 75 ಮತ್ತು 76ರ ಉಪಬಂಧಗಳು ಹಾಗೂ ಅದರಡಿ ರೂಪಿಸಲಾದ ನಿಯಮಗಳ ವ್ಯಾಪ್ತಿಗೆ ಬರುವಂತೆ, ಅಧಿಸೂಚಿಸಲಾದ ಮಟ್ಟಿಗೆ, ಕಂಪನಿ ಸಾರ್ವಜನಿಕರಿಂದ ಯಾವುದೇ ಠೇವಣಿಗಳನ್ನು ಸ್ವೀಕರಿಸಿಲ್ಲ.

6. ಭಾರತ ಸರ್ಕಾರವು ರೂಪಿಸಿದ ನಿಯಮಗಳಿಗೆ ಅನುಸಾರವಾಗಿ ಕಂಪೆನಿಯು ತನ್ನ ಉತ್ಪನ್ನಗಳಿಗೆ ಸಂಬಂಧಿಸಿದಂತೆ ಕಾಯ್ದೆಯ ಪರಿಚ್ಛೇದದ ಅಡಿಯಲ್ಲಿ ವೆಚ್ಚ ದಾಖಲೆಗಳನ್ನು ನಿರ್ವಹಿಸಬೇಕಿದೆ. ನಾವು ಈ ದಾಖಲೆಗಳನ್ನು ಸ್ಥೂಲವಾಗಿ ಪರಿಶೀಲಿಸಿದ್ದೇವೆ ಮತ್ತು ಮೇಲ್ನೋಟಕ್ಕೆ ತೋರುವಂತೆ ನಿಗದಿತ ಲೆಕ್ಕಗಳು ಮತ್ತು ದಾಖಲೆಗಳನ್ನು ನಿರ್ವಹಿಸಲಾಗಿದೆ ಎಂದು ಅಭಿಪ್ರಾಯಪಡುತ್ತೇವೆ. ಆದರೆ, ಈ ದಾಖಲೆಗಳು ನಿಖರವಾಗಿವೆಯೇ ಮತ್ತು ಪೂರ್ಣವಾಗಿವೆಯೇ ಎಂದು ಪರಿಶೀಲಿಸುವ ನಿಟ್ಟಿನಲ್ಲಿ ನಾವು ವಿವರವಾದ ಪರಿಶೀಲನೆಯನ್ನು ಮಾಡಿರುವುದಿಲ್ಲ.

7. ಎ) ನಮಗೆ ಒದಗಿಸಲಾದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಕಂಪನಿಯು, 31 ಮಾರ್ಚ್ 2019 ರಂದು, ಅರ್ಥಾತ್ ಸಂತುಲನ ಪಟ್ಟಿಯ ದಿನಾಂಕದಂದು ಇದ್ದಂತೆ, ಅವು ಬಾಕಿ ಇದ್ದ ದಿನಾಂಕದಿಂದ 6 ತಿಂಗಳುಗಳಿಗೂ ಹೆಚ್ಚು ಕಾಲ ಉಳಿದ ಕೆಳಗಿನವನ್ನು ಹೊರತುಪಡಿಸಿ, ಭವಿಷ್ಯ ನಿಧಿ, ನೌಕರರ ರಾಜ್ಯ ವಿಮೆ, ಮಾರಾಟ ತೆರಿಗೆ, ಸೇವಾ ತೆರಿಗೆ, ಸೀಮಾ ಶುಲ್ಕ, ಅಬಕಾರಿ ಸುಂಕ, ಮೌಲ್ಯವರ್ಧಿತ ತೆರಿಗೆ, ಸರಕು ಮತ್ತು ಸೇವಾ ತೆರಿಗೆ, ಉಪಕರ ಮತ್ತು ಇತರ ಶಾಸನಿಕ ಬಾಕಿಗಳೂ ಸೇರಿದಂತೆ ಅವ್ಯಾಜ್ಯ ಬಾಕಿಗಳನ್ನು ಸಕ್ಷಮ ಪ್ರಾಧಿಕಾರಗಳಿಗೆ ನಿಯತವಾಗಿ ಸಂದಾಯ ಮಾಡುತ್ತಿದೆ;

(i) (31 ಮಾರ್ಚ್ 2016 ರಿಂದ) ಕೊಪ್ಪಳ ವಿಭಾಗದಲ್ಲಿ ರೂ. 10.37 ಲಕ್ಷ ಹಾಗೂ ಬಳ್ಳಾರಿ ಗ್ರಾಮಾಂತರ ವಿಭಾಗದಲ್ಲಿ ರೂ. 7.98 ಲಕ್ಷ ಮೊತ್ತವನ್ನು 'ನೌಕರರ ಕಲ್ಯಾಣ ಟ್ರಸ್ಟ್'ಶೀರ್ಷಿಕೆಯಡಿ ತೋರಿಸಲಾಗಿದೆ.

(ii) ಕಂಪನಿಯು ಹಣಕಾಸು ವರ್ಷ 2007ರಿಂದ ಪ್ರಾರಂಭಿಸಿ ತದನಂತರದ ಅವಧಿಗೆ ಕೊರತೆ ಕಳೆತ/ ಕೊರತೆ ಸಂದಾಯಗಳು /ವಿಳಂಬಿತ ಕಳೆತ/ ವಿಳಂಬಿತ ಸಂದಾಯಗಳು/ ತಡವಾದ ಸಲ್ಲಿಕೆಗಳು ಮತ್ತು ಅದರ ಮೇಲಿನ ಬಡ್ಡಿ ಬಾಬ್ತಿಗಾಗಿ ಟಿಡಿಎಸ್ ಸಲ್ಲಿಕೆಗಳಲ್ಲಿ ತಪ್ಪಿದ ಸಂಬಂಧವಾಗಿ ರೂ. 30.85 ಲಕ್ಷ ಮೊತ್ತದ ಆದಾಯ ತೆರಿಗೆ (ಟಿಡಿಎಸ್) ಬಾಕಿಗಳು.

ಬಿ. ನಮಗೆ ಒದಗಿಸಲಾದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಮತ್ತು ಕಂಪನಿಯ ದಾಖಲೆಗಳ ಪರಿಶೀಲನೆಯಿಂದ ತಿಳಿದುಬಂದಂತೆ ಸೇವಾ ತೆರಿಗೆ, ಸೀಮಾ ಶುಲ್ಕ, ಅಬಕಾರಿ ಸುಂಕ, ಮೌಲ್ಯವರ್ಧಿತ ತೆರಿಗೆ, ಸರಕು ಮತ್ತು ಸೇವಾ ತೆರಿಗೆ,ಕಾರಣದಿಂದಾಗಿ ಯಾವುದೇ ವ್ಯಾಜ್ಯಯುಕ್ತ ಮೊತ್ತಗಳೂ ಬಾಕಿ ಉಳಿದಿಲ್ಲ. ಮಾರ್ಚ್ 31, 2019ರಂದು ಇದ್ದಂತೆ ವ್ಯಾಜ್ಯದ ಕಾರಣ ಸಂದಾಯವಾಗದೆ ಉಳಿದಿರುವ ಮಾರಾಟ ತೆರಿಗೆ ಮತ್ತು ಆದಾಯ ತೆರಿಗೆ ಬಾಕಿಗಳ ವಿವರಗಳು ಕೆಳಗಿನಂತಿವೆ:

ಪರಿನಿಯಮದ ಹೆಸರು	ಬಾಕಿಗಳ ಸ್ವರೂಪ	ಮೊತ್ತ (ಲಕ್ಷ ರೂ)	ವ್ಯಾಜ್ಯ ಬಾಕಿ ಇರುವ ವೇದಿಕೆ
ಕೇಂದ್ರ ಮಾರಾಟ ತೆರಿಗೆ ಕಾಯ್ದೆ, 1957	'ಸಿ' ಫಾರ್ಮ್ ನೀಡಿಕೆ	82.55	ಕರ್ನಾಟಕ ಮಾರಾಟ ತೆರಿಗೆ ನ್ಯಾಯಾಧಿಕರಣ
ಆದಾಯ ತೆರಿಗೆ ಕಾಯ್ದೆ, 1961	ಹಣಕಾಸು ವರ್ಷ 2007ರಿಂದ ಪ್ರಾರಂಭಿಸಿ ತದನಂತರದ ಅವಧಿಗೆ ಕೊರತೆ ಕಳೆತ/ ಕೊರತೆ ಸಂದಾಯಗಳು /ವಿಳಂಬಿತ ಕಳೆತ/ ವಿಳಂಬಿತ ಸಂದಾಯಗಳು/ ತಡವಾದ ಸಲ್ಲಿಕೆಗಳು ಮತ್ತು ಸಂವಾದಿ ಬಡ್ಡಿಗೆ ಸಂಬಂಧಿಸಿದಂತೆ ಟಿಡಿಎಸ್ ತಃಖ್ತೆಗಳನ್ನು ತಪ್ಪಿರುವುದು.	268.56	ಆದಾಯ ತೆರಿಗೆ ಇಲಾಖೆ (ಟಿಡಿಎಸ್)
ಆದಾಯ ತೆರಿಗೆ ಕಾಯ್ದೆ, 1961	ಪ್ರಸರಣ ಶುಲ್ಕಗಳು ಮತ್ತು ಇತರೆ ಶುಲ್ಕದ ಮೇಲೆ ಟಿಡಿಎಸ್	ರೂ. 10377.58	ಮಾನ್ಯ ಸರ್ವೋಚ್ಚ ನ್ಯಾಯಾಲಯ

8. ನಮಗೆ ಒದಗಿಸಲಾದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಮತ್ತು ಕಂಪನಿಯ ದಾಖಲೆಗಳ ಪರಿಶೀಲನೆಯಿಂದ ತಿಳಿದುಬಂದಂತೆ ಕಂಪನಿಯು ಬ್ಯಾಂಕುಗಳಿಗೆ ಅಥವಾ ಬ್ಯಾಂಕುಗಳಿಗೆ ಅಥವಾ ಸರ್ಕಾರಕ್ಕೆ ಬಾಕಿ ಮರುಪಾವತಿಯಲ್ಲಿ ತಪ್ಪಿಲ್ಲ. ಕಂಪನಿಯು ಹಣಕಾಸು ಸಂಸ್ಥೆಗಳೊಂದಿಗೆ ಯಾವುದೇ ದಸ್ತಾವೇಜುಗಳನ್ನೂ ಜಾರಿಗೊಳಿಸಿಲ್ಲ ಹಾಗೂ ಪ್ರಸರಣ ಮತ್ತು ಹಂಚಿಕೆ ಚಟುವಟಿಕೆಗಳ ಬೇರ್ಪಡಿಸುವಿಕೆಯ ಪರಿಣಾಮವಾಗಿ ಕೆಪಿಟಿಸಿಎಲ್‌ನಿಂದ ಕಂಪೆನಿಗೆ ವರ್ಗಾಯಿತವಾದ ಸಾಲಗಳಿಗೆ ಸಂಬಂಧಿಸಿದಂತೆ ಯಾವುದೇ ದಾಖಲೆಗಳನ್ನೂ ಹೊಂದಿರುವುದಿಲ್ಲ. ಹಾಗಾಗಿ ಹಣಕಾಸು ಸಂಸ್ಥೆ ಅಥವಾ ಬ್ಯಾಂಕಿಗೆ ಈ ಬಾಕಿಗಳ ಮರುಪಾವತಿಯಲ್ಲಿ ತಪ್ಪಿರುವ ಬಗ್ಗೆ ನಾವು ಯಾವುದೇ ಅಭಿಪ್ರಾಯ ವ್ಯಕ್ತಪಡಿಸುವುದು ಸಾಧ್ಯವಿರುವುದಿಲ್ಲ.

9. ಕೈಗೊಳ್ಳಲಾದ ಲೆಕ್ಕಪರಿಶೋಧನಾ ಪ್ರಕ್ರಿಯೆಗಳ ಆಧಾರದ ಮೇಲೆ ಮತ್ತು ಆಡಳಿತ ಮಂಡಳಿ ನಮಗೆ ಒದಗಿಸಿರುವ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಕಂಪೆನಿಯು ಪ್ರಾಥಮಿಕ ಸಾರ್ವಜನಿಕ ನೀಡಿಕೆ, ತದನಂತರದ ಸಾರ್ವಜನಿಕ ನೀಡಿಕೆ (ಸಾಲ ಸಾಧನಗಳೂ ಸೇರಿ) ಮತ್ತು ಅವಧಿ ಸಾಲಗಳ ಮೂಲಕ ಯಾವುದೇ ಹಣವನ್ನು ಕೂಡಿಸಿರುವುದಿಲ್ಲ. ಹಾಗಾಗಿ, ಆದೇಶದ ಕಲಮು 3(ix) ರ ಉಪಬಂಧಗಳು ಕಂಪೆನಿಗೆ ಅನ್ವಯವಾಗುವುದಿಲ್ಲ.

10. ಆಡಳಿತ ಮಂಡಳಿಯಿಂದ ನಮಗೆ ಒದಗಿಸಲಾದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಕಂಪನಿಯ ಮೇಲೆ ವಿವಿಧ ಘಟಕಗಳಲ್ಲಿ ರೂ. 37.99 ಲಕ್ಷ ಮೊತ್ತದಷ್ಟು ಮೋಸಗಳು ವರದಿಯಾಗಿವೆ:

11. 05.06.2015ರಂದು ಹೊರಡಿಸಲಾದ ಅಧಿಸೂಚನೆಯಂತೆ ಕಂಪನಿ ಕಾಯ್ದೆಯ ಪರಿಚ್ಛೇದ 197ರ ಉಪಬಂಧಗಳು ಸರ್ಕಾರಿ ಕಂಪನಿಗೆ ಅನ್ವಯವಾಗುವುದಿಲ್ಲ. ಹಾಗಾಗಿ ಕಂಪನಿಯು ಮೇಲಿನ ಉಪಬಂಧಗಳ ಅನುಪಾಲನೆಯನ್ನು ಮಾಡಬೇಕಿರುವುದಿಲ್ಲ.

12. ಕಂಪನಿಯು ಒಂದು ನಧಿ ಕಂಪೆನಿಯಲ್ಲದ ಕಾರಣ ಹಾಗೂ ನಧಿ ಪರಿನಿಯಮಗಳು, 2014 ಕಂಪನಿಗೆ ಅನ್ವಯಿಸದ ಕಾರಣ ಆದೇಶದ ಕಲಮು 3(ಥು) ರ ಉಪಬಂಧಗಳು ಕಂಪೆನಿಗೆ ಅನ್ವಯವಾಗುವುದಿಲ್ಲ.

13. ಕಂಪೆನಿಯ ಸಂಭಂಧಿತ ಪಕ್ಷಗಳೊಂದಿಗಿನ ಎಲ್ಲ ವ್ಯಹಾರಗಳೂ ಕಂಪನಿ ಕಾಯ್ದೆ, 2013ರ ಪರಿಚ್ಛೇದ 177 ಮತ್ತು 188ರ ಅನುಸಾರವಿದ್ದು ಕಾಯ್ದೆಯ ಪರಿಚ್ಛೇದ 133ರ ಅಡಿ ನಿರ್ದಿಷ್ಟಗೊಳಿಸಲಾಗಿರುವ ಸಂಬಂಧಿತ ಪಕ್ಷ ವ್ಯವಹಾರಗಳು, ಇಂಡ್ ಎಎಸ್ 24ರ ಅಗತ್ಯದಂತೆ ಇಂತಹ ಸಂಭಂಧಿತ ಪಕ್ಷಗಳೊಂದಿಗಿನ ವ್ಯಹಾರಗಳನ್ನು ಹಣಕಾಸು ತಃಖ್ತೆಗಳಲ್ಲಿ ಪ್ರಕಟಿಸಲಾಗಿದೆ.

14. ಕಂಪೆನಿಯು ಪರಿಶೀಲನೆಯಲ್ಲಿರುವ ವರ್ಷದಲ್ಲಿ ಯಾವುದೇ ಷೇರುಗಳ ಆದ್ಯತೆಯ ಹಂಚಿಕೆಯನ್ನಾಗಲೀ ಖಾಸಗಿ ಇರಿಸುವಿಕೆಯನ್ನಾಗಲೀ ಮಾಡಿರುವುದಿಲ್ಲ ಅಥವಾ ಪೂರ್ಣವಾಗಿ ಇಲ್ಲವೇ ಭಾಗಶಃ ಪರಿವರ್ತಿಸಬಹುದಾದ ಡಿಬೆಂಚರುಗಳನ್ನು ನೀಡಿರುವುದಿಲ್ಲ. ಹಾಗಾಗಿ, ಆದೇಶದ

ಕಲಮು 3(xiv) ರ ಉಪಬಂಧಗಳು ಕಂಪೆನಿಗೆ ಅನ್ವಯವಾಗುವುದಿಲ್ಲ.

15. ಕಂಪನಿಯು ನಿರ್ದೇಶಕರೊಂದಿಗಾಗಲೀ ಅಥವಾ ಅವರಿಗೆ ಸಂಬಂಧಹೊಂದಿರುವ ವ್ಯಕ್ತಿಯೊಂದಿಗಾಗಲೀ ಯಾವುದೇ ನಗದುರಹಿತ ವ್ಯವಹಾರವನ್ನು ನಡೆಸಿರುವುದಿಲ್ಲ. ಹಾಗಾಗಿ, ಆದೇಶದ ಕಲಮು 3(xv) ರ ಉಪಬಂಧಗಳು ಕಂಪೆನಿಗೆ ಅನ್ವಯವಾಗುವುದಿಲ್ಲ.

16. ನಮ್ಮ ಅಭಿಪ್ರಾಯದಂತೆ ಕಂಪನಿಯು ಭಾರತೀಯ ರಿಸರ್ವ್ ಬ್ಯಾಂಕ್ ಕಾಯ್ದೆ, 1934 ಪರಿಚ್ಛೇದ 45 1ಎ ಅಡಿ ನೋಂದಾಯಿತಗೊಳ್ಳಬೇಕಿಲ್ಲ ಮತ್ತು ಹಾಗಾಗಿ ಆದೇಶದ ಕಲಮು 3(xvi) ರ ಉಪಬಂಧಗಳು ಕಂಪೆನಿಗೆ ಅನ್ವಯವಾಗುವುದಿಲ್ಲ

ಮೆ. ಪಿ. ಜಿ. ಭಾಗವತ್ ಪರವಾಗಿ
ಸನದಿ ಲೆಕ್ಕಿಗರು, ಎಫ್‌ಆರ್‌ಎನ್:101118ಡಬ್ಲ್ಯೂ

ಎಸ್. ಪಿ. ಪಾಗದ್
ಪಾಲುದಾರರು, ಸದಸ್ಯತ್ವ ಸಂಖ್ಯೆ : 206124
ಯುಡಿಐಎನ್: 1020612ಎಎಎಎಎಫ್ ೭4933
ಗುಲ್ಬರ್ಗ, ದಿನಾಂಕ 11 ನವಂಬರ್ 2019.

ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ "ಅನುಬಂಧ – ಬಿ"

ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ ಸಂಸ್ಥೆಯ ಹಣಕಾಸು ತಃಖ್ತೆಗಳ ಮೇಲಿನ ನಮ್ಮ ಇದೇ ದಿನಾಂಕದ ಸ್ವತಂತ್ರ ಲೆಕ್ಕಪರಿಶೋಧಕರ ವರದಿಗೆ "ಅನುಬಂಧ – ಬಿ"

ಕಂಪನಿ ಕಾಯ್ದೆ, 2013ರ ("ಕಾಯ್ದೆ") ಪರಿಚ್ಛೇದ 143, ಉಪಪರಿಚ್ಛೇದ 3ರ ಕಲಮು (i) ರ ಅಡಿಯಲ್ಲಿ ಆಂತರಿಕ ಹಣಕಾಸು ನಿಯಂತ್ರಣಗಳ ಮೇಲಿನ ವರದಿ

31 ಮಾರ್ಚ್ 2019ರಂದು ಇದ್ದಂತೆ ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ ("ಕಂಪನಿ") ಸಂಸ್ಥೆಯ ಆರ್ಥಿಕ ವರದಿಗಾರಿಕೆಯ ಮೇಲಿನ ಆಂತರಿಕ ಹಣಕಾಸು ನಿಯಂತ್ರಣದ ಲೆಕ್ಕಪರಿಶೋಧನೆಯನ್ನು, ಆ ದಿನಾಂಕಕ್ಕೆ ಕೊನೆಗೊಂಡ ವರ್ಷದ ಕಂಪನಿಯ ಆರ್ಥಿಕ ತಖ್ತೆಯ ಲೆಕ್ಕಪರಿಶೋಧನೆಗೆ ಸಂಬಂಧಿಸಿದಂತೆ, ನಾವು ನಡೆಸಿರುತ್ತೇವೆ.

ಆಂತರಿಕ ಹಣಕಾಸು ನಿಯಂತ್ರಣದಲ್ಲಿ ಆಡಳಿತ ಮಂಡಳಿಯ ಜವಾಬ್ದಾರಿ :

ಆರ್ಥಿಕ ವರದಿಗಾರಿಕೆಯ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳ ಲೆಕ್ಕಪರಿಶೋಧನೆಯ ಮೇಲೆ ಇನ್ಸ್‌ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ (ಐಸಿಎಐ) ಹೊರಡಿಸಿರುವ ಮಾರ್ಗಸೂಚಿ ಗಮನಿಕೆಯಲ್ಲಿ ಹೇಳಲಾಗಿರುವ ಆವಶ್ಯಕ ಅಂಗಗಳನ್ನು ಪರಿಗಣಿಸಿ ಕಂಪೆನಿಯು ಸ್ಥಾಪಿಸಿರುವ ಆರ್ಥಿಕ ವರದಿಗಾರಿಕೆ ಮಾನದಂಡಗಳ ಮೇಲಿನ ಆಂತರಿಕ ನಿಯಂತ್ರಣವನ್ನು ಆಧರಿಸಿದ ಆಂತರಿಕ ಹಣಕಾಸು ನಿಯಂತ್ರಣಗಳನ್ನು ಸ್ಥಾಪಿಸಿ ನಿರ್ವಹಿಸುವುದು ಕಂಪೆನಿಯ ಆಡಳಿತ ಮಂಡಳಿಯ ಜವಾಬ್ದಾರಿಯಾಗಿದೆ. ಕಂಪೆನಿಯ ಕಾರ್ಯನೀತಿಗಳಿಗೆ ಬದ್ಧವಾಗಿರುವುದೂ ಸೇರಿ ತನ್ನ ವ್ಯಾಪಾರವನ್ನು ಕ್ರಮವಾಗಿ ಮತ್ತು ಪರಿಣಾಮಕಾರಿಯಾಗಿ ನಡೆಸಿಕೊಂಡು ಹೋಗುವುದನ್ನು ಖಚಿತಪಡಿಸಿಕೊಳ್ಳಲು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿರುವ ಆಂತರಿಕ ಹಣಕಾಸು ನಿಯಂತ್ರಣಗಳ ವಿನ್ಯಾಸ, ಜಾರಿಗೊಳಿಸುವಿಕೆ ಮತ್ತು ನಿರ್ವಹಣೆ ಈ ಜವಾಬ್ದಾರಿಗಳಲ್ಲಿ ಸೇರುತ್ತದೆ. ಜೊತೆಗೆ ಕಂಪನಿಯ ಆಸ್ತಿಗಳ ರಕ್ಷಣೆ, ಮೋಸ ಮತ್ತು ತಪ್ಪುಗಳ ತಡೆಗಟ್ಟುವಿಕೆ ಮತ್ತು ಪತ್ತೆಹಚ್ಚುವಿಕೆ, ಲೆಕ್ಕದಾಖಲೆಗಳ ನಿಖರತೆ ಮತ್ತು ಪರಿಪೂರ್ಣತೆ ಹಾಗೂ ವಿಶ್ವಾಸಾರ್ಹ ಆರ್ಥಿಕ ಮಾಹಿತಿಯ ಸಕಾಲಿಕ ಸಿದ್ಧಪಡಿಸುವಿಕೆಯೂ, ಕಂಪೆನಿ ಕಾಯ್ದೆ, 2013ರ ಅಗತ್ಯದಂತೆ, ಈ ಜವಾಬ್ದಾರಿಯಲ್ಲಿ ಸೇರಿದೆ.

ಲೆಕ್ಕಪರಿಶೋಧಕರ ಜವಾಬ್ದಾರಿಗಳು :

ನಮ್ಮ ಜವಾಬ್ದಾರಿಯು ನಮ್ಮ ಲೆಕ್ಕಪರಿಶೋಧನೆಯನ್ನು ಆಧರಿಸಿ ಆರ್ಥಿಕ ವರದಿಗಾರಿಕೆಯ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳ ಮೇಲೆ ಅಭಿಪ್ರಾಯವನ್ನು ಮಂಡಿಸುವುದಾಗಿದೆ. ಆರ್ಥಿಕ ವರದಿಗಾರಿಕೆಯ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳ ಲೆಕ್ಕಪರಿಶೋಧನೆಯ ಮೇಲೆ ಇನ್ಸ್‌ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ಹೊರಡಿಸಿರುವ ಮತ್ತು ಕಂಪನಿ ಕಾಯ್ದೆ, 2013ರ ಪರಿಚ್ಛೇದ 143(10)ರ ಅಡಿ ನಿಗದಿಪಡಿಸಲಾಗಿರುವುದೆಂದು ತಿಳಿಯಲಾಗಿರುವ ಮಾರ್ಗಸೂಚಿ ಗಮನಿಕೆ ("ಮಾರ್ಗಸೂಚಿ ಗಮನಿಕೆ") ಮತ್ತು ಲೆಕ್ಕಪರಿಶೋಧನೆಯ ಮೇಲಿನ ಪ್ರಮಾಣಗಳ ಅನುಸಾರ, ಆಂತರಿಕ ಹಣಕಾಸು ನಿಯಂತ್ರಣದ ಲೆಕ್ಕಪರಿಶೋಧನೆಗೆ ಅನ್ವಯವಾಗುವ ಮಟ್ಟಿಗೆ, ಎರಡೂ ಆಂತರಿಕ ಹಣಕಾಸು ನಿಯಂತ್ರಣಗಳ ಲೆಕ್ಕಪರಿಶೋಧನೆಗೆ ಅನ್ವಯಿಸುವಂತೆ ಮತ್ತು ಎರಡನ್ನೂ ಇನ್ಸ್‌ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ಹೊರಡಿಸಿರುವಂತೆ ನಡೆಸಿದ್ದೇವೆ. ಕೆಳಗಿನ ಅಭಿಪ್ರಾಯಗಳ ಅಲ್ಲಗಳೆತ ಕಂಡಿಕೆಯಲ್ಲಿ ವಿವರಣೆಯ ಅನುಸಾರ, ಕಂಪನಿಯ ಆರ್ಥಿಕ ವರದಿಗಾರಿಕೆಯ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳ ಮೇಲೆ ನಮ್ಮ

ಲೆಕ್ಕಪರಿಶೋಧನಾ ಅಭಿಪ್ರಾಯವನ್ನು ವ್ಯಕ್ತಪಡಿಸಲು ಆಧಾರವಾಗುವ ಪರ್ಯಾಪ್ತವೂ ಸೂಕ್ತವೂ ಆದ ಲೆಕ್ಕಪರಿಶೋಧನಾ ಆಧಾರವನ್ನು ಪಡೆದುಕೊಳ್ಳಲು ನಮಗೆ ಸಾಧ್ಯವಾಗಿರುವುದಿಲ್ಲ.

ಆರ್ಥಿಕ ವರದಿಗಾರಿಕೆಯ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳ ಅರ್ಥ :

ಹಣಕಾಸು ವರದಿಗಾರಿಕೆ ಮತ್ತು ಸಾಮಾನ್ಯವಾಗಿ ಒಪ್ಪಿತವಾದ ಲೆಕ್ಕ ಸಿದ್ಧಾಂತಗಳಿಗೆ ಅನುಗುಣವಾಗಿ ಬಾಹ್ಯ ಉದ್ದೇಶಗಳಿಗಾಗಿ ಹಣಕಾಸು ತಃಖ್ತೆಗಳ ಸಿದ್ಧಪಡಿಸುವಿಕೆಗೆ ಸಂಬಂಧಿಸಿದಂತೆ ಯುಕ್ತವಾದ ಭರವಸೆಯನ್ನು ಒದಗಿಸಲು ವಿನ್ಯಾಸಗೊಳಿಸಲಾದ ಪ್ರಕ್ರಿಯೆಯೇ ಆರ್ಥಿಕ ವರದಿಗಾರಿಕೆಯ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳಾಗಿವೆ. ಆರ್ಥಿಕ ವರದಿಗಾರಿಕೆಯ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳಲ್ಲಿ (1) ಕಂಪೆನಿಯ ಆಸ್ತಿಗಳ ವ್ಯವಹಾರ ಮತ್ತು ವಿಲೇವಾರಿಗಳನ್ನು ನಿಖರವಾಗಿ ಮತ್ತು ನ್ಯಾಯಯುತವಾಗಿ ಸಾಕಷ್ಟು ವಿವರವಾಗಿ ಪ್ರಕಟಿಸುವ ದಾಖಲೆಗಳ ನಿರ್ವಹಣೆಗೆ ಸಂಬಂಧಿಸಿದ; (2) ಸಾಧಾರಣವಾಗಿ ಒಪ್ಪಿತವಾದ ಲೇಖಾ ಪ್ರಮಾಣಗಳಿಗೆ ಹೊಂದುವಂತೆ ಹಣಕಾಸು ತಃಖ್ತೆಗಳನ್ನು ಸಿದ್ಧಗೊಳಿಸಲು ಅನುಕೂಲವಾಗುವಂತೆ ವ್ಯವಹಾರಗಳನ್ನು ದಾಖಲಿಸಲು ಮತ್ತು ಕಂಪೆನಿಯ ಸ್ವೀಕೃತಿಗಳು ಹಾಗೂ ವೆಚ್ಚಗಳನ್ನು ಕಂಪನಿಯ ಆಡಳಿತ ಮಂಡಳಿ ಮತ್ತು ನಿರ್ದೇಶಕರ ಅಧಿಕಾರಕ್ಕೆ ಅನುಸಾರವಾಗಿ ಮಾತ್ರವೇ ಕೈಗೊಳ್ಳುವ ಬಗ್ಗೆ ಯುಕ್ತವಾದ ಭರವಸೆಯನ್ನು ಒದಗಿಸುವ; ಮತ್ತು

(3) ಹಣಕಾಸು ತಃಖ್ತೆಗಳ ಮೇಲೆ ಮಹತ್ವದ ಪರಿಣಾಮವನ್ನು ಬೀರಲು ಸಾಧ್ಯವಿರುವ, ಕಂಪನಿಯ ಆಸ್ತಿಗಳ ಅನಧಿಕೃತ ಸ್ವಾಧೀನ, ಬಳಕೆ ಅಥವಾ ವಿಲೇವಾರಿಯನ್ನು ತಡೆಯುವ ಅಥವಾ ಸಕಾಲದಲ್ಲಿ ತಡೆಗಟ್ಟುವ ಬಗ್ಗೆ ಯುಕ್ತವಾದ ಭರವಸೆಯನ್ನು ಒದಗಿಸುವಿಕೆ ಸೇರಿವೆ.

ಅಭಿಪ್ರಾಯದ ಅಲ್ಲಗಳೆತ :

ನಮಗೆ ಒದಗಿಸಲಾದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಕಂಪನಿಯು ಲೆಕ್ಕಪರಿಶೋಧನೆಯ ಮೇಲೆ ಇನ್ಸ್‌ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ಹೊರಡಿಸಿರುವ ಮಾರ್ಗಸೂಚಿ ಗಮನಿಕೆಯಲ್ಲಿ ಹೇಳಲಾಗಿರುವ ಆವಶ್ಯಕ ಅಂಗಗಳನ್ನು ಪರಿಗಣಿಸಿ ಅಥವಾ ಮಾರ್ಗಸೂಚಿ ಮಾನದಂಡಗಳನ್ನು ಆಧರಿಸಿ ತನ್ನ ಆರ್ಥಿಕ ವರದಿಗಾರಿಕೆಯ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳನ್ನು ಸ್ಥಾಪಿಸಿರುವುದಿಲ್ಲ. ಈ ಕಾರಣದಿಂದಾಗಿ, ಮಾರ್ಚ್ 31, 2019ರಂದು ಇದ್ದಂತೆ ಕಂಪನಿಯು ಪರ್ಯಾಪ್ತವಾದ ಆರ್ಥಿಕ ವರದಿಗಾರಿಕೆಯ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳನ್ನು ಹೊಂದಿತ್ತೇ ಮತ್ತು ಇಂತಹ ಆಂತರಿಕ ಹಣಕಾಸು ನಿಯಂತ್ರಣಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುತ್ತಿತ್ತೇ ಎಂಬ ಬಗ್ಗೆ ನಮ್ಮ ಅಭಿಪ್ರಾಯ ವ್ಯಕ್ತಪಡಿಸಲು ಪರ್ಯಾಪ್ತವಾದ ಮತ್ತು ಸೂಕ್ತವಾದ ಲೆಕ್ಕಪರಿಶೋಧನಾ ಅಭಿಪ್ರಾಯಗಳನ್ನು ಪಡೆದುಕೊಳ್ಳುವುದು ನಮಗೆ ಸಾಧ್ಯವಾಗಿಲ್ಲ. ಅಂತೆಯೇ ಆರ್ಥಿಕ ವರದಿಗಾರಿಕೆಯ ಮೇಲಿನ ಆಂತರಿಕ ಹಣಕಾಸು ನಿಯಂತ್ರಣಗಳ ಮೇಲೆ ನಾವು ಅಭಿಪ್ರಾಯವನ್ನು ವ್ಯಕ್ತಪಡಿಸುವುದಿಲ್ಲ.

ವಿವರಣಾತ್ಮಕ ಕಂಡಿಕೆ :

ಕಾಯ್ದೆಯ ಪರಿಚ್ಛೇದ 143(10)ರ ಅಡಿಯಲ್ಲಿ ನಿಗದಿಗೊಳಿಸಲಾಗಿರುವಂತೆ, ಇನ್ಸ್‌ಟಿಟ್ಯೂಟ್ ಆಫ್ ಚಾರ್ಟರ್ಡ್ ಅಕೌಂಟೆಂಟ್ಸ್ ಆಫ್ ಇಂಡಿಯಾ ಹೊರಡಿಸಿರುವ ಲೆಕ್ಕಪರಿಶೋಧನಾ ಪ್ರಮಾಣಗಳಿಗೆ ಅನುಸಾರವಾಗಿ ನಾವು 31 ಮಾರ್ಚ್ 2019ರಂದು ಇದ್ದಂತೆ ಸಂತುಲನ ಪಟ್ಟಿ, ಅದೇ ದಿನಾಂಕಕ್ಕೆ ಕೊನೆಗೊಂಡಂತೆ ಲಾಭ ಮತ್ತು ನಷ್ಟದ ತಃಖ್ತೆ ಹಾಗೂ ನಗದು ಪ್ರವಹನ ತಃಖ್ತೆ ಮತ್ತು ಮಹತ್ವದ ಲೇಖಾ ನೀತಿಗಳು ಮತ್ತು ಇತರ ವಿವರಣಾತ್ಮಕ ಮಾಹಿತಿ – ಇವುಗಳನ್ನು ಒಳಗೊಳ್ಳುವ ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ ("ಕಂಪನಿ") ಸಂಸ್ಥೆಯ ಪ್ರತ್ಯೇಕ ಹಣಕಾಸು ತಃಖ್ತೆಗಳನ್ನೂ ಸಹ ಲೆಕ್ಕಪರಿಶೋಧಿಸಿರುತ್ತೇವೆ. ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ ಸಂಸ್ಥೆಯ ಮಾರ್ಚ್ 31, 2019ರ ಹಣಕಾಸು ತಃಖ್ತೆಗಳ ನಮ್ಮ ಲೆಕ್ಕಪರಿಶೋಧನೆಯಲ್ಲಿ ನಮ್ಮ ಲೆಕ್ಕಪರಿಶೋಧನಾ ಪರೀಕ್ಷೆಗಳ ಸ್ವರೂಪ, ಕಾಲ ಮತ್ತು ವ್ಯಾಪ್ತಿಗಳನ್ನು ನಿರ್ಧರಿಸುವಲ್ಲಿ ನಾವು ಮೇಲೆ ವರದಿಮಾಡಿರುವ ಅಭಿಪ್ರಾಯ ಅಲ್ಲಗಳೆತವನ್ನು ಪರಿಗಣಿಸಿರುತ್ತೇವೆ ಮತ್ತು ಈ ವರದಿಯು ಪ್ರಸ್ತುತ ಪ್ರತ್ಯೇಕ ಹಣಕಾಸು ತಃಖ್ತೆಗಳ ಮೇಲಿನ ನಮ್ಮ ಪರಿಶೀಲನಾತ್ಮಕ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ ನಮ್ಮ 30.08.2019ರ ವರದಿಯನ್ನು ಪ್ರಭಾವಿಸುವುದಿಲ್ಲ.

ಮೆ. ಪಿ. ಜಿ. ಭಾಗವತ್ ಪರವಾಗಿ
ಸನದಿ ಲೆಕ್ಕಿಗರು, ಎಫ್‌ಆರ್‌ಎನ್:101118ಡಬ್ಲ್ಯೂ

ಎಸ್. ಪಿ. ಪಾಗದ್
ಪಾಲುದಾರರು, ಸದಸ್ಯತ್ವ ಸಂಖ್ಯೆ : 206124
ಯುಡಿಐಎನ್: 1020612ಎಎಎಎಎಫ್ ಓ4933
ಗುಲ್ಬರ್ಗ, ದಿನಾಂಕ 11 ನವಂಬರ್ 2019.

"ಅನುಬಂಧ – ಸಿ"

ಶಾಸನಬದ್ಧ ಲೆಕ್ಕಪರಿಶೋಧಕರು ಪರಿಶೀಲಿಸಬೇಕಾದ ವಿಷಯಗಳನ್ನು ತಿಳಿಸುವ ಮಾರ್ಗಸೂಚಿಗಳು

2018–19ರ ಹಣಕಾಸು ವರ್ಷದ ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ ಸಂಸ್ಥೆಯ ಲೆಕ್ಕಪತ್ರಗಳ ಲೆಕ್ಕಪರಿಶೋಧನೆಯ ಸಂದರ್ಭದಲ್ಲಿ ಶಾಸನಬದ್ಧ ಲೆಕ್ಕಪರಿಶೋಧಕರು ಪರಿಶೀಲಿಸಬೇಕಾದ ವಿಷಯಗಳನ್ನು ಸೂಚಿಸುತ್ತ ಭಾರತದ ನಿಯಂತ್ರಕರು ಮತ್ತು ಮಹಾಲೇಖಾಪಾಲರು ಕಂಪನಿ ಕಾಯ್ದೆ, 2013ರ ಪರಿಚ್ಛೇದ 143(5) ಅಡಿ ಹೊರಡಿಸಿರುವ ನರ್ದೇಶನಗಳು. ಲೆಕ್ಕಪರಿಶೋಧನೆಯ ಸಂದರ್ಭದಲ್ಲಿ ಆಡಳಿತ ಮಂಡಳಿಯು ಒದಗಿಸಿದ ಮಾಹಿತಿ ಮತ್ತು ವಿವರಣೆಗಳನ್ನು ಆಧರಿಸಿ ಈ ವರದಿಯನ್ನು ಸಿದ್ಧಪಡಿಸಿದ್ದೇವೆ.

ಕ್ರ.ಸಂ.	ನಿರ್ದೇಶನಗಳು	ಉತ್ತರಗಳು
1	ಕಂಪನಿಯು ತನ್ನ ಎಲ್ಲ ಲೆಕ್ಕ ವ್ಯವಹಾರಗಳನ್ನು ಐಟಿ ವ್ಯವಸ್ಥೆಗಳ ಮೂಲಕ ಸಂಸ್ಕರಿಸಲು ಅಗತ್ಯವಾದ ಲೆಕ್ಕ ವ್ಯವಸ್ಥೆಗಳನ್ನು ಹೊಂದಿದೆಯೇ? ಹಾಗಿದ್ದಲ್ಲಿ, ಲೆಕ್ಕವ್ಯವಸ್ಥೆಯ ಸಮಗ್ರತೆಯ ಮೇಲೆ ಐಟಿ ವ್ಯವಸ್ಥೆಯ ಹೊರಗೆ ಲೆಕ್ಕ ವ್ಯವಹಾರಗಳ ಸಂಸ್ಕರಣೆಯನ್ನು ನಡೆಸಿದ್ದರ ಪರಿಣಾಮಗಳು, ಆರ್ಥಿಕ ಪರಿಣಾಮಗಳೂ ಸೇರಿದಂತೆ, ಅವು ಇದ್ದಲ್ಲಿ, ತಿಳಿಸುವುದು	ನಮಗೆ ಒದಗಿಸಲಾದ ಮಾಹಿತಿ ಮತ್ತು ವಿವರಣೆಗಳ ಪ್ರಕಾರ ಬಿಲ್ಲಿಂಗ್ ಮತ್ತು ಸಂಗ್ರಹ ಮಾತ್ರ ಟಿಆರ್‌ಎಂ ತಂತ್ರಾಂಶದ ಮೂಲಕ ನಡೆಯುತ್ತಿದೆ. ಈ ತಂತ್ರಾಂಶಗಳನ್ನು ಮೂರನೆಯ ಅಭಿಕರಣಗಳು ನಡೆಸುತ್ತಿದೆ ಮತ್ತು ನಮ್ಮ ಅಭಿಪ್ರಾಯದಲ್ಲಿ, ಸಂಸ್ಕರಣೆಯ ಮೇಲೆ ಸೂಕ್ತ ನಯಂತ್ರಣಗಳನ್ನು ಖಚಿತಪಡಿಸಿಕೊಳ್ಳಲು ಮಾಹಿತಿ ವ್ಯವಸ್ಥೆ ಲೆಕ್ಕಪರಿಶೋಧನೆಯ ಅಗತ್ಯವಿದೆ. ಉಳಿದ ಎಲ್ಲ ವ್ಯವಹಾರಗಳನ್ನೂ ಕೈಯಲ್ಲಿ ಅಥವಾ ಎಕ್ಸೆಲ್ ಸ್ಪ್ರೆಡ್ ಶೀಟ್ ಮೂಲಕ ನಡೆಸಲಾಗುತ್ತಿದೆ. ಲೆಕ್ಕಗಳ ಸಂಸ್ಕರಣೆ ಸಮಗ್ರವಾಗಿಲ್ಲ. ಈ ಕಾರಣದಿಂದಾಗಿ, ನಿಖರವಲ್ಲದ ಸಂಸ್ಕರಣೆಯ ಸಾಧ್ಯತೆಯಿದ್ದು ಪ್ರಕ್ರಿಯೆಯು ತರುವಾಯದ ಮಾರ್ಪಾಡುಗಳನ್ನು ಎದುರಿಸಬೇಕಾಗುತ್ತದೆ. ಈ ಕಾರಣದಿಂದಾಗಿ ಆರ್ಥಿಕ ಪರಿಣಾಮಗಳನ್ನು ತಿಳಿಯಲು ಸಾಧ್ಯವಾಗಿಲ್ಲ.
2	ಸಾಲದ ಮರುಪಾವತಿಯಲ್ಲಿ ಕಂಪನಿಯು ಅಶಕ್ತತೆಯಿಂದಾಗಿ ಯಾರಾದರೂ ಸಾಲದಾರರು ಅಸ್ತಿತ್ವದಲ್ಲಿರುವ ಸಾಲಗಳ ಮರುರಚನೆ ಮಾಡಿರುತ್ತಾರೆಯೇ ಅಥವಾ ಋಣಗಳು/ ಸಾಲಗಳು/ ಬಡ್ಡಿ ಮುಂತಾದವುಗಳ ಮನ್ನಾವಾಡುವಿಕೆ/ ತೊಡೆದುಹಾಕುವಿಕೆ ಮಾಡಿದ್ದಾರೆಯೇ, ಹಾಗೆ ಇದ್ದ ಪಕ್ಷದಲ್ಲಿ ಆರ್ಥಿಕ ಪರಿಣಾಮವನ್ನು ವರದಿಮಾಡುವುದು.	ನಮಗೆ ತಿಳಿಸಲಾದಂತೆ ಇಂತಹ ಪ್ರಕರಣಗಳು ಯಾವುದೂ ಇಲ್ಲ.
3	ಕೇಂದ್ರ/ರಾಜ್ಯ ಸರ್ಕಾರಗಳ ಅಭಿಕರಣಗಳಿಂದ ನಿರ್ದಿಷ್ಟ ಯೋಜನೆಗಳಿಗೆಂದು ಪಡೆದ/ಪಡೆಯಬೇಕಿರುವ ನಿಧಿಗಳನ್ನು ಷರತ್ತು ಮತ್ತು ನಿಬಂಧನೆಗಳಿಗೆ ಅನುಗುಣವಾಗಿ ಬಳಸಲಾಗಿದೆಯೇ? ಪಥಾಂತರಗಳ ಪ್ರಕರಣಗಳು ಇದ್ದಲ್ಲಿ ಪಟ್ಟಿಮಾಡಿ.	ನಿರ್ದಿಷ್ಟ ಯೋಜನೆಗಳ ಅಡಿ ಪಡೆದ ಮೊತ್ತಗಳ ದೃಢೀಕೃತ ತಃಖ್ತೆಗಳನ್ನು ನಾವು ಪರಿಶೀಲಿಸಿದ್ದೇವೆ. ತಃಖ್ತೆಗಳು ಮತ್ತು ನಮ್ಮ ಸಾಮಾನ್ಯ ತನಿಖೆಯ ಆಧಾರದಲ್ಲಿ ಷರತ್ತು ಮತ್ತು ನಿಬಂಧನೆಗಳನ್ನು ಪಾಲಿಸಲಾಗಿದೆ. ಆದರೆ, ಸಾಲವೊಂದನ್ನು ಪಿಎಫ್‌ಸಿ ಯಿಂದ ಅನುದಾನಕ್ಕೆ (ಆರ್‌ಎಪಿಡಿಆರ್‌ಪಿ – ಭಾಗ ಎ) ಪರಿವರ್ತಿಸುವುದಕ್ಕೆ ಸಂಬಂಧಿಸಿದಂತೆ, ಆ ಬಗ್ಗೆ ಯಾವುದೇ ದಾಖಲೆಯ ಸಾಕ್ಷಿ ಇರುವುದಿಲ್ಲ. ಆದರೆ, ಕಂಪನಿಯು ವರ್ಷದ ಹಣಕಾಸು ಕೂಡಿಸುವಿಕೆ ವೆಚ್ಚವನ್ನು ಲೆಕ್ಕದಲ್ಲಿ ತೋರಿಸಿಲ್ಲ ಮತ್ತು ಮುಂಚಿನ ವರ್ಷಗಳ ಬಡ್ಡಿ ಖರ್ಚುಗಳನ್ನು ವಿಯರ್ಯಯಗೊಳಿಸಿದೆ (ನಮ್ಮ ಲೆಕ್ಕ ಪರಿಶೋಧನಾ ವರದಿಯ ಕಂಡಿಕೆ 6 ನೋಡಿ)

ಹೆಚ್ಚುವರಿ ಕಂಪನಿ ನಿರ್ದಿಷ್ಟ ನಿರ್ದೇಶನಗಳು :

ಕ್ರ.ಸಂ. ನಿರ್ದೇಶನಗಳು	ಉತ್ತರಗಳು	ಇಂಡ್ ಎಎಸ್ ಹಣಕಾಸು ತಃಖ್ತೆಗಳ ಮೇಲಿನ ಪರಿಣಾಮ
ಎ. ಕಂಪನಿಯಲ್ಲಿನ ಬಿಲ್ಲಿಂಗ್ ಮತ್ತು ಆದಾಯ ಸಂಗ್ರಹ ವ್ಯವಸ್ಥೆಯ ಪರಿಣಾಮಕಾರಿತ್ವದ ವರದಿ. ಎಲ್ಲ ಗ್ರಾಹಕರಿಗೂ ತಿದ್ದಲು ಸಾಧ್ಯವಿರದ ಮೀಟರ್‌ಗಳನ್ನು ಅಳವಡಿಸಲಾಗಿದೆಯೇ? ಇಲ್ಲದಿದ್ದಲ್ಲಿ, ಬಿಲ್ಲಿಂಗ್ ಪ್ರಕ್ರಿಯೆಯಲ್ಲಿ ನಿಖರತೆಯನ್ನು ಹೇಗೆ ಸಾಧಿಸಲಾಗಿದೆ ಎಂದು ಪರಿಶೀಲಿಸಿ.	ಪ್ರಸ್ತುತ ಜೆಸ್ಕಾಂ ಉದ್ದಕ್ಕೂ ಬಿಲ್ಲಿಂಗ್, ಸಂಗ್ರಹ ಮತ್ತು ಗ್ರಾಹಕ ಲೆಡ್ಜರ್ ನರ್ವಹಣೆಗೆಂದು ಮೂರು ತಂತ್ರಾಂಶಗಳನ್ನು ಅನುಷ್ಠಾನಗೊಳಿಸಲಾಗಿದೆ.ಎ. ಕೇಂದ್ರ ಸರ್ಕಾರವು ವಿದ್ಯುತ್ ಸಚಿವಾಲಯ ಮತ್ತು ಪಿಎಫ್‌ಸಿ ಮೂಲಕ ನಗದಿಪಡಿಸಿದ ನಿರ್ದಿಷ್ಟತೆಗಳ ಅನುಸಾರ ಆರ್-ಅಪಿಡಿಆರ್‌ಪಿ ಅಡಿ ಅಭಿವೃದ್ಧಿಪಡಿಸಿ ಅನುಷ್ಠಾನಗೊಳಿಸಲಾಗಿರುವ ತಂತ್ರಾಂಶ. ಅನುಷ್ಠಾನಗೊಳಿಸುವಾಗ ಪ್ರಾರಂಭದ ಹಂತಗಳಲ್ಲಿ ಸಮಸ್ಯೆಗಳಿದ್ದರೂ ಈ ತಂತ್ರಾಂಶವನ್ನು ಎಲ್ಲ ಮಾಡ್ಯೂಲ್‌ಗಳೊಂದಿಗೆ 21 ಪಟ್ಟಣಗಳನ್ನು ವ್ಯಾಪಿಸುವಂತೆ ಜೆಸ್ಕಾಂ ನ ನಗರ ಪ್ರದೇಶಗಳಲ್ಲಿ ಬಳಸಲಾಗಿದೆ.ಬಿ. ಉಳಿದ ಪ್ರದೇಶಗಳಲ್ಲಿ ಮೆ. ಎನ್. ಸಾಫ್ಟ್ ಲಿಮಿಟೆಡ್ ಮತ್ತು ಬಿಸಿಐಟಿ ಲಿಮಿಟೆಡ್ ಅಭಿವೃದ್ಧಿಪಡಿಸಿರುವ ತಂತ್ರಾಂಶವನ್ನು ಅನುಷ್ಠಾನಗೊಳಿಸಿದ್ದು ಇದರ ಬಳಕೆ ಬಿಲ್ಲಿಂಗ್, ಸಂಗ್ರಣ ಮತ್ತು ಲೆಡ್ಜರ್ ಖಾತೆ ನರ್ವಹಣೆಗೆ ಸೀಮಿತವಾಗಿದೆ.ಐಪಿಡಿಎಸ್ ಮತ್ತು ಡಿಡಿಯುಜಿಜೆವೈ ಕಾರ್ಯಕ್ರಮದ ಅಡಿ ಜೆಸ್ಕಾಂ ನಗರ ಪ್ರದೇಶಗಳಲ್ಲಿ ತಿದ್ದಲಾಗದ ಮೀಟರ್‌ಗಳನ್ನು ಅಳವಡಿಸಲಾಗುತ್ತಿದ್ದು ಇಂದಿನವರೆಗೆ ಕಾಮಗಾರಿ ಪೂರ್ಣಗೊಂಡಿರುವುದಿಲ್ಲ.ಗ್ರಾಹಕ ಬಿಲ್ಲಿಂಗ್, ಸಂಗ್ರಹಣ ಮತ್ತು ಲೆಡ್ಜರ್ ಖಾತೆ ನರ್ವಹಣೆಗೆ ಸಂಬಂಧಿಸಿದಂತೆ ಲೆಕ್ಕಪರಿಶೋಧಕರ ವರದಿಯ "ಇತರ ವಿಷಯಗಳು" ಕಂಡಿಕೆಯ ಕ್ರ.ಸಂ. 4, 5, 10 & 11 ನೋಡುವುದು.	ತಿಳಿಯಲು ಸಾಧ್ಯವಾಗಿಲ್ಲ
ಬಿ. ಉತ್ಪಾದನೆ, ಹಂಚಿಕೆ ಮತ್ತು ಪ್ರಸರಣ ಕಂಪೆನಿಗಳ ಮಧ್ಯೆ ಬರಬೇಕಾದವು ಮತ್ತು ಸಂದಾಯವಾಗಬೇಕಾದವುಗಳ ಹೊಂದಾಣಿಕೆ ಆಗಿದೆಯೇ? ವ್ಯತ್ಯಾಸಗಳಿಗೆ ಕಾರಣಗಳನ್ನು ಪರಿಶೀಲಿಸುವುದು.	ಹಂಚಿಕೆ ಮತ್ತು ಪ್ರಸರಣ ಕಂಪೆನಿಗಳ ಮಧ್ಯೆ ಬರಬೇಕಾದವು ಮತ್ತು ಸಂದಾಯವಾಗ ಬೇಕಾದವುಗಳ ಹೊಂದಾಣಿಕೆಯು ಪ್ರಕ್ರಿಯೆ ಪ್ರಗತಿಯಲ್ಲಿದೆ ಎಂದು ತಿಳಿಸಲಾಗಿದೆ. ಆದರೆ, ಪ್ರಗತಿಗೆ ಸಂಬಂಧಿಸಿದಂತೆ ಯಾವ ದಾಖಲೆಗಳೂ ನಮ್ಮ ಪರಿಶೀಲನೆಗೆ ಲಭ್ಯವಿರಲಿಲ್ಲ.ಈ ಸಂಬಂಧ ನಮ್ಮ ಲೆಕ್ಕಪರಿಶೋಧನಾ ವರದಿಯು "ಪರಿಶೀಲನಾತ್ಮಕ ಅಭಿಪ್ರಾಯದ ಆಧಾರ" ಕಂಡಿಕೆಯ ಕ್ರ. ಸಂಖ್ಯೆ 16ರತ್ತ ಗಮನಸೆಳೆಯುತ್ತೇವೆ.	
ಸಿ. ರಾಜ್ಯ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗ (ಎಸ್‌ಇಆರ್‌ಸಿ) ಅಂಗೀಕರಿಸಿರುವ ಇಂಧನ ಮತ್ತು ವಿದ್ಯುತ್ ಖರೀದಿ ಹೊಂದಾಣಿಕೆ ವೆಚ್ಚವನ್ನು (ಎಫ್‌ಪಿಪಿಸಿಎ) ಕಂಪನಿ ವಸೂಲಿಮಾಡಿ ಲೆಕ್ಕಕ್ಕೆ ತೆಗೆದುಕೊಂಡಿದೆಯೇ?	ಇಂಧನ ಹೆಚ್ಚಳ ಹೊಂದಾಣಿಕೆಯನ್ನು ರಾಜ್ಯ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗ ಅಂಗೀಕರಿಸಿದೆಯೆಂದು ಹಾಗೂ ಅಂಗೀಕಾರದ ಅವಧಿಯ ಮಟ್ಟಿಗೆ ಗ್ರಾಹಕರ ಬಿಲ್ಲುಗಳಿಗೆ ಅದನ್ನೇ ಪರಿಗಣಿಸಲಾಗಿದೆ ಮತ್ತು ಅದನ್ನು ಆದಾಯ ಎಂದು ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ ಎಂದು	

	ತಿಳಿಸಲಾಗಿದೆ. ವಿವರಗಳು ಕೆಳಗಿನಂತಿವೆ:1/4/2018 ರಿಂದ 30/06/2018ರ ವರೆಗಿನ ಅವಧಿ – ಎಫ್ಎಸಿ "0" ಪೈಸೆ (ದಿನಾಂಕ 02/04/2018ರ ಆದೇಶ)1/7/2018 ರಿಂದ 30/09/2018ರ ವರೆಗಿನ ಅವಧಿ – ಎಫ್ಎಸಿ 4 ಪೈಸೆಯಷ್ಟು ಹೆಚ್ಚಳ (ದಿನಾಂಕ 28/06/2018ರ ಆದೇಶ)1/10/2018 ರಿಂದ 31/12/2018ರ ವರೆಗಿನ ಅವಧಿ – ಎಫ್ಎಸಿ 1 ಪೈಸೆಯಷ್ಟು ಹೆಚ್ಚಳ (ದಿನಾಂಕ 14/09/2018ರ ಆದೇಶ)1/01/2019 ರಿಂದ 31/03/2019ರ ವರೆಗಿನ ಅವಧಿ – ಎಫ್ಎಸಿ "0" ಪೈಸೆ (ದಿನಾಂಕ 18/12/2018ರ ಆದೇಶ)	
ಡಿ. ವರ್ಷದಲ್ಲಿ ಎಷ್ಟು ಶುಲ್ಕ ಹಿಂಪಡೆಯುವಿಕೆ ಸಹಾಯಧನಗಳಿಗೆ ಅವಕಾಶ ನೀಡಲಾಗಿದೆ ಮತ್ತು ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ. ಇದನ್ನು ರಾಜ್ಯ ಸರ್ಕಾರವು ನಿಯುತವಾಗಿ ಮರುಪಾವತಿಸುತ್ತಿದೆಯೇ?	ವರ್ಷದಲ್ಲಿ ಯಾವುದೇ ಶುಲ್ಕ ಹಿಂಪಡೆಯುವಿಕೆ ಸಹಾಯಧನಗಳನ್ನು ಪಡೆದುಕೊಂಡಿರುವುದಿಲ್ಲ ಎಂದು ತಿಳಿಸಲಾಗಿದೆ.	ತಿಳಿಯಲು ಸಾಧ್ಯವಾಗಿಲ್ಲ
ಇ. ಲೆಕ್ಕಪರಿಶೋಧನೆಯ ವ್ಯಾಪ್ತಿಗೆ ಬರುವ ಕಾರ್ಯಾಚರಣೆಗಳು ಅಥವಾ ಅವುಗಳ ಭಾಗವು ಗಣಕೀಕೃತವಾಗಿದ್ದರೆ ಕಂಪೆನಯಲ್ಲಿ ದತ್ತಾಂಶದ ಎಷ್ಟು ಭಾಗ ವಿದ್ಯುನ್ಮಾನ ರೂಪದಲ್ಲಿದೆ, ಲೆಕ್ಕಪ್ರಕ್ರಿಯೆ, ಮಾರಾಟ ಸಿಬ್ಬಂದಿ ಮಾಹಿತಿ, ವೇತನ ಪಟ್ಟಿ, ದಾಸ್ತಾನು ಮುಂತಾದವುಗಳ ಪೈಕಿ ಯಾವ ಕ್ಷೇತ್ರಗಳು ಗಣಕೀಕೃತವಾಗಿವೆ ಹಾಗೂ ದತ್ತಾಂಶ/ತಂತ್ರಾಂಶ/ಯಂತ್ರಾಂಶಗಳಿಗೆ ಸಂಬಂಧಿಸಿದಂತೆ ಸೂಕ್ತ ಭದ್ರತಾ ಕಾರ್ಯನೀತಿಯನ್ನು ಕಂಪೆನ ರೂಪಿಸಿದೆಯೇ ಎಂದು ಅಂದಾಜುಮಾಡಿ ವರದಿಮಾಡುವುದು.	➢ಕಂಪೆನಯು ಆದಾಯ ಬಿಲ್ಲಿಂಗ್, ಸಂಗ್ರಹಣ ಮತ್ತು ಗ್ರಾಹಕ ಲೆಡ್ಜರ್ ನರ್ವಹಣೆಯ ಕ್ಷೇತ್ರಗಳನ್ನು ಮಾತ್ರ ಗಣಕೀತೃತಗೊಳಿಸಿದೆ. ಆದರೆ, ದತ್ತಾಂಶ, ತಂತ್ರಾಂಶ ಮತ್ತು ಯಂತ್ರಾಂಶಗಳಿಗೆ ಸಂಬಂಧಿಸಿದಂತೆ ಕಂಪೆನ ಸೂಕ್ತ ಭದ್ರತಾ ಕಾರ್ಯನೀತಿಯನ್ನು ಹೊಂದಿಲ್ಲ.	
	➢ ಈ ಕ್ಷೇತ್ರದಲ್ಲಿ ಪ್ರಸ್ತುತ ಹಣಕಾಸು ವರ್ಷದಲ್ಲಿ ಯಾವುದೇ ನಿರ್ದಿಷ್ಟ ಐಎಸ್ ಲೆಕ್ಕಪರಿಶೋಧನೆಯನ್ನು ಕೈಗೊಂಡಿರುವುದಿಲ್ಲ ಎಂದು ತಿಳಿದುಬಂದಿದೆ.	ತಿಳಿಯಲು ಸಾಧ್ಯವಾಗಿಲ್ಲ

ಮೆ. ಪಿ. ಜಿ. ಭಾಗವತ್ ಪರವಾಗಿ
ಸನದಿ ಲೆಕ್ಕಿಗರು, ಎಫ್ಆರ್ಎನ್:101118ಡಬ್ಲ್ಯೂ

ಎಸ್. ಪಿ. ಪಾಗದ್
ಪಾಲುದಾರರು,
ಸದಸ್ಯತ್ವ ಸಂಖ್ಯೆ : 206124
ಯುಡಿಐಎನ್: 1020612 ಎಎಎಎಎಫ್ ಓ4933
ಗುಲ್ಬರ್ಗ, ದಿನಾಂಕ 11 ನವಂಬರ್ 2019.

ಭಾರತೀಯ ಲೆಕ್ಕ ಮತ್ತು ಲೆಕ್ಕಪರಿಶೋಧನಾ ಇಲಾಖೆ

ಪ್ರಧಾನ ಮಹಾಲೇಖಾಪಾಲರ ಕಛೇರಿ (ಇ&ಆರ್‌ಎಸ್‌ಎ), ಕರ್ನಾಟಕ

ನೋಂದಾಯಿತ ಅಂಚೆ ಮೂಲಕ

ಗೋಪ್ಯ

ಸಂ. ಎಜಿ(ಇ&ಆರ್‌ಎಸ್‌ಎ)/ಇಎಸ್-ಖಖ/ಪಿಎಸ್/2019-20/ಎಫ್-234 ದಿ. 14.11.2019

ಇವರಿಗೆ,
ವ್ಯವಸ್ಥಾಪಕ ನಿರ್ದೇಶಕರು,
ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ,
ಕಾರ್ಪೊರೇಟ್ ಕಛೇರಿ,
ಗುಲ್ಬರ್ಗಾ ಮುಖ್ಯ ರಸ್ತೆ,
ಗುಲ್ಬರ್ಗಾ -585102.

ಮಾನ್ಯರೆ,

ವಿಷಯ : 31 ಮಾರ್ಚ್ 2019ರಂದು ಕೊನೆಗೊಂಡ ವರ್ಷಕ್ಕಾಗಿನ ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ, ಗುಲ್ಬರ್ಗಾ, ಸಂಸ್ಥೆಯ ಲೆಕ್ಕಪತ್ರಗಳ ಮೇಲೆ ಕಂಪನಿ ಕಾಯ್ದೆ, 2013ರ ಪರಿಚ್ಛೇದ 143(6)(ಬಿ) ಅಡಿ ಭಾರತದ ನಿಯಂತ್ರಕರು ಮತ್ತು ಮಹಾಲೇಖಾಪಾಲರ ಟೀಕೆಗಳು.

ನಾನು ಈ ಮೂಲಕ 31 ಮಾರ್ಚ್ 2019ರಂದು ಕೊನೆಗೊಂಡ ವರ್ಷಕ್ಕಾಗಿನ ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ, ಗುಲ್ಬರ್ಗಾ ಸಂಸ್ಥೆಯ ಲೆಕ್ಕಪತ್ರಗಳ ಮೇಲೆ ಕಂಪೆನಿ ಕಾಯ್ದೆ, 2013ರ ಪರಿಚ್ಛೇದ 143(6)(ಬಿ) ಅಡಿ ನನ್ನ ಟೀಕೆಗಳನ್ನು ಮಂಡಿಸುತ್ತಿದ್ದೇನೆ.

2. ದೃಢೀಕೃತ ಲೆಕ್ಕಪತ್ರಗಳು, ಸಂಬಂಧಿತ ಲೆಕ್ಕಪರಿಶೋಧಕರ ವರದಿಗಳು ಮತ್ತು ಭಾರತದ ನಿಯಂತ್ರಕರು ಮತ್ತು ಮಹಾಲೇಖಾಪಾಲರ ಟೀಕೆಗಳನ್ನು ಅಳವಡಿಸಿಕೊಂಡ ವಾರ್ಷಿಕ ಸಾಮಾನ್ಯ ಸಭೆಯ ನಡವಳಿಕೆಗಳ ಪ್ರತಿಯನ್ನು ವಾರ್ಷಿಕ ಸಾಮಾನ್ಯ ಸಭೆ ಮುಕ್ತಾಯಗೊಂಡ ಒಡನೆಯೇ ಈ ಕಛೇರಿಗೆ ಕಳುಹಿಸುವುದು. ವಾರ್ಷಿಕ ಲೆಕ್ಕಪತ್ರಗಳ ಆರು ಮುದ್ರಿತ ಪ್ರತಿಗಳನ್ನೂ ಸಹ ಈ ಕಛೇರಿಗೆ ಕಳುಹಿಸುವುದು.

3. ಈ ಪತ್ರ ಮತ್ತು ಲಗತ್ತುಗಳ ಸ್ವೀಕೃತಿಯ ಬಗ್ಗೆ ತಿಳಿಸುವುದು.

ತಮ್ಮ ವಿಶ್ವಾಸಿ

(ಅನುಪ್ ಫ್ರಾನ್ಸಿಸ್ ಡುಂಗ್‌ಡುಂಗ್)

ಪ್ರಧಾನ ಮಹಾಲೇಖಾಪಾಲರು
(ಅರ್ಥ ಮತ್ತು ಕಂದಾಯ ವಲಯ ಲೆಕ್ಕಪರಿಶೋಧನೆ)
ಕರ್ನಾಟಕ, ಬೆಂಗಳೂರು

31 ಮಾರ್ಚ್ 2019ರಂದು ಕೊನೆಗೊಂಡ ವರ್ಷಕ್ಕಾಗಿನ ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ, ಗುಲ್ಬರ್ಗಾ – ಈ ಸಂಸ್ಥೆಯ ಹಣಕಾಸು ಪತ್ರಗಳ ಮೇಲೆ ಕಂಪನಿ ಕಾಯ್ದೆ, 2013ರ ಪರಿಚ್ಛೇದ 143(6)(ಬಿ) ಅಡಿಭಾರತದ ನಿಯಂತ್ರಕರು ಮತ್ತು ಮಹಾಲೇಖಾಪಾಲರ ಟೀಕೆಗಳು.

ಕಂಪೆನಿ ಕಾಯ್ದೆ 2013ರ ಅಡಿ ನಿಗದಿಪಡಿಸಲಾದ ಆರ್ಥಿಕ ವರದಿಗಾರಿಕೆ ಚೌಕಟ್ಟಿನ ಅನುಸಾರ 31 ಮಾರ್ಚ್ 2019ರಂದು ಕೊನೆಗೊಂಡ ವರ್ಷಕ್ಕಾಗಿನ ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ, ಗುಲ್ಬರ್ಗಾ ಸಂಸ್ಥೆಯ ಹಣಕಾಸು ವಿವರಣಾ ಪಟ್ಟಿಗಳ ಸಿದ್ಧಪಡಿಸುವಿಕೆ ಕಂಪೆನಿಯ ಆಡಳಿತ ವರ್ಗದ ಜವಾಬ್ದಾರಿಯಾಗಿದೆ. ಕಾಯ್ದೆಯ ಪರಿಚ್ಛೇದ 139(5) ರ ಅಡಿ ಭಾರತದ ನಿಯಂತ್ರಕರು ಮತ್ತು ಮಹಾಲೇಖಾಪಾಲರು ನಿಯಮಿಸುವ ಶಾಸನಬದ್ಧ ಲೆಕ್ಕಪರಿಶೋಧಕರು ಕಾಯ್ದೆಯ ಪರಿಚ್ಛೇದ 143(10)ರ ಅಡಿ ನಿಗದಿಪಡಿಸಲಾಗಿರುವ ಲೆಕ್ಕಪರಿಶೋಧನಾ ಪ್ರಮಾಣಗಳ ಅನುಸಾರ ನಡೆಸಿದ ಸ್ವತಂತ್ರ ಲೆಕ್ಕಪರಿಶೋಧನೆಯ ಬೆಳಕಿನಲ್ಲಿ ಈ ಹಣಕಾಸು ತಃಖ್ತೆಗಳ ಮೇಲೆ ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಜವಾಬ್ದಾರಿಯನ್ನು ಕಾಯ್ದೆಯ ಪರಿಚ್ಛೇದ 143 ರ ಅಡಿ ಹೊಂದಿರುತ್ತಾರೆ. ಶಾಸನಬದ್ಧ ಲೆಕ್ಕಪರಿಶೋಧಕರು, ತಮ್ಮ ದಿನಾಂಕ 11.11.2019ರ ಪರಿಷ್ಕೃತ ಲೆಕ್ಕಪರಿಶೋಧನಾ ವರದಿಯಲ್ಲಿ ತಾವು ಮೇಲೆ ತಿಳಿಸಿರುವಂತೆ ಮಾಡಿರುವುದಾಗಿ ವರದಿಮಾಡಿರುತ್ತಾರೆ ಹಾಗೂ ಈ ವರದಿಯು ಅವರ ದಿನಾಂಕ 30.08.2019ರ ವರದಿಯನ್ನು ಗೌಣವಾಗಿಸುತ್ತದೆ.

ಕಂಪನಿ ಕಾಯ್ದೆಯ ಪರಿಚ್ಛೇದ 143(6)(ಎ) ಅನ್ವಯ ನಾನು, ಭಾರತದ ನಿಯಂತ್ರಕರು ಮತ್ತು ಮಹಾಲೇಖಾಪಾಲರ ಪರವಾಗಿ 31 ಮಾರ್ಚ್ 2019ರಂದು ಕೊನೆಗೊಂಡ ವರ್ಷಕ್ಕಾಗಿನ ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪೆನಿ ನಿಯಮಿತ, ಗುಲ್ಬರ್ಗಾ ಸಂಸ್ಥೆಯ ಹಣಕಾಸು ವಿವರಣಾ ತಃಖ್ತೆಗಳ ಪೂರಕ ಲೆಕ್ಕಪರಿಶೋಧನೆಯನ್ನು ಕೈಗೊಂಡಿರುತ್ತೇನೆ. ಈ ಪೂರಕ ಲೆಕ್ಕಪರಿಶೋಧನೆಯನ್ನು ಸ್ವತಂತ್ರವಾಗಿ ಮತ್ತು ಶಾಸನಬದ್ಧ ಲೆಕ್ಕಪರಿಶೋಧಕರು ಕೆಲಸಮಾಡಿದ ಕಾಗದಪತ್ರಗಳಿಂದ ದೂರವಾಗಿ ಕೈಗೊಳ್ಳಲಾಗಿದ್ದು ಶಾಸನಬದ್ಧ ಲೆಕ್ಕಪರಿಶೋಧಕರ ಮತ್ತು ಕಂಪೆನಿ ಸಿಬ್ಬಂದಿಯ ವಿಚಾರಣೆಗೆ ಮತ್ತು ಕೆಲವು ಲೆಕ್ಕದಾಖಲೆಗಳ ಆಯ್ದ ಪರಿಶೀಲನೆಗೆ ಇದು ಮೂಲತಃ ಸೀಮಿತವಾಗಿದೆ.

ಲೆಕ್ಕಪರಿಶೋಧಕರ ವರದಿಯಲ್ಲಿ ಮಾಡಲಾದ ಪರಿಷ್ಕರಣೆಗಳ ಹಿನ್ನೆಲೆಯಲ್ಲಿ, ಪೂರಕ ಲೆಕ್ಕಪರಿಶೋಧನೆಯ ಸಂದರ್ಭದಲ್ಲಿ ಉದ್ಭವಿಸಿದ ನನ್ನ ಕೆಲವು ಲೆಕ್ಕಪರಿಶೋಧನಾ ಪರಿಶೀಲನೆಗಳನ್ನು ಕಾರ್ಯಗತಗೊಳಿಸುವ ನಿಟ್ಟಿನಲ್ಲಿ, ಕಂಪನಿ ಕಾಯ್ದೆಯ ಪರಿಚ್ಛೇದ 143(6)(ಬಿ) ರ ಅಡಿ ಶಾಸನಬದ್ಧ ಲೆಕ್ಕಪರಿಶೋಧಕರ ವರದಿಗೆ ಟೀಕೆಗಳಿಗಾಗಲೀ ಪೂರಕಾಂಶಗಳಿಗಾಗಲೀ ಇರುವುದಿಲ್ಲ.

ಭಾರತದ ನಿಯಂತ್ರಕರು ಮತ್ತು ಮಹಾಲೇಖಾಪಾಲರ ಪರವಾಗಿ
(ಅನುಪ್ ಫ್ರಾನ್ಸಿಸ್ ಡುಂಗ್‌ಡುಂಗ್)

ಪ್ರಧಾನ ಮಹಾಲೇಖಾಪಾಲರು
(ಅರ್ಥ ಮತ್ತು ಕಂದಾಯ ವಲಯ ಲೆಕ್ಕಪರಿಶೋಧನೆ)
ಕರ್ನಾಟಕ, ಬೆಂಗಳೂರು

ಬೆಂಗಳೂರು
ದಿ. 14.11.2019

ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಸಿಐಎನ್ ಸಂಖ್ಯೆ: ಯು0401ಕೆಎ2002ಎಸ್‌ಜಿಸಿ030436)

ನೋಂದಾಯಿತ ಕಛೇರಿ : ಸ್ಟೇಶನ್ ರಸ್ತೆ ಗುಲ್ಬರ್ಗಾ – 585102, ಕರ್ನಾಟಕ – 585 102

31 ಮಾರ್ಚ್ 2018ರಂದು ಇದ್ದಂತೆ ಸಂತುಲನ ಪಟ್ಟಿ

(Part - I)

	ವಿವರಗಳು	ಟಿಪ್ಪಣಿ ಸಂಖ್ಯೆ	31 ಮಾರ್ಚ್ 2019ರಂದು ಇದ್ದಂತೆ	31 ಮಾರ್ಚ್ 2018ರಂದು ಇದ್ದಂತೆ	31 ಮಾರ್ಚ್ 2017ರಂದು ಇದ್ದಂತೆ
I.	ಆಸ್ತಿಗಳು		₹	₹	₹
ಎ	ಚಾಲ್ತಿಯಲ್ಲದ ಆಸ್ತಿಗಳು				
	(ಎ) ಸ್ವತ್ತು, ಸ್ಥಾವರ ಮತ್ತು ಸಲಕರಣೆ	3	37,234,529,517	35,666,866,600	30,167,072,538
	(ಬಿ) ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ	4	3,003,207,285	847,998,245	2,686,476,676
	(ಸಿ) ಅಭಿವೃದ್ಧಿಗೊಳ್ಳುತ್ತಿರುವ ಗ್ರಾಹ್ಯವಲ್ಲದ ಆಸ್ತಿಗಳು	5	74,923,008	74,017,653	31,320,073
	(ಇ) ಹಣಕಾಸು ಆಸ್ತಿಗಳು				
	(1) ಹೂಡಿಕೆಗಳು	6	25,100,000	25,100,000	25,100,000
	(2) ಸಾಲಗಳು		164,154,856	171,145,803	176,244,352
	(ಎಫ್)ಮುಂದೂಡಲಾದ ತೆರಿಗೆ ಆಸ್ತಿಗಳು (ನಿವ್ವಳ)	7	-		- -
	(ಜಿ) ಇತರ ಚಾಲ್ತಿಯಲ್ಲದ ಆಸ್ತಿಗಳು	8	3,364,865,611	1,856,397,094	1,948,104,611
	ಒಟ್ಟು ಚಾಲ್ತಿಯಲ್ಲದ ಆಸ್ತಿಗಳು		**43,866,780,277**	**38,641,525,395**	**35,034,318,250**
ಬಿ	ಚಾಲ್ತಿ ಆಸ್ತಿಗಳು				
	(a) ದಾಸ್ತಾನು	9	2,018,520,333	1,827,306,659	1,490,976,937
	(b) ಹಣಕಾಸು ಆಸ್ತಿಗಳು				
	(i) ಬಿಲ್ ಮಾಡದ ಆದಾಯ	10	2,580,028,138	2,372,690,170	1,859,905,241
	(ii) ವ್ಯಾಪಾರೀ ವಸೂಲಾಗಬೇಕಾದವು	11	10,148,565,707	2,37,24,88,115	2,08,04,58,565
	(iii) ನಗದು ಮತ್ತು ನಗದು ಸಮಾನಗಳು	12	1,133,813,658	632,077,227	1,037,930,708
	(iv) ಇತರ ಹಣಕಾಸು ಆಸ್ತಿಗಳು	13	403,597,192	408,058,125	1,042,527,857
	(v) ಮೇಲಿನ (iii)ಹೊರತು ಪಡಿಸಿ ಇತರ ಬ್ಯಾಂಕ ಶಿಲ್ಕುಗಳು		22,566,299,682	14,427,710,179	15,551,829,654
	(c) ಇತರ ಚಾಲ್ತಿ ಆಸ್ತಿಗಳು	14	37,334,800	36,994,236	21,049,513
	ಒಟ್ಟು ಚಾಲ್ತಿ ಆಸ್ತಿಗಳು		**38,888,159,510**	**27,459,747,087**	**36,957,471,889**
ಸಿ	**ನಿಬಂಧನಾ ಮುಂದೂಡಿಕ ಖಾತೆಗೆ ಮುನ್ನ ಒಟ್ಟು ಆಸ್ತಿಗಳು**		**82,754,939,788**	**66,101,272,482**	**71,765,690,139**
	ನಿಬಂಧನಾ ಮುಂದೂಡಿಕ ಖಾತೆ – ಆಸ್ತಿಗಳು	15	11,388,382,156	8,101,129,873	5,773,900,000
	ಒಟ್ಟು ಆಸ್ತಿಗಳು		**94,143,321,944**	**74,202,402,355**	**77,765,690,139**
	ಈಕ್ವಿಟಿಗಳು ಮತ್ತು ಹೊಣೆಗಳು ಈಕ್ವಿಟಿಗಳು				
II	**ಪೇರುದಾರರ ನಿಧಿಗಳು**				
ಎ	(a) ಪೇರು ಬಂಡವಾಳ	16	11,149,561,040	11,149,561,040	3,051,361,040
	(b) ಇತರ ಈಕ್ವಿಟಿ	17	(700,155,537)	(5,504,823,092)	(2,072,693,122)
	ಒಟ್ಟು ಈಕ್ವಿಟಿ		**10,449,405,503**	**5,644,737,948**	**978,667,918**
ಬಿ	**ಹೊಣೆಗಳು ಚಾಲ್ತಿಯಲ್ಲದ ಹೊಣೆಗಳು**				
	(a) ಹಣಕಾಸು ಹೊಣೆಗಳು				
	(i) ಸಾಲಗಳು	18	8,218,432,306	6,336,547,052	6,981,831,558
	(ii) ಇತರ ಹಣಕಾಸು ಹೊಣೆಗಳು	19	5,540,461,737	5,148,193,912	4,509,084,587
	(b) ಹವಣಿಕೆಗಳು	20	711,211,843	498,924,163	433,863,388
	(c) ಮುಂದೂಡಲಾದ ಆದಾಯ	21	9,533,397,775	7,522,072,199	5,221,799,671
	(c) ಮುಂದೂಡಲಾದ ತೆರಿಗೆ ಹೊಣೆಗಳು (ನಿವ್ವಳ)	7	1,982,736,252	1,982,736,252	1,982,736,252
	ಒಟ್ಟು ಚಾಲ್ತಿಯಲ್ಲದ ಹೊಣೆಗಳು		**26,497,373,537**	**21,480,887,326**	**19,075,017,840**

	ವಿವರಗಳು	ಟಿಪ್ಪಣಿ ಸಂಖ್ಯೆ	31 ಮಾರ್ಚ್ 2019ರಂದು ಇದ್ದಂತೆ	31 ಮಾರ್ಚ್ 2018ರಂದು ಇದ್ದಂತೆ	31 ಮಾರ್ಚ್ 2017ರಂದು ಇದ್ದಂತೆ
	ಚಾಲ್ತಿ ಹೊಣೆಗಳು		₹	₹	₹
(ಎ)	ಹಣಕಾಸು ಹೊಣೆಗಳು				
	(i) ಸಾಲಗಳು	23	63,95,00,331	74,39,69,617	83,59,35,981
	(ii) ವ್ಯಾಪಾರೀ ವಸೂಲಾಗಬೇಕಾದವು				
	(i) ಅತಿ ಸಣ್ಣ ಮತ್ತು ಸಣ್ಣ ಉದ್ಯಮಗಳಿಗೆ ಒಟ್ಟು ಬಾಕಿಗಳು	24	-	-	-
	(ii) ಅತಿ ಸಣ್ಣ ಮತ್ತು ಸಣ್ಣ ಉದ್ಯಮಗಳಲ್ಲದ ಇತರ ಸಾಲಗಾರರಿಗೆ ಒಟ್ಟು ಬಾಕಿಗಳು	-	49,46,24,95,173	41,34,51,73,942	44,14,82,47,007
	(iii)ಇತರ ಹಣಕಾಸು ಹೊಣೆಗಳು	25	6,65,32,80,519	4,98,40,07,141	3,98,10,80,406
(ಬಿ)	ಹವಣಿಕೆಗಳು	26	12,14,72,928	9,17,65,577	7,01,66,116
(ಸಿ)	ಇತರ ಚಾಲ್ತಿ ಹೊಣೆಗಳು	27	31,97,93,953	(8,81,39,196)	42,68,23,290
(ಡಿ)	ಮುಂದೂಡಲಾದ ಆದಾಯ	21	-	-	-
(ಇ)	ಚಾಲ್ತಿ ತೆರಿಗೆ ಹೊಣೆಗಳು (ನಿವ್ವಳ)	28	-	-	-
(ಡಿ)			**57,19,65,42,904**	**47,07,67,77,081**	**49,46,22,52,800**
	ಒಟ್ಟು ಈಕ್ವಿಟಿ ಮತ್ತು ಹೊಣೆಗಳು		**94,14,33,21,944**	**74,20,24,02,356**	**69,51,59,38,558**

ನಮ್ಮ ಇದೇ ದಿನಾಂಕದ ವರದಿಯ ಮೇರೆಗೆ

ಮೆ. ಪಿ ಜಿ ಭಾಗವತ್ ಪರವಾಗಿ

ನಿರ್ದೇಶಕ ಮಂಡಳಿಗಾಗಿ ಮತ್ತು ಪರವಾಗಿ

ಸನದಿ ಲೆಕ್ಕಿಗರು
ಸಂಸ್ಥೆ ನೋಂದಣಿ ಸಂಖ್ಯೆ : 101118ಡಬ್ಲ್ಯೂ

ಶಂಕರ್ ಪಾಗದ್	**ಬಿ. ಅಬ್ದುಲ್ ವಾಜಿದ್**	**ಅರ್ ಜಯಕುಮಾರ್**	**ಡಾ. ಆರ್. ರಾಗಪ್ರಿಯಾ,** ಭಾಆಸೇ
ಪಾಲುದಾರರು	ಮುಖ್ಯ ಹಣಕಾಸು ಅಧಿಕಾರಿಗಳು	ನಿರ್ದೇಶಕರು (ತಾಂತ್ರಿಕ)	ವ್ಯವಸ್ಥಾಪಕ ನಿರ್ದೇಶಕರು

ಸದಸ್ಯತ್ವ ಸಂಖ್ಯೆ: 206124

ಸ್ಥಳ:

ದಿನಾಂಕ:

ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಸಿಐಎನ್ ಸಂಖ್ಯೆ: ಯು0401ಕೆಎ2002ಎಸ್‌ಜಿಸಿ030436)

ನೋಂದಾಯಿತ ಕಛೇರಿ : ಸ್ಟೇಶನ್ ರಸ್ತೆ ಗುಲ್ಬರ್ಗಾ – 585102, ಕರ್ನಾಟಕ – 585 102

31 ಮಾರ್ಚ್ 2019ರಂದು ಇದ್ದಂತೆ ಲಾಭ ಮತ್ತು ನಷ್ಟದ ತಃಖ್ತೆ

	ವಿವರಗಳು	ಟಿಪ್ಪಣಿ ಸಂಖ್ಯೆ	ಚಾಲ್ತಿ ವರ್ಷ		ಹಿಂದಿನ ವರ್ಷ	
			₹		₹	
I	ಕಾರ್ಯಾಚರಣೆಯಿಂದ ಆದಾಯ	30		50,784,400,218		42,917,572,146
II	ಇತರ ಆದಾಯ	31		1,276,461,744		1,101,677,239
III	**ಒಟ್ಟು ಆದಾಯ (I + II)**			**52,060,861,962**		**44,019,249,385**
IV	**ಖರ್ಚುಗಳು :**					
	ವಿದ್ಯುತ್ ಖರೀದಿ ವೆಚ್ಚ	32		39,492,412,120		35,771,595,773
	ಸಿಬ್ಬಂದಿ ಹಿತ ವೆಚ್ಚ	33		5,292,126,905		4,445,433,591
	ಹಣಕಾಸು ವೆಚ್ಚಗಳು	34		2,837,747,872		3,516,825,357
	ಸವಕಳಿ ಮತ್ತು ಭೋಗ್ಯದ ಖರ್ಚುಗಳು	35		1,909,876,837		1,770,315,101
	ಇತರ ಖರ್ಚುಗಳು	36		2,335,316,895		2,029,224,094
				51,867,480,629		**47,533,393,916**
V	ದರ ನಿಬಂಧನೆ ಚಟುವಟಿಕೆಗಳು, ಅಸಾಧಾರಣ ಬಾಬ್ತುಗಳು ಮತ್ತು ತೆರಿಗೆಗೆ ಮುನ್ನ ಲಾಭ (III-IV)			**193,381,333**		**(3,514,144,531)**
VI	ಲಾಭ ಮತ್ತು ನಷ್ಟಕ್ಕೆ ನಿಬಂಧನಾ ಮುಂದೂಡಿಕೆ ಖಾತೆ ಮತ್ತು ಸಂಬಂಧಿತ ಮುಂದೂಡಿದ ತೆರಿಗೆ ಚಲನೆ	38		3,287,252,283		(1,120,429,964)
	ಮುಂಚಿನ ವರ್ಷಗಳಿಗೆ ಸಂಬಂಧಿಸಿದ ನಿಬಂಧನಾ ಆದಾಯ/(ಖರ್ಚು)(ನಿವ್ವಳ):					
VII	ಅಸಾಧಾರಣ ಬಾಬ್ತುಗಳು ಮತ್ತು ತೆರಿಗೆಗೆ ಮುನ್ನ ಲಾಭ(V+-VI)			**3,480,633,616**		**(4,724,574,495)**
VIII	ಅಸಾಧಾರಣ ಬಾಬ್ತುಗಳು			-		-
IX	**ತೆರಿಗೆಗೆ ಮುನ್ನ ಲಾಭ (VII-VIII)**			**3,480,633,616**		**(4,724,574,495)**
X	ತೆರಿಗೆ ಖರ್ಚು					
	ಚಾಲ್ತಿ ತೆರಿಗೆ			-		
	ಮುಂದೂಡಲಾದ ತೆರಿಗೆ	-		-		
XI	**ಮುಂದುವರೆಯುತ್ತಿರುವ ಕಾರ್ಯಾಚರಣೆಗಳಿಂದ ಲಾಭ (IX- X)**			**3,480,633,616**		**(4,724,574,495)**
XII	ಮುಂದುವರೆಯದ ಕಾರ್ಯಾಚರಣೆಗಳಿಂದ ಲಾಭ/(ನಷ್ಟ)			-		-
XIII	ಮುಂದುವರೆಯದ ಕಾರ್ಯಾಚರಣೆಗಳಿಂದ ತೆರಿಗೆ ಖರ್ಚು			-		-
XIV	(ತೆರಿಗೆಯ ನಂತರ) ವರ್ಷದ ಲಾಭ/(ನಷ್ಟ) (XI+XII+XIII)			**3,480,633,616**		**(4,724,574,495)**
	ಬಿ) ಮರುಮೌಲ್ಯಮಾಪನ ಮುಡಿಪಿನ ವ್ಯತಿರಿಕ್ತತೆ (ತೆರಿಗೆ ನಿವ್ವಳ)					
XV	**ಒಟ್ಟು ಸಮಗ್ರ ಆದಾಯ**					
	I) ಲಾಭ ಅಥವಾ ನಷ್ಟವೆಂದು ಮರುವಿಂಗಡಿಸಿದ ಬಾಬ್ತುಗಳು					
	ಎ) ನಿರ್ವಚಿತ ಕಲ್ಯಾಣ ಯೋಜನೆಗಳ ಮರುಲೆಕ್ಕಗಳು		(9,256,695)		(1,682,936)	
	ಬಿ) ಮರುಮವಲ್ಯಮಾಪನ ಮುಡಿಪಿನ ವ್ಯತಿರಿಕ್ತತೆ (ತೆರಿಗೆಗಳ ನಿವ್ವಳ)		(273,648,543)			
	ಸಿ) ಮೇಲಿನವುಗಳ ಮೇಲಿನ ತೆರಿಗೆ			**(282,905,238)**		**(1,682,936)**
	ನಿಬಂಧನಾ ಮುಂದೂಡಿಕೆ ಖಾತೆ ಶಿಲ್ಕುಗಳಲ್ಲಿನ ನಿವ್ವಳ ಚಲನೆಯೂ ಸೇರಿ ಪ್ರತಿ ಈಕ್ವಿಟಿ ಷೇರಿನ ಮೇಲೆ ಗಳಿಕೆ ರೂ.ಗಳಲ್ಲಿ					

ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಸಿಐಎನ್ ಸಂಖ್ಯೆ: ಯು0401ಕೆಎ2002ಎಸ್‌ಜಿಸಿ030436)

ನೋಂದಾಯಿತ ಕಛೇರಿ : ಸ್ಟೇಶನ್ ರಸ್ತೆ ಗುಲ್ಬರ್ಗಾ – 585102, ಕರ್ನಾಟಕ – 585 102

31 ಮಾರ್ಚ್ 2018ರಂದು ಇದ್ದಂತೆ ಲಾಭ ಮತ್ತು ನಷ್ಟದ ತಃಖ್ತೆ

	ವಿವರಗಳು	ಟಿಪ್ಪಣಿ ಸಂಖ್ಯೆ	ಚಾಲ್ತಿ ವರ್ಷ	ಹಿಂದಿನ ವರ್ಷ
			₹	₹
XVI	ಒಟ್ಟು ಇತರ ಸಮಗ್ರ ಆದಾಯ (XV(i)+XV(ii))		**(282,905,238)**	**(1,682,936)**
XVII	ವರ್ಷದ ಒಟ್ಟು ಸಮಗ್ರ ಆದಾಯ (XI+XIV)		**3,197,728,378**	**(4,726,257,431)**
XVIII	ಅಸಾಧಾರಣ ಬಾಬ್ತಿನ ಮುನ್ನ ಮತ್ತು ನಂತರ ಪ್ರತಿ ಈಕ್ವಿಟಿ ಷೇರಿನ ಮೇಲೆ ಗಳಿಕೆ			
	ಬೇಸಿಕ್ ರೂ.ಗಳಲ್ಲಿ	37	0.17	(3.15)
	ಡೈಲ್ಯೂಟೆಡ್ ರೂ.ಗಳಲ್ಲಿ	37	0.17	(3.15)
	ನಿಬಂಧನಾ ಮುಂದೂಡಿಕೆ ಖಾತೆ ಶಿಲ್ಕುಗಳಲ್ಲಿನ ನಿವ್ವಳ ಚಲನೆಯೂ ಸೇರಿ ಪ್ರತಿ ಈಕ್ವಿಟಿ ಷೇರಿನ ಮೇಲೆ ಮೂಲ ಗಳಿಕೆ ರೂ. ಗಳಲ್ಲಿ	37	3.12	(4.24)
	ನಿಬಂಧನಾ ಮುಂದೂಡಿಕೆ ಖಾತೆ ಶಿಲ್ಕುಗಳಲ್ಲಿನ ನಿವ್ವಳ ಚಲನೆಯೂ ಸೇರಿ ಪ್ರತಿ ಈಕ್ವಿಟಿ ಷೇರಿನ ಮೇಲೆ ಡೈಲ್ಯೂಟೆಡ್ ಗಳಿಕೆ ರೂ. ಗಳಲ್ಲಿ	37	3.12	(4.24)
	(ಪ್ರತಿ ಷೇರಿಗೆ ಸಂದಾಯಿತ ಮೌಲ್ಯ)		10.00	10.00

ಮಹತ್ವದ ಲೇಖಾನೀತಿಗಳು ಮತ್ತು ಲಗತ್ತಿಸಲಾದ ಟಿಪ್ಪಣಿಗಳುಹಣಕಾಸು ತಃಖ್ತೆಗಳ ಅಂತರ್ಗತ ಭಾಗವಾಗಿವೆ

ನಮ್ಮ ಇದೇ ದಿನಾಂಕದ ವರದಿಯ ಮೇರಗೆ

ಮೆ. ಪಿ.ಜಿ. ಭಾಗತವತ್ ಪರವಾಗಿ

ಸನದಿ ಲೆಕ್ಕಿಗರು

ಸಂಸ್ಥೆ ನೋಂದಣಿ ಸಂಖ್ಯೆ : 101118ಡಬ್ಲ್ಯೂ

ನಿರ್ದೇಶಕ ಮಂಡಳಿಗಾಗಿ ಮತ್ತು ಪರವಾಗಿ

ಶಂಕರ್ ಪಾಗದ್	ಬಿ. ಅಬ್ದುಲ್ ವಾಜಿದ್	ಆರ್. ಜಯಕುಮಾರ	ಡಾ. ಆರ್.ರಾಗಪ್ರಿಯಾ, ಭಾಆಸೇ
ಪಾಲುದಾರರು	ಮುಖ್ಯ ಹಣಕಾಸು ಅಧಿಕಾರಿಗಳು	ನಿರ್ದೇಶಕರು (ತಾಂತ್ರಿಕ)	ವ್ಯವಸ್ಥಾಪಕ ನಿರ್ದೇಶಕರು

ಸದಸ್ಯತ್ವ ಸಂಖ್ಯೆ: 206124

ಸ್ಥಳ:

ದಿನಾಂಕ:

ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಸಿಐಎನ್ ಸಂಖ್ಯೆ: ಯು0401ಕೆಎ2002ಎಸ್‌ಜಿಸಿ030436)

ನೋಂದಾಯಿತ ಕಛೇರಿ : ಸ್ಟೇಶನ್ ರಸ್ತೆ ಗುಲ್ಬರ್ಗಾ – 585102, ಕರ್ನಾಟಕ – 585 102

31.03.2018ಕ್ಕೆ ಕೊನೆಗೊಂಡ ವರ್ಷಕ್ಕಾಗಿನ ನಗದು ಪ್ರವಹನ ವಿವರಣಾ ಪಟ್ಟಿ

ವಿವರಗಳು	ಮಾರ್ಚ್ 31, 2019	ಮಾರ್ಚ್ 31, 2018
	₹	₹
ಎ. ಕಾರ್ಯಾಚರಣೆ ಚಟುವಟಿಕೆಗಳಿಂದ ನಗದು ಪ್ರವಹನ		
ತೆರಿಗೆ ಮುನ್ನ ನಿವ್ವಳ ಲಾಭ	**3,480,633,617**	**(4,724,574,495)**
ತೆರಿಗೆಯ ಮುನ್ನ ಲಾಭವನ್ನು ನಿವ್ವಳ ನಗದು ಹರಿವುಗಳಿಗೆ ಸರಿಹೊಂದಿಸಲು ಹೊಂದಾಣಿಕೆಗಳು:		
ಸ್ವತ್ತು, ಸ್ಥಾವರ ಮತ್ತು ಸಲಕರಣೆಯ ಮೇಲಿನ ಸವಕಳಿ ಮತ್ತು ಅವುಗಳಿಗೆ ಬಾಧೆತಟ್ಟುವಿಕೆ	1,909,876,837	1,770,315,101
ಸರ್ಕಾರದ ಅನುದಾನ – ಲಾಭ ಮತ್ತು ನಷ್ಟದ ತಃಖ್ತೆಗೆ ಬಿಡುಗಡೆಮಾಡಿದ್ದು	(112,500,000)	(132,200,000)
ಗ್ರಾಹಕ ಕೊಡುಗೆ ಆಸ್ತಿ – ಲಾಭ ಮತ್ತು ನಷ್ಟದ ತಃಖ್ತೆಗೆ ಬಿಡುಗಡೆಮಾಡಿದ್ದು	(340,700,000)	(225,100,000)
ಅಗತ್ಯವಿರದ ಮತ್ತು ಹಿಂದಕ್ಕೆ ಬರೆದ ಹವಣಿಕೆ	(592,379,867)	(530,548,581)
ಬಾಡಿಗೆ ಆದಾಯ	(29,956,636)	(15,708,203)
ಬಡ್ಡಿ ಆದಾಯ	(92,196,996)	(29,699,058)
ಹಣಕಾಸು ಪಡೆಯುವಿಕೆ ವೆಚ್ಚಗಳು	2,837,747,872	3,516,825,357
ತೊಡೆದುಹಾಕಲಾದ/ಹವಣಿಕೆ ಮಾಡಿರುವ ಸಂಶಯಾಸ್ಪದ ಮತ್ತು ವಸೂಲಾಗದ ಸಾಲಗಳು	689,156,047	668,943,434
ಸಾಮಗ್ರಿ ದರ ವ್ಯತ್ಯಾಸಕ್ಕೆ ಮುಡಿಪು	66,534,134	(4,201,880)
	7,816,215,008	**294,051,675**
ಪಾವತಿಸಲಾದ ಆದಾಯ ತೆರಿಗೆ (ಮರುಭರಿಕೆಗಳ ನಿವ್ವಳ)	(3,992,144)	446,371,248
	7,812,222,864	**740,422,923**
ಕಾರ್ಯಕಾರಿ ಬಂಡವಾಳ ಹೊಂದಾಣಿಕೆಗಳು:		
ದಾಸ್ತಾನುಗಳಲ್ಲಿ (ಏರಿಕೆ)/ಇಳಿಕೆ	(191,213,674)	(5,641,831)
ಬಿಲ್‌ಮಾಡದ ಆದಾಯದಲ್ಲಿ (ಏರಿಕೆ)/ಇಳಿಕೆ	2,372,690,170	(360,266,189)
ವ್ಯಾಪಾರದಲ್ಲಿ ಬರಬೇಕಾದವುಗಳಲ್ಲಿ (ಏರಿಕೆ)/ಇಳಿಕೆ	(2,490,431,396)	8,107,690,344
ಸಾಲಗಳಲ್ಲಿ (ಏರಿಕೆ)/ಇಳಿಕೆ	6,990,947	(1,757,533)
ಇತರ ಹಣಕಾಸು ಆಸ್ತಿಗಳಲ್ಲಿ (ಏರಿಕೆ)/ಇಳಿಕೆ	(8,138,355,839)	(1,622,817,957)
ಇತರ ಚಾಲ್ತಿ ಆಸ್ತಿಗಳಲ್ಲಿ (ಏರಿಕೆ)/ಇಳಿಕೆ	(340,564)	(15,169,651)
ನಿಬಂಧನಾ ಮುಂದೂಡಿಕೆ ಖಾತೆ – ಆಸ್ತಿಗಳಲ್ಲಿ (ಏರಿಕೆ)/ಇಳಿಕೆ	8,101,129,873	1,210,429,964
ರಜೆ ನಗದೀಕರಣ; ಕುಟುಂಬ ಹಿತ ನಧಿಯಲ್ಲಿ (ಏರಿಕೆ)/ಇಳಿಕೆ	232,738,336	(19,221,459)
ವ್ಯಾಪಾರಿ ಸಂದಾಯಗಳಲ್ಲಿ (ಏರಿಕೆ)/ಇಳಿಕೆ	8,117,321,230	(4,342,657,716)
ಇತರ ಚಾಲ್ತಿ ಹೊಣೆಗಳಲ್ಲಿ (ಏರಿಕೆ)/ಇಳಿಕೆ	444,689,176	(383,759,855)
ಇತರ ಚಾಲ್ತಿಯಲ್ಲದ ಹೊಣೆಗಳಲ್ಲಿ (ಏರಿಕೆ)/ಇಳಿಕೆ	518,719,875	438,778,244
ಇತರ ಹಣಕಾಸು ಹೊಣೆಗಳಲ್ಲಿ (ಏರಿಕೆ)/ಇಳಿಕೆ	(93,546,977)	197,314,400
ಕಾರ್ಯಾಚರಣೆ ಚಟುವಟಿಕೆಗಳಿಂದ ನಿವ್ವಳ ನಗದು ಪ್ರವಹನ	**2,724,203,726**	**3,943,343,684**
ಬಿ ಹೂಡಿಕೆ ಚಟುವಟಿಕೆಗಳಿಂದ ನಗದು ಪ್ರವಹನ		
ಸ್ವತ್ತು, ಸ್ಥಾವರ ಮತ್ತು ಸಲಕರಣೆಯ ಮಾರಾಟದಿಂದ ಉತ್ಪತ್ತಿ		
ಸ್ವತ್ತು, ಸ್ಥಾವರ ಮತ್ತು ಸಲಕರಣೆಯ ಖರೀದಿ	(4,093,851,577)	(2,536,235,432)
ಬಾಡಿಗೆ ಆದಾಯ	29,956,636	15,708,203
ಬಡ್ಡಿ ಆದಾಯ	55,207,305	31,809,795
Accrued interest shown in other financial asset not adjusted pls adjust		
ಮಾರ್ಜಿನ್ ಹಣ ಅಥವಾ ಸಾಲಗಳು, ಖಾತರಿಗಳು, ಇತರ ಬಾಧ್ಯತೆಗಳಿಗಾಗಿನ ಭದ್ರತೆಯ ವಿಮೋಚನೆ/ಪಕ್ವತೆ	4,460,933	1,245,633,812
ಹೂಡಿಕೆ ಚಟುವಟಿಕೆಗಳಲ್ಲಿ ಬಳಸಲಾದ ನಿವ್ವಳ ನಗದು	**(4,004,226,703)**	**(1,243,083,622)**
ಸಿ. ಹಣಕಾಸು ಪಡೆಯುವಿಕೆ/ನೀಡುವಿಕೆ ಚಟುವಟಿಕೆಗಳಿಂದ ನಗದು ಪ್ರವಹನ		
ಸಂಗ್ರಹಿಸಲಾದ ಷೇರು ಅರ್ಜಿ ಹಣದಿಂದ ಉತ್ಪತ್ತಿ	1,544,600,000	1,915,000,000
ಸಾಲಗಳಿಂದ ಉತ್ಪತ್ತಿ/(ಮರುಪಾವತಿ)	2,775,235,905	(731,864,275)

ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಸಿಐಎನ್ ಸಂಖ್ಯೆ: ಯು0401ಕೆಎ2002ಎಸ್‌ಜಿಸಿ030436)

ನೋಂದಾಯಿತ ಕಛೇರಿ : ಸ್ಟೇಶನ್ ರಸ್ತೆ ಗುಲ್ಬರ್ಗಾ – 585102, ಕರ್ನಾಟಕ – 585 102

31.03.2018ಕ್ಕೆ ಕೊನೆಗೊಂಡ ವರ್ಷಕ್ಕಾಗಿನ ನಗದು ಪ್ರವಹನ ವಿವರಣಾ ಪಟ್ಟಿ

ವಿವರಗಳು	ಮಾರ್ಚ್ 31, 2019 ₹	ಮಾರ್ಚ್ 31, 2018 ₹
ಅಲ್ಪಾವಧಿ ಸಾಲಗಳ ಮರುಪಾವತಿ (ನಿವ್ವಳ)	(104,469,286)	(871,316,632)
ಪಾವತಿಸಲಾದ ಬಡ್ಡಿ	(2,825,875,036)	(3,495,284,193)
ಗ್ರಾಹಕರಿಂದ ಪಡೆದ ಠೇವಣಿಗಳಿಂದ ಉತ್ಪತ್ತಿ	392,267,826	396,486,087
ಹೂಡಿಕೆ ಚಟುವಟಿಕೆಗಳಲ್ಲಿ ಬಳಸಲಾದ ನಿವ್ವಳ ನಗದು	**1,781,759,409**	**(2,786,979,013)**
ನಗದು ಮತ್ತು ನಗದು ಸಮಾನಗಳಲ್ಲಿ ನಿವ್ವಳ ಏರಿಕೆ/(ಇಳಿಕೆ)	501,736,431	(86,718,951)
ವರ್ಷದ ಪ್ರಾರಂಭದಲ್ಲಿದ್ದಂತೆ ನಗದು ಮತ್ತು ನಗದು ಸಮಾನಗಳು	632,077,227	718,796,178
ವರ್ಷದ ಕೊನೆಯಲ್ಲಿದ್ದಂತೆ ನಗದು ಮತ್ತು ನಗದು ಸಮಾನಗಳು	**1,133,813,658**	**632,077,227**

ವಿವರಗಳು	ಮಾರ್ಚ್ 31, 2019 ರೂ. ಗಳಲ್ಲಿ	ಮಾರ್ಚ್ 31, 2018 ರೂ. ಗಳಲ್ಲಿ	ಮಾರ್ಚ್ 31, 2017 ರೂ. ಗಳಲ್ಲಿ
ನಗದು ಮತ್ತು ನಗದು ಸಾಮಾನಗಳು			
ಎ) ಬ್ಯಾಂಕುಗಳಲ್ಲಿ ಶಿಲ್ಕುಗಳು			
– ಚಾಲ್ತಿ ಖಾತೆಗಳಲ್ಲಿ	1,006,149,302	579,541,236	640,608,490
ಬಿ) ಕೈಯಲ್ಲಿನ ನಗದು	126,828,910	52,077,781	77,347,677
ಸಿ) ರವಾನೆಯಲ್ಲಿರುವ ಚೆಕ್ಕುಗಳು ಮತ್ತು ನಿಧಿಗಳು	11,138	11,138	423,000
ಡಿ) ಕೈಯಲ್ಲಿರುವ ಸ್ಟಾಂಪುಗಳು	824,308	447,072	417,011
ಇ) ಘಟಕಗಳಿಂದ ವರ್ಗಾವಣೆ – ಅಂತರ್ ಘಟಕ ಖಾತೆ	-	-	-
ವರ್ಷದ ಕೊನೆಯಲ್ಲಿದ್ದಂತೆ ನಗದು ಮತ್ತು ನಗದು ಸಮಾನಗಳು	**1,133,813,658**	**632,077,227**	**718,796,178**

ಹಣಕಾಸು ಪಡೆಯುವಿಕೆ ಚಟುವಟಿಕೆಗಳಿಂದ ಉದ್ಭವವಾಗುವ ಹೊಣೆಯಲ್ಲಿನ ಬದಲಾವಣೆ

ವಿವರಗಳು	1 ಏಪ್ರಿಲ್, 2018	ಸಾಲಗಳ (ಮರುಪಾವತಿ)/ಉತ್ಪತ್ತಿಗಳಿಂದ ನಗದು ಪ್ರವಹನಗಳು	ನಗದೇತರ ಬದಲಾವಣೆಗಳು	31 ಮಾರ್ಚ್ 2019
ಚಾಲ್ತಿಯಲ್ಲದ ಸಾಲಗಳು – ಚಾಲ್ತಿ ಪಕ್ವತೆಗಳೂ ಸೇರಿ (ಟಿಪ್ಪಣಿ 18 ನೋಡಿ)	8,094,242,390	2,775,235,905	-	10,869,478,295
ಚಾಲ್ತಿ ಸಾಲಗಳು (ಟಿಪ್ಪಣಿ 18 ನೋಡಿ	743,969,617	(104,469,286)	-	639,500,331

ಗಮನಿಕೆ: ನಗದು ಪ್ರವಹನ ವಿವರಣಾ ಪಟ್ಟಿಯನ್ನು ಪರೋಕ್ಷ ವಿಧಾನವನ್ನು ಬಳಸಿ ಇಂಡ್ ಎಎಸ್ 7 : ನಗದು ಪ್ರವಹನಗಳ ತಃಖ್ತೆ ಅನುಸಾರವಾಗಿ ಸಿದ್ಧಪಡಿಸಲಾಗಿದೆ.

ಮಹತ್ವದ ಲೇಖಾ ನೀತಿಗಳ ಸಾರ

ಈ ತಃಖ್ತೆಯ ಜೊತೆಗಿರುವ ಟಿಪ್ಪಣಿಗಳು ಹಣಕಾಸು ತಃಖ್ತೆಗಳ ಅಂತರ್ಗತ ಭಾಗವಾಗಿವೆ.

ನಮ್ಮ ಇದೇ ದಿನಾಂಕದ ವರದಿಯ ಮೇರೆಗೆ
ಮೆ. ಪಿ ಜೆ ಭಾಗವತ್ ಪರವಾಗಿ — **ನಿರ್ದೇಶಕ ಮಂಡಳಿಗಾಗಿ ಮತ್ತು ಪರವಾಗಿ**
ಸನದಿ ಲೆಕ್ಕಿಗರು
ಸಂಸ್ಥೆ ನೋಂದಣಿ ಸಂಖ್ಯೆ : 101118ಡಬ್ಲ್ಯೂ

ಶಂಕರ್ ಪಾಗದ್	**ಬಿ. ಅಬ್ದುಲ್ ವಾಜಿದ್**	**ಆರ್. ಜಯಕುಮಾರ್**	**ಡಾ॥ ಆರ್. ರಾಗಪ್ರಿಯಾ ಭಾ.ಆ.ಸೇ.**
ಪಾಲುದಾರರು	ಮುಖ್ಯ ಹಣಕಾಸು ಅಧಿಕಾರಿಗಳು	ನಿರ್ದೇಶಕರು (ತಾಂತ್ರಿಕ)	ವ್ಯವಸ್ಥಾಪಕ ನಿರ್ದೇಶಕರು

ಸದಸ್ಯತ್ವ ಸಂಖ್ಯೆ: 206124

ಸ್ಥಳ:
ದಿನಾಂಕ:

ಗುಲಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

31 ಮಾರ್ಚ್ 2019ಕ್ಕೆ ಕೊನೆಗೊಂಡ ವರ್ಷದ ಈಕ್ವಿಟಿಯಲ್ಲಿನ ಬದಲಾವಣೆಯ ತಃಖ್ತೆ

ಎ. ಈಕ್ವಿಟಿ ಷೇರು ಬಂಡವಾಳ

ನೀಡಿಕೆಯಾದ, ವಂತಿಗೆಯಾದ ಮತ್ತು ಪೂರ್ಣವಾಗಿ ಸಂದಾಯವಾದ ರೂ. 10ರ ಈಕ್ವಿಟಿ ಷೇರುಗಳು (ಟಿಪ್ಪಣಿ 16 ನೋಡಿ)	ಸಂಖ್ಯೆ	ರೂ.ಗಳಲ್ಲಿ
01 ಏಪ್ರಿಲ್ 2017ರಂದು ಇದ್ದಂತೆ	77,67,66,104	7,76,76,61,040
ವರ್ಷದಲ್ಲಿ ನೀಡಿಕೆಯಾದದ್ದು	33,81,90,000	3,38,19,00,000
ಮಾರ್ಚ್ 31, 2018ರಂದು ಇದ್ದಂತೆ	1,11,49,56,104	11,14,95,61,040
ವರ್ಷದಲ್ಲಿ ನೀಡಿಕೆಯಾದದ್ದು	-	-
ಮಾರ್ಚ್ 31, 2019ರಂದು ಇದ್ದಂತೆ	1,11,49,56,104	11,14,95,61,040

ಎ. ಇತರ ಈಕ್ವಿಟಿ

ಕಂಪನಿಯ ಈಕ್ವಿಟಿ ಷೇರುದಾರರಿಗೆ ಅಧ್ಯಾರೋಪಿಸಬಹುದಾದದ್ದು

ವಿವರಗಳು	ಮುಡಿಪುಗಳು ಮತ್ತು ಹೆಚ್ಚಳ			ಓಸಿಐ ಬಾಬ್ತುಗಳ			ಒಟ್ಟು ಇತರ (ಎ+ಬಿ) ಈಕ್ವಿಟಿ
	ಹಂಚಿಕೆ ಬಾಕಿ ಇರಿಸಿ ಷೇರು ಅರ್ಜಿ ಹಣ	ಸಾಮಗ್ರಿದ ವ್ಯತ್ಯಾಸಕ್ಕಾಗಿ ಮುಡಿಪು	ಉಳಿಸಿಕೊಂಡ ಗಳಿಕೆಗಳು	ಒಟ್ಟು (ಎ)	ಓಸಿಐ ಬಾಬ್ತುಗಳ ಮರುಮೌಲ್ಯಮಾಪನ	ಒಟ್ಟು (ಬಿ)	
01 ಏಪ್ರಿಲ್ 2017ರಂದು ಇದ್ದಂತೆ	**1,93,95,00,003**	**45,15,39,348**	**(8,76,95,23,590)**	**(6,37,84,84,239)**	**7,07,10,20,458**	**7,07,10,20,458**	**69,25,36,219**
ಸೇರಿಸಿ/(ಕಳೆಯಿರಿ): ವರ್ಷದ ನಷ್ಟ	-	-	(4,72,45,74,495)	(4,72,45,74,495)	-	-	(4,72,45,74,495)
ಸೇರಿಸಿ:ಪಡೆಯಲಾದ ಷೇರುಅರ್ಜಿಹಣ	1,91,50,00,000	-	-	1,91,50,00,000	-	-	1,91,50,00,000
ಸೇರಿಸಿ/(ಕಳೆಯಿರಿ): ಷೇರು ಹಂಚಿಕೆ	(3,38,19,00,000)	-	-	(3,38,19,00,000)	-	-	(3,38,19,00,000)
ಕಳೆಯಿರಿ: ವರ್ಷದಲ್ಲಿನ ಸವಕಳಿ/ ಹಿಂತೆಗೆಯುವಿಕೆಯ ವ್ಯತಿರಿಕ್ತತೆ	-	(42,01,880)	-	(42,01,880)	-	-	(42,01,880)
ಸೇರಿಸಿ : ಇತರ ಸಮಗ್ರ ಅದಾಯ	-	-	(16,82,936)	(16,82,936)	-	(16,82,936)	
ಮಾರ್ಚ್ 31, 2018ರಂದು ಇದ್ದಂತೆ	**47,26,00,003**	**44,73,37,468**	**(13,49,57,81,021)**	**(12,57,58,43,550)**	**7,07,10,20,458**	**7,07,10,20,458**	**(5,50,48,23,092)**

ವಿವರಗಳು	ಮುಡಿಪುಗಳು ಮತ್ತು ಹೆಚ್ಚಳ			ಓಸಿಐ ಬಾಬ್ತುಗಳ			ಒಟ್ಟು ಇತರ (ಎ+ಬಿ) ಈಕ್ವಿಟಿ
	ಹಂಚಿಕೆ ಬಾಕಿ ಇರಿಸಿ ಷೇರು ಅರ್ಜಿ ಹಣ	ಸಾಮಗ್ರಿದರ ವ್ಯತ್ಯಾಸಕ್ಕಾಗಿ ಮುಡಿಪು	ಉಳಿಸಿಕೊಂಡ ಗಳಿಕೆಗಳು	ಒಟ್ಟು (ಎ)	ಓಸಿಐ ಬಾಬ್ತುಗಳ ಮರುಮೌಲ್ಯಮಾಪನ	ಒಟ್ಟು (ಬಿ)	
ಸೇರಿಸಿ/(ಕಳೆಯಿರಿ): ವರ್ಷದ ನಷ್ಟ	-	-	3,48,06,33,616	3,48,06,33,616	-	-	3,48,06,33,616
ಸೇರಿಸಿ/(ಕಳೆಯಿರಿ): ಮರುಪೌಲ್ಯಮಾಪನ ಮುಡಿಪಿನ ವಿಪರ್ಯಯ	-	-	-	-	(27,78,43,500)	(27,78,43,500)	(27,78,43,500)
ಸೇರಿಸಿ: ವರ್ಷದಲ್ಲಿನ ಸೇರ್ಪಡೆಗಳು	-	6,65,34,134	-	6,65,34,134	-	-	6,65,34,134
ಸೇರಿಸಿ:ಪಡೆಯಲಾದ ಷೇರು ಅರ್ಜಿಹಣ		1,54,46,00,000	-	-	1,54,46,00,000	-	1,54,46,00,000
ಸೇರಿಸಿ/(ಕಳೆಯಿರಿ): ಷೇರು ಹಂಚಿಕೆ ಕಳೆಯಿರಿ: ವರ್ಷದಲ್ಲಿನ ಸವಕಳಿ/	-	-	-	-	-	-	-
ಹಿಂತೆಗೆಯುವಿಕೆಯ ವ್ಯತಿರಿಕ್ತತೆ	-		- -	-	-	-	-
ಸೇರಿಸಿ : ಇತರ ಸಮಗ್ರ ಆದಾಯ				(92,56,695)	(92,56,695)	-	(92,56,695)
ಮಾರ್ಚ್ 31, 2019ರಂದು ಇದ್ದಂತೆ ಒಟ್ಟು ಸಮಗ್ರ ಆದಾಯ	**2,01,72,00,003**	**51,38,71,602**	**(10,02,44,04,100)**	**(7,49,33,32,495)**	**6,79,31,76,958**	**6,79,31,76,958**	**(70,01,55,537)**

ಮಹತ್ವದ ಲೇಖಾ ನೀತಿಗಳ ಸಾರ ಟಿಪ್ಪಣಿ 2
ಈ ತಃಖ್ತೆಯ ಜೊತೆಗಿರುವ ಟಿಪ್ಪಣಿಗಳು ಹಣಕಾಸು ತಃಖ್ತೆಗಳ ಅಂತರ್ಗತ ಭಾಗವಾಗಿವೆ.

ನಮ್ಮ ಇದೇ ದಿನಾಂಕದ ವರದಿಯ ಮೇರೆಗೆ

ಮೆ. ಪಿ ಜಿ ಭಾಗವತ್ ಪರವಾಗಿ **ನಿರ್ದೇಶಕ ಮಂಡಳಿಗಾಗಿ ಮತ್ತು ಪರವಾಗಿ**
ಸನದಿ ಲೆಕ್ಕಿಗರು
ಸಂಸ್ಥೆ ನೋಂದಣಿ ಸಂಖ್ಯೆ : 101118ಡಬ್ಲ್ಯೂ

ಶಂಕರ್ ಪಾಗದ್ **ಬಿ. ಅಬ್ದುಲ್ ವಾಜಿದ್** **ಅರ್. ಜಯಕುಮಾರ್** **ಡಾ. ಆರ್.ರಾಗಪ್ರಿಯಾ,** ಭಾ.ಆ.ಸೇ.
ಪಾಲುದಾರರು ಮುಖ್ಯ ಹಣಕಾಸು ಅಧಿಕಾರಿಗಳು ನಿರ್ದೇಶಕರು (ತಾಂತ್ರಿಕ) ವ್ಯವಸ್ಥಾಪಕ ನಿರ್ದೇಶಕರು
ಸದಸ್ಯತ್ವ ಸಂಖ್ಯೆ: 206124

ಸ್ಥಳ:
ದಿನಾಂಕ:

Note 2 Accounting Policy Revised

ಟಿಪ್ಪಣಿ–1 : ಕಾರ್ಪೊರೇಟ್ ಮಾಹಿತಿ

ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿಯು ('ಜೆಸ್ಕಾಂ' ಅಥವಾ "ಕಂಪೆನಿ) ಕರ್ನಾಟಕ ರಾಜ್ಯದಲ್ಲಿನ ಪ್ರಧಾನ ವಿದ್ಯುತ್ ವಿತರಣಾ ಕಂಪನಿಯಾಗಿದ್ದು ಕರ್ನಾಟಕ ಸರ್ಕಾರದ ಸ್ವಾಮ್ಯದಲ್ಲಿದೆ.ಕಂಪೆನಿಯು ಕರ್ನಾಟಕದ ಬೀದರ್, ಗುಲ್ಬರ್ಗಾ, ಯಾದಗಿರ್, ರಾಯಚೂರು, ಬಳ್ಳಾರಿ ಮತ್ತು ಕೊಪ್ಪಳ ಜಿಲ್ಲೆಗಳಲ್ಲಿ ವಿದ್ಯುಚ್ಛಕ್ತಿ ವಿತರಣೆಯ ಕಾರ್ಯದಲ್ಲಿ ತೊಡಗಿದೆ. ಕಂಪೆನಿ ಕಾಯ್ದೆ, 1956ರ ಉಪಬಂಧಗಳ ಅಡಿ ಕಂಪೆನಿಯು ನೋಂದಾಯಿತವಾಗಿದೆ. ಕಂಪನಿಯು ವಿದ್ಯುಚ್ಛಕ್ತಿ ಕಾಯ್ದೆ, 2003ರ ಪರಿಚ್ಛೇದ 14ರ ಅಡಿ ಹಂಚಿಕೆ ಪರವಾನಗಿಯನ್ನು ಹೊಂದಿದೆ. ತನ್ನ ನೋಂದಾಯಿತ ಕಛೇರಿಯನ್ನು ಸ್ಟೇಶನ್ ರಸ್ತೆ, ಗುಲ್ಬರ್ಗಾ, ಕರ್ನಾಟಕ – 585 102 – ಇಲ್ಲಿ ಹೊಂದಿರುವ ಕಂಪನಿಯು ಭಾರತದಲ್ಲಿ ತನ್ನ ನೆಲೆಯನ್ನು ಹೊಂದಿದ್ದು ನಿಗಮನಗೊಂಡಿರುತ್ತದೆ.

ಈ ಮುನ್ನ ಕರ್ನಾಟಕ ರಾಜ್ಯದ ವಿದ್ಯುತ್ ವಲಯವನ್ನು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯು ನಿಭಾಯಿಸುತ್ತಿತ್ತು. 1999ರಲ್ಲಿ ವ್ಯಾಪಕವಾಗಿ ಬೆಳೆಯುತ್ತಿದ್ದ ಆರ್ಥಿಕತೆಯ ಅಗತ್ಯಗಳನ್ನು ಪೂರೈಸುವ ಸಲುವಾಗಿ ರಾಜ್ಯ ಸರಕಾರವು ವಿದ್ಯುತ್ ವಲಯದಲ್ಲಿ ಸುಧಾರಣೆಗಳ ಪ್ರಕ್ರಿಯೆಗಳಿಗೆ ಚಾಲನೆ ನೀಡಿತು. ಮೊದಲ ಹೆಜ್ಜೆಯಾಗಿ, 1999ರಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯನ್ನು ಎರಡಾಗಿ ವಿಭಜಿಸಿ ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ (ಕೆಪಿಟಿಸಿಎಲ್) ಮತ್ತು ವಿಶ್ವೇಶ್ವರಯ್ಯ ವಿದ್ಯುತ್ ನಿಗಮ ನಿಯಮಿತ (ವಿವಿಎನ್ಎಲ್) ಎಂಬ ಎರಡು ಕಂಪನಿಗಳನ್ನು ಸೃಷ್ಟಿಸಲಾಯಿತು. 1999ರಲ್ಲಿ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗವನ್ನು ಸಹ ಸ್ಥಾಪಿಸಲಾಯಿತು. ಸುಧಾರಣೆಗಳ ತರುವಾಯದ ಹಂತದಲ್ಲಿ ಕೆಪಿಟಿಸಿಎಲ್ ಕೈಗೊಂಡಿದ್ದ ಪ್ರಸರಣ ಮತ್ತು ವಿತರಣೆಯ ಚಟುವಟಿಕೆಗಳನ್ನು ಪ್ರತ್ಯೇಕಿಸಿ ನಾಲ್ಕು ವಿದ್ಯುತ್ ವಿತರಣಾ ಕಂಪನಿಗಳನ್ನು ಜೂನ್ 2002ರಲ್ಲಿ ಪ್ರಾರಂಭಿಸಲಾಯಿತು. ಹೀಗೆ ರಚಿಸಲಾದ ಕಂಪೆನಿಗಳಲ್ಲಿ ಜೆಸ್ಕಾಂ ಕೂಡ ಒಂದಾಗಿದ್ದು ತನ್ನ ಕೇಂದ್ರವನ್ನು ಗುಲ್ಬರ್ಗಾದಲ್ಲಿ ಹೊಂದಿದೆ.

ಟಿಪ್ಪಣಿ – 2: ಮಹತ್ವದ ಲೇಖಾ ಕಾರ್ಯನೀತಿಗಳು

2.1 ಸಿದ್ಧಪಡಿಸುವಿಕೆಗೆ ಆಧಾರ :

ಹಣಕಾಸು ತಃಖ್ತೆಗಳನ್ನು, ಲೇಖಾನೀತಿಯು ಅನ್ಯ ರೀತಿಯಲ್ಲಿ ಉಪಬಂಧಿಸದ ಹೊರತು, ಚಾರಿತ್ರಿಕ ವೆಚ್ಚ ರೂಢಿಯ ಅಡಿ ಮತ್ತು ಪ್ರಾಪ್ತತೆ ಆಧಾರದ ಲೆಕ್ಕವಿಧಾನದ ಅಡಿಯಲ್ಲಿ, ವಿದ್ಯುಚ್ಛಕ್ತಿ ಪೂರೈಕೆ ವಾರ್ಷಿಕ ಲೆಕ್ಕಪತ್ರಗಳ ನಿಯಮಗಳು, 1985(ಎಇಸ್ಎಎಆರ್) ಉಪಬಂಧಗಳ ಅನುಸಾರವಾಗಿ ಹಾಗೂ ಕಂಪನಿಗಳ (ಭಾರತೀಯ ಲೇಖಾ ಪ್ರಮಾಣಗಳು) ನಿಯಮಗಳು, 2015ರ ಅಡಿಯಲ್ಲಿನ ಅಧಿಸೂಚನೆಗಳಿಗೆ ಮತ್ತು ನಂತರದಲ್ಲಿ ತಿದ್ದುಪಡಿಗಳಿಗೆ ("ನಿಯಮಗಳು") ಸಂಗತವಾಗುವಂತೆ ಹಾಗೂ ಅನ್ವಯವಾಗುವ ಮಟ್ಟಿಗೆ ವಿದ್ಯುಚ್ಛಕ್ತಿ ಕಾಯ್ದೆ, 2003ರ ಉಪಬಂಧಗಳಿಗೆ ಸಂಗತವಾಗುವಂತೆ ಸಿದ್ಧಪಡಿಸಲಾಗಿದೆ.

ಕೆಳಗಿನವುಗಳನ್ನು ಹೊರತುಪಡಿಸಿ, ಹಣಕಾಸು ತಃಖ್ತೆಗಳ ಮೇಲೆ ಗಣನೀಯವಾದ ಪರಿಣಾಮವನ್ನು ಬೀರುವ ಎಲ್ಲ ಅಂಶಗಳನ್ನೂ ಪ್ರಾಪ್ತತೆಯ ಆಧಾರದ ಮೇಲೆ ಗುರುತಿಸಲಾಗಿದೆ:

- ಬಂಡವಾಳ ಆಸ್ತಿಗಳಿಗೆ ಸಂಬಂಧಿಸಿದಂತೆ, ಸರ್ಕಾರದಿಂದ ಪಡೆದ ಅನುದಾನಗಳು ಮತ್ತು ಸಹಾಯಧನ, ಇವನ್ನು ನೈಜ ಸ್ವೀಕೃತಿಯ ಆಧಾರದ ಮೇಲೆ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿದೆ; ಮತ್ತು
- ವಿದ್ಯುತ್ ಉತ್ಪಾದಕರಿಗೆ ವಿಳಂಬ ಪಾವತಿಯ ಮೇಲಿನ ಬಡ್ಡಿ, ಇದನ್ನು ಉತ್ಪಾದಕರು ಈ ಬಗ್ಗೆ ಮಾಹಿತಿ ನೀಡದಾಕ್ಷಣ ಲೆಕ್ಕಕ್ಕೆ ತೆಗೆದುಕೊಳ್ಳಲಾಗಿತ್ತದೆ.
- ಗುತ್ತಿಗೆದಾರರು ಮತ್ತು ಮಾರಾಟಗಾರರಿಂದ ದಂಡಗಳು ಮತ್ತು ಹಾನಿಗಳ ವಸೂಲಿಯನ್ನು ಅವು ವಸೂಲಾದ ನಂತರ ಆದಾಯವೆಂದು ಗುರುತಿಸಲಾಗುತ್ತದೆ.

ಹಣಕಾಸು ತಃಖ್ತೆಗಳನ್ನು ಚಾರಿತ್ರಿಕ ವೆಚ್ಚ ಆಧಾರದಲ್ಲಿ ಸಿದ್ಧಪಡಿಸಲಾಗಿದೆ, ಆದರೆ ಕೆಳಗಿನ ಆಸ್ತಿಗಳು ಮತ್ತು ಹೊಣೆಗಳನ್ನು ಮರುಮೌಲ್ಯಮಾಪನ ಮಾಡಿದ ಮೊತ್ತದಲ್ಲಿ ಲೆಕ್ಕಹಾಕಲಾಗಿದೆ:

- ಸ್ವತ್ತು, ಸ್ಥಾವರ ಮತ್ತು ಸಲಕರಣೆ ಎಂದು ವರ್ಗೀಕರಿಸಿದ ಭೂಮಿ ಮತ್ತು ಹಕ್ಕುಗಳು

ಪ್ರಸರಣ ಮತ್ತು ವಿತರಣಾ ಚಟುವಟಿಕೆಗಳ ಬೇರ್ಪಡಿಸುವಿಕೆಯ ಪರಿಣಾಮವಾಗಿ ಮೆ. ಕರ್ನಾಟಕ ವಿದ್ಯುತ್ ಪ್ರಸರಣ ನಿಗಮ ನಿಯಮಿತ(ಕೆಪಿಟಿಸಿಎಲ್) ವರ್ಗಾಯಿಸಿದ ಆಸ್ತಿ ಮತ್ತು ಹೊಣೆಗಳನ್ನು ವರ್ಗಾವಣೆ ದಸ್ತಾವೇಜಿನಲ್ಲಿ ಕೆಪಿಟಿಸಿಎಲ್ ಸೂಚಿಸಿರುವ ಮೊತ್ತದಲ್ಲಿ ತೋರಿಸಲಾಗಿದೆ.

ಕಂಪನಿಯು 1 ಏಪ್ರಿಲ್ 2018ರಿಂದ ಪ್ರಾರಂಭವಾದ ವರದಿಯ ಅವಧಿಯಲ್ಲಿ ಮೊದಲ ಬಾರಿಗೆ ಕೆಳಗಿನ ಪ್ರಮಾಣಗಳು ಮತ್ತು ತಿದ್ದುಪಡಿಗಳನ್ನು ಅನ್ವಯಿಸಿದೆ:

- ಇಂಡ್ ಎಎಸ್ 115, ಗ್ರಾಹಕರೊಂದಿಗಿನ ಗುತ್ತಿಗೆಯಿಂದ ಆದಾಯ
- ಇಂಡ್ ಎಎಸ್ 20ಕ್ಕೆ ತಿದ್ದುಪಡಿ, ಸರ್ಕಾರಿ ಅನುದಾನಗಳ ಲೆಕ್ಕ ಮತ್ತು ಸರ್ಕಾರಿ ನೆರವಿನ ಪ್ರಕಟಣೆ
- ಅನುಬಂಧ ಬಿ, ವಿದೇಶೀ ಹಣ ಪರಿವರ್ತನೆಗಳು ಮತ್ತು ಮುಂಗಡ ಪರಿಗಣನೆ, ಇಂಡ್ ಎಎಸ್ 21, ವಿದೇಶಿ ವಿನಿಮಯ ದರಗಳಲ್ಲಿನ ಬದಲಾವನೆಗಳ ಪರಿಣಾಮಗಳು.
- ಇಂಡ್ ಎಎಸ್ 12ಕ್ಕೆ ತಿದ್ದುಪಡಿ, ಆದಾಯ ತೆರಿಗೆಗಳು

ಪರಿಶೀಲನೆಯ ನಂತರ ಕಂಪೆನಿಯು ಮೇಲಿನ ಪ್ರಮಾಣಗಳು ಮತ್ತು ತಿದ್ದುಪಡಿಗಳು ಹಣಕಾಸು ತಃಖ್ತೆಗಳ ಮೇಲೆ ಯಾವುದೇ ಪರಿಣಾಮಗಳನ್ನು ಬೀರಿಲ್ಲ ಎಂದು ನಿರ್ಧರಿಸಿದೆ.

2.2 ಅಂದಾಜುಗಳ ಬಳಕೆ :

ವರದಿಯ ಅವಧಿಯಲ್ಲಿ ಆಸ್ತಿಗಳು, ಹೊಣೆಗಳು, ಆದಾಯ ಮತ್ತು ಖರ್ಚುಗಳಿಗೆ ಸಂಬಂಧಿಸಿದಂತೆ ವರದಿಮಾಡಿರುವ ಮೊತ್ತಗಳನ್ನು ಪ್ರಭಾವಿಸುವ ತೀರ್ಮಾನಗಳು, ಅಂದಾಜುಗಳು ಮತ್ತು ಊಹನಗಳನ್ನು ಆಡಳಿತ ಮಂಡಳಿಯು ಮಾಡುವುದನ್ನು ಹಣಕಾಸು ತಃಖ್ತೆಗಳ ಸಿದ್ಧಪಡಿಸುವಿಕೆ ಅಗತ್ಯವಾಗುತ್ತದೆ. ಇಂತಹ ಅಂದಾಜುಗಳು ಮತ್ತು ಊಹನಗಳನ್ನು ಯುಕ್ತವಾದ ಮತ್ತು ದೂರದೃಷ್ಟಿಯ ಆಧಾರದ ಮೇಲೆ ಎಲ್ಲ ಲಭ್ಯ ಮಾಹಿತಿಯನ್ನೂ ಲೆಕ್ಕಕ್ಕೆ ತೆಗೆದುಕೊಂಡು ಮಾಡಲಾಗುತ್ತದೆಯಾದರೂ ನೈಜ ಫಲಿತಾಂಶಗಳು ಈ ಅಂದಾಜುಗಳಿಗಿಂತ ಭಿನ್ನವಾಗಿರಲು ಸಾಧ್ಯ.

ಮುಂದಿನ ಹಣಕಾಸು ವರ್ಷದ ಒಳಗೆ ಆಸ್ತಿಗಳು ಮತ್ತು ಹೊಣೆಗಳ ಮುಂದಕ್ಕೆ ಒಯ್ಯುವ ಮೊತ್ತಗಳಿಗೆ ಮಹತ್ವದ ಹೊಂದಾಣಿಕೆಯನ್ನು ಉಂಟುಮಾಡಬಲ್ಲ, ಹಣಕಾಸು ತಃಖ್ತೆಗಳ ಸಿದ್ಧಪಡಿಸುವಿಕೆಯಲ್ಲಿನ ನಿರ್ಧಾರಗಳು, ಊಹನಗಳು ಮತ್ತು ಅಂದಾಜು ಅನಿಶ್ಚಿತತೆಯ ಮೂಲ ಆಕರಗಳು ಸ್ವತ್ತು, ಸ್ಥಾವರ ಮತ್ತು ಸಲಕರಣೆಗಳ ಉಪಯುಕ್ತ ಆಯುಷ್ಯ, ಸಿಬ್ಬಂದಿ ಹಿತ ಹೊಣೆಗಳು, ಆದಾಯ ತೆರಿಗೆ ಹವಣಿಕೆ, ನಿಬಂಧನಾ ಮುಂದೂಡಿಕೆ ಶೀಲ್ಕು ಮತ್ತು ಮುಂದೂಡಲಾದ ತೆರಿಗೆಯ ಲೆಕ್ಕಾಚಾರ – ಇವುಗಳಿಗೆ ಸಂಬಂಧಿಸಿದ್ದಾಗಿದೆ.

2.3 ಚಾಲ್ತಿ ವರ್ಗೀಕರಣಕ್ಕೆ ಪ್ರತಿಯಾಗಿ ಚಾಲ್ತಿಯಲ್ಲದ ವರ್ಗೀಕರಣ :

ಕಂಪನಿಯು ಸಂತುಲನ ಪಟ್ಟಿಯಲ್ಲಿ ಆಸ್ತಿಗಳು ಮತ್ತು ಹೊಣೆಗಳನ್ನು ಚಾಲ್ತಿ/ಚಾಲ್ತಿಯಲ್ಲದ ವರ್ಗೀಕರಣದ ಆಧಾರದ ಮೇಲೆ ಪ್ರಸ್ತುತಪಡಿಸುತ್ತದೆ. ಆಸ್ತಿಯೊಂದನ್ನು ಕೆಳಗಿನ ಸಂದರ್ಭದಲ್ಲಿ ಚಾಲ್ತಿ ಎಂದು ಪರಿಗಣಿಸಲಾಗುತ್ತದೆ:

* ಸಾಧಾರಣವಾದ ಕಾರ್ಯಾಚರಣೆ ಆವರ್ತನದಲ್ಲಿ ಸಾಕ್ಷಾತ್ಕಾರವಾಗುವ ನಿರೀಕ್ಷೆಯಿರುವ ಅಥವಾ ಮಾರಾಟಮಾಡಲು ಇಲ್ಲವೇ ಬಳಸಲು ಉದ್ದೇಶಿತವಾಗಿರುವಂಥದ್ದು.
* ವರದಿಯ ಅವಧಿಯ ನಂತರದ ಹನ್ನೆರಡು ತಿಂಗಳುಗಳಲ್ಲಿ ಸಾಕ್ಷಾತ್ಕಾರವಾಗುವ ನಿರೀಕ್ಷೆಯಿರುವಂಥದ್ದು
* ವರದಿಯ ಅವಧಿಯ ಕನಿಷ್ಠ ಹನ್ನೆರಡು ತಿಂಗಳುಗಳ ನಂತರವಾದರೂ ವಿನಿಮಯ ಮಾಡಲು ಅಥವಾ ಹೊಣೆಯೊಂದರ ಇತ್ಯರ್ಥಕ್ಕಾಗಿ ಬಳಸಲು ನಿರ್ಬಂಧವಿರದ ಹೊರತು ನಗದು ಅಥವಾ ನಗದು ಸಮಾನಗಳು.

ಇತರ ಎಲ್ಲ ಆಸ್ತಿಗಳನ್ನೂ ಚಾಲ್ತಿಯಲ್ಲದವು ಎಂದು ಪರಿಗಣಿಸಲಾಗುತ್ತದೆ.

ಹೊಣೆಯೊಂದನ್ನು ಕೆಳಗಿನ ಸಂದರ್ಭದಲ್ಲಿ ಚಾಲ್ತಿ ಎಂದು ಪರಿಗಣಿಸಲಾಗುತ್ತದೆ :

* ಸಾಧಾರಣವಾದ ಕಾರ್ಯಾಚರಣೆ ಆವರ್ತನದಲ್ಲಿ ಅದು ಇತ್ಯರ್ಥವಾಗುವ ನಿರೀಕ್ಷೆಯಿರುತ್ತದೆ.
* ವರದಿಯ ಅವಧಿಯ ನಂತರದ ಹನ್ನೆರಡು ತಿಂಗಳುಗಳಲ್ಲಿ ಇತ್ಯರ್ಥವಾಗುವಂಥದ್ದಾಗಿರುತ್ತದೆ.
* ವರದಿಯ ಅವಧಿಯ ನಂತರ ಕನಿಷ್ಠ ಹನ್ನೆರಡು ತಿಂಗಳ ಕಾಲಕ್ಕಾದರೂಹೊಣೆಯ ಇತ್ಯರ್ಥವನ್ನು ಮುಂದೂಡಲು ಯಾವುದೇ ಷರತ್ತುಬದ್ಧವಲ್ಲದ ಹಕ್ಕು ಇರುವುದಿಲ್ಲ.

ಕಂಪನಿಯು ಇತರ ಎಲ್ಲ ಹೊಣೆಗಳನ್ನೂ ಚಾಲ್ತಿಯಲ್ಲದವು ಎಂದು ಪರಿಗಣಿಸುತ್ತದೆ.

ಮುಂದೂಡಲಾದ ತೆರಿಗೆ ಆಸ್ತಿಗಳು ಮತ್ತು ಹೊಣೆಗಳನ್ನು ಚಾಲ್ತಿಯಲ್ಲದ ಆಸ್ತಿಗಳು ಮತ್ತು ಹೊಣೆಗಳು ಎಂದು ವರ್ಗೀಕರಿಸಲಾಗುತ್ತದೆ.

ಕಾರ್ಯಯುಕ್ತ ಆವರ್ತನದ ಅವಧಿಯೆಂದರೆ ಸಂಸ್ಕರಣಕ್ಕಾಗಿ ಆಸ್ತಿಗಳನ್ನು ಸ್ವಾಧೀನಪಡಿಸಿಕೊಳುವ ಮತ್ತು ಅವುಗಳು ನಗದು ಮತ್ತು ನಗದು ಸಮಾನಗಳಾಗಿ ಸಾಕ್ಷಾತ್ಕಾರಗೊಳ್ಳುವ ಬಿಂದುವಿನ ನಡುವಿನ ಅವಧಿಯಾಗಿದೆ. ಕಂಪೆನಿಯು ತನ್ನ ಕಾರ್ಯಯುಕ್ತ ಆವರ್ತನದ ಅವಧಿಯನ್ನು ಹನ್ನೆರಡು ತಿಂಗಳು ಎಂದು ಗುರುತಿಸಿದೆ.

2.4 ಸ್ವತ್ತು, ಸ್ಥಾವರ ಮತ್ತು ಸಲಕರಣೆ ("ಪಿಪಿಇ")

ಇಂಡ್ ಎಎಸ್ ಗೆ ಪರಿವರ್ತಿತವಾಗುವ ದಿನಾಂಕದಂದು ಇದ್ದಂತೆ ಹಿಂದಿನ ಜಿಎಎಪಿ ಹಣಕಾಸು ತಃಖ್ತೆಗಳಲ್ಲಿ ಗುರುತಿಸಲಾದಂತೆ ಭೂಮಿ ಮತ್ತು ಹಕ್ಕುಗಳನ್ನು ಹೊರತುಪಡಿಸಿ ತನ್ನ ಎಲ್ಲ ಸ್ವತ್ತು, ಸ್ಥಾವರ ಮತ್ತು ಸಲಕರಣೆಯ ಮುಂದೊಯ್ಯುವ ಮೌಲ್ಯವನ್ನು ಮುಂದುವರೆಸಲು ಕಂಪನಿಯು ನಿರ್ಧರಿಸಿದೆ; ಕಾರ್ಯಕಾರಿ ಚಲಾವಣಾ ಹಣದಲ್ಲಿ ಯಾವುದೇ ಬದಲಾವಣೆಯಿಲ್ಲದ ಕಾರಣ, ಪ್ರಸ್ತುತ ಇಂಡ್ ಎಎಸ್ ಗೆ ಅನುಸಾರವಾಗಿ ಅಗತ್ಯ ಬದಲಾವಣೆಗಳನ್ನು ಮಾಡಿದ ನಂತರ ಪರಿವರ್ತನೆಯ ದಿನಾಂಕದಂದು ಇದ್ದಂತೆ ಹಿಂದಿನ ಜಿಎಎಪಿ ಹಾಗೂ ಬಳಕೆಯ ಪ್ರಕಾರ ಪರಿಗಣಿತ ವೆಚ್ಚದಲ್ಲಿ ಲೆಕ್ಕಹಾಕಲಾಗಿದೆ.

ಸ್ವತ್ತು, ಸ್ಥಾವರ ಮತ್ತು ಸಲಕರಣೆಯನ್ನು, ಭೂಮಿ ಮತ್ತು ಹಕ್ಕುಗಳನ್ನು ಹೊರತುಪಡಿಸಿ, ವೆಚ್ಚದಲ್ಲಿ, ಸಂಚಿತ ಸವಕಳಿ ಮತ್ತು ಬಾಧೆಯ ನಷ್ಟದ ನಿವ್ವಳವಾಗಿ, ಅವು ಇದ್ದಲ್ಲಿ, ತೋರಿಸಲಾಗಿದೆ. ಇಂತಹ ವೆಚ್ಚದಲ್ಲಿ ಖರೀದಿ ಬೆಲೆ, ಮರುಭರಿಕೆಯಾಗದ ತೆರಿಗೆಗಳು ಮತ್ತು ಸುಂಕಗಳು, ಅರ್ಹತೆಯ ಆಸ್ತಿಗಳ ಮೇಲಿನ ಸಾಲ ವೆಚ್ಚಗಳು ಮತ್ತು ಆಡಳಿತ ಮಂಡಳಿಯು ಉದ್ದೇಶಿಸುವ ವಿಧದಲ್ಲಿ ಕಾರ್ಯಯುಕ್ತವಾಗಲು ಸಮರ್ಥವಾಗುವಂತೆ ಆಸ್ತಿಯನ್ನು ಅದರ ನೆಲೆ ಮತ್ತು ಸ್ಥಿತಿಗೆ ತರಲು ಅಧ್ಯಾರೋಪಿಸಬಹುದಾದ ಯಾವುದೇ ನೇರವಾದ ವೆಚ್ಚವು ಸೇರುತ್ತದೆ. ಈ ವೆಚ್ಚದಲ್ಲಿ ಕಳಚುವಿಕೆಯ ಹಾಗೂ ಸಲಕರಣೆಯನ್ನು ಅಲ್ಲಿಂದ ತೆಗೆದು ನೆಲೆಯನ್ನು ಹಿಂದಿನಂತೆ ತೆರವುಗೊಳಿಸುವ ವೆಚ್ಚದ ಯಾವುದೇ ಅಂದಾಜು ಸೇರಿರುವುದಿಲ್ಲ.

ಭೂಮಿ ಮತ್ತು ಹಕ್ಕುಗಳನ್ನು ಮರುಮೌಲ್ಯಮಾಪನದ ದಿನಾಂಕದಂದು ಗುರುತಿಸಲಾದ ನ್ಯಾಯಯುಕ್ತ ಮೌಲ್ಯದಲ್ಲಿ ಲೆಕ್ಕಹಾಕಲಾಗುತ್ತದೆ. ಭೂಮಿಯ ಮೌಲ್ಯಮಾಪನವನ್ನು ಪರಿವರ್ತನೆಯ ದಿನಾಂಕವಾದ 1 ಏಪ್ರಿಲ್ 2016ರಂದು ನಡೆಸಲಾಯಿತು ಮತ್ತು ಮರುಮೌಲ್ಯಮಾಪನ ಮಾಡಲಾದ ಆಸ್ತಿಯ ಮುಂದೊಯ್ಯುವ ಮೊತ್ತವು ಅದರ ನ್ಯಾಯಯುತ ಮೌಲ್ಯದೊಂದಿಗೆ ಗಣನೀಯವಾಗಿ ವ್ಯತ್ಯಾಸಗೊಳ್ಳದಂತೆ ಕಂಪನಿಯು ಮರುಮೌಲ್ಯಮಾಪನವನ್ನು ಕಾಲಕಾಲಕ್ಕೆ ನಡೆಸಿರುವುದಿಲ್ಲ.

ಮರುಮೌಲ್ಯಮಾಪನದ ಹೆಚ್ಚಳವನ್ನು ಓಸಿಐ ಯಲ್ಲಿ ದಾಖಲಿಸಲಾಗುತ್ತದೆ ಮತ್ತು ಈಕ್ವಿಟಿಯಲ್ಲಿನ ಆಸ್ತಿ ಮರುಮೌಲ್ಯಮಾಪನ ಹೆಚ್ಚಳಕ್ಕೆ ಜಮಾಮಾಡಲಾಗುತ್ತದೆ. ಆದರೆ, ಮುನ್ನ ಲಾಭ ಅಥವಾ ನಷ್ಟದಲ್ಲಿ ಗುರುತಿಸಲಾದ ಅದೇ ಆಸ್ತಿಯ ಮರುಮೌಲ್ಯಮಾಪನ ಕೊರತೆಯನ್ನು ವಿಪರ್ಯಾಯಗೊಳಿಸುವ ಮಟ್ಟಿಗೆ ಹೆಚ್ಚಳವನ್ನು ಲಾಭ ಮತ್ತು ನಷ್ಟದಲ್ಲಿ ಗುರುತಿಸಲಾಗುತ್ತದೆ. ಆಸ್ತಿ ಮರುಮೌಲ್ಯಮಾಪನ ಮುಡಿಪಿನಲ್ಲಿ ಗುರುತಿಸಲಾದ ಅದೇ ಆಸ್ತಿಯ ಅಸ್ತಿತ್ವದಲ್ಲಿರುವ ಹೆಚ್ಚಳಕ್ಕೆ ಪ್ರತಿಯಾಗಿ ಇರಿಸುವ ಮಟ್ಟಿಗೆ ಹೊರತುಪಡಿಸಿ ಮರುಮೌಲ್ಯಮಾಪನ ಕೊರತೆಯನ್ನು ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಗುರುತಿಸಲಾಗುತ್ತದೆ.

ಕಂಪೆನಿಯು ಸ್ವತ್ತು, ಸ್ಥಾವರ ಮತ್ತು ಸಲಕರಣೆಯನ್ನು ನೇರ ರೇಖೆ ವಿಧಾನವನ್ನು ಬಳಸಿ ಸವಕಳಿಯನ್ನು ವಿಧಿಸುತ್ತದೆ ಮತ್ತು ದಿನಾಂಕ 25 ನವೆಂಬರ್ 2009ರ ಕೆಇಆರ್‌ಸಿ ಶುಲ್ಕ ಆದೇಶವು ಅಂಗೀಕರಿಸಿರುವ ದರದಲ್ಲಿ ವಿಧಿಸಲಾಗಿದೆ. ಕಂಪೆನಿ ಕಾಯ್ದೆ, 2013ರ ಅನುಸೂಚಿ II ರ ಅಡಿಯಲ್ಲಿ ನಿಗದಿಪಡಿಸಲಾಗಿರುವ ದರಗಳಲ್ಲಿ ಕಂಪನಿಯು ಸವಕಳಿಯನ್ನು ವಿಧಿಸಿರುವುದಿಲ್ಲ. ಆಸ್ತಿಗಳು ಬಳಕೆಗೆ ಸಿದ್ಧವಾಗುವ ತಿಂಗಳಿನ ನಂತರದ ತಕ್ಷಣದ ತಿಂಗಳಿನಿಂದ ಪ್ರಮಾಣಾನುಸಾರವಾದ ದರಗಳಲ್ಲಿ ಸವಕಳಿಯನ್ನು ಒದಗಿಸಲಾಗುತ್ತದೆ. ಒಂದು ವೇಳೆ ಕೆಇಆರ್‌ಸಿ ದರಗಳನ್ನು ಪರಿಷ್ಕರಿಸಿ ಅಧಿಸೂಚನೆ ಹೊರಡಿಸಿದರೆ ಕಂಪನಿಯು ಕೆಇಆರ್‌ಸಿ ಅಧಿಸೂಚಿಸಿದ ಬದಲಾವಣೆಯ ದಿನಾಂಕದಿಂದ ಅನ್ವಯವಾಗುವಂತೆ ಅಳವಡಿಸಿಕೊಳ್ಳುತ್ತದೆ. ಎಲ್ಲ ಆಸ್ತಿಗಳ ಉಳಿಕೆ ಮೌಲ್ಯವನ್ನು ಕಂಪೆನಿ ಕಾಯ್ದೆ 2013ರ ಪ್ರಕಾರ 5% ಕ್ಕೆ ಪ್ರತಿಯಾಗಿ ಕೆಇಆರ್‌ಸಿ ಮಾರ್ಗಸೂಚಿಗಳ ಪ್ರಕಾರ 10% ದಲ್ಲಿ ಪರಿಗಣಿಸಲಾಗಿದೆ.

ಉಪಯುಕ್ತ ಮೌಲ್ಯಗಳನ್ನು ಕೆಳಗೆ ಪಟ್ಟಿಮಾಡಲಾಗಿದೆ :

ಆಸ್ತಿಗಳು	ಉಪಯುಕ್ತ ಬಳಕೆ
ಕಟ್ಟಡಗಳು	15 ರಿಂದ 50 ವರ್ಷಗಳು
ಇತರ ಸಿವಿಲ್ ಕಾಮಗಾರಿಗಳು	50 ವರ್ಷಗಳು
ರಸ್ತೆಗಳು	50 ವರ್ಷಗಳು
ಸ್ಥಾವರ ಮತ್ತು ಯಂತ್ರೋಪಕರಣ	5 ರಿಂದ 25 ವರ್ಷಗಳು
ಲೈನುಗಳು ಮತ್ತು ಕೇಬಲ್ ಜಾಲ	15 ರಿಂದ 50 ವರ್ಷಗಳು
ಮೋಟಾರು ವಾಹನ	5 ವರ್ಷಗಳು
ಪೀಠೋಪಕರಣ & ಜೋಡಣೆಗಳು	15 ವರ್ಷಗಳು
ಕಛೇರಿ ಸಲಕರಣೆಗಳು	15 ವರ್ಷಗಳು

ಅಂದಾಜುಮಾಡಲಾದ ಈ ಉಪಯುಕ್ತ ಆಯುಷ್ಯಗಳು ವಾಸ್ತವಿಕವಾಗಿದ್ದು ಆಸ್ತಿಗಳು ಬಳಕೆಗೆ ತೊಡಗುವ ಅವಧಿಯ ನ್ಯಾಯಯುತವಾದ ಅಂದಾಜನ್ನು ಒದಗಿಸುತ್ತದೆ ಎಂದು ಕಂಪೆನಿಯು ನಂಬಿರುತ್ತದೆ.

ಪ್ರಾರಂಭದಲ್ಲಿ ಗುರುತಿಸಲಾದ ಸ್ವತ್ತು, ಸ್ಥಾವರ ಮತ್ತು ಸಲಕರಣೆಯ ಅಂಗ ಅಥವಾ ಯಾವುದೇ ಮಹತ್ವದ ಭಾಗವು ಅದರ ವಿಲೇವಾರಿಯ ನಂತರ ಅಥವಾ ಅದರ ಬಳಕೆ ಅಥವಾ ವಿಲೇವಾರಿಯಿಂದ ಯಾವುದೇ ಭವಿಷ್ಯದ ಆರ್ಥಿಕ ಲಾಭಗಳನ್ನು ಕಂಪನಿಯು ನಿರೀಕ್ಷಿಸದಿದ್ದಾಗ ಗುರುತಿಸುವಿಕೆಯನ್ನು ಹಿಂದೆಗೆದುಕೊಳ್ಳುತ್ತದೆ. ಆಸ್ತಿಯ ಗುರುತಿಸುವಿಕೆಯನ್ನು ಹೀಗೆ ಹಿಂದೆಗೆದುಕೊಂಡ ಕಾರಣ ಉದ್ಭವಿಸುವ ಯಾವುದೇ ಲಾಭ ಅಥವಾ ನಷ್ಟವನ್ನು (ನಿವ್ವಳ ವಿಲೇವಾರಿ ಉತ್ಪತ್ತಿಗಳು ಮತ್ತು ಆಸ್ತಿಯ ಮುಂದೊಯ್ಯುವ ಮೊತ್ತಗಳ ನಡುವಿನ ವ್ಯತ್ಯಾಸ) ಆಸ್ತಿಯ ಗುರುತಿಸುವಿಕೆಯನ್ನು ಹಿಂದೆಗೆದುಕೊಂಡಾಗ ಆದಾಯ ತಃಖ್ತೆಯಲ್ಲಿ ಸೇರಿಸಲಾಗುತ್ತದೆ.

ಇಎಸ್ಎಎಆರ್, 1985ರ ಅನುಬಂಧ , ಕಂಡಿಕೆ 2.37ರ ಅನುಸಾರ ವೈಯಕ್ತಿಕವಾಗಿ ರೂ. 500 ಅಥವಾ ಅದಕ್ಕಿಂತ ಕಡಿಮೆ ಮೌಲ್ಯದ ಸ್ಥಾವರ ಮತ್ತು ಯಂತ್ರೋಪಕರಣಕ್ಕೆ ಅವನ್ನು ಅನುಷ್ಠಾನಗೊಳಿಸಿ ಬಳಕೆಗೆ ತೊಡಗಿಸಿದ ವರ್ಷದಲ್ಲಿ 100% ದಂತೆ ಸವಕಳಿಯನ್ನು ವಿಧಿಸಲಾಗಿದೆ.

ಬಳಕೆಯಲ್ಲಿರದ ಮತ್ತು ಬಿಡುಗಡೆ ಮಾಡಿದ ಆಸ್ತಿಗಳನ್ನು ಬಿಡುಗಡೆಯ ತಿಂಗಳಿನಲ್ಲಿ ಬರೆಯಯಾದ ಮೌಲ್ಯದಲ್ಲಿ ಲೆಕ್ಕಕ್ಕೆ ತೆಗೆದುಕೊಂಡು ಅದನ್ನು ದಾಸ್ತಾನು ಎಂದು ಪರಿಗಣಿಸಲಾಗಿದೆ.

ತೊಡೆದುಹಾಕಲಾದ ಆಸ್ತಿಗಳನ್ನು ಉಳಿಕೆ ಮೌಲ್ಯದಲ್ಲಿ, ಅರ್ಥಾತ್ ಆಸ್ತಿಯ ಮೂಲ ವೆಚ್ಚದ 10% ದಂತೆ ಲೆಕ್ಕಕ್ಕೆ ತೆಗೆದುಕೊಂಡು ಅದನ್ನು ದಾಸ್ತಾನು ಎಂದು ಪರಿಗಣಿಸಲಾಗಿದೆ.

ವರ್ಷದಲ್ಲಿ ಬಿಡುಗಡೆ ಮಾಡಲಾದ ಟ್ರಾನ್ಸ್ಫಾರ್ಮರ್ಗಳನ್ನು ಅವುಗಳನ್ನು ಉಗ್ರಾಣಕ್ಕೆ ಹಿಂದಿರುಗಿಸಿದ ನಂತರವಷ್ಟೇ ಆಸ್ತಿಗಳ ಖಾತೆಯಿಂದ ತೆಗೆದುಹಾಕಲಾಗುತ್ತದೆ.

ಸಕ್ರಿಯ ಬಳಕೆಯಿಂದ ಹಿಂತೆಗೆದು ಅಗತ್ಯ ರಿಪೇರಿ/ಸರ್ವಿಸಿಂಗ್ ನಂತರ ಕೆಲಸಕ್ಕೆ ಮರುಬಿಡುಗಡೆ ಮಾಡಲಾದ ಆಸ್ತಿಗಳನ್ನು ಆ ಕಾಲಕ್ಕೆ ಅಸ್ತಿತ್ವದಲ್ಲಿರುವ ಬರೆಯಲಾದ ಮೌಲ್ಯದ ವೇಟೆಡ್ ಸರಾಸರಿಯಲ್ಲಿ ಲೆಕ್ಕಪುಸ್ತಕಗಳಲ್ಲಿ ವರ್ಗೀಕರಿಸಲಾಗುವುದು.

ಪ್ರತಿ ಸಂತುಲನ ಪಟ್ಟಿಯ ದಿನಾಂಕದಂದು ಇದ್ದಂತೆ, ಸ್ವತ್ತು, ಸ್ಥಾವರ ಮತ್ತು ಸಲಕರಣೆಯ ಸ್ವಾಧೀನಕ್ಕೆಂದು ಪಾವತಿಸಲಾದ ಮುಂಗಡವನ್ನು ಇತರ ಚಾಲ್ತಿಯಲ್ಲದ ಆಸ್ತಿಗಳ ಅಡಿ ಬಂಡವಾಳ ಮುಂಗಡವಾಗಿ ವರ್ಗೀಕರಿಸಲಾಗುತ್ತದೆ. ಅಸ್ತಿತ್ವದಲ್ಲಿರುವ ಸ್ಥಿರಾಸ್ತಿಯ ಆಯುಷ್ಯ ಮತ್ತು/ಅಥವಾ ಸಾಮರ್ಥ್ಯವನ್ನು ಹೆಚ್ಚಿಸಲು ಕಾರಣವಾಗುವ ತರುವಾಯದ ನವೀಕರಣ ಅಥವಾ ಆಧುನೀಕರಣ ವೆಚ್ಚವನ್ನು ಸಂಬಂಧಿತ ಆಸ್ತಿಗಳ ವೆಚ್ಚಕ್ಕೆ ಸೇರಿಸಲಾಗುವುದು ಅಥವಾ ಅದರಿಂದ ಕಂಪನಿಗೆ ಭವಿಷ್ಯದ ಆರ್ಥಿಕ ಲಾಭಗಳು ಹರಿದುಬರುವುದು ಸಂಭಾವ್ಯವಾದಾಗ ಸೂಕ್ತವಾದಂತೆ ಪ್ರತ್ಯೇಕ ಆಸ್ತಿಯೆಂದು ಗುರುತಿಸಲಾಗುವುದು.

2.5 ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ :

ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಗೆ ಒದಗಿಸಲಾದ ಸಾಮಗ್ರಿಗಳನ್ನು ಪ್ರಮಾಣಿತ ದರದಲ್ಲಿ(ಸಮಾನ ದರಗಳ ಅನುಸೂಚಿಯ ಅಡಿ ನಿಗದಿಪಡಿಸಿರುವ ದರಗಳ ಪ್ರಕಾರ ಮೌಲ್ಯಹಾಕಲಾಗಿದೆ. ದರಗಳ ಅನುಸೂಚಿ/ ದರಗಳ ಸಮಾನ ಅನುಸೂಚಿಯನ್ನು ಹಿಂದಿನ ಖರೀದಿ ಬೆಲೆ ಮತ್ತು ಅಸ್ತಿತ್ವದಲ್ಲಿರುವ ಮಾರುಕಟ್ಟೆ ದರಗಳನ್ನು ಆಧರಿಸಿ ನಿರ್ಧರಿಸಲಾಗಿದೆ). ಕಾರ್ಮಿಕ ಮತ್ತು ನೇರ ವೆಚ್ಚಗಳಿಗೆ ಸಂಬಂಧಿಸಿದಂತೆ ಇವನ್ನು ನೈಜ ವೆಚ್ಚದಲ್ಲಿ ಲೆಕ್ಕತೋರಿಸಲಾಗಿದೆ. ಗುತ್ತಿಗೆಗಳನ್ನು ಅಂತಮ ಪೂರ್ಣಗೊಳಿಸುವಿಕೆ ವರದಿ ಅಥವಾ ತಾಂತ್ರಿಕ ಕಮಿಶನಿಂಗ್ ವರದಿಗಳನ್ನು ಪಡೆದ ನಂತರ ಬಂಡವಾಳೀಕರಿಸಲಾಗುವುದು.

2.6 ಅಗ್ರಾಹ್ಯ ಆಸ್ತಿಗಳು

ಪ್ರತ್ಯೇಕವಾಗಿ ಸ್ವಾಧೀನಪಡಿಸಿಕೊಳ್ಳಲಾದ ಅಗ್ರಾಹ್ಯ ಆಸ್ತಿಗಳನ್ನು ವೆಚ್ಚದ ಪ್ರಾರಂಭಿಕ ಗುರುತಿಸುವಿಕೆಯ ಆಧಾರದ ಮೇಲೆ ಲೆಕ್ಕಹಾಕಲಾಗುತ್ತದೆ. ಪ್ರಾರಂಭಿಕ ಗುರುತಿಸುವಿಕೆಯ ನಂತರ, ಅಗ್ರಾಹ್ಯ ಆಸ್ತಿಗಳನ್ನು ಸಂಚಿತ ದತ್ತಿ ಮತ್ತು ಸಂಚಿತ ಬಾಧೆಯ ನಷ್ಟಗಳನ್ನು ಕಳೆದು ವೆಚ್ಚದಲ್ಲಿ ತೋರಿಸಲಾಗುವುದು. ಆಂತರಿಕವಾಗಿ ಸೃಷ್ಟಿಸಲಾಗುವ ಅಗ್ರಾಹ್ಯಗಳನ್ನು ಬಂಡವಾಳೀಕರಿಸಲಾಗುವುದಿಲ್ಲ ಮತ್ತು ಸಂಬಂಧಿತ ಖರ್ಚನ್ನು ಅದು ವ್ಯಯವಾದ ಅವಧಿಯ ಲಾಭ ಅಥವಾ ನಷ್ಟದಲ್ಲಿ ಪ್ರತಿಫಲಿತವಾಗುತ್ತದೆ. ಅಗ್ರಾಹ್ಯ ಆಸ್ತಿಗಳ ಉಪಯುಕ್ತ ಆಯುಷ್ಯವನ್ನು ಸೀಮಿತ ಅಥವಾ ಅನಿರ್ದಿಷ್ಟ ಎಂದು ಅಂದಾಜಿಸಲಾಗುತ್ತದೆ.

ಪ್ರತ್ಯೇಕವಾಗಿ ಪಡೆದುಕೊಳ್ಳಲಾದ ಮತ್ತು ಸೀಮಿತ ಉಪಯುಕ್ತ ಆಯುಷ್ಯವಿರುವ ಅಗ್ರಾಹ್ಯ ಆಸ್ತಿಗಳನ್ನು ಸಂಚಿತ ದತ್ತಿ ಹಾಗೂ ಸಂಚಿತ ಬಾಧೆ ನಷ್ಟಗಳನ್ನು ಕಳೆದು ವೆಚ್ಚದಲ್ಲಿ ತೋರಿಸಲಾಗುತ್ತದೆ. ದತ್ತಿಯನ್ನು ನೇರ ರೇಖೆ ಆಧಾರದ ಮೇಲೆ ಅವುಗಳ ಅಂದಾಜುಮಾಡಲಾದ ಉಪಯುಕ್ತ ಆಯುಷ್ಯಕ್ಕೆ, ಅರ್ಥಾತ್ ಒಪ್ಪಂದ ಅಥವಾ ಪರವಾನಗಿಯ ಅವಧಿಗೆ ಗುರುತಿಸಲಾಗುತ್ತದೆ.

ಪ್ರತಿ ವರದಿಯ ಅವಧಿಯ ಕೊನೆಗೆ ಅಂದಾಜುಮಾಡಲಾದ ಉಪಯುಕ್ತ ಆಯುಷ್ಯ ಮತ್ತು ದತ್ತಿ ವಿಧಾನವನ್ನು ಪರಿಶೀಲಿಸಲಾಗುತ್ತದೆ ಹಾಗೂ ಅಂದಾಜಿನಲ್ಲಿನ ಯಾವುದೇ ಪರಿಣಾಮಗಳ ಪರಿಣಾಮವನ್ನು ಭವಿಷ್ಯದ ಆಧಾರದ ಮೇಲೆ ಲೆಕ್ಕಕ್ಕೆ ತೆಗೆದುಕೊಳ್ಳಲಾಗುತ್ತದೆ.

ಅನಿರ್ದಿಷ್ಟ ಉಪಯುಕ್ತ ಆಯುಷ್ ಹೊಂದಿರುವ ಅಗ್ರಾಹ್ಯ ಆಸ್ತಿಗಳನ್ನು ದತ್ತಿ ಹಾಕಲಾಗುವುದಿಲ್ಲ, ಆದರೆ ವಾರ್ಷಿಕವಾಗಿ ಬಾಧೆಗಳಿಗೆ ಸಂಬಂಧಿಸಿದಂತೆ ಪರೀಕ್ಷಿಸಲಾಗುತ್ತದೆ, ಪ್ರತ್ಯೇಕವಾಗಿ ಅಥವಾ ನಗದು-ಸೃಷ್ಟಿಯಾಗುವ ಘಟಕದ ಹಂತದಲ್ಲಿ. ಅನಿರ್ದಿಷ್ಟ ಆಯುಷ್ಯದ ಅಂದಾಜನ್ನು ಆ ಅನಿರ್ದಿಷ್ಟ ಆಯುಷ್ಯವನ್ನು ಬೆಂಬಲಿಸಬಹುದೇ ಎಂದು ನಿರ್ಧರಿಸಲು ವಾರ್ಷಿಕವಾಗಿ ಪರಿಶೀಲಿಸಲಾಗುತ್ತದೆ. ಬೆಂಬಲಿಸಲು ಸಾಧ್ಯವಿರದೇ ಹೋದಲ್ಲಿ, ಉಪಯುಕ್ತ ಆಯುಷ್ಯದಲ್ಲಿನ ಬದಲಾವಣೆಯನ್ನು ಅನಿರ್ದಿಷ್ಟದಿಂದ ಸೀಮಿತಕ್ಕೆ ಭವಿಷ್ಯದ ಆಧಾರದಲ್ಲಿ ಮಾಡಲಾಗುವುದು.

ಅಗ್ರಾಹ್ಯ ಆಸ್ತಿಯೊಂದರ ಗುರುತಿಸುವಿಕೆಯನ್ನು ಹಿಮತೆಗೆದುಕೊಂಡ ಕಾರಣ ಉದ್ಭವವಾಗುವ ಲಾಭ ಅಥವಾ ನಷ್ಟಗಳನ್ನು ನಿವ್ವಳ ವಿಲೇವಾರಿ ಉತ್ಪತ್ತಿಗಳು ಮತ್ತು ಆಸ್ತಿಯ ಮುಂದೊಯ್ಯುವ ಮೊತ್ತದ ವ್ಯತ್ಯಾಸವಾಗಿ ಲೆಕ್ಕಹಾಕಲಾಗುವುದು ಮತ್ತು ಆಸ್ತಿಯ ಗುರುತಿಸುವಿಕೆಯನ್ನು ಹಿಮದೆಗೆದುಕೊಂಡಾಗ ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಗುರುತಿಸಲಾಗುವುದು.

ಅಭಿವೃದ್ಧಿಯಲ್ಲಿರುವ ಅಗ್ರಾಹ್ಯ ಆಸ್ತಿಗಳು ಭವಿಷ್ಯದ ಬಳಕೆಗೆ ಉದ್ದೇಶಿತವಾಗಿರುವ ತಂತ್ರಾಂಶದ ಅಭಿವೃದ್ಧಿಗೆಂದು ಪಾವತಿಸಲಾದ ಮೊತ್ತವನ್ನು ಪ್ರತಿನಿಧಿಸುತ್ತದೆ ಮತ್ತು ಇದನ್ನು ಪೂರ್ಣಗೊಳಿಸುವಿಕೆ/ಕಮಿಶನಿಂಗ್ ಸಂಬಂಧಿಸಿದಂತೆ ಸ್ವೀಕೃತಿಯನ್ನು ಪಡೆದ ನಂತರ ಬಂಡವಾಳೀಕರಿಸಲಾಗುವುದು. ಇವನ್ನು ವೆಚ್ಚದಲ್ಲಿ ಮೌಲ್ಯಹಾಕಲಾಗುವುದು.

2.7

ಅನುದಾನಗಳು ಮತ್ತು ಸಹಾಯಧನಗಳು

ಆದಾಯ ಅನುದಾನಗಳು

ಸರ್ಕಾರ ಮತ್ತು ಇತರ ಆಭಿಕರಣಗಳಿಂದ ಪಡೆಯಲಾದ ಆದಾಯ ಅನುದಾನಗಳು/ಶುಲ್ಕ ಸಹಾಯಧನಗಳನ್ನು ಅವುಗಳೊಂದಿಗೆ ಲಗತ್ತಾದ ಷರತ್ತುಗಳು ಅನುಸರಣೆಯಾಗುವ ಹಾಗೂ ಅನುದಾನಗಳನ್ನು ಪಡೆದುಕೊಳ್ಳುವ ಯುಕ್ತವಾದ ಭರವಸೆ ಇದ್ದಲ್ಲಿ ಮಾತ್ರ ಗುರುತಿಸಲಾಗುವುದು.

ಬಂಡವಾಳ ಅನುದಾನಗಳು ಮತ್ತು ಬಂಡವಾಳ ವೆಚ್ಚಕ್ಕಾಗಿ ಕೊಡುಗೆಗಳು :

ಸರ್ಕಾರ ಮತ್ತು ಇತರ ಪ್ರಾಧಿಕಾರಗಳಿಂದ ಬಂಡವಾಳ ವೆಚ್ಚಕ್ಕಾಗಿ ಪಡೆಯಲಾಗುವ ಅನುದಾನಗಳು/ಸಹಾಯಧನಗಳನ್ನು ಹಾಗೂ ಬಂಡವಾಳ ಕಾಮಗಾರಿಗಳಿಗಾಗಿ ಗ್ರಾಹಕರ ಕೊಡುಗೆಯನ್ನು ಪ್ರಾರಂಭಿಕವಾಗಿ ಮುಂದೂಡಲಾದ ಆದಾಯದ ಅಡಿಯಲ್ಲಿ ಪರಿಗಣಿಸಲಾಗುವುದು ಮತ್ತು ಇಂತದ ಅನುದಾನಗಳು/ಸಹಾಯಧನಗಳು ಸೇರುವ ವರ್ಗಕ್ಕೆ ವಿಧಿಸಲಾದ ಸವಕಳಿಯನ್ನು ಆಧರಿಸಿ ಆದಾಯಕ್ಕೆ ಅವನ್ನು ತೆಗೆದುಕೊಳ್ಳಲಾಗುವುದು.

2.8

ಆಸ್ತಿಗಳಿಗೆ ಬಾಧೆ ತಟ್ಟುವಿಕೆ

ಪ್ರತಿ ವರದಿಯ ಅವಧಿಗೆ ಆಸ್ತಿಯೊಂದು ಬಾಧೆಗೊಳಗಾಗಿರುವ ಸಂಬಂಧ ಸೂಚನೆಗಳು ದೊರೆಯುವುದೇ ಎಂದು ಕಂಪೆನಿಯು ಅಂದಾಜುಮಾಡುತ್ತದೆ. ಅಂತಹ ಯಾವುದಾದರೂ ಸೂಚನೆ ದೊರೆತರೆ ಅಥವಾ ಆಸ್ತಿಯೊಂದಕ್ಕೆ ಸಂಬಂಧಿಸಿದಂತೆ ವಾರ್ಷಿಕ ಬಾಧೆತಟ್ಟುವಿಕೆ ಪರೀಕ್ಷೆ ಅಗತ್ಯವಾಗಿದ್ದರೆ ಕಂಪೆನಿಯು ಆಸ್ತಿಯ ವಸೂಲಾಗುವ ಮೌಲ್ಯವನ್ನು ಅಂದಾಜುಮಾಡುತ್ತದೆ. ಆಸ್ತಿಯೊಂದರ ವಸೂಲಾಗುವ ಮೊತ್ತವೆಂದರೆ ಅದು ಆಸ್ತಿಯ ಅಥವಾ ನಗದು ಸೃಷ್ಟಿ ಘಟಕದ (ಸಿಜಿಯು) ನಿವ್ವಳ ಮೌಲ್ಯದಲ್ಲಿ ಹೆಚ್ಚಿನದರಿಂದ ವಿಲೇವಾರಿಯ ವೆಚ್ಚ ಮತ್ತು ಬಳಕೆಯಲ್ಲಿನ ಅದರ ಮೌಲ್ಯವನ್ನು ಕಳೆದರೆ ಬರುವ ಮೊತ್ತವಾಗಿದೆ. ಆಸ್ತಿಯೊಂದು ಇತರ ಆಸ್ತಿಗಳು ಅಥವಾ ಆಸ್ತಿ ಗುಂಪುಗಳಿಂದ ಬಹುವಾಗಿ ಸ್ವತಂತ್ರವಾಗಿರುವ ನಗದು ಹರಿವುಗಳನ್ನು ಸೃಷ್ಟಿಸದ ಹೊರತು ವಸೂಲಾಗುವ ಮೊತ್ತವನ್ನು ಪ್ರತ್ಯೇಕ ಆಸ್ತಿಗೆ ಲೆಕ್ಕಹಾಕಲಾಗುವುದು.

ಆಸ್ತಿಯೊಂದರ ಮುಂದೊಯ್ಯುವ ಮೊತ್ತ ಅಥವಾ ಸಿಜಿಯು ಅದರ ವಸೂಲಾಗುವ ಮೊತ್ತವನ್ನು ಮೀರಿದರೆ ಅಂತಹ ಆಸ್ತಿಯನ್ನು ಬಾಧೆಗೊಳಗಾಗಿದೆ ಎಂದು ಪರಿಗಣಿಸಿ ಅದನ್ನು ಅದರ ವಸೂಲಾಗುವ ಮೊತ್ತದಲ್ಲಿ ಗುರುತುಮಾಡಲಾಗುವುದು.

ಬಳಕೆಯಲ್ಲಿನ ಮೌಲ್ಯವನ್ನು ನಿರ್ಧರಿಸವಾಗ ಪೂರ್ವ-ತೆರಿಗೆ ರಿಯಾಯಿತಿ ದರವನ್ನು ಬಳಸಿ ಅಂದಾಜು ಭವಿಷ್ಯದ ನಗದು ಹರಿವುಗಳನ್ನು ಅವುಗಳ ಪ್ರಸ್ತುತ ಮೌಲ್ಯಕ್ಕೆ ರಿಯಾಯಿತಿ ಒದಗಿಸಲಾಗುವುದು. ಪೂರ್ವ-ತೆರಿಗೆ ರಿಯಾಯಿತಿ ದರವು ಹಣದ ಸಮಯ ಮೌಲ್ಯದ ಚಾಲ್ತಿ ಮಾರುಕಟ್ಟೆ ನಿರ್ಧಾರಣಗಳು ಮತ್ತು ಆಸ್ತಿಗೆ ನಿರ್ದಿಷ್ಟವಾದ ಅಪಾಯಗಳನ್ನು ಪ್ರಕಟಿಸುತ್ತದೆ. ವಿಲೇವಾರಿಯ ವೆಚ್ಚಗಳನ್ನು ಕಳೆದು ನ್ಯಾಯಯುತ ಮೌಲ್ಯವನ್ನು ನಿರ್ಧರಿಸುವಾಗ ಈಚೆಗಿನ ಮಾರುಕಟ್ಟೆ ವ್ಯವಹಾರಗಳನ್ನು ಲೆಕ್ಕಕ್ಕೆ

ತೆಗೆದುಕೊಳ್ಳಲಾಗುವುದು. ಇಂತಹ ಯಾವುದೇ ವ್ಯವಹಾರಗಳನ್ನು ಗುರುತಿಸಲು ಸಾಧ್ಯವಿರದೇ ಇದ್ದಲ್ಲಿ ಸೂಕ್ತ ಮೌಲ್ಯಮಾಪನ ಮಾದರಿಯನ್ನು ಬಳಸಲಾಗುವುದು. ಈ ಲೆಕ್ಕಾಚಾರಗಳನ್ನು ಮೌಲ್ಯಮಾಪನ ಗುಣಾಂಕಗಳು, ಸಾರ್ವಜನಿಕವಾಗಿ ವ್ಯಾಪಾರಿ ಕಂಪನಿಗಳಿಗೆ ಉದ್ಧೃತ ಷೇರು ಬೆಲೆಗಳು ಮತ್ತು ಇತರ ಲಭ್ಯ ನ್ಯಾಯಯುತ ಮೌಲ್ಯ ಸೂಚಕಗಳನ್ನು ಬಳಸಿ ಸರಿಹೊಂದಿಸಲಾಗುವುದು.

ಪ್ರತ್ಯೇಕ ಆಸ್ತಿಗಳು ಹಂಚಿಕೆಯಾದ ಕಂಪನಿಯು ಪ್ರತಿಯೊಂದು ಸಿಜಿಯು ಗೂ ಪ್ರತ್ಯೇಕವಾಗಿ ಸಿದ್ಧವಾಗುವ ವಿವರವಾದ ಆಯವ್ಯಯ ಮತ್ತು ಮುನ್ಸೂಚನಾ ಲೆಕ್ಕಾಚಾರಗಳನ್ನು ಆಧರಿಸಿ ಕಂಪೆನಿಯು ಆಸ್ತಿಗಳಿಗೆ ತಗುಲಿದ ಬಾಧೆಯ ಲೆಕ್ಕಾಚಾರವನ್ನು ಮಾಡುತ್ತದೆ. ಈ ಆಯವ್ಯಯ ಮತ್ತು ಮುನ್ಸೂಚನಾ ಲೆಕ್ಕಾಚಾರಗಳು ಸಾಧಾರಣವಾಗಿ ಐದು ವರ್ಷಗಳ ಅವಧಿಯನ್ನು ವ್ಯಾಪಿಸುತ್ತವೆ. ಹೆಚ್ಚು ದೀರ್ಘವಾದ ಅವಧಿಗಳಿಗೆ ದೀರ್ಘಾವಧಿ ಬೆಳವಣಿಗೆ ಪ್ರಮಾಣವನ್ನು ಲೆಕ್ಕಹಾಕಿ ಐದನೆಯ ವರ್ಷದ ನಂತರ ಭವಿಷ್ಯದ ನಗದು ಹರಿವುಗಳನ್ನು ಅಂದಾಜುಮಾಡಲು ಅನ್ವಯಿಸಲಾಗುತ್ತದೆ. ತೀರ ಇತ್ತೀಚಿನ ಆಯ್ವಯಯಗಳು/ಮುನ್ಸೂಚನೆಗಳನ್ನು ಮೀರಿದ ಅವಧಿಗಳಾಚೆಗೆ ನಗದು ಹರಿವಿನ ಅಂದಾಜುಗಳನ್ನು ಮಾಡಲು ಕಂಪನಿಯು ತರುವಾಯದ ವರ್ಷಗಳಿಗೆ ಸ್ಥಿರವಾದ ಅಥವಾ ಕುಗ್ಗುತ್ತಿರುವ ಬೆಳವಣಿಗೆ ಪ್ರಮಾಣವನ್ನು ಬಳಸಿ – ಹೆಚ್ಚುತ್ತಿರುವ ಪ್ರಮಾಣಕ್ಕೆ ಸಮರ್ಥನೆ ಇರದಿದ್ದಲ್ಲಿ – ಆಯವ್ಯಯದಲ್ಲಿನ ನಗದು ಹರಿವು ಅಂದಾಜುಗಳನ್ನು ಮಾಡುತ್ತದೆ. ಹೇಗೇ ಇದ್ದರೂ, ಈ ಬೆಳವಣಿಗೆಯ ಪ್ರಮಾಣವು ಉತ್ಪನ್ನಗಳ, ಉದ್ಯಮಗಳ ಅಥವಾ ವ್ಯಾಪಾರಿ ಸಂಸ್ಥೆಯ ಕಾರ್ಯವ್ಯಾಪ್ತಿಯ ದೇಶ ಇಲ್ಲವೇ ದೇಶಗಳ ಅಥವಾ ಆಸ್ತಿಯನ್ನು ಬಳಸಲಾಗುತ್ತಿರುವ ಮಾರುಕಟ್ಟೆಯ ದೀರ್ಘಾವಧಿ ಸರಾಸರಿ ಬೆಳವಣಿಗೆ ಪ್ರಮಾಣವನ್ನು ಮೀರುವುದಿಲ್ಲ.

ಮುಂದುವರೆಯುತ್ತಿರುವ ಕಾರ್ಯಾಚರಣೆಗಳ ಬಾಧೆ ನಷ್ಟಗಳನ್ನು, ದಾಸ್ತಾನುಗಳಿಗೆ ಬಾಧೆಯನ್ನೂ ಸೇರಿ, ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಗುರುತಿಸಲಾಗುತ್ತದೆ.

ಈ ಹಿಂದೆ ಗುರುತಿಸಲಾದ ಬಾಧೆ ನಷ್ಟಗಳು ಈಗ ಇವೆಯೇ ಅಥವಾ ಕುಗ್ಗಿವೆಯೇ ಎಂಬ ಬಗ್ಗೆ ಸೂಚನೆಗಳಿವೆಯೇ ಎಂದು ನಿರ್ಧರಿಸಲು ಪ್ರತಿ ಅವಧಿಯ ದಿನಾಂಕದಂದು ಅಂದಾಜನ್ನು ಮಾಡಲಾಗುತ್ತದೆ. ಈ ಬಗೆಯ ಸೂಚನೆ ಸಿಕ್ಕಲ್ಲಿ ಕಂಪನಿಯು ಆಸ್ತಿಯ ಅಥವಾ ಸಿಜಿಯು ವಿನ ವಸೂಲಾಗುವ ಮೊತ್ತವನ್ನು ನಿರ್ಧರಿಸುತ್ತದೆ. ಕಳೆದ ಬಾರಿ ಬಾಧೆಯ ನಷ್ಟವನ್ನು ಗುರುತಿಸಿದ ನಂತರ ಆಸ್ತಿಯ ವಸೂಲಾಗುವ ಮೊತ್ತವನ್ನು ನಿರ್ಧರಿಸಲು ಮಾಡಲಾದ ಊಹನಗಳಲ್ಲಿ ಬದಲಾವಣೆಗಳು ಇದ್ದಲ್ಲಿ ಮಾತ್ರ ಮೊದಲು ಗುರುತಿಸಲಾದ ಬಾಧೆ ನಷ್ಟವನ್ನು ವಿಪರ್ಯಯಗೊಳಿಸಲಾಗುತ್ತದೆ. ಮುಂಚಿನ ವರ್ಷಗಳಲ್ಲಿ ಆಸ್ತಿಗೆ ಯಾವುದೇ ಬಾಧೆ ನಷ್ಟವನ್ನು ಗುರುತಿಸದೇ ಇದ್ದಲ್ಲಿ, ಸವಕಳಿಯ ನಿವ್ವಳವಾಗಿ ನಿರ್ಧರಿಸಲಾಗುತ್ತಿದ್ದ ಮುಂದೆ ಒಯ್ಯುವ ಮೊತ್ತವನ್ನು ಮೀರದಂತೆ, ಅದರ ವಸೂಲಾಗುವ ಮೊತ್ತವನ್ನು ಸಹ ಮುಂದೆ ಒಯ್ಯುವ ಮೊತ್ತ ಮೀರದಂತೆ ವಿಪರ್ಯಯವನ್ನು ಸೀಮಿತಗೊಳಿಸಲಾಗುತ್ತದೆ. ಇಂತಹ ವಿಪರ್ಯಯವನ್ನು ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಗುರುತಿಸಲಾಗುತ್ತದೆ.

2.9 ಸಾಲ ವೆಚ್ಚ :

ತನ್ನ ಉದ್ದೇಶಿತ ಬಳಕೆ ಅಥವಾ ಮಾರಾಟಕ್ಕೆ ಸಿದ್ಧವಾಗಲು ಗಣನೀಯವಾದ ಸಮಯವನ್ನು ಅಗತ್ಯವಾಗಿ ತೆಗೆದುಕೊಳ್ಳುವ ಆಸ್ತಿಯ ಸ್ವಾಧೀನ, ನಿರ್ಮಾಣ ಅಥವಾ ಉತ್ಪಾದನೆಗೆ ನೇರವಾಗಿ ಅಧ್ಯಾರೋಪಿಸಬಹುದಾದ ಸಾಲ ವೆಚ್ಚಗಳನ್ನು ಆಸ್ತಿಯ ವೆಚ್ಚದ ಭಾಗವಾಗಿ ಬಂಡವಾಳೀಕರಿಸಲಾಗುವುದು. ಇತರ ಎಲ್ಲ ಸಾಲ ವೆಚ್ಚಗಳನ್ನೂ ಅವು ಘಟಿಸುವ ಅವಧಿಯಲ್ಲಿ ಖರ್ಚುಹಾಕಲಾಗುವುದು. ಸಾಲ ವೆಚ್ಚಗಳಲ್ಲಿ ನಿಧಿಗಳನ್ನು ಪಡೆದುಕೊಳ್ಳುವುದಕ್ಕೆ ಸಂಬಂಧಿಸಿದಂತೆ ಆಸ್ತಿಯೊಂದಕ್ಕೆ ವ್ಯಯವಾಗುವ ಬಡ್ಡಿ ಮತ್ತು ಇತರ ವೆಚ್ಚಗಳು ಸೇರುತ್ತವೆ. ಸಾಲ ವೆಚ್ಚಗಳಿಗೆ ಹೊಂದಾಣಿಕೆಯೆಂದು ಪರಿಗಣಿಸುವ ಮಟ್ಟಿಗೆ ಸಾಲ ವೆಚ್ಚಗಳು ವಿನಿಮಯ ವ್ಯತ್ಯಾಸಗಳನ್ನೂ ಸಹ ಒಳಗೊಳ್ಳುತ್ತವೆ.

2.10

ಆದಾಯ ಗುರುತಿಸುವಿಕೆ

ಆದಾಯವನ್ನು ಕೆಳಗಿನ ಐದು ಪ್ರಕ್ರಿಯೆಗಳ ಆಧಾರದ ಮೇಲೆ ಗುರುತಿಸಲಾಗುತ್ತದೆ:

* ಗ್ರಾಹಕರೊಂದಿಗಿನ ಗುತ್ತಿಗೆಗಳನ್ನು ಗುರುತಿಸಿ: ಗುತ್ತಿಗೆಯು ಮೌಖಿಕವಾಗಿರಬಹುದು ಅಥವಾ ಲಿಖಿತವಾಗಿರಬಹುದು.
* ಸಾಧನೆಯ ಹೊಣೆಯನ್ನು ಗುರುತಿಸಿ. ಸಾಧನೆಯ ಹೊಣೆ ಎಂದರೆ ಕಂಪನಿಯು ಸರಕುಗಳು ಅಥವಾ ಸೇವೆಗಳನ್ನು ಒದಗಿಸುವುದಕ್ಕೆ ಸಂಬಂಧಿಸಿದಂತೆ ತನ್ನ ಗ್ರಾಹಕರಿಗೆ ನೀಡುರುವ ವಾಗ್ದಾನವಾಗಿರುತ್ತದೆ.
* ವ್ಯವಹಾರದ ಮೌಲ್ಯವನ್ನು ಗುರುತಿಸಿ.
* ವ್ಯವಹಾರದ ಮೌಲ್ಯವನ್ನು ಸಾಧನೆಯ ಹೊಣೆಗೆ ಹಂಚಿ.
* ಕಂಪನಿಯು ಸಾಧನೆಯ ಹೊಣೆಯನ್ನು ಪೂರೈಸಿದ ನಂತರ ಆದಾಯವನ್ನು ಗುರುತಿಸಿ: ಆದಾಯವನ್ನು ಸಮಯದ ಬಿಂದುವೊಂದರಲ್ಲಿ ಅಥವಾ ಕಾಲಾವಧಿಯಲ್ಲಿ ಗುರುತಿಸಲಾಗುತ್ತದೆ.

ಆದಾಯವನ್ನು ಗುರುತಿಸುವ ಮುನ್ನ ಕೆಳಗೆ ವಿವರಿಸಲಾಗಿರುವ ನಿರ್ದಿಷ್ಟ ಮಾನದಂಡವನ್ನೂ ಸಹ ಪೂರೈಸಬೇಕಾಗುತ್ತದೆ:

ವಿದ್ಯುತ್ ಮಾರಾಟ :

ವಿದ್ಯುತ್ ಮಾರಾಟವನ್ನು ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗವು (ಕೆಇಆರ್‌ಸಿ) ಅಂಗೀಕರಿಸುವ ಶುಲ್ಕ ದರಗಳಲ್ಲಿ ಪ್ರಾಪ್ತತೆಯ ಆಧಾರದಲ್ಲಿ ಲೆಕ್ಕಕ್ಕೆ ತೆಗೆದುಕೊಳ್ಳಲಾಗುತ್ತದೆ. ಇನ್ನೂ ಲೆಡ್ಜರ್ ಖಾತೆ ತೆರೆಯದ ಗ್ರಾಹಕರಿಂದ ಬರಬೇಕಿರುವ ಆದಾಯ ಬಾಕಿಗಳನ್ನು ಅಂದಾಜುಮಾಡಿದ ಆಧಾರದ ಮೇಲೆ ಲೆಕ್ಕಕ್ಕೆ ತೆಗೆದುಕೊಳ್ಳಲಾಗುತ್ತದೆ. ಕಂಪೆನಿಯು ವಿದ್ಯುಚ್ಛಕ್ತಿ ತೆರಿಗೆಗಳ ಆದಾಯ ನಿವ್ವಳವನ್ನು ತನ್ನ ಲಾಭ ಮತ್ತು ನಷ್ಟದಲ್ಲಿ ಲೆಕ್ಕತೋರಿಸುತ್ತದೆ. ಬಿಲ್ ಮಾಡದ ಆದಾಯ ಬೇಡಿಕೆಯನ್ನು ಸೂಕ್ತವಾಗಿ ಅಂದಾಜುಮಾಡುವ ಮೂಲಕ ವರ್ಷದ ಆದಾಯವನ್ನು ಹೊಂದಿಸಲಾಗುತ್ತದೆ. ದ್ವಿಮಾಸಿಕ ಆಧಾರದ ಮೇಲೆ ಬಿಲ್ ಮಾಡಲಾಗುವ ಎಲ್‌ಟಿ ಅನುಷ್ಠಾನಗಳಿಗೆ ಸಂಬಂಧಿಸಿದಂತೆ ಬಿಲ್ ಮಾಡದ ಆದಾಯಕ್ಕೆ ಹವಣಿಕೆಯನ್ನು ವರ್ಷದ ಫೆಬ್ರವರಿ ಮತ್ತು ಮಾರ್ಚ್ ತಿಂಗಳ ಬಿಲ್ಲುಗಳ ಸರಾಸರಿಯಾಗಿ ಗುರುತಿಸಲಾಗುತ್ತದೆ. ಮಾಸಿಕ ಆಧಾರದ ಮೇಲೆ ಬಿಲ್ ಮಾಡಲಾಗುವ ಎಲ್‌ಟಿ ಅನುಷ್ಠಾನಗಳಿಗೆ ಸಂಬಂಧಿಸಿದಂತೆ ಬಿಲ್ ಮಾಡದ ಆದಾಯಕ್ಕೆ ಹವಣಿಕೆಯನ್ನು ಮಾರ್ಚ್ ತಿಂಗಳಲ್ಲಿ ಇರಿಸಲಾಗುವ ಬೇಡಿಕೆಯ 50% ದ ಮಟ್ಟಿಗೆ ಹವಣಿಸಲಾಗುತ್ತದೆ. ಎಲ್‌ಟಿ ಅನುಷ್ಠಾನಗಳಿಗೆ ಸಂಬಂಧಿಸಿದಂತೆ ಮಾರ್ಚ್ ತಿಂಗಳಲ್ಲಿನ ಬಳಕೆಗೆ ಸಂಬಂಧಿಸಿದಂತೆ ನೀಡಲಾದ ಬಿಲ್ಲುಗಳನ್ನು ಲೆಕ್ಕಕ್ಕೆ ತೆಗೆದುಕೊಳ್ಳಲಾಗುವುದು.

ಸರ್ಕಾರದಿಂದ ಶುಲ್ಕ/ಗ್ರಾಮೀಣ ಸಹಾಯಧನ :

ಕರ್ನಾಟಕ ಸರ್ಕಾರವು ಬಿಡುಗಡೆಮಾಡಿದ ಶುಲ್ಕ/ಗ್ರಾಮೀಣ ಸಹಾಯಧನವನ್ನು ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಇಎನ್ 48 ಪಿಎಸ್‌ಆರ್ 2006 ಬೆಂಗಳೂರು ದಿನಾಂಕ 13 ಜೂನ್ 2007 ಅನುಸಾರ ಆದಾಯದ ಭಾಗವಾಗಿ ಗುರುತಿಸಲಾಗಿದೆ.

ಶುಲ್ಕ ಸಹಾಯಧನವನ್ನು ದಲಾಲಿ ನಿರ್ಧರಿತ ಶುಲ್ಕದ ಪ್ರಕಾರ (ಅಸ್ತಿತ್ವದಲ್ಲಿರುವ ಶುಲ್ಕ ಆದೇಶದಂತೆ) ಬಿಜೆ/ಕೆಜೆ ಅನುಷ್ಠಾನಗಳಿಗೆ ಮಾಸಿಕ 40 ಯೂನಿಟ್‌ಗಳ ವರೆಗಿನ ಬಳಕೆಗೆ ಹಾಗೂ ಐಪಿ ಸೆಟ್ ವರ್ಗಕ್ಕೆ 10 ಎಚ್‌ಪಿ ವರೆಗ ಮತ್ತು ಅದನ್ನು ಒಳಗೊಳ್ಳುವಂತೆ ಸರ್ಕಾರದ ಮುಂದೆ ಹಕ್ಕುಸಲ್ಲಿಸಲಾಗುತ್ತದೆ.

ಕಾಮಗಾರಿಯ ಜಾರಿಯಲ್ಲಿನ ವಿಳಂಬದ ಮೇಲೆ ಬಡ್ಡಿ :

ಕಾಮಗಾರಿಗಳ ಜಾರಿಗೊಳಿಸುವಿಕೆಯಲ್ಲಿ/ಸರಬರಾಜುಗಳಲ್ಲಿನ ವಿಳಂಬದ ಕಾರಣದಿಂದಾಗಿ ಗುತ್ತಿಗೆದಾರರಿಂದ/ಸರಬರಾಜುದಾರರಿಂದ ವಸೂಲಿಮಾಡಲಾದ ಮೊತ್ತಕ್ಕೆ ಸಂಬಂಧಿಸಿದಂತೆ ಸಕ್ಷಮ ಪ್ರಾಧಿಕಾರದಿಂದ ಗುತ್ತಿಗೆದಾರ/ಸರಬರಾಜುದಾರ ವಿಳಂಬ ಮಾಫಿ ಕೋರಿಕೆಯ ತಿರಸ್ಕಾರದ ನಂತರ ಆದಾಯವಾಗಿ ಗುರುತಿಸಲಾಗುವುದ. ಅಲ್ಲಿಯವರೆಗೂ ಅದನ್ನು ಚಾಲ್ತಿ ಹೊಣೆಗಳ ಅಡಿಯಲ್ಲಿ ಲೆಕ್ಕತೋರಿಸಲಾಗುತ್ತದೆ. ಇಂತಹ ಯಾವುದೇ ಕೋರಿಕೆಯ ಅನುಪಸ್ಥಿತಿಯಲ್ಲಿ ಹೀಗೆ ವಸೂಲಿಮಾಡಲಾದ ಮೊತ್ತವನ್ನು ದಂಡವಾಗಿ ಪರಿಗಣಿಸಿ ಅದನ್ನು ಇತರೆ ಆದಾಯಕ್ಕೆ ಜಮೆಮಾಡಲಾಗುವುದು.

ಬಡ್ಡಿ ಆದಾಯ :

ಬಡ್ಡಿ ಆದಾಯವು ಸಮಯಾನುಪಾತದ ಆಧಾರದ ಮೇಲೆ ಮತ್ತು ಬಾಕಿ ಇರುವ ಬಿಲ್ಲುಗಳ ಮೇಲೆ ಸಾಕ್ಷಾತ್ಕಾರದ ಆಧಾರದ ಮೇಲೆ ಪ್ರಾಪ್ತವಾಗುತ್ತದೆ. ದತ್ತಿ ವೆಚ್ಚದಲ್ಲಿ ಲೆಕ್ಕಹಾಕಲಾದ ಅಥವಾ ಇತರ ಸಮಗ್ರ ಆದಾಯದ ಮೂಲಕ ನ್ಯಾಯಯುತ ಮೌಲ್ಯದಲ್ಲಿ ಲೆಕ್ಕಹಾಕಲಾದ ಎಲ್ಲ ಋಣ ಸಾಧನಗಳಿಗೆ ಬಡ್ಡಿ ಆದಾಯವನ್ನು ಪರಿಣಾಮಕಾರಿ ಬಡ್ಡಿ ದರವನ್ನು (ಇಐಆರ್) ಬಳಸಿ ದಾಖಲಿಸಲಾಗುತ್ತದೆ. ಹಣಕಾಸು ಸಾಧನದ ನಿರೀಕ್ಷಿತ ಆಯುಷ್ಯ ಅಥವಾ ಅದಕ್ಕಿಂತಲೂ ಕಡಿಮೆ ಅವಧಿಗೆ, ಯಾವುದು ಸೂಕ್ತವೋ ಹಾಗೆ, ಅಂದಾಜುಮಾಡಲಾದ ಭವಿಷ್ಯದ ನಗದು ಪಾವತಿಗಳು ಅಥವಾ ಸ್ವೀಕೃತಿಗಳನ್ನು ಹಣಕಾಸು ಸಾಧನದ ಒಟ್ಟು ಮುಂದೊಯ್ಯುವ ಮೊತ್ತ ಅಥವಾ ಹಣಕಾಸು ಹೊಣೆಯ ದತ್ತಿ ವೆಚ್ಚಕ್ಕೆ ನಿರ್ದಿಷ್ಟವಾಗಿ ರಿಯಾಯಿತಿಬದ್ಧಗೊಳಿಸುವ ದರವೇ ಇಐಆರ್. ಪರಿಣಾಮಕಾರಿ ಬಡ್ಡಿ ದರವನ್ನು ಲೆಕ್ಕಹಾಕುವಾಗ ಕಂಪನಿಯು ಹಣಕಾಸು ಸಾಧನದ (ಉದಾ. ಪೂರ್ವಸಂದಾಯ, ವಿಸ್ತರಣೆ, ಕಾಲ್ ಮತ್ತು ಅದೇ ರೀತಿಯ ಆಯ್ಕೆಗಳು) ಎಲ್ಲ ಗುತ್ತಿಗೆ ಕರಾರುಗಳನ್ನು ಪರಿಗಣಿಸಿ ನಿರೀಕ್ಷಿತ ನಗದು ಹರಿವುಗಳನ್ನು ಅಂದಾಜುಮಾಡುತ್ತದೆ, ಆದರೆ ನಿರೀಕ್ಷಿತ ಜಮೆ ನಷ್ಟಗಳನ್ನು ಪರಿಗಣಿಸುವುದಿಲ್ಲ. ಬಡ್ಡಿ ಆದಾಯವನ್ನು ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಹಣಕಾಸು ಆದಾಯದಲ್ಲಿ ಸೇರಿಸಲಾಗುತ್ತದೆ.

ದಂಡಗಳು ಮತ್ತು ಹಾನಿಗಳು :

ಗುತ್ತಿಗೆದಾರರು ಮತ್ತು ಮಾರಾಟಗಾರರಿಂದ ವಸೂಲಾಗುವ ದಂಡಗಳು ಮತ್ತು ಹಾನಿಗಳನ್ನು ಅವು ವಸೂಲಾದಾಗ ಆದಾಯವೆಂದು ಗುರುತಿಸಲಾಗುವುದು.

ಲಾಭಾಂಶಗಳು :

ಪಾವತಿಯನ್ನು ಪಡೆಯುವ ಕಂಪೆನಿಯ ಹಕ್ಕು ಸ್ಥಾಪಿತವಾದಾಗ ಆದಾಯವನ್ನು ಗುರುತಿಸಲಾಗುವುದು ಮತ್ತು ಇದು ಸಾಧಾರಣವಾಗಿ ಷೇರುದಾರರು ಲಾಭಾಂಶವನ್ನು ಅಂಗೀಕರಿಸಿದಾಗ ಘಟಿಸುತ್ತದೆ.

2.11 ನಿಬಂಧನಾ ಆಸ್ತಿ/ಹೊಣೆ :

ನಿಬಂಧನಾ ಆಸ್ತಿಯೊಂದಕ್ಕೆ ಸಂಬಂಧಿಸಿದ ಭವಿಷ್ಯದ ಆರ್ಥಿಕ ಲಾಭಗಳು, ಅನ್ವಯವಾಗುವ ನಿಬಂಧನಾ ಚೌಕಟ್ಟಿನೊಳಗೆ, ನಿಬಂಧಕರಾದ ಕರ್ನಾಟಕ ವಿದ್ಯುಚ್ಛಕ್ತಿ ನಿಯಂತ್ರಣಾ ಆಯೋಗದ (ಕೆಇಆರ್‌ಸಿ) ನೈಜ ಅಥವಾ ನಿರೀಕ್ಷಿತ ಕಾರ್ಯಗಳ ಫಲವಾಗಿ ಸಂಸ್ಥೆಗೆ ಹರಿದುಬರುವುದು ಸಂಭಾವ್ಯವಿರುವಾಗ ಮತ್ತು ಮೊತ್ತವನ್ನು ವಿಶಾಸಾರ್ಹವಾಗಿ ಲೆಕ್ಕಹಾಕುವುದು ಸಾಧ್ಯವಿರುವಾಗ ನಿಬಂಧನಾ ಆಸ್ತಿಯನ್ನು ಗುರುತಿಸಲಾಗುತ್ತದೆ.

ಸಂಬಂಧಿತ ಹಣಕಾಸು ವರ್ಷದ ವಾರ್ಷಿಕ ಸಾಧನಾ ಪರಿಶೀಲನೆಯನ್ನು ವಿಭಿನ್ನ ವರ್ಷಗಳ ವಾರ್ಷಿಕ ಆದಾಯ ಅಗತ್ಯದೊಂದಿಗೆ ಅಂದಾಜುಮಾಡುವಾಗ ಕೆಇಆರ್‌ಸಿ ಯಿಮದ ಘಟಿಸುವ ನೈಜವಾದ ಅಥವಾ ನಿರೀಕ್ಷಿತ ಕಾರ್ಯಗಳ ಫಲವಾಗಿ ಸಂಸ್ಥೆಗೆ ಹರಿಯುವುದೆಂದು ನಿರೀಕ್ಷಿಸಲಾಗುವ ಚಾಲ್ತಿ ಹಣಕಾಸು ವರ್ಷದ ಮುಂದೂಡಲಾದ ಆಸ್ತಿ/ಹೊಣೆಯ ಸಂಭಾವ್ಯ ಪರಿಮಾಣವನ್ನು ಪ್ರಾಪ್ತತೆಯ ಆಧಾರದ ಮೇಲೆ ನಿಬಂಧನಾ ಆಸ್ತಿ/ಹೊಣೆ ಎಂದು ಗುರುತಿಸಲಾಗುತ್ತದೆ, ಆದರೆ ಹಿಂದಿನ ವರ್ಷದಲ್ಲಿ ಸಲ್ಲಿಸಲಾದ ಶುಲ್ಕ ಪ್ರಸ್ತಾವನೆಯಲ್ಲಿ ಕೆಇಆರ್‌ಸಿ ನಿರ್ಧರಿಸಿದ ಈಕ್ವಿಟಿ ಉತ್ಪತ್ತಿಯನ್ನು ವರ್ಷದ ಲಾಭವು ಮೀರದ ಮಟ್ಟಿಗೆ ನಿಬಂಧನಾ ಆಸ್ತಿಯ ಗುರುತಿಸುವಿಕೆಯ ಪರಿಮಾಣವನ್ನು ಮಿತಗೊಳಿಸಲಾಗುತ್ತದೆ.

2.12 ವ್ಯಾಪಾರದಲ್ಲಿ ಬರಬೇಕಾದವುಗಳಿಗೆ ಬಾಧೆ :

ವ್ಯಾಪಾರದಲ್ಲಿ ವಸೂಲಾಗಬೇಕಾದವುಗಳಿಗೆ ಸಂಬಂಧಿಸಿದಂತೆ, ಇಂಡ್ ಎಎಸ್ 109 ಹಣಕಾಸು ಸಾಧನಗಳು ಅನುಮತಿ ನೀಡುವ ಸರಳೀಕೃತ ನಡೆಯನ್ನು ಅನ್ವಯಿಸುತ್ತದೆ ಮತ್ತು ಇದು ವಸೂಲಾಗಬೇಕಾದವುಗಳ ಪಾರಂಭಿಕ ಗುರುತಿಸುವಿಕೆಯಿಂದ ನಿರೀಕ್ಷಿತ ಜೀವಿತಾವಧಿ ನಷ್ಟಗಳ ಗುರುತಿಸುವಿಕೆಯನ್ನು ಅಗತ್ಯವಾಗಿಸುತ್ತದೆ. ಕಂಪೆನಿಯು ಇಂಡ್ ಎಎಸ್ 109ರ ಅಡಿಯಲ್ಲಿ ಅನುಮತಿ ಇರುವ ವ್ಯಾವಹಾರಿಕವಾಗಿ ಸುಲಭವಾದ ವಿಧಾನವನ್ನು ಅನುಸರಿಸಿದೆ. ವರದಿಯ ಅವಧಿಯ ಕೊನೆಯಲ್ಲಿ ಇದ್ದಂತೆ, ಬಾಕಿ ಇರುವ ವ್ಯಾಪಾರದಲ್ಲಿ ವಸೂಲಾಗಬೇಕಾದವುಗಳ 4% ದಂತೆ ಸಂಶಯಾಸ್ಪದ ಸಾಲಗಳಿಗೆ ಸಾಮಾನ್ಯ ಹವಣಿಕೆಯನ್ನು ಆಧರಿಸಿ ಈ ನಿರೀಕ್ಷಿತ ಕ್ರೆಡಿಟ್ ನಷ್ಟ ಅವಕಾಶವನ್ನು ಲೆಕ್ಕಹಾಕಲಾಗುತ್ತದೆ. ಎಚ್‌ಟಿ ಅನುಷ್ಠಾನಗಳಿಗೆ ಸಂಬಂಧಿಸಿದಂತೆ ಪ್ರಕರಣವಾರು ಪರಿಶೀಲನೆ ನಡೆಸಲಾಗುತ್ತದೆ ಮತ್ತು ಸಂಶಯಾಸ್ಪದ ಮೊತ್ತವು ಹವಣಿಕೆಯ 4% ದಷ್ಟು ಹೆಚ್ಚಾದಲ್ಲಿ ಇಂತಹ ಹೆಚ್ಚಳದ ಮೊತ್ತಕ್ಕೆ ಹೆಚ್ಚುವರಿ ಹವಣಿಕೆಯನ್ನು ಮಾಡಲಾಗುವುದು.

ಐಪಿ ಸೆಟ್ ಅನುಷ್ಠಾನ ಬಾಕಿಗಳಿಗೆ ಸಂಬಂಧಿಸಿದಂತೆ:

ಎ. 2 ವರ್ಷಗಳು ಮತು ಹೆಚ್ಚಿನ ಅವಧಿಗೆ ಇರುವ ಬಾಕಿಗಳು – 100%, ಹಣಕಾಸು ವರ್ಷವೊಂದರಲ್ಲಿ ಒಟ್ಟು ಬಾಕಿ ಐಪಿ ಸೆಟ್ ಅನುಷ್ಠಾನ ಬಾಕಿಗಳ 10% ದಷ್ಟು ಗರಿಷ್ಠ ಪ್ರಮಾಣಕ್ಕೆ ಬದ್ಧವಾಗಿ

ಬಿ. 1 ವರ್ಷದಿಂದ 2 ವರ್ಷಗಳ ನಡುವಿನ ಅವಧಿಗೆ ಇರುವ ಬಾಕಿಗಳು – 20%, ಹಣಕಾಸು ವರ್ಷವೊಂದರಲ್ಲಿ ಒಟ್ಟು ಬಾಕಿ ಐಪಿ ಸೆಟ್ ಅನುಷ್ಠಾನ ಬಾಕಿಗಳ 7.5% ದಷ್ಟು ಗರಿಷ್ಠ ಪ್ರಮಾಣಕ್ಕೆ ಬದ್ಧವಾಗಿ

ಸಿ. 1 ವರ್ಷಕ್ಕೂ ಕಡಿಮೆ ಅವಧಿಗೆ ಇರುವ ಬಾಕಿಗಳು – ಶೂನ್ಯ

2.13 ಸಿಬ್ಬಂದಿ ಸವಲತ್ತುಗಳು :

ಅಲ್ಪಾವಧಿ ಸಿಬ್ಬಂದಿ ಸವಲತ್ತುಗಳು :

ನೌಕರರು ಸಲ್ಲಿಸಿದ ಸೇವೆಗೆ ಪ್ರತಿಯಾಗಿ ಪಾವತಿಸಬೇಕಾದ ಅಲ್ಪಾವಧಿ ಸಿಬ್ಬಂದಿ ಸವಲತ್ತುಗಳ ರಿಯಾಯಿತಿರಹಿತ ಮೊತ್ತವನ್ನು ನೌಕರರು ಸೇವೆ ಸಲ್ಲಿಸಿದ ವರ್ಷದಲ್ಲಿ ಗುರುತಿಸಲಾಗುವುದು. ಈ ಸವಲತ್ತುಗಳಲ್ಲಿ ನೌಕರರು ಸಂಬಂಧಿತ ಸೇವೆಯನ್ನು ಸಲ್ಲಿಸಿದ ಅವಧಿಯ ನಂತರ ಹನ್ನೆರಡು ತಿಂಗಳ ಒಳಗೆ ಘಟಿಸುವ ನಿರೀಕ್ಷೆಯಿರುವ ಪರಿಹಾರಯುಕ್ತ ಗೈರುಹಾಜರಿ ಮತ್ತು ಸಾಧನಾ ಪ್ರೋತ್ಸಾಹಕಗಳು ಸೇರುತ್ತವೆ.

ಅಲ್ಪಾವಧಿ ಪರಿಹಾರಯುಕ್ತ ಗೈರುಹಾಜರಿಗಳ ವೆಚ್ಚವನ್ನು ಕೆಳಗಿನಂತೆ ಲೆಕ್ಕಕ್ಕೆ ತೆಗೆದುಕೊಳ್ಳಲಾಗುತ್ತದೆ :

– ಸಂಚಿತ ಪರಿಹಾರಯುಕ್ತ ಗೈರುಹಾಜರಿಗಳಿಗೆ ಸಂಬಂಧಿಸಿದಂತೆ, ಭವಿಷ್ಯದ ಪರಿಹಾರಯುಕ್ತ ಗೈರುಹಾಜರಿಗಳ ತಮ್ಮ ಹಕ್ಕನ್ನು ಹೆಚ್ಚಿಸುವ ಸೇವೆಗಳನ್ನು ನೌಕರರು ಸಲ್ಲಿಸಿದಾಗ; ಮತ್ತು

– ಸಂಚಿತವಲ್ಲದ ಪರಿಹಾರಯುಕ್ತ ಗೈರುಹಾಜರಿಗಳಿಗೆ ಸಂಬಂಧಿಸಿದಂತೆ, ಗೈರುಹಾಜರಿ ಘಟಿಸಿದಾಗ.

ದೀರ್ಘಾವಧಿ ಸಿಬ್ಬಂದಿ ಸವಲತ್ತುಗಳು :

ಗಳಿಕೆ ರಜೆ ಯೋಜನೆ ಮತ್ತು ಕುಟುಂಬ ಸವಲತ್ತು ನಿಧಿಯನ್ನು ಒಳಗೊಳ್ಳುವ ದೀರ್ಘಾವಧಿ ನೌಕರರ ಸವಲತ್ತುಗಳನ್ನು ನಿರ್ವಚಿತ ಸವಲತ್ತು ಹೊಣೆಯ ಪ್ರಸ್ತುತ ಮೌಲ್ಯವನ್ನು ಆಧರಿಸಿ ಗುರುತಿಸಲಾಗುತ್ತದೆ ಮತ್ತು ಅಂದಾಜು ಮಾಡಲಾದ ಯುನಿಟ್ ಕ್ರೆಡಿಟ್ ವಿಧಾನವನ್ನು ಬಳಸಿ ಇದನ್ನು ಲೆಕ್ಕಹಾಕಲಾಗುತ್ತದೆ. ವಿಮಾಗಣಕ ಮೌಲ್ಯಮಾಪನಗಳನ್ನು ಪ್ರತಿ ವಾರ್ಷಿಕ ವರದಿಯ ಅವಧಿಯ ಕೊನೆಗೆ ನಡೆಸಲಾಗುತ್ತದೆ ಮತ್ತು ಇದನ್ನು ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಹಾಗೂ ಕುಟುಂಬ ಸವಲತ್ತು ನಿಧಿಗೆ ಸಂಬಂಧಿಸಿದಂತೆ ಇತರ ಸಮಗ್ರ ಆದಾಯದಲ್ಲಿ ಗುರುತಿಸಲಾಗುವುದು.

ನೌಕರಿಯ ನಂತರದ ಸವಲತ್ತುಗಳು :

ನಿರ್ವಚಿತ ವಂತಿಗೆ ಯೋಜನೆಗಳು

01.04.2006ರ ನಂತರ ಪಟ್ಟಿಯಲ್ಲಿ ಸೇರಿರುವ ನೌಕರರಿಗೆ, ನಿರ್ವಚಿತ ವಂತಿಗೆ ಯೋಜನೆಗಳ ಅಡಿಯಲ್ಲಿ ಪಿಂಚಣಿ ನಿಧಿ ಮತ್ತು ಗ್ರಾಚುಟಿ ನಿಧಿಯನ್ನು ಒಳಗೊಳ್ಳುವ ನೌಕರರ ಸವಲತ್ತನ್ನು ಯೋಜನೆಗೆ ವಂತಿಗೆಗೆ ಸಂಬಂಧಿಸಿದಂತೆ ಕಂಪೆನಿ ಹೊಂದಿರುವ ಹೊಣೆಯ ಮೊತ್ತವನ್ನು ಆಧರಿಸಿ ಗುರುತಿಸಲಾಗುತ್ತದೆ.

ಎ. ಪಿಂಚಣಿ : (ಮೂಲ ವೇತನ + ತುಟ್ಟಿ ವೇತನ+ ತುಟ್ಟಿ ಭತ್ಯೆ) ದ 42.52%

ಬಿ. ಗ್ರಾಚುಟಿ : (ಮೂಲ ವೇತನ + ತುಟ್ಟಿ ವೇತನ)ದ 6.08%

ಇದನ್ನು ಕೆಪಿಟಿಸಿಎಲ್/ಎಸ್ಕಾಂ ಗಳ ಪಿಂಚಣಿ ಮತ್ತು ಗ್ರಾಚುಟಿ ಟ್ರಸ್ಟ್‌ಗೆ ಪಾವತಿಸಿ ವರ್ಷದಲ್ಲಿ ಲಾಭ ಮತ್ತು ನಷ್ಟದ ತಃಖ್ತೆಗೆ ಖರ್ಚುಹಾಕಲಾಗುತ್ತದೆ.

1.4.2006ಕ್ಕೂ ಮುಂಚೆ ಜೆಸ್ಕಾಂ ಸೇರಿರುವ ನೌಕರರಿಗೆ ಸಂಬಂಧಿಸಿದಂತೆ, ಪಿಂಚಣಿ ಮತ್ತು ಗ್ರಾಚುಟಿಗೆ ಸಂಬಂಧಿಸಿದಂತೆ ಕೆಪಿಟಿಸಿಎಲ್/ಎಸ್ಕಾಂನ ಪಿಂಚಣಿ & ಗ್ರಾಚುಟಿ ಟ್ರಸ್ಟ್‌ಗೆ ವಂತಿಗೆಯನ್ನು ವಿಮಾಗಣಕ ಮೌಲ್ಯಮಾಪನದ ಆಧಾರದ ಮೇಲೆ ಟ್ರಸ್ಟ್ ರೂಪಿಸಿರುವ ಸೂತ್ರಕ್ಕೆ ಅನುಗುಣವಾಗಿ ಮಾಡಲಾಗಿದೆ. ಟ್ರಸ್ಟ್ ನಡೆಸುವ ವಿಮಾಗಣಕ ಮೌಲ್ಯಮಾಪನದಿಂದಾಗಿ ವಂತಿಗೆಯ ದರಗಳಲ್ಲಿ ಘಟಿಸುವ ಬದಲಾವಣೆಯನ್ನು ಟ್ರಸ್ಟ್ ಕಂಪೆನಿಗೆ ಯಾವ ವರ್ಷ ತಿಳಿಸುವುದೋ ಆ ವರ್ಷ ಲೆಕ್ಕಕ್ಕೆ ತೆಗೆದೊಕೊಳ್ಳಲಾಗುವುದು.

ಕಂಪೆನಿಯ ವಂತಿಗೆಯನ್ನು ಸಂಗ್ರಹಿಸಿ ನಿಭಾಯಿಸುವುದನ್ನು ಟ್ರಸ್ಟ್ ಮಾಡುತ್ತಿರುವಾಗ ಮತ್ತು ವಂತಿಗೆಯನ್ನು ಮುಂದುವರೆದಂತೆ ಪಾವತಿಸುವ ಆಧಾರದ ಮೇಲೆ ವಂತಿಗೆಯನ್ನು ಪಾವತಿಸುತ್ತಿರುವಾಗ ಇದನ್ನು ಇಂಡ್ ಎಎಸ್ 19ರ ಅನುಸಾರ ನಿರ್ವಚಿತ ವಂತಿಗೆ ಯೋಜನೆ ಎಂದು ಪರಿಗಣಿಸಲಾಗಿದೆ.

ಮೇಲಿನ ನಿರ್ವಚಿತ ವಂತಿಗೆ ಯೋಜನೆಗೆ ಕಂಪನಿಯು ವಿಮಾಗಣಕ ಮೌಲ್ಯಮಾಪನದ ಮೇಲೆ ಯಾವುದೇ ಹವಣಿಕೆಯನ್ನು ಮಾಡಿರುವುದಿಲ್ಲ.

2.14 ಹವಣಿಕೆಗಳು :

ಆಗಿಹೋದ ಘಟನೆಯ ಕಾರಣದಿಂದಾಗಿ ಪ್ರಸ್ತುತ ಹೊಣೆಯೊಂದನ್ನು ಹೊಂದಿರುವಾಗ (ಕಾನೂನಾತ್ಮಕ ಅಥವಾ ರಚನಾತ್ಮಕ), ಹೊಣೆಯನ್ನು ಇತ್ಯರ್ಥಗೊಳಿಸಲು ಆರ್ಥಿಕ ಲಾಭಗಳನ್ನು ಮೂರ್ತೀಕರಿಸುವ ಸಂಪನ್ಮೂಲಗಳ ಹರಿವು ಅಗತ್ಯವಾಗಿರುವುದ ಸಂಭವನೀಯವಾಗಿರುವಾಗ ಮತ್ತು ಹೊಣೆಯ ಮೊತ್ತದ ವಿಶ್ವಾಸಾರ್ಹವಾದ ಅಂದಾಜನ್ನು ಮಾಡುವುದು ಸಾಧ್ಯವಿರುವಾಗ ಕಂಪೆನಿಯು ಹವಣಿಕೆಗಳನ್ನು ಮಾಡುತ್ತದೆ. ಕಂಪೆನಿಯು ಕೆಲವು ಇಲ್ಲವೇ ಎಲ್ಲ ಹವಿಕೆಗಳು ಮರುಭರಿಕೆಯಾಗುವುದೇಂದು ನಿರೀಕ್ಷಿಸುವಾಗ, ಈ ಮರುಭರಿಕೆಯನ್ನು ಪ್ರತ್ಯೇಕ ಆಸ್ತಿಯಾಗಿ ಗುರುತಿಸಲಾಗುತ್ತದೆ, ಆದರೆ, ಮರುಭರಿಕೆ ಬಹುತೇಕ ನಿಶ್ಚಿತವಾದಾಗ ಮಾತ್ರ. ಹವಣಿಕೆಗೆ ಸಂಬಂಧಿಸಿದ ಖರ್ಚನ್ನು ಯಾವುದೇ ಮರುಭರಿಕೆಯ ನಿವ್ವಳವನ್ನು ಕಳೆದು ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಪ್ರಸ್ತುತಪಡಿಸಲಾಗುತ್ತದೆ.

ಹಣದ ಸಮಯ ಮೌಲ್ಯದ ಪರಿಣಾಮವು ಗಣನೀಯವಾಗಿದ್ದಲ್ಲಿ, ಸೂಕ್ತವಾಗಿದ್ದಲ್ಲಿ, ಹೊಣೆಯ ನಿರ್ದಿಷ್ಟ ಅಪಾಯಗಳನ್ನು ಪ್ರಕಟಿಸುವ ಚಾಲ್ತಿ ತೆರಿಗೆ–ಪೂರ್ವ ದರವನ್ನು ಬಳಸಿ ಹವಣಿಕೆಗಳಿಗೆ ರಿಯಾಯಿತಿ ಒದಗಿಸಲಾಗುತ್ತದೆ. ರಿಯಾಯಿತಿಯನ್ನು ಬಳಸಿದಲ್ಲಿ, ಸಮಯದ ಕಳೆಯುವಿಕೆಯೊಂದಿಗೆ ಹೆಚ್ಚುವ ಹವಣಿಕೆಯನ್ನು ಹಣಕಾಸು ವೆಚ್ಚ ಎಂದು ಗುರುತಿಸಲಾಗುತ್ತದೆ.

2.15 ಸಾದಿಲ್ವಾರು ಹೊಣೆಗಳು ಮತ್ತು ಆಸ್ತಿಗಳು :

ಕಂಪನಿಯ ನಿಯಂತ್ರಣದಾಚೆ ಇರುವ ಒಂದು ಅಥವಾ ಅದಕ್ಕಿಂತಲೂ ಹೆಚ್ಚಿನ ಅನಿಶ್ಚಿತ ಘಟನೆಗಳ ಆಗುವಿಕೆ ಅಥವಾ ಆಗದಿರುವಿಕೆಯ ನೆಲೆಯಲ್ಲಿ ಕಂಪನಿಯು ಅಸ್ತಿತ್ವವನ್ನು ಸ್ಥಿರೀಕರಿಸುವ ಹಿಂದಿನ ಘಟನೆಗಳಿಂದ ಉದ್ಭವಿಸುವ ಸಾಧ್ಯ ಹೊಣೆಯನ್ನು ಸಾದಿಲ್ವಾರು ಹೊಣೆ ಎನ್ನಲಾಗುತ್ತದೆ.

ಸಾಧ್ಯವಿರುವ, ಆದರೆ, ಪ್ರಸ್ತುತ ಹೊಣೆಯು ಆರ್ಥಿಕ ಲಾಭಗಳನ್ನು ಮೂರ್ತೀಕರಿಸುವ ಸಂಪನ್ಮೂಲಗಳ ಹೊರಹರಿವಿಗೆ ಕಾರಣವಾಗುವ ಚಾಲ್ತಿ ಹೊಣೆಯು ಇರುವುದೇ ಎಂಭ ಬಗ್ಗೆ ಸ್ಥಿರೀಕರಣ ದೊರೆಯಬೇಕಿರುವ ಹೊಣೆಗಳಿಗೆ ಸಾದಿಲ್ವಾರು ಹೊಣೆಗಳು ಉದ್ಭವಿಸಲು ಸಾಧ್ಯ.

ಕಂಪನಿಯು ಕೆಳಗಿನ ಸಂದರ್ಭಗಳಲ್ಲಿ ಸಾದಿಲ್ವಾರು ಹೊಣೆಗಳನ್ನು ಗುರುತಿಸದೆ ಅವುಗಳಿಗೆ ಸಂಬಂಧಿಸಿದಂತೆ ಹಣಕಾಸು ತಃಖ್ತೆಗಳಲ್ಲಿ ಪ್ರಕಟಣೆಗಳನ್ನು ಮಾತ್ರ ಮಾಡುತ್ತದೆ:

* ಹಿಂದಿನ ಘಟನೆಗಳಿಂದ ಉದ್ಭವಿಸುವ ಪ್ರಸ್ತುತ ಹೊಣೆ, ಹೊಣೆಯನ್ನು ಇತ್ಯರ್ಥಗೊಳಿಸಲು ಸಂಪನ್ಮೂಲಗಳ ಹೊರಹರಿವಿನ ಅಗತ್ಯ ಇರುವುದು ಸಂಭಾವ್ಯವಿರದಿರುವಾಗ; ಅಥವಾ
* ಹಿಂದಿನ ಘಟನೆಗಳಿಂದ ಉದ್ಭವಿಸುವ ಪ್ರಸ್ತುತ ಹೊಣೆ, ವಿಶ್ವಾಸಾರ್ಹವಾದ ಅಂದಾಜು ಸಾಧ್ಯವಿರದಿರುವಾಗ; ಅಥವಾ
* ಹಿಂದಿನ ಘಟನೆಗಳಿಂದ ಉದ್ಭವಿಸುವ ಪ್ರಸ್ತುತ ಹೊಣೆ, ಸಂಪನ್ಮೂಲಗಳ ಹೊಹರರಿವಿನ ಸಂಭಾವ್ಯತೆ ತೀರ ಅಸಾಧ್ಯವಿಲ್ಲದಿರುವಾಗ.

ಸಾದಿಲ್ವಾರು ಹೊಣೆಗಳನ್ನು ಪ್ರತಿ ಸಂತುಲನ ಪಟ್ಟಿಯ ದಿನಾಂಕದಂದು ಪರಿಶೀಲಿಸಲಾಗುತ್ತದೆ.

ಆರ್ಥಿಕ ಲಾಭಗಳ ಒಳಹರಿವು ಸಂಭಾವ್ಯವಿರುವಾಗ ಲೆಕ್ಕಪತ್ರಗಳಿಗೆ ಟಿಪ್ಪಣಿಗಳ ಮೂಲಕ ಹಣಕಾಸು ತಃಖ್ತೆಗಳಲ್ಲಿ ಸಾದಿಲ್ವಾರು ಆಸ್ತಿಗಳನ್ನು ಪ್ರಕಟಿಸಲಾಗುವುದು.

2.16 ಆದಾಯದ ಮೇಲೆ ತೆರಿಗೆ :

ಚಾಲ್ತಿ ಆದಾಯ ತೆರಿಗೆ

ತೆರಿಗೆ ಪ್ರಾಧಿಕಾರಗಳಿಂದ ವಸೂಲಿಮಾಡುವ ಅಥವಾ ಅವುಗಳಿಗೆ ಪಾವತಿಸುವ ನಿರೀಕ್ಷೆಯಿರುವ ಮೊತ್ತದಂತೆ ಚಾಲ್ತಿ ಆದಾಯ ತೆರಿಗೆ ಆಸ್ತಿಗಳು ಮತ್ತು ಹೊಣೆಗಳನ್ನು ಲೆಕ್ಕಹಾಕಲಾಗುತ್ತದೆ. ಸದರಿ ಮೊತ್ತವನ್ನು ಲೆಕ್ಕಹಾಕಲು ಬಳಸಲಾಗುವ ತೆರಿಗೆ ದರಗಳು ಮತ್ತು ಕಾನೂನುಗಳು ವರದಿಯ ದಿನಾಂಕದಂದು ಜಾರಿಯಲ್ಲಿರುವ ಅಥವಾ ಸಾಧಾರವಾಗಿ ಜಾರಿಗೊಳಿಸಲಾಗಿರುವಂಥದ್ದಾಗಿವೆ.

ಲಾಭ ಅಥವಾ ನಷ್ಟದ ಆಚೆಗೆ ಗುರುತಿಸಲಾದ ಬಾಬ್ತುಗಳಿಗೆ ಸಂಬಂಧಿಸಿದ ಚಾಲ್ತಿ ಆದಾಯ ತೆರಿಗೆಯನ್ನು ಲಾಭ ಅಥವಾ ನಷ್ಟದಾಚೆಗೆ ಗುರುತಿಸಲಾಗುತ್ತದೆ (ಇತರ ಸಮಗ್ರ ಆದಾಯದಲ್ಲಿ ಅಥವಾ ಈಕ್ವಿಟಿಯಲ್ಲಿ). ಚಾಲ್ತಿ ತೆರಿಗೆ ಬಾಬ್ತುಗಳನ್ನು ಓಸಿಐ ಯಲ್ಲಿರುವ ಕೆಳನೆಲೆಯ ವ್ಯವಹಾರಕ್ಕೆ ಸಂಗತವಾಗಿ ಅಥವಾ ನೇರವಾಗಿ ಈಕ್ವಿಟಿಯಲ್ಲಿ ಗುರುತಿಸಲಾಗುತ್ತದೆ. ಅನ್ವಯವಾಗುವ ತೆರಿಗೆ ನಿಬಂಧನೆಗಳು ವೈಯಕ್ತಿಕ ಅರ್ಥೈಸುವಿಕೆಗೆ ಬದ್ಧವಾದ ಸಂದರ್ಭಗಳಿಗೆ ಸಂಬಂಧಿಸಿದಂತೆ ತೆರಿಗೆ ಸಲ್ಲಿಕೆಗಳಲ್ಲೆ ತೆಗೆದುಕೊಳ್ಳಲಾಗಿರುವ ನಿಲುವುಗಳನ್ನು ಆಡಳಿತ ಮಂಡಳಿಯು ಕಾಲಕಾಲಕ್ಕೆ ಮೌಲ್ಯಮಾಪನಮಾಡುತ್ತದೆ ಮತ್ತು ಸೂಕ್ತವಾದೆಡೆಗಳಲ್ಲಿ ಉಪಬಂಧಗಳನ್ನು ಸ್ಥಾಪಿಸುತ್ತದೆ.

ಮುಂದೂಡಲಾದ ತೆರಿಗೆ :

ವರದಿಯ ದಿನಾಂಕದಂದು ಹಣಕಾಸು ವರದಿಗಾರಿಕೆಯ ಉದ್ದೇಶಗಳಿಗೆ ಮುಂದೂಡಲಾದ ತೆರಿಗೆಯನ್ನು ಹವಣಿಸಲಾಗುತ್ತದೆ. ಆಸ್ತಿಗಳು ಮತ್ತು ಹೊಣೆಗಳ ತೆರಿಗೆ ನೆಲೆಗಳು ಹಾಗೂ ಅವುಗಳ ಒಯ್ಯುವ ಮೊತ್ತಗಳ ಮೇಲೆ ಹೊಣೆ ವಿಧಾನವನ್ನು ಅನುಸರಿಸಿ ಇದನ್ನು ಹವಣಿಸಲಾಗುತ್ತದೆ.

ಕೆಳಗಿನವುಗಳನ್ನು ಹೊರತುಪಡಿಸಿ ಎಲ್ಲ ತೆರಿಗೆಬದ್ಧ ತಾತ್ಕಾಲಿಕ ವ್ಯತ್ಯಾಸಗಳಿಗೆ ಮುಂದೂಡಲಾದ ತೆರಿಗೆ ಹೊಣೆಗಳನ್ನು ಗುರುತಿಸಲಾಗುತ್ತದೆ:

* ವ್ಯಾಪಾರಿ ಸಂಯೋಜನೆಯಲ್ಲದ ವ್ಯವಹಾರದಲ್ಲಿ ಆಸ್ತಿ ಅಥವಾ ಹೊಣೆಯೊಂದರ ಪ್ರಾರಂಭಿಕ ಗುರುತಿಸುವಿಕೆಯಿಂದ ಮುಂದೂಡಲಾದ ತೆರಿಗೆ ಹೊಣೆ ಉದ್ಭವಿಸುವಾಗ, ಮತ್ತು ವ್ಯವಹಾರದ ಸಮಯದಲ್ಲಿ, ಲೆಕ್ಕ ಲಾಭವನ್ನಾಗಲೀ ತೆರಿಗೆಬದ್ಧ ಲಾಭ ಅಥವಾ ನಷ್ಟವನ್ನಾಗಲೀ ಪ್ರಭಾವಿಸದಿದ್ದಾಗ.

* ಅಧೀನ ಸಂಸ್ಥೆಗಳು, ಸಹಯೋಗಿ ಸಂಸ್ಥೆಗಳು ಹೂಡಿಕೆಗಳಿಗೆ ಹಾಗೂ ಜಂಟಿ ಉಪಕ್ರಮಗಳಲ್ಲಿನ ಹಿತಾಸಕ್ತಿಗಳಿಗೆ ಸಂಬಂಧಿಸಿದ ತೆರಿಗೆಬದ್ಧ ತಾತ್ಕಾಲಿಕ ವ್ಯತ್ಯಾಸಗಳಿಗೆ; ತಾತ್ಕಾಲಿಕ ವ್ಯತ್ಯಾಸಗಳ ವಿಪರ್ಯಯದ ಕಾಲವನ್ನು ನಿಯಂತ್ರಿಸಲು ಸಾಧ್ಯವಿದ್ದು ತಾತ್ಕಾಲಿಕ ವ್ಯತ್ಯಾಸಗಳು ಹತ್ತಿರದ ಭವಿಷ್ಯದಲ್ಲಿ ವಿಪರ್ಯಯಗೊಳ್ಳುವುದು ಸಂಭಾವ್ಯವಿರದಿರುವಾಗ.

ಮುಂದೂಡಲಾದ ತೆರಿಗೆ ಆಸ್ತಿಗಳನ್ನು ಎಲ್ಲ ಕಡಿತಗೊಳಿಸಬಹುದಾದ ತಾತ್ಕಾಲಿಕ ವ್ಯತ್ಯಾಸಗಳಿಗೆ, ಬಳಸದ ತೆರಿಗೆ ಜಮೆಗಳ ಮುಂದೊಯ್ಯುವಿಕೆಗಳಿಗೆ ಮತ್ತು ಯಾವುದಾದರೂ ಬಳಸದ ತೆರಿಗೆ ನಷ್ಟಗಳಿಗೆ ಗುರುತಿಸಲಾಗುತ್ತದೆ.

ಕಡಿತಗೊಳಿಸಬಹುದಾದ ತಾತ್ಕಾಲಿಕ ವ್ಯತ್ಯಾಸಗಳು, ಬಳಸದ ತೆರಿಗೆ ಜಮೆಗಳ ಮುಂದೊಯ್ಯುವಿಕೆಗಳು ಮತ್ತು ಯಾವುದಾದರೂ ಬಳಸದತೆರಿಗೆ ನಷ್ಟಗಳನ್ನು ಯಾವುದಕ್ಕೆ ಪ್ರತಿಯಾಗಿ ಬಳಸಬಹುದೋ ಅಂಥವಕ್ಕೆ ತೆರಿಗೆಬದ್ಧ ಲಾಭ ಲಭ್ಯವಿರುವುದು ಸಂಭಾವ್ಯ ಎನ್ನುವ ಮಟ್ಟಿಗೆ, ಕೆಳಗಿನವುಗಳನ್ನು ಹೊರತುಪಡಿಸಿ, ಮುಂದೂಡಲಾದ ಆಸ್ತಿಗಳನ್ನು ಗುರುತಿಸಲಾಗುತ್ತದೆ:

* ಕಡಿತಗೊಳಿಸಬಹುದಾದ ತಾತ್ಕಾಲಿಕ ವ್ಯತ್ಯಾಸಕ್ಕೆ ಸಂಬಂಧಿಸಿದ ಮುಂದೂಡಲಾದ ತೆರಿಗೆ ಆಸ್ತಿಯು ವ್ಯಾಪಾರ ಸಂಯೋಜನೆಯಲ್ಲದ ವ್ಯವಹಾರದಲ್ಲಿ ಆಸ್ತಿ ಅಥವಾ ಹೊಣೆಯೊಂದರ ಪ್ರಾರಂಭಿಕ ಗುರುತಿಸುವಿಕೆಯಿಂದ ಉದ್ಭವಿಸುವಾಗ, ಮತ್ತು ವ್ಯವಹಾರದ ಸಮಯದಲ್ಲಿ, ಲೆಕ್ಕ ಲಾಭವನ್ನಾಗಲೀ ತೆರಿಗೆಬದ್ಧ ಲಾಭ ಅಥವಾ ನಷ್ಟವನ್ನಾಗಲೀ ಪ್ರಭಾವಿಸದಿದ್ದಾಗ.

* ಅಧೀನ ಸಂಸ್ಥೆಗಳು, ಸಹಯೋಗಿ ಸಂಸ್ಥೆಗಳು ಹೂಡಿಕೆಗಳಿಗೆ ಹಾಗೂ ಜಂಟಿ ಉಪಕ್ರಮಗಳಲ್ಲಿನ ಹಿತಾಸಕ್ತಿಗಳಿಗೆ ಸಂಬಂಧಿಸಿದ ಕಡಿತಗೊಳಿಸಬಹುದಾದ ತಾತ್ಕಾಲಿಕ ವ್ಯತ್ಯಾಸಕ್ಕೆ ಸಂಬಂಧಿಸಿದಂತೆ,ತಾತ್ಕಾಲಿಕ ವ್ಯತ್ಯಾಸಗಳ ವಿಪರ್ಯಯದ ಕಾಲವನ್ನು ನಿಯಂತ್ರಿಸಲು ಸಾಧ್ಯವಿದ್ದು ತಾತ್ಕಾಲಿಕ ವ್ಯತ್ಯಾಸಗಳು ಹತ್ತಿರದ ಭವಿಷ್ಯದಲ್ಲಿ ವಿಪರ್ಯಯಗೊಳ್ಳುವುದು ಹಾಗೂ ತೆರಿಗೆಬದ್ಧ ಲಾಭಗಳು ಲಭ್ಯವಿದ್ದು ಅವಕ್ಕೆ ಪ್ರತಿಯಾಗಿ ತಾತ್ಕಾಲಿಕ ವ್ಯತ್ಯಾಸಗಳನ್ನು ಸಂಭಾವ್ಯವಿರುವ ಮಟ್ಟಿಗೆ ಮಾತ್ರ ಮುಂದೂಡಲಾದ ತೆರಿಗೆ ಆಸ್ತಿಗಳನ್ನು ಗುರುತಿಸಲಾಗುತ್ತದೆ.

ಮುಂದೂಡಲಾದ ತೆರಿಗೆ ಆಸ್ತಿಗಳ ಮುಂದೆ ಒಯ್ಯುವ ಮೊತ್ತವನ್ನು ಪ್ರತಿ ವರದಿಯ ದಿನಾಂಕದಂದು ಇದ್ದಂತೆ ಪರಿಶೀಲಿಸಲಾಗುವುದು ಮತ್ತು ಒಟ್ಟು ಮುಂದೂಡಲಾದ ತೆರಿಗೆ ಆಸ್ತಿ ಅಥವಾ ಅದರ ಭಾಗವನ್ನು ಬಳಸಿಕೊಳ್ಳಲು ಸಾಧ್ಯವಾಗುವಂತೆ ಸಾಕಷ್ಟು ತೆರಿಗೆಬದ್ಧ ಲಾಭವು ಲಭ್ಯವಿರುವುದು ಸಾಧ್ಯವಿರುವುದರ ಮಟ್ಟಿಗೆ ಅದನ್ನು ಕುಗ್ಗಿಸಲಾಗುತ್ತದೆ. ಗುರುತಿಸದ ಮುಂದೂಡಲಾದ ತೆರಿಗೆ ಆಸ್ತಿಗಳನ್ನು ಪ್ರತಿ ವರದಿಯ ದಿನಾಂಕದಂದು ಇದ್ದಂತೆ ಪರಿಶೀಲಿಸಲಾಗುವುದು ಮತ್ತು ಮುಂದೂಡಲಾದ ತೆರಿಗೆ ಆಸ್ತಿಯ ವಸೂಲಿಗೆ ಭವಿಷ್ಯದ ತೆರಿಗೆಬದ್ಧ ಲಾಭಗಳು ಅವಕಾಶನೀಡುವುದು ಸಂಭಾವ್ಯವಿರುವ ಮಟ್ಟಿಗೆ ಅವನ್ನು ಗುರುತಿಸಲಾಗುವುದು.

ಆಸ್ತಿಯು ಸಾಕ್ಷಾತ್ಕಾರಗೊಂಡ ಅಥವಾ ಹೊಣೆಯು ಇತ್ಯರ್ಥವಾದ ವರ್ಷದಲ್ಲಿ ಅನ್ವಯವಾಗುವ ನಿರೀಕ್ಷೆ ಇರುವ ತೆರಿಗೆ ದರಗಳಲ್ಲಿ, ವರದಿಯ ದಿನಾಂಕದಂದು ಜಾರಿಯಲ್ಲಿರುವ ಅಥವಾ ಸಾಧಾರಣವಾಗಿ ಜಾರಿಗೊಳಿಸಲಾಗಿರುವ ತೆರಿಗೆ ದರಗಳನ್ನು (ಮತ್ತು ತೆರಿಗೆ ಕಾನೂನುಗಳನ್ನು) ಆಧರಿಸಿ ಮುಂದೂಡಲಾದ ತೆರಿಗೆ ಆಸ್ತಿಗಳು ಮತ್ತು ಹೊಣೆಗಳನ್ನು ಲೆಕ್ಕಹಾಕಲಾಗುತ್ತದೆ.

ಲಾಭ ಅಥವಾ ನಷ್ಟದ ಆಚೆಗೆ ಗುರುತಿಸಲಾದ ಬಾಬ್ತುಗಳಿಗೆ ಸಂಬಂಧಿಸಿದ ಮುಂದೂಡಲಾದ ತೆರಿಗೆಯನ್ನು ಲಾಭ ಅಥವಾ ನಷ್ಟದಾಚೆಗೆ ಗುರುತಿಸಲಾಗುತ್ತದೆ (ಇತರ ಸಮಗ್ರ ಆದಾಯದಲ್ಲಿ ಅಥವಾ ಈಕ್ವಿಟಿಯಲ್ಲಿ). ಮುಂದೂಡಲಾದ ತೆರಿಗೆ ಬಾಬ್ತುಗಳನ್ನು ಓಸಿಐ ಯಲ್ಲಿರುವ ಕೆಳನೆಲೆಯ ವ್ಯವಹಾರಕ್ಕೆ ಸಂಗತವಾಗಿ ಅಥವಾ ನೇರವಾಗಿ ಈಕ್ವಿಟಿಯಲ್ಲಿ ಗುರುತಿಸಲಾಗುತ್ತದೆ.

ಚಾಲ್ತಿ ತೆರಿಗೆ ಆಸ್ತಿಗಳನ್ನು ಚಾಲ್ತಿ ತೆರಿಗೆ ಹೊಣೆಗಳಿಗೆ ಪ್ರತಿಯಾಗಿ ಸರಿಹೊಂದಿಸಲು ಕಾನೂನಿನ ನೆಲೆಯಲ್ಲಿ ಜಾರಿಗೊಳಿಸಬಹುದಾದ ಹಕ್ಕು ಇದ್ದಲ್ಲಿ ಮತ್ತು ಮುಂದೂಡಲಾದ ತೆರಿಗೆಗಳು ಅದೇ ತೆರಿಗೆಬದ್ಧ ಸಂಸ್ಥೆ ಮತ್ತು ಅದೇ ತೆರಿಗೆ ಪ್ರಾಧಿಕಾರಕ್ಕೆ ಸಂಬಂಧಪಡುವಂತಿರುವಾಗ ಮುಂದೂಡಲಾದ ತೆರಿಗೆ ಆಸ್ತಿಗಳು ಮತ್ತು ಮುಂದೂಡಲಾದ ತೆರಿಗೆ ಹೊಣೆಗಳನ್ನು ಆಫ್‌ಸೆಟ್ ಮಾಡಲಾಗುತ್ತದೆ.

ತೆರಿಗೆ ಪ್ರಾಧಿಕಾರದಿಂದ ವಸೂಲಾಗಬೇಕಾದ ಅಥವಾ ಅದಕ್ಕೆ ಸಂದಾಯವಾಗಬೇಕಾದ ನಿವ್ವಳ ಮೊತ್ತವನ್ನು ಸಂತುಲನ ಪಟ್ಟಿಯಲ್ಲಿ ವಸೂಲಾಗಬೇಕಾದವುಗಳ ಅಥವಾ ಪಾವತಿಸಬೇಕಾದವುಗಳಲ್ಲಿ ಸೇರಿಸಲಾಗುತ್ತದೆ.

ಚಾಲ್ತಿ ತೆರಿಗೆಯಾಗಿ ಪಾವತಿಸಬೇಕಾದ ಮಟ್ಟಿಗೆ ಕನಿಷ್ಠ ಪರ್ಯಾಯ ತೆರಿಗೆ (ಮ್ಯಾಟ್) ಯನ್ನು ಗುರುತಿಸಲಾಗುತ್ತದೆ ಮತ್ತು ಅದನ್ನು ಲೆಕ್ಕಹಾಕಬಹುದಾದ ಮಟ್ಟಿಗೆ ಹಾಗೂ ಭವಿಷ್ಯದ ಆದಾಯ ತೆರಿಗೆ ಹೊಣೆಗೆ ಪ್ರತಿಯಾಗಿ ಸೆಟ್ ಆಫ್ ರೂಪದಲ್ಲಿ ಭವಿಷ್ಯದ ಲಾಭಗಳನ್ನು ತರುವ ನಿರೀಕ್ಷೆ ಇರುವ ಮಟ್ಟಿಗೆ ಸಮಕಾಲಿಕವಾಗಿ ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಜಮೆಹಾಕಲಾಗುತ್ತದೆ.

ಮುಂದಕ್ಕೆ ತರಲಾದ ನಷ್ಟಗಳು; ಮ್ಯಾಟ್ ಜಮೆ; ನೈಜ ಪಾವತಿ ಆಧಾರದ ಮೇಲೆ ಅವಕಾಶವಿರುವ ಖರ್ಚುಗಳಿಗೆ ಕಂಪನಿಯು ಯಾವುದೇ ಮುಂದೂಡಲಾದ ತೆರಿಗೆ ಆಸ್ತಿಯನ್ನು ಗುರುತಿಸಿರುವುದಿಲ್ಲ.

2.17 ಹಣಕಾಸು ಸಾಧನಗಳು :

ಒಂದು ವ್ಯಾಪಾರಿ ಅಸ್ತಿತ್ವಕ್ಕೆ ಹಣಕಾಸು ಆಸ್ತಿಯನ್ನು ತಂದೀಯುವ ಮತ್ತು ಮತ್ತೊಂದಕ್ಕೆ ಹಣಕಾಸು ಹೊಣೆ ಅಥವಾ ಈಕ್ವಿಟಿ ಸಾಧನವನ್ನು ತಂದೀಯುವ ಗುತ್ತಿಗೆಯೇ ಹಣಕಾಸು ಸಾಧನ.

ಹಣಕಾಸು ಆಸ್ತಿಗಳು

ಪ್ರಾರಂಭಿಕ ಗುರುತಿಸುವಿಕೆ ಮತ್ತು ಲೆಕ್ಕಹಾಕುವಿಕೆ

ಎಲ್ಲ ಹಣಕಾಸು ಸಾಧನಗಳನ್ನು ಪ್ರಾರಂಭಿಕವಾಗಿ ನ್ಯಾಯಯುತ ಮೌಲ್ಯದಲ್ಲಿ, ಮತ್ತು, ಲಾಭ ಮತ್ತು ನಷ್ಟದ ಮೂಲಕ ಹಣಕಾಸು ಆಸ್ತಿಗಳನ್ನು ನ್ಯಾಯಯುತ ಮೌಲ್ಯದಲ್ಲಿ ದಾಖಲಿಸದಿದ್ದಲ್ಲಿ, ಹಣಕಾಸು ಆಸ್ತಿಯ ಸ್ವಾಧೀನಕ್ಕೆ ಅಧ್ಯಾರೋಪಿಸಬಹುದಾದ ವ್ಯಾವಹಾರಿಕ ವೆಚ್ಚಗಳನ್ನು ಕೂಡಿ ಗುರುತಿಸಲಾಗುತ್ತದೆ.

ತರುವಾಯದ ಲೆಕ್ಕಹಾಕುವಿಕೆ

ತರುವಾಯದ ಲೆಕ್ಕಾಚಾರಕ್ಕಾಗಿ, ಹಣಕಾಸು ಆಸ್ತಿಗಳನ್ನು ನಾಲ್ಕು ವರ್ಗಗಳಾಗಿ ವಿಭಾಗಿಸಲಾಗಿದೆ:

- ದತ್ತಿ ವೆಚ್ಚದಲ್ಲಿ ಸಾಲ ಸಾಧನಗಳು
- ಸಾಲ ಸಾಧನಗಳು, ನಿಷ್ಪನ್ನಗಳು ಮತ್ತು ಈಕ್ವಿಟಿ ಸಾಧನಗಳನ್ನು ಲಾಭ ಅಥವಾ ನಷ್ಟದ ಮೂಲಕ ನ್ಯಾಯಯುತ ಮೌಲ್ಯದಲ್ಲಿ (ಎಫ್‌ವಿಟಿಪಿಎಲ್)
- ಇತರ ಸಮಗ್ರ ಆದಾಯದ ಮೂಲಕ ಮೂಲಕ ನ್ಯಾಯಯುತ ಮೌಲ್ಯದಲ್ಲಿ ಲೆಕ್ಕಹಾಕಲಾದ ಈಕ್ವಿಟಿ ಸಾಧನಗಳು (ಎಫ್‌ವಿಟಿಒಸಿಐ)

ದತ್ತಿ ವೆಚ್ಚದಲ್ಲಿ ಸಾಲ ಸಾಧನಗಳು :

ಕೆಳಗಿನ ಎರಡೂ ಷರತ್ತುಗಳು ಪೂರೈಕೆಯಾದಾಗ ಸಾಲ ಸಾಧನವನ್ನು ದತ್ತಿ ವೆಚ್ಚದಲ್ಲಿ ಲೆಕ್ಕಹಾಕಲಾಗುತ್ತದೆ:

ಎ) ಆಸ್ತಿಯನ್ನು ಗುತ್ತಿಗೆಯ ನಗದು ಹರಿವುಗಳನ್ನು ಸಂಗ್ರಹಿಸುವ ದೃಷ್ಟಿಯಿಂದ ಆಸ್ತಿಗಳ ಇರಿಸಿಕೊಳ್ಳುವಿಕೆಯನ್ನು ಉದ್ದೇಶವಾಗಿ ಹೊಂದಿರುವ ವ್ಯಾಪಾರಿ ಮಾದರಿಯ ಒಳಗೆ ಇರಿಸಿಲಾಗಿದೆ ಮತ್ತು

ಬಿ) ಆಸ್ತಿಯ ಗುತ್ತಿಗೆಯ ನಿಬಂಧನೆಗಳು ನಿಗದಿತ ದಿನಾಂಕಗಳಂದು ಪೂರ್ಣವಾಗಿ ಅಸಲಿನ ಮತ್ತು ಬಾಕಿ ಇರುವ ಅಸಲು ಮೊತ್ತದ ಮೇಲಿನ ಬಡ್ಡಿಯ (ಎಸ್‌ಪಿಪಿಐ) ರೂಪದ ನಗದು ಹರಿವುಗಳಿಗೆ ಕಾರಣವಾಗುತ್ತವೆ.

ಈ ವರ್ಗವು ಕಂಪನಿಗೆ ಅತಿ ಹೆಚ್ಚು ಪ್ರಸ್ತುತವಾಗಿದೆ. ಪ್ರಾರಂಭಿಕ ಲೆಕ್ಕಾಚಾರದ ನಂತರ, ಇಂತಹ ಹಣಕಾಸು ಆಸ್ತಿಗಳನ್ನು ತರುವಾಯದಲ್ಲಿ ಪರಿಣಾಮಕಾರಿ ಬಡ್ಡಿ ದರ (ಇಐಆರ್) ವನ್ನು ಬಳಸಿ ಲೆಕ್ಕಹಾಕಲಾಗುತ್ತದೆ. ಸ್ವಾಧೀನ ವೆಚ್ಚದ ಮೇಲಿನ ರಿಯಾಯಿತಿ ಅಥವಾ ಪ್ರೀಮಿಯಂ ಹಾಗೂ ಇಐಆರ್ ನ ಆವಿಭಾಜ್ಯ ಭಾಗವಾದ ಶುಲ್ಕ ಅಥವಾ ವೆಚ್ಚಗಳನ್ನು ಪರಿಗಣಿಸಿ ದತ್ತಿ ವೆಚ್ಚವನ್ನು ಲೆಕ್ಕಹಾಕಲಾಗುತ್ತದೆ. ಇಐಆರ್ ದತ್ತಿಯನ್ನು ಲಾಭ ಮತ್ತು ನಷ್ಟದಲ್ಲಿ ಹಣಕಾಸು ಆದಾಯದಲ್ಲಿ ಸೇರಿಸಲಾಗುತ್ತದೆ. ಬಾಧೆಗಳಿಂದ ಉದ್ಭವಿಸುವ ನಷ್ಟಗಳನ್ನು ಲಾಭ ಅಥವಾ ನಷ್ಟದಲ್ಲಿ ಗುರುತಿಸಲಾಗುತ್ತದೆ. ಈ ವರ್ಗವು ಸಾಮಾನ್ಯವಾಗಿ ಸಾಲಗಳು, ವ್ಯಾಪಾರದಲ್ಲಿ ವಸೂಲಾಗಬೇಕಾದವು, ನಗದು ಮತ್ತು ನಗದು ಸಮಾನಗಳು, ಇತರ ಬ್ಯಾಂಕ್ ಶಿಲ್ಕುಗಳು ಮತ್ತು ಇತರ ಹಣಕಾಸು ಆಸ್ತಿಗಳಿಗೆ ಅನ್ವಯವಾಗುತ್ತವೆ. ವಸೂಲಾಗಬೇಕಾದವುಗಳ ಬಗ್ಗೆ ಹೆಚ್ಚಿನ ಮಾಹಿತಿಗೆ ಟಿಪ್ಪಣಿ ಸಂಖ್ಯೆ 6, 10, 11, 12 ಮತ್ತು 13 ನೋಡಿ.

ಎಫ್‌ವಿಟಿಪಿಎಲ್ ನಂತೆ ಸಾಲ ಸಾಧನ :

ಸಾಲ ಸಾಧನಗಳಿಗೆ ಎಫ್‌ವಿಟಿಪಿಎಲ್ ಅವಶಿಷ್ಟ ವರ್ಗವಾಗಿದೆ. ದತ್ತಿ ವೆಚ್ಚದಲ್ಲಿ ಅಥವಾ ಎಫ್‌ವಿಟಿಒಸಿಐ ನಂತೆ ವರ್ಗೀಕರಣದ ಮಾನದಂಡವನ್ನು ಪೂರೈಸದ ಯಾವುದೇ ಸಾಲಸಾಧನವನ್ನು ಎಫ್‌ವಿಟಿಪಿಎಲ್ ಎಂದು ವರ್ಗೀಕರಿಸಲಾಗುತ್ತದೆ.

ಇದರ ಜೊತೆಗೆ, ಕಂಪನಿಯು ದತ್ತಿ ವೆಚ್ಚ ಅಥವಾ ಎಫ್‌ವಿಟಿಒಸಿಐ ಮಾನದಂಡವನ್ನು ಬೇರೆ ರೀತಿಯಲ್ಲಿ ಪೂರೈಸುವ ಸಾಲ ಸಾಧನವನ್ನು ಎಫ್‌ವಿಟಿಪಿಎಲ್ ನಂತೆ ಪರಿಗಣಿಸಲು ಆರಿಸಬಹುದು. ಆದರೆ, ಇಂತಹ ಆಯ್ಕೆಯು ಲೆಕ್ಕಾಚಾರದ ಅಥವಾ ಪರಿಗಣಿಸುವಿಕೆಯ ಅಸ್ಥಿರತೆಯನ್ನು ತೆಗೆದುಹಾಕುವ ಅಥವಾ ಕುಗ್ಗಿಸುವುದಾಗಿದ್ದರೆ ಮಾತ್ರ ಇದಕ್ಕೆ ಅವಕಾಶವಿರುತ್ತದೆ ('ಲೆಕ್ಕದಲ್ಲಿ ಹೊಂದದಿರುವಿಕೆ' ಎಂದು ಇದನ್ನು ಉಲ್ಲೇಖಿಸಲಾಗುತ್ತದೆ).

ಎಫ್‌ವಿಟಿಪಿಎಲ್ ವರ್ಗದೊಳಗೆ ಸೇರಿರುವ ಸಾಲ ಸಾಧನಗಳನ್ನು ನ್ಯಾಯಯುತ ಮೌಲ್ಯದಲ್ಲಿ ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಎಲ್ಲ ಬದಲಾವಣೆಗಳನ್ನು ಗುರುತಿಸಿ ಲೆಕ್ಕಹಾಕಲಾಗುತ್ತದೆ.

ಈಕ್ವಿಟಿ ಸಾಧನಗಳು :

ಇಂಡ್ ಎಎಸ್ 109ರ ವ್ಯಾಪ್ತಿಗೆ ಬರುವ ಎಲ್ಲ ಈಕ್ವಿಟಿ ಸಾಧನಗಳನ್ನು ನ್ಯಾಯಯುತ ಮೌಲ್ಯದಲ್ಲಿ ಲೆಕ್ಕಹಾಕಲಾಗುತ್ತದೆ. ವ್ಯಾಪಾರಕ್ಕೆಂದು ಇರಿಸಿಕೊಳ್ಳಾದ ಈಕ್ವಿಟಿ ಸಾಧನಗಳನ್ನು ಎಫ್‌ವಿಟಿಪಿಎಲ್ ಎಂದು ವರ್ಗೀಕರಿಸಲಾಗುತ್ತದೆ. ಇತರ ಎಲ್ಲ ಈಕ್ವಿಟಿ ಸಾಧನಗಳಿಗೆ, ನ್ಯಾಯಯುತ ಮೌಲ್ಯದಲ್ಲಿನ ತರುವಾಯದ ಬದಲಾವಣೆಗಳನ್ನು ಇತರ ಸಮಗ್ರ ಆದಾಯದಲ್ಲಿ ಪ್ರಸ್ತುತಪಡಿಸಲು ಕಂಪನಿಯು ತಿದ್ದಲಾಗದ ಆಯ್ಕೆಯನ್ನು ಮಾಡಬಹುದಾಗಿದೆ. ಕಂಪೆನಿಯು ಇಂತಹ ಆಯ್ಕೆಯನ್ನು ಒಂದೊಂದು ಸಾಧನವನ್ನು ಪ್ರತ್ಯೇಕವಾಗಿ ಪರಿಗಣಿಸಿ ಮಾಡುತ್ತದೆ. ವರ್ಗೀಕರಣವು ಪ್ರಾರಂಭಿಕ ಗುರುತಿಸುವಿಕೆಯ ಆಧಾರವನ್ನು ಹೊಂದಿದ್ದು ಅದನ್ನು ತಿದ್ದುವುದು ಸಾಧ್ಯವಿರುವುದಿಲ್ಲ.

ಕಂಪನಿಯು ಎಫ್‌ವಿಟಿಓಸಿಐ ನಂತೆ ಈಕ್ವಿಟಿ ಸಾಧನವೊಂದನ್ನು ವರ್ಗೀಕರಿಸಲು ನಿರ್ಧರಿಸಿದರೆ, ಸಾಧನದ ಮೇಲಿನ ಎಲ್ಲ ನ್ಯಾಯಯುತ ಮೌಲ್ಯ ಬದಲಾವಣೆಗಳನ್ನು, ಲಾಭಾಂಶವನ್ನು ಹೊರತುಪಡಿಸಿ, ಓಸಿಐ ನಲ್ಲಿ ಗುರುತಿಸಲಾಗುತ್ತದೆ. ಸಾಧನದ ಮಾರಾಟದ ನಂತರವೂ ಸಹ, ಓಸಿಐ ನಿಂದ ಲಾಭ ಮತ್ತು ನಷ್ಟದ ತಃಖ್ತೆಗೆ ಮೊತ್ತಗಳನ್ನು ಹೊಂದಿಸಲಾಗುವುದಿಲ್ಲ. ಆದರೆ, ಕಂಪನಿಯು ಈಕ್ವಿಟಿಯೊಳಗಿನ ಸಂಚಿತ ಲಾಭ ಅಥವಾ ನಷ್ಟವನ್ನು ವರ್ಗೀಕರಿಸಬಹುದಾಗಿದೆ.

ಎಫ್‌ವಿಟಿಪಿಎಲ್ ವರ್ಗದೊಳಗಿನ ಈಕ್ವಟಿ ಸಾಧನಗಳನ್ನು ನ್ಯಾಯಯುತ ಮೌಲ್ಯದಲ್ಲಿ, ಲಾಭ ಮತ್ತು ನಷ್ಟದಲ್ಲಿ ಬದಲಾವಣೆಗಳನ್ನು ಗುರುತಿಸಿ, ಲೆಕ್ಕಹಾಕಲಾಗುತ್ತದೆ.

ಈಕ್ವಿಟಿ ಸಾಧನದಲ್ಲಿನ ಹೂಡಿಕೆಯನ್ನು ಹಣಕಾಸು ತಃಖ್ತೆಯಲ್ಲಿ ವೆಚ್ಚದಲ್ಲಿ ಸೇರಿಸಲಾಗುತ್ತದೆ ಮತ್ತು ವರದಿಯ ದಿನಾಂಕದಂದು ನ್ಯಾಯಯುತ ಮೌಲ್ಯದಲ್ಲಿ ಪರಿಗಣಿಸಲಾಗಿಲ್ಲ.

ಗುರುತಿಸುವಿಕೆಯನ್ನು ಹಿಂತೆಗೆದುಕೊಳ್ಳುವುದು

ಕೆಳಗಿನ ಸಂದರ್ಭಗಳಲ್ಲಿ ಹಣಕಾಸು ಆಸ್ತಿಯೊಂದರ ಗುರುತಿಸುವಿಕೆಯನ್ನು (ಅಥವಾ, ಅನ್ವಯವಾಗುವೆಡೆ, ಹಣಕಾಸು ಆಸ್ತಿಯ ಭಾಗ ಅಥವಾ ಹಣಕಾಸು ಆಸ್ತಿಗಳ ಭಾಗ) ಪ್ರಾಥಮಿಕವಾಗಿ ಹಿಂತೆಗೆದುಕೊಳ್ಳಲಾಗುವುದು (ಅರ್ಥಾತ್, ಕಂಪನಿಯ ಸಂತುಲನ ಪಟ್ಟಿಯಿಂದ ತೆಗೆದುಹಾಕಲಾಗುವುದು):

– ಆಸ್ತಿಯಿಂದ ನಗದು ಹರಿವುಗಳನ್ನು ಪಡೆದುಕೊಳ್ಳುವ ಹಕ್ಕುಗಳು ವಾಯಿದೆಯನ್ನು ಕಳೆದುಕೊಂಡಿವೆ, ಅಥವಾ

– ಕಂಪೆನಿಯು ಆಸ್ತಿಯಿಂದ ನಗದು ಹರಿವುಗಳನ್ನು ಪಡೆದುಕೊಳ್ಳುವ ತನ್ನ ಹಕ್ಕುಗಳನ್ನು ವರ್ಗಾಯಿಸಿರುತ್ತದೆ ಅಥವಾ 'ಪಾಸ್–ಥ್ರೂ' ವ್ಯವಸ್ಥೆಯ ಮೂಲಕ ಮೂರನೆಯ ಪಕ್ಷಕ್ಕೆ ಯಾವುದೇ ವಾಸ್ತವಿಕ ವಿಳಂಬವಿಲ್ಲದೆ ಪಡೆದುಕೊಳ್ಳಲಾದ ನಗದು ಹರಿವುಗಳನ್ನು ಪೂರ್ಣವಾಗಿ ಪಾವತಿಸುವ ಹೊಣೆಯನ್ನು ಹೊತ್ತಿರುತ್ತದೆ: ಮತ್ತು (ಎ) ಕಂಪನಿಯು ಆಸ್ತಿಯ ಎಲ್ಲ ಅಪಾಯಗಳು ಮತ್ತು ಲಾಭಗಳನ್ನು ಗಣನೀಯವಾಗಿ ವರ್ಗಾಯಿಸಿದೆ, ಅಥವಾ (ಬಿ) ಕಂಪೆನಿಯು ಆಸ್ತಿಯ ಎಲ್ಲ ಅಪಾಯಗಳು ಮತ್ತು ಲಾಭಗಳನ್ನು ಗಣನೀಯವಾಗಿ ವರ್ಗಾಯಿಸಿರುವುದೂ ಇಲ್ಲ, ತನ್ನಲ್ಲಿ ಉಳಿಸಿಕೊಂಡಿರುವುದೂ ಇಲ್ಲ, ಬದಲಿಗೆ ಆಸ್ತಿಯ ನಿಯಂತ್ರಣವನ್ನು ವರ್ಗಾಯಿಸಿದೆ.

ಕಂಪನಿಯು ಆಸ್ತಿಯಿಂದ ನಗದು ಹರಿವುಗಳನ್ನು ಪಡೆದುಕೊಳ್ಳುವ ತನ್ನ ಹಕ್ಕುಗಳನ್ನು ವರ್ಗಾಯಿಸಿರುವಾಗ ಅಥವಾ 'ಪಾಸ್–ಥ್ರೂ' ವ್ಯವಸ್ಥೆಯ ಒಪ್ಪಂದವನ್ನು ಮಾಡಿಕೊಂಡಿರುವಾಗ, ಒಡೆತನದ ಅಪಾಯ ಮತ್ತು ಲಾಭಗಳನ್ನು ತನ್ನಲ್ಲಿ ಉಳಿಸಿಕೊಂಡಿದೆಯೇ ಮತ್ತು ಹಾಗಿದ್ದಲ್ಲಿ ಅದು ಯಾವ ಮಟ್ಟಿಗೆ ಎನ್ನುವುದನ್ನು ಮೌಲ್ಯಮಾಪನಮಾಡುತ್ತದೆ. ಆಸ್ತಿಯ ಎಲ್ಲ ಅಪಾಯ ಮತ್ತು ಲಾಭಗಳನ್ನು ವರ್ಗಾಯಿಸದೆ ಅಥವಾ ಉಳಿಸಿಕೊಳ್ಳದೇ ಇರುವಾಗ ಮತ್ತು ಆಸ್ತಿಯ ನಿಯಂತ್ರಣವನ್ನು ಸಹ ವರ್ಗಾಯಿಸದಿರುವಾಗ ಕಂಪನಿಯು ತನ್ನ ಮುಂದುವರೆದ ತೊಡಗಿಕೊಳ್ಳುವಿಕೆಯ ಮಟ್ಟಿಗೆ ವರ್ಗಯಿತ ಆಸ್ತಿಯ ಗುರುತಿಸುವಿಕೆಯನ್ನು ಮುಂದುವರೆಸುತ್ತದೆ. ಈ ಸಂದರ್ಭದಲ್ಲಿ ಕಂಪನಿಯು ಜೊತೆಗಿನ ಹೊಣೆಯನ್ನೂ ಗುರುತಿಸುತ್ತದೆ. ವರ್ಗಯಿತ ಆಸ್ತಿ ಮತ್ತು ಜೊತೆಗಿನ ಹೊಣೆಯನ್ನು ಕಂಪನಿಯು ಉಳಿಸಿಕೊಂಡಿರುವ ಹಕ್ಕುಗಳು ಮತ್ತು ಹೊಣೆಗಳನ್ನು ಪ್ರತಿಫಲಿಸುವ ಆಧಾರವೊಂದರ ಮೇಲೆ ಲೆಕ್ಕಹಾಕಲಾಗುತ್ತದೆ.

ಹಣಕಾಸು ಆಸ್ತಿಗಳಿಗೆ ಬಾಧೆ ತಟ್ಟುವಿಕೆ :

ಇಂಡ್ ಎಎಸ್ 109ರ ಅನುಸಾರ, ಕೆಳಗಿನ ಹಣಕಾಸು ಆಸ್ತಿಗಳ ಬಾಧೆ ತಟ್ಟುವಿಕೆ ಮತ್ತು ಕ್ರೆಡಿಟ್ ಅಪಾಯದ ಗುರುತಿಸುವಿಕೆ ಮತ್ತು ಲೆಕ್ಕಾಚಾರಕ್ಕೆ ನಿರೀಕ್ಷಿತ ಕ್ರೆಡಿಟ್ ನಷ್ಟ (ಇಸಿಎಲ್) ಮಾದರಿಯನ್ನು ಅನ್ವಯಿಸುತ್ತದೆ:

1. ಹಣಕಾಸು ಆಸ್ತಿಗಳು ಸಾಲ ಸಾಧನಗಳಾಗಿದ್ದು ಅವನ್ನು ದತ್ತಿ ವೆಚ್ಚದಲ್ಲಿ ಲೆಕ್ಕಹಾಕಲಾಗುತ್ತದೆ, ಉದಾ. ಠೇವಣಿಗಳು, ಸಾಲಗಳು, ವ್ಯಾಪಾರದಲ್ಲಿ ಬರಬೇಕಾದವು, ಬ್ಯಾಂಕ್ ಶಿಲ್ಕು ಮತ್ತಿತರ ಹಣಕಾಸು ಆಸ್ತಿಗಳು.

2. ವ್ಯಾಪಾರದಲ್ಲಿ ವಸೂಲಾಗಬೇಕಾದವು ಅಥವಾ ನಗದನ್ನು ಸ್ವೀಕರಿಸುವ ಇತರ ಯಾವುದೇ ಗುತ್ತಿಗೆಯ ಹಕ್ಕು ಅಥವಾ ಇಂಡ್ ಎಎಸ್ 115ರ ವ್ಯಾಪ್ತಿಯೊಳಗಿನ ವ್ಯವಹಾರಗಳ ಕಾರಣದಿಂದಾಗಿ ಉದ್ಭವಿಸುವ ಇತರ ಹಣಕಾಸು ಆಸ್ತಿ;

3. ಎಫ್‌ವಿಟಿಪಿಎಲ್ ನಲ್ಲಿ ಲೆಕ್ಕಹಾಕದ ಸಾಲ ಬಾಧ್ಯತೆಗಳು.

ಕಂಪನಿಯು ವ್ಯಾಪಾರದಲ್ಲಿ ಬರಬೇಕಾದವುಗಳ ಮೇಲಿನ ಬಾಧೆ ನಷ್ಟ ಭತ್ಯೆಯನ್ನು ಗುರುತಿಸಲು 'ಸರಳೀಕೃತ ನಡೆ'ಯನ್ನು ಅನುಸರಿಸುತ್ತದೆ.

ಸರಳೀಕೃತ ನಡೆಯ ಅನ್ವಯವು ಕಂಪೆನಿಯು ತನ್ನ ಕ್ರೆಡಿಟ್ ಅಪಾಯದಲ್ಲಿನ ಬದಲಾವಣೆಗಳ ಮೇಲೆ ನಿಗಾ ಇಡುವುದನ್ನು ಅಗತ್ಯವಾಗಿಸುವುದಿಲ್ಲ. ಬದಲಿಗೆ, ಬಾಧೆ ನಷ್ಟ ಭತ್ಯೆಯನ್ನು ಪ್ರಾರಂಭದ ಗುರುತಿಸುವಿಕೆಯಿಂದ ಹಿಡಿದು, ಪತ್ರಿ ವರದಿಯ ದಿನಾಂಕದಂದು ಇದ್ದಂತೆ ಜೀವಿತಾವಧಿ ಇಸಿಎಲ್ ಗಳನ್ನು ಆಧರಿಸಿ ಗುರುತಿಸುತ್ತದೆ.

ಇತರ ಹಣಕಾಸು ಆಸ್ತಿಗಳ ಬಾಧೆ ನಷ್ಟ ಮತ್ತು ಅಪಾಯದ ಗುರುತಿಸುವಿಕೆಗಾಗಿ ಕಂಪೆನಿಯು ಪ್ರಾರಂಭದ ಗುರುತಿಸುವಿಕೆಯಿಂದ ಸದ್ಯಕ್ಕೆ ಕ್ರೆಡಿಟ್ ಅಪಾಯದಲ್ಲಿ ಗಣನೀಯವಾದ ಹೆಚ್ಚಳವಿದೆಯೇ ಎಂದು ನಿರ್ಧರಿಸುತ್ತದೆ. ಕ್ರೆಡಿಟ್ ಅಪಾಯ ಗಣನೀಯವಾಗಿ ಹೆಚ್ಚಳ ಕಂಡಿರದಿದ್ದಲ್ಲಿ ಬಾಧೆ ನಷ್ಟವನ್ನು ಹವಣಿಸಲು ಹನ್ನೆರಡು ತಿಂಗಳ ಇಸಿಎಲ್ ಅನ್ನು ಬಳಸಲಾಗುತ್ತದೆ. ಆದರೆ, ಕ್ರೆಡಿಟ್ ಅಪಾಯ ಗಣನೀಯವಾಗಿ ಹೆಚ್ಚಳ ಕಂಡಿದ್ದಲ್ಲಿ ಜೀವಿತಾವಧಿ ಇಸಿಎಲ್ ಅನ್ನು ಬಳಸಲಾಗುತ್ತದೆ. ತರುವಾಯದ ಅವಧಿಯಲ್ಲಿ, ಪ್ರಾರಂಭದ ಗುರುತಿಸುವಿಕೆಯ ನಂತರದಲ್ಲಿ ಕ್ರೆಡಿಟ್ ಅಪಾಯದಲ್ಲಿ ಗಣನೀಯ ಹೆಚ್ಚಳವಿರದಂತೆ ಸಾಧನದ ಕ್ರೆಡಿಟ್ ಗುಣಮಟ್ಟವು ಸುಧಾರಿಸಿದಲ್ಲಿ, ಬಾಧೆ ನಷ್ಟ ಭತ್ಯೆಯನ್ನು ಹನ್ನೆರಡು ತಿಂಗಳ ಇಸಿಎಲ್ ಅನ್ನು ಆಧರಿಸಿ ಗುರುತಿಸುವುದನ್ನು ಕಂಪೆನಿಯು ಆಶ್ರಯಿಸುತ್ತದೆ.

ಜೀವಿತಾವಧಿಯ ಇಸಿಎಲ್ ಹಣಕಾಸು ಸಾಧನದ ನಿರೀಕ್ಷಿತ ಜೀವಿತಾವಧಿಯ ಉದ್ದಕ್ಕೆ ಎಲ್ಲ ಸಾಧ್ಯವಿರುವ ತಪ್ಪುವಿಕೆ ಸಂದರ್ಭಗಳಿಂದ ಉದ್ಭವಿಸುವ ನಿರೀಕ್ಷಿತ ಕ್ರೆಡಿಟ್ ನಷ್ಟಗಳಾಗಿವೆ. ಹನ್ನೆರಡು ತಿಂಗಳ ಇಸಿಎಲ್ ವರದಿಯ ದಿನಾಂಕದ ನಂತರ ಹನ್ನೆರಡು ತಿಂಗಳೊಳಗೆ ಘಟಿಸುವುದು ಸಾಧ್ಯವಿರುವ ತಪ್ಪುವಿಕೆ ಸಂದರ್ಭಗಳಿಂದ ಉದ್ಭವಿಸುವ ಜೀವಿತಾವಧಿ ಇಸಿಎಲ್ ನ ಭಾಗವಾಗಿದೆ.

ಇಸಿಎಲ್ ಗುತ್ತಿಗೆಯ ಅನುಸಾರ ಕಂಪನಿಗೆ ಬಾಕಿ ಇರುವ ಎಲ್ಲ ಗುತ್ತಿಗೆಯುಕ್ತ ನಗದು ಹರಿವುಗಳು ಮತ್ತು ಮೂಲ ಇಐಆರ್ ನಲ್ಲಿ ರಿಯಾಯಿತಿಯೊಂದಿಗೆ ಅದು ಪಡೆಯಲು ನಿರೀಕ್ಷಿಸುವ ಎಲ್ಲ ನಗದು ಹರಿವುಗಳ ನಡುವಿನ ವ್ಯತ್ಯಾಸವಾಗಿದೆ (ಅರ್ಥಾತ್, ಎಲ್ಲ ನಗದು ಕೊರತೆಗಳು).

ಅವಧಿಯಲ್ಲಿ ಗುರುತಿಸಲಾದ ಇಸಿಎಲ್ ಬಾಧೆ ನಷ್ಟ ಭತ್ಯೆಯನ್ನು (ಅಥವಾ ವಿಪರ್ಯಯ) ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಆದಾಯ/ಖರ್ಚು ಎಂದು ಗುರುತಿಸಲಾಗಿದೆ. ಈ ಮೊತ್ತವನ್ನು ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ 'ಇತರ ಖರ್ಚುಗಳು' ಅಡಿಯಲ್ಲಿ ಪ್ರಕಟಿಸಲಾಗಿದೆ. ಹಣಕಾಸು ಸಾಧನಕ್ಕೆ ಸಂತುಲನ ಪಟ್ಟಿಯ ಪ್ರಸ್ತುತಿಯನ್ನು ಕೆಳಗೆ ವಿವರಿಸಲಾಗಿದೆ:

– ದತ್ತಿ ವೆಚ್ಚದಲ್ಲಿ ಲೆಕ್ಕಹಾಕಲಾದ ಹಣಕಾಸು ಆಸ್ತಿಗಳ ಮೇಲಿನ ಇಸಿಎಲ್ ಅನ್ನು ಭತ್ಯೆಯಾಗಿ, ಅರ್ಥಾತ್ ಸಂತುಲನ ಪಟ್ಟಿಯಲ್ಲಿ ಈ ಆಸ್ತಿಗಳ ಲೆಕ್ಕಾಚಾರದ ಅವಿಭಾಜ್ಯ ಭಾಗವಾಗಿ, ಪ್ರಸ್ತುತಪಡಿಸಲಾಗಿದೆ. ಭತ್ಯೆಯು ನಿವ್ವಳ ಒಯ್ಯುವ ಮೊತ್ತವನ್ನು ಕುಗ್ಗಿಸುತ್ತದೆ. ಆಸ್ತಿಯು ತೊಡೆದುಹಾಕುವಿಕೆಯ ಮಾನದಂಡವನ್ನು ಪೂರೈಸದ ಹೊರತು ಕಂಪೆನಿಯು ಒಟ್ಟು ಒಯ್ಯುವ ಮೊತ್ತದಿಂದ ಬಾಧೆಯ ಭತ್ಯೆಯನ್ನು ಕಡಿತಗೊಳಿಸುವುದಿಲ್ಲ.

ಕ್ರೆಡಿಟ್ ಅಪಾಯ ಮತ್ತು ಬಾಧೆ ನಷ್ಟವನ್ನು ಅಂದಾಜುಮಾಡಲು ಕಂಪೆನಿಯು ಹಂಚಿಕೊಂಡ ಕ್ರೆಡಿಟ್ ಅಪಾಯ ಲಕ್ಷಣಗಳ ಆಧಾರದ ಮೇಲೆ ಹಣಕಾಸು ಸಾಧನಗಳನ್ನು ಸಂಯೋಜಿಸುತ್ತದೆ ಮತ್ತು ಇದರ ಉದ್ದೇಶ ಕಾಲಕಾಲಿಕ ಆಧಾರದ ಮೇಲೆ ಗುರುತಿಸಬೇಕಾದ, ಕ್ರೆಡಿಟ್ ಅಪಾಯಗಳಲ್ಲಿನ ಗಣನೀಯ ಹೆಚ್ಚಳವನ್ನು ಸಾಧ್ಯವಾಗಿಸಲು ವಿನ್ಯಾಸಗೊಳಿಸಲಾದ ವಿಶ್ಲೇಷಣೆಗೆ ಅನುಕೂಲಮಾಡಿಕೊಡುವುದಾಗಿದೆ.

ಹಣಕಾಸು ಹೊಣೆಗಳು :

ಪ್ರಾರಂಭಿಕ ಗುರುತಿಸುವಿಕೆ ಮತ್ತು ಲೆಕ್ಕಹಾಕುವಿಕೆ

ಹಣಕಾಸು ಹೊಣೆಗಳನ್ನು, ಪ್ರಾರಂಭಿಕ ಗುರುತಿಸುವಿಕೆಯಲ್ಲಿ, ನ್ಯಾಯಯುಕ್ತ ಮೌಲ್ಯದಲ್ಲಿ ಸೂಕ್ತವಾದಂತೆ, ಲಾಭ ಅಥವಾ ನಷ್ಟದ ಮೂಲಕ; ಸಾಲಗಳು ಮತ್ತು ಪಡೆದುಕೊಳ್ಳುವಿಕೆ ಮೂಲಕ; ಪಾವತಿಯಾಗಬೇಕಾದವುಗಳ ಮೂಲಕ ಹಣಕಾಸು ಹೊಣೆಗಳಾಗಿ ವರ್ಗೀಕರಿಸಲಾಗುತ್ತದೆ.

ಎಲ್ಲ ಹಣಕಾಸು ಹೊಣೆಗಳನ್ನು ಪ್ರಾರಂಭಿಕವಾಗಿ ನ್ಯಾಯಯುತ ಮೌಲ್ಯದಲ್ಲಿ ಗುರುತಿಸಲಾಗುತ್ತದೆ ಮತ್ತು, ಸಾಲಗಳು ಹಾಗೂ ಪಡೆಯುವಿಕೆಗಳು ಮತ್ತು ಪಾವತಿಯಾಗಬೇಕಾದವುಗಳಿಗೆ ಸಂಬಂಧಿಸಿದಂತೆ ನೇರವಾಗಿ ಅಧ್ಯಾರೋಪಿಸಬಹುದಾದ ವ್ಯವಹಾರ ವೆಚ್ಚಗಳ ನಿವ್ವಳವಾಗಿ ಗುರುತಿಸಲಾಗುತ್ತದೆ.

ಕಂಪನಿಯ ಹಣಕಾಸು ಹೊಣೆಗಳಲ್ಲಿ ವ್ಯಾಪಾರಿ ಮತ್ತು ಇತರ ಪಾವತಿಯಾಗಬೇಕಾದವು, ಬ್ಯಾಂಕ್ ಓವರ್‌ಡ್ರಾಫ್ಟ್ ಸಹ ಸೇರಿ ಸಾಲಗಳು ಮತ್ತು ಪಡೆದವುಗಳು ಸೇರುತ್ತವೆ.

ತರುವಾಯದ ಲೆಕ್ಕಹಾಕುವಿಕೆ

ಹಣಕಾಸು ಹೊಣೆಗಳ ಲೆಕ್ಕಾಚಾರವು ಕೆಳಗೆ ವಿವರಿಸಲಾಗಿರುವಂತೆ ಅವುಗಳ ವರ್ಗೀಕರಣವನ್ನು ಅವಲಂಬಿಸುತ್ತದೆ:

ಲಾಭ ಅಥವಾ ನಷ್ಟದ ಮೂಲಕ ನ್ಯಾಯಯುತ ಮೌಲ್ಯದಲ್ಲಿ ಹಣಕಾಸು ಹೊಣೆಗಳು

ಲಾಭ ಅಥವಾ ನಷ್ಟದ ಮೂಲಕ ನ್ಯಾಯಯುತ ಮೌಲ್ಯದಲ್ಲಿ ಹಣಕಾಸು ಹೊಣೆಗಳಲ್ಲಿ ವ್ಯಾಪಾರಕ್ಕೆಂದು ಇರಿಸಲಾದ ಹಣಕಾಸು ಹೊಣೆಗಳು ಮತ್ತು ಲಾಭ ಅಥವಾ ನಷ್ಟದ ಮೂಲಕ ನ್ಯಾಯಯುತ ಮೌಲ್ಯದಲ್ಲಿ ಪ್ರಾರಂಭಿಕ ಗುರುತಿಸುವಿಕೆಯಲ್ಲಿ ನಿಯಮಿಸಲಾದ ಹಣಕಾಸು ಹೊಣೆಗಳು ಸೇರುತ್ತವೆ. ಸದ್ಯದ ಅವಧಿಯಲ್ಲಿ ಮರುಖರೀದಿಯ ಉದ್ದೇಶಕ್ಕೆ ವ್ಯಯಿಸಲಾದವುಗಳಾದರೆ ಅವನ್ನು ವ್ಯಾಪಾರಕ್ಕೆಂದು ಇರಿಸಲಾದ ಹಣಕಾಸು ಹೊಣೆಗಳು ಎಂದು ವರ್ಗೀಕರಿಸಲಾಗುತ್ತದೆ. ಇಂಡ್ ಎಎಸ್ 109ರಲ್ಲಿ ನಿರ್ವಚಿಸಲಾದಂತೆ ಸಂರಕ್ಷಕ ಸಂಬಂಧಗಳಲ್ಲಿ ಸಂರಕ್ಷಕ ಸಾಧನಗಳು ಎಂದು ನಿಯಮಿಸಿದ ಮತ್ತು ಕಂಪನಿಯ ವ್ಯಾಪ್ತಿಗೆ ಬರುವ ನಿಷ್ಪನ್ನ ಹಣಕಾಸು ಸಾಧನಗಳು ಸಹ ಈ ವರ್ಗದಲ್ಲಿ ಸೇರುತ್ತವೆ.

ವ್ಯಾಪಾರಕ್ಕೆಂದು ಇರಿಸಲಾದ ಹೊಣೆಗಳ ಮೇಲಿನ ಲಾಭಗಳು ಅಥವಾ ನಷ್ಟಗಳನ್ನು ಲಾಭ ಅಥವಾ ನಷ್ಟದಲ್ಲಿ ಗುರುತಿಸಲಾಗುತ್ತದೆ.

ಲಾಭ ಅಥವಾ ನಷ್ಟದ ಮೂಲಕ ನ್ಯಾಯಯುತ ಮೌಲ್ಯದಲ್ಲಿ ಪ್ರಾರಂಭಿಕವಾಗಿ ಗುರುತಿಸಿ ವಿಧಿಸಲಾದ ಹಣಕಾಸು ಹೊಣೆಗಳನ್ನು, ಇಂಡ್ ಎಎಸ್ 109ರಲ್ಲಿನ ಮಾನದಂಡವು ಪೂರೈಕೆಯಾದರೆ ಮಾತ್ರ, ಗುರುತಿಸುವಿಕೆಯ ಪ್ರಾರಂಭಿಕ ದಿನಾಂಕದಂದು ಇದ್ದಂತೆ ನಿಯಮಿಸಲಾಗುವುದು. ಎಫ್‌ವಿಟಿಪಿಎಲ್ ಎಂದು ನಿಯಮಿಸಲಾದ ಹೊಣೆಗಳಿಗೆ, ಸ್ವಂತ ಕ್ರೆಡಿಟ್ ಅಪಾಯದಲ್ಲಿನ ಬದಲಾವಣೆಗಳಿಗೆ ಅಧ್ಯಾರೋಪಿಸಬಹುದಾದ ನ್ಯಾಯಯುತ ಲಾಭಗಳು/ನಷ್ಟಗಳನ್ನು ಓಸಿಐ ನಲ್ಲಿ ಗುರುತಿಸಲಾಗಿದೆ. ಈ ಲಾಭಗಳು/ನಷ್ಟಗಳನ್ನು ತರುವಾಯದಲ್ಲಿ ಲಾಭ ಮತ್ತು ನಷ್ಟಗಳಿಗೆ ವರ್ಗಯಿಸಲಾಗುವುದಿಲ್ಲ. ಆದರೆ, ಕಂಪೆನಿಯು ಈಕ್ವಿಟಿಯೊಳಗಿನ ಸಂಚಿತ ಲಾಭ ಅಥವಾ ನಷ್ಟವನ್ನು ವರ್ಗಾಯಿಸಬಹುದಾಗಿದೆ. ಇಂತಹ ಹೊಣೆಯ ನ್ಯಾಯಯುತ ಮೌಲ್ಯದಲ್ಲಿನ ಇತರ ಎಲ್ಲ ಬದಲಾವಣೆಗಳನ್ನೂ ಲಾಭ ಅಥವಾ ನಷ್ಟದ ತಃಖ್ತೆಯಲ್ಲಿ ಗುರುತಿಸಲಾಗುತ್ತದೆ.

ಸಾಲಗಳು ಮತ್ತು ಎರವಲುಗಳು :

ಪ್ರಾರಂಭಿಕ ಗುರುತಿಸುವಿಕೆಯ ನಂತರ, ಬಡ್ಡಿಯುಕ್ತ ಸಾಲಗಳು ಮತ್ತು ಎರವಲುಗಳನ್ನು ತರುವಾಯದಲ್ಲಿ ಇಐಆರ್ (ಪರಿಣಾಮಕಾರಿ ಬಡ್ಡಿ ದರ) ಬಳಸಿ ದತ್ತಿ ವೆಚ್ಚದಲ್ಲಿ ಲೆಕ್ಕಹಾಕಲಾಗುತ್ತದೆ. ನಷ್ಟಗಳ ಗುರುತಿಸುವಿಕೆಯನ್ನು ಹಿಂತೆಗೆದುಕೊಂಡ ನಂತರ ಲಾಭಗಳು ಮತ್ತು ನಷ್ಟಗಳನ್ನು ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಹಾಗೂ ಇಐಆರ್ ದತ್ತಿ ಪ್ರಕ್ರಿಯೆಯ ಮೂಲಕ ಗುರುತಿಸಲಾಗುವುದು. ಸ್ವಾಧೀನದ ಮೇಲಿನ ರಿಯಾಯಿತಿ ಅಥವಾ ಪ್ರೀಮಿಯಂ ಅನ್ನು ಹಾಗೂ ಇಐಆರ್ ಅವಿಭಾಜ್ಯ ಭಾಗವಾದ ಶುಲ್ಕಗಳು ಮತ್ತು ವೆಚ್ಚಗಳನ್ನು ಲೆಕ್ಕಕ್ಕೆ ತೆಗೆದುಕೊಂಡು ದತ್ತಿ ವೆಚ್ಚವನ್ನು ಲೆಕ್ಕಹಾಕಲಾಗುತ್ತದೆ. ಇಐಆರ್ ದತ್ತಿ ವೆಚ್ಚವನ್ನು ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಹಣಕಾಸು ವೆಚ್ಚಗಳಾಗಿ ಸೇರಿಸಲಾಗುತ್ತದೆ.

ಗುರುತಿಸುವಿಕೆಯ ಹಿಂತೆಗೆತ :

ಹೊಣೆಯ ಅಡಿಯಲ್ಲಿನ ಬಾಧ್ಯತೆಯನ್ನು ನಿರ್ವಹಿಸಿದಾಗ ಅಥವಾ ಅದು ರದ್ದಾದಾಗ ಅಥವಾ ಅದರ ವಾಯಿದೆ ತೀರಿದಾಗ ಹಣಕಾಸು ಹೊಣೆಯ ಗುರುತಿಸುವಿಕೆಯನ್ನು ಹಿಂತೆಗೆದುಕೊಳ್ಳಲಾಗುತ್ತದೆ. ಅಸ್ತಿತ್ವದಲಿರುವ ಹಣಕಾಸು ಹೊಣೆಯನ್ನು ಗಣನೀಯವಾಗಿ ಭಿನ್ನವಾದ ಷರತ್ತುಗಳ ಮೇಲೆ ಅದೇ ದಾತ ಬದಲಿಸಿದರೆ, ಅಥವಾ ಅಸ್ತಿತ್ವದಲ್ಲಿರು ಹೊಣೆಯನ್ನು ಗಣನೀಯವಾಗಿ ಮಾರ್ಪಡಿಸಿದರೆ ಇಂತಹ ವಿನಿಮಯ ಅಥವ ಮಾರ್ಪಾಡನ್ನು ಮೂಲ ಹೊಣೆಯ ಗುರುತಿಸುವಿಕೆಯ ಹಿಂತೆಗೆತ ಮತ್ತು ಹೊಸ ಹೊಣೆಯ ಗುರುತಿಸುವಿಕೆ ಎಂದು ಪರಿಗಣಿಸಲಾಗುತ್ತದೆ. ಅನುಕ್ರಮವಾದ ಒಯ್ಯುವ ಮೊತ್ತದಲ್ಲಿನ ವ್ಯತ್ಯಾಸವನ್ನು ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಗುರುತಿಸಲಾಗುವುದು.

2.18 ಗುತ್ತಿಗೆಗಳು :

ವ್ಯವಸ್ಥೆಯೊಂದು ಗುತ್ತಿಗೆಯೇ ಅಲ್ಲವೇ (ಅಥವಾ ಗುತ್ತಿಗೆಯನ್ನು ಒಳಗೊಳ್ಳುವುದೇ) ಎಂಬ ಬಗೆಗಿನ ನಿರ್ಧಾರವು ಗುತ್ತಿಗೆಯ ಪ್ರಾರಂಭದಲ್ಲಿನ ವ್ಯವಸ್ಥೆಯ ಸಾರವನ್ನು ಅವಲಂಬಿಸುತ್ತದೆ. ವ್ಯವಸ್ಥೆಯ ಸಾಕಾರವು ನಿರ್ದಿಷ್ಟ ಆಸ್ತಿ ಅಥವಾ ಆಸ್ತಿಗಳ

ಬಳಕೆಯನ್ನು ಅವಲಂಬಿಸಿದ್ದರೆ ಮತ್ತು ವ್ಯವಸ್ಥೆಯಲ್ಲಿ ನಿರ್ದಿಷ್ಟವಾಗಿ ಹಕ್ಕನ್ನು ಪ್ರಕಟಿಸದಿದ್ದರೂ, ವ್ಯವಸ್ಥೆಯು ಸದರಿ ಆಸ್ತಿ ಅಥವಾ ಆಸ್ತಿಗಳ ಬಳಕೆಯ ಹಕ್ಕನ್ನು ಪ್ರಕಟಿಸುತ್ತಿದ್ದರೆ ಅಂತಹ ವ್ಯವಸ್ಥೆಯು ಗುತ್ತಿಗೆಯಾಗುತ್ತದೆ, ಗುತ್ತಿಗೆಯನ್ನು ಒಳಗೊಳ್ಳುತ್ತದೆ. 1 ಏಪ್ರಿಲ್ 2016ಕ್ಕೂ ಪೂರ್ವದಲ್ಲಿ ಮಾಡಿಕೊಳ್ಳಲಾದ ವ್ಯವಸ್ಥೆಗಳಿಗೆ ಸಂಬಂಧಿಸಿದಂತೆ, ಕಂಪೆನಿಯು ಪರಿವರ್ತನೆಯ ದಿನಾಂಕದಂದು ಇದ್ದಂತೆ ವಾಸ್ತವಾಂಶಗಳು ಮತ್ತು ಸಂದರ್ಭಗಳ ಆಧಾರದ ಮೇಲೆ ವ್ಯವಸ್ಥೆಯು ಗುತ್ತಿಗೆಯನ್ನು ಒಳಗೊಳ್ಳುವುದೇ ಎಂದು ತೀರ್ಮಾನಿಸಿದೆ.

ಗುತ್ತಿಗೆದಾರರಾಗಿ ಕಂಪನಿ

ಪ್ರಾರಂಭದ ದಿನಾಂಕದಂದು ಇದ್ದಂತೆ, ಗುತ್ತಿಗೆಯನ್ನು ಹಣಕಾಸು ಗುತ್ತಿಗೆ ಅಥವಾ ಕಾರ್ಯಯುಕ್ತ ಗುತ್ತಿಗೆ ಎಂದು ವರ್ಗೀಕರಿಸಲಾಗುತ್ತದೆ. ಕಂಪನಿಯ ಒಡೆತನಕ್ಕೆ ಪ್ರಾಸಂಗಿಕವಾಗಿರುವ ಎಲ್ಲ ಅಪಾಯ ಮತ್ತು ಲಾಭಗಳನ್ನು ಗಣನೀಯವಾಗಿ ವರ್ಗಾಯಿಸುವ ಗುತ್ತಿಗೆಯನ್ನು ಹಣಕಾಸು ಗುತ್ತಿಗೆ ಎಂದು ವರ್ಗೀಕರಿಸಲಾಗುತ್ತದೆ. ಹಣಕಾಸು ಗುತ್ತಿಗೆಯನ್ನು ಉಳಿದು ಇತರ ಗುತ್ತಿಗೆಗಳು ಕಾರ್ಯಯುಕ್ತ ಗುತ್ತಿಗೆಗಳಾಗುತ್ತವೆ.

ಕಾರ್ಯಯುಕ್ತ ಗುತ್ತಿಗೆಗಳನ್ನು ಗುತ್ತಿಗೆಯ ಅವಧಿಗೆ ನೇರ–ರೇಖೆ ಆಧಾರದ ಮೇಲೆ ಲಾಭ ಮತ್ತು ನಷ್ಟದ ತಃಖ್ತೆಯಲ್ಲಿ ಖರ್ಚಾಗಿ ತೋರಿಸಲಾಗಿದೆ.

ಗುತ್ತಿಗೆ ನೀಡುವ ಕಾಯವಾಗಿ ಕಂಪನಿ

ಕಂಪನಿಯು ಆಸ್ತಿಯ ಎಲ್ಲ ಅಪಾಯ ಮತ್ತು ಲಾಭಗಳನ್ನು ಗಣನೀಯವಾಗಿ ವರ್ಗಾಯಿಸದ ಗುತ್ತಿಗೆಯನ್ನು ಕಾರ್ಯಯುಕ್ತ ಗುತ್ತಿಗೆ ಎಂದು ವರ್ಗೀಕರಿಸಲಾಗುತ್ತದೆ. ಕಾರ್ಯಯುಕ್ತ ಗುತ್ತಿಗೆಯ ಬಾಡಿಗೆ ಆದಾಯವನ್ನು ಪ್ರಸ್ತುತ ಗುತ್ತಿಗೆಯ ಅವಧಿಗೆ ನೇರ–ರೇಖೆ ಆಧಾರದ ಮೇಲೆ ಗುರುತಿಸಲಾಗುತ್ತದೆ. ಕಾರ್ಯಯುಕ್ತ ಗುತ್ತಿಗೆಯ ಕುರಿತಾದ ಸಮಾಲೋಚನೆ ಮತ್ತು ವ್ಯವಸ್ಥೆಗೊಳಿಸುವಲ್ಲಿ ವ್ಯಯಿಸಲಾದ ಪ್ರಾರಂಭಿಕ ನೇರ ವೆಚ್ಚಗಳನ್ನು ಗುತ್ತಿಗೆಬದ್ಧ ಆಸ್ತಿಯ ಒಯ್ಯುವ ಮೊತ್ತಕ್ಕೆ ಸೇರಿಸಲಾಗುತ್ತದೆ ಮತ್ತು ಗುತ್ತಿಗೆ ಅವಧಿಗೆ ಅದೇ ಆಧಾರದ ಮೇಲೆ ಬಾಡಿಗೆ ಆದಾಯವಾಗಿ ಗುರುತಿಸಲಾಗಿದೆ. ಸಾದಿಲ್ವಾರು ಬಾಡಿಗೆಗಳನ್ನು ಅವುಗಳನ್ನು ಗಳಿಸಿದ ಅವಧಿಗೆ ಬಾಡಿಗೆಯಾಗಿ ಗುರುತಿಸಲಾಗಿದೆ.

2.19 ದಾಸ್ತಾನುಗಳು

ದಾಸ್ತಾನುಗಳನ್ನು ಪ್ರಮಾಣಿತ ದರಗಳಲ್ಲಿ ("ದರಗಳ ಸಮಾನ ಅನುಸೂಚಿ"ಯ ಅಡಿಯಲ್ಲಿ ನಿಗದಿಪಡಿಸಲಾದ ದರಗಳಲ್ಲಿ. ದರಗಳ ಅನುಸೂಚಿ/ದರಗಳ ಸಮಾನ ಅನುಸೂಚಿ ಯನ್ನು ಹಿಂದಿನ ಖರೀದಿ ಬೆಲೆ ಮತ್ತು ಅಸ್ತಿತ್ವದಲ್ಲಿನ ಮಾರುಕಟ್ಟೆ ದರಗಳ ಆಧಾರದಲ್ಲಿ ನಿರ್ಧರಿಸಲಾಗುತ್ತದೆ) ಮೌಲ್ಯ ಹಾಕಲಾಗಿದೆ.

ಬಂಡವಾಳ ಮತ್ತು ಆದಾಯ ಕಾಮಗಾರಿಗಳಿಗೆಂದು ಪಡೆದುಕೊಳ್ಳಲಾದ ಸಾಮಗ್ರಿಗಳನ್ನು ಕಂಪನಿಯ ಸಕ್ಷಮ ಪ್ರಾಧಿಕಾರಗಳು ಅವುಗಳ ದಾಸ್ತಾನನ್ನು ಪರಿಶೀಲಿಸಿ, ತಪಾಸಿಸಿ, ವಿಲೇವಾರಿ ಮಾಡಿದ ನಂತರ ದಾಸ್ತಾನಿನ ಲೆಕ್ಕದಲ್ಲಿ ಸೇರಿಸಲಾಗುತ್ತದೆ.

ಇವುಗಳನ್ನು ವೆಚ್ಚದಲ್ಲಿ ಕಡಿಮೆಗೆ ಮತ್ತು ನಿವ್ವಳ ಸಾಕ್ಷಾತ್ಕಾರ ಬೆಲೆಯಲ್ಲಿ ಮೌಲ್ಯಹಾಕಲಾಗಿದೆ. ವೆಚ್ಚದಲ್ಲಿ ಖರೀದಿಗಳು, ಮರುಭರಿಕೆಯಾಗದ ತೆರಿಗೆಗಳು ಮತ್ತು ಸುಂಕಗಳ ವೆಚ್ಚಗಳು ಹಾಗೂ ದಾಸ್ತಾನನ್ನು ಪ್ರಸ್ತುತ ನೆಲೆ ಹಾಗೂ ಸ್ಥಿತಿಗೆ ತರುವಲ್ಲಿ ವ್ಯಯಿಸಲಾದ ಇತರ ಎಲ್ಲ ವೆಚ್ಚಗಳು ಸೇರುತ್ತವೆ. ವೆಚ್ಚವನ್ನು ವೇಟೆಡ್ ಸರಾಸರಿ ಆಧಾರದ ಮೇಲೆ ನಿರ್ಧರಿಸಲಾಗುತ್ತದೆ.

2.20 ಸಾಮಗ್ರಿ ದರ ವ್ಯತ್ಯಾಸ ಲೆಕ್ಕ

ಸಾಮಗ್ರಿ ಸ್ವೀಕೃತಿಗಳು ಮತ್ತು ನೀಡಿಕೆಗಳ ಲೆಕ್ಕವನ್ನಿಡಲು, ವಿದ್ಯುಚ್ಛಕ್ತಿ ಸರಬರಾಜು ವಾರ್ಷಿಕ ಲೆಕ್ಕಗಳ ನಿಯಮಗಳು, 1985ರಲ್ಲಿನ ಮಾರ್ಗಸೂಚಿಗಳ ಅನುಸಾರ, ಪ್ರಮಾಣಿತ ದರಗಳನ್ನು ಕಂಪನಿಯು ಅನುಸರಿಸುತ್ತಿದೆ.

ಪ್ರಮಾಣಿತ ದರವನ್ನು ಮೀರಿ ಖರೀದಿ ಬೆಲೆಯಲ್ಲಿನ ವ್ಯತ್ಯಾಸವನ್ನು "ಸಾಮಗ್ರಿ ದರ ವ್ಯತ್ಯಾಸ ಲೆಕ್ಕ"ಕ್ಕೆ ಜಮಾಮಾಡಲಾಗಿದೆ/ ಖರ್ಚುಹಾಕಲಾಗಿದೆ.

"ಸಾಮಗ್ರಿ ದರ ವ್ಯತ್ಯಾಸ ಲೆಕ್ಕ"ದಲ್ಲಿ ವರ್ಷದ ಕೊನೆಯಲ್ಲಿನ ಶಿಲ್ಕನ್ನು ಕೆಳಗಿನಂತೆ ಪರಿಗಣಿಸಲಾಗುತ್ತದೆ:

- ಜಮಾ ಶಿಲ್ಕನ್ನು ""ಸಾಮಗ್ರಿ ದರ ವ್ಯತ್ಯಾಸ ಮುಡಿಪು" ಎನ್ನುವ ಮುಡಿಪಿಗೆ ಜಮಾಮಾಡಲಾಗುತ್ತದೆ.
- ಖರ್ಚು ಶಿಲ್ಕನ್ನು "ಸಾಮಗ್ರಿ ದರ ವ್ಯತ್ಯಾಸ ಮುಡಿಪು" ಎನ್ನುವ ಮುಡಿಪಿಗೆ ಖರ್ಚುಹಾಕಲಾಗುತ್ತದೆ. ಹೀಗೆ ಖರ್ಚುಹಾಕುವುದು ಈ ಮುಡಿಪು ಶಿಲ್ಕಿನಲ್ಲಿ ನಿವ್ವಳ ಶಿಲ್ಕನ್ನು ಖರ್ಚು ಶಿಲ್ಕಾಗಿಸಿದರೆ, ಖರ್ಚು ಶಿಲ್ಕಿನ ಮೊತ್ತವನ್ನು ವರ್ಷದ ಆದಾಯ ಖಾತೆಗೆ ಖರ್ಚುಹಾಕಲಾಗುವುದು.

2.21 ಖಂಡ ವರದಿ

ಕಂಪನಿಯು ವಿದ್ಯುಚ್ಛಕ್ತಿಯ ವಿತರಣೆಯ ಕಾರ್ಯದಲ್ಲಿ ತೊಡಗಿದೆ.

ಚಟುವಟಿಕೆಗಳು/ಉತ್ಪನ್ನಗಳು, ಅಪಾಯ ಮತ್ತು ಲಾಭ ರಚನೆ, ಸಾಂಸ್ಥಿಕ ರಚನೆ ಮತ್ತು ಆಂತರಿಕ ವರದಿಗಾರಿಕೆ ವ್ಯವಸ್ಥೆಗಳಲ್ಲಿ ಏಕರೂಪತೆಯನ್ನು ಆಧರಿಸಿ ಕಂಪೆನಿಯು ತನ್ನ ಕಾರ್ಯಾಚರಣೆಗಳನ್ನು ಒಂದೇ ಕಾರ್ಯಾಚರಣೆ ಖಂಡವಾಗಿ ರಚಿಸಿಕೊಂಡಿದೆ. ಕಂಪೆನಿಯು ಪ್ರಧಾನವಾಗಿ ಭಾರತದ ಭೌಗೋಳಿಕ ಖಂಡದಲ್ಲಿ ಕಾರ್ಯನಿರ್ವಹಿಸುತ್ತದೆ ಮತ್ತು ರಫ್ತು ವ್ಯವಹಾರಗಳು ಗಣನೀಯವಾದುದಲ್ಲ. ಇದಕ್ಕನುಗುಣವಾಗಿ, ಮುಖ್ಯ ಕಾರ್ಯಾಚರಣೆ ಅಧಿಕಾರಿಯು ನಿರ್ಧಾರಗಳನ್ನು ಕೈಗೊಳ್ಳಲು ಈ ಹಣಕಾಸು ತಃಖ್ತೆಗಳ ಒಕ್ಕಟ್ಟನ್ನು ಬಳಸಿಕೊಳ್ಳುತ್ತಾರೆ.

2.22 ಪ್ರತಿ ಷೇರಿನ ಮೇಲೆ ಗಳಿಕೆ

ಮೂಲ ಇಪಿಎಸ್ ಅನ್ನು ಮೂಲ ಕಂಪೆನಿಯ ಈಕ್ವಿಟಿ ಷೇರುದಾರರಿಗೆ ಅಧ್ಯಾರೋಪಿಸಬಹುದಾದ ವರ್ಷದ ಲಾಭವನ್ನು ವರ್ಷದಲ್ಲಿ ಇಶ್ಯೂ ಮಾಡಲಾದ ಈಕ್ವಿಟಿ ಷೇರುಗಳಲ್ಲಿ ಯಾವುದಾದರೂ ಬೋನಸ್ ಅಂಶಗಳಿದ್ದಲ್ಲಿ ಅವನ್ನು ಹೊಂದಿಸಿ ಮತ್ತು ತಿಜೋರಿ ಷೇರುಗಳನ್ನು ಹೊರಗುಳಿಸಿ ಹೊಂದಿಸಿದ ನಂತರ ಹಣಕಾಸು ವರ್ಷದಲ್ಲಿ ಬಾಕಿ ಇರುವ ಈಕ್ವಿಟಿ ಷೇರುಗಳ ವೇಟೆಡ್ ಸರಾಸರಿ ಸಂಖ್ಯೆಯಿಂದ ಭಾಗಿಸಿ ಲೆಕ್ಕಹಾಕಲಾಗುತ್ತದೆ.

ಕೆಳಗಿನವುಗಳನ್ನು ಪರಿಗಣಿಸಲು ಮೂಲ ಇಪಿಎಸ್ ಅನ್ನು ನಿರ್ಧರಿಸಲು ಬಳಸಲಾದ ಅಂಕಿ–ಅಂಶಗಳನ್ನು ನಿರಸನಗೊಂಡ ಇಪಿಎಸ್ ಹೊಂದಿಸುತ್ತದೆ:

– ಬಡ್ಡಿ ಮತ್ತು ನಿರಸನಗೊಳ್ಳುವ ಸಂಭಾವ್ಯ ಈಕ್ವಿಟಿ ಷೇರುಗಳೊಂದಿಗೆ ಸಂಬಂಧಹೊಂದಿರುವ ಇತರ ಹಣಕಾಸು ವೆಚ್ಚಗಳ ಆದಾಯ ತೆರಿಗೆ ಪ್ರಕ್ರಿಯೆಯ ನಂತರದ ಪರಿಣಾಮ, ಮತ್ತು

– ಎಲ್ಲ ನಿರಸನಗೊಳ್ಳುವ ಸಂಭಾವ್ಯ ಈಕ್ವಿಟಿ ಷೇರುಗಳು ಪರಿವರ್ತನೆಯಾಗುವ ಸಂಭವದಲ್ಲಿ ಬಾಕಿ ಉಳಿದಿರಬಹುದಾದ ಹೆಚ್ಚುವರಿ ಈಕ್ವಿಟಿ ಷೇರುಗಳ ವೇಟೆಡ್ ಸರಾಸರಿ ಸಂಖ್ಯೆ.

2.23 ನಗದು ಮತ್ತು ನಗದು ಸಮಾನಗಳು :

ಸಂತುಲನ ಪಟ್ಟಿಯಲ್ಲಿನ ನಗದು ಮತ್ತು ನಗದು ಸಮಾನಗಳು ಬ್ಯಾಂಕುಗಳಲ್ಲಿನ ನಗದು ಮತ್ತು ಕೈಯಲ್ಲಿನ ನಗದು ಹಾಗೂ ಮೌಲ್ಯದಲ್ಲಿನ ಬದಲಾವಣೆಗಳ ಗಣನೀಯವಲ್ಲದ ಅಪಾಯಕ್ಕೆ ಬದ್ಧವಾಗಿರುವ, ಮೂರು ತಿಂಗಳು ಅಥವಾ ಅದಕ್ಕಿಂತಲೂ ಕಡಿಮೆ ಮೂಲ ಪಕ್ವತೆಯ ಅಲ್ಪಾವಧಿ ಠೇವಣಿಗಳನ್ನು ಒಳಗೊಳ್ಳುತ್ತದೆ.

ನಗದು ಹರಿವುಗಳ ಮೇಲಿನ ಹಣಕಾಸು ತಃಖ್ತೆಯ ಉದ್ದೇಶಕ್ಕಾಗಿ, ನಗದು ಮತ್ತು ನಗದು ಸಮಾನಗಳು, ಮೇಲೆ ನಿರ್ವಚಿಸಿದಂತೆ, ಅಲ್ಪಾವಧಿ ಠೇವಣಿಗಳು, ಕಂಪನಿಯ ನಗದು ನಿರ್ವಹಣೆಯ ಅವಿಭಾಜ್ಯ ಅಂಗವಾಗಿ ಪರಿಗಣಿತವಾಗಿರುವಕಾರಣ ಬಾಕಿ ಇರುವ ಬ್ಯಾಂಕ್ ಓವರ್‌ಡ್ರಾಫ್ಟ್‌ಗಳ ನಿವ್ವಳವನ್ನು ಒಳಗೊಳ್ಳುತ್ತದೆ.

2.24 ನ್ಯಾಯಯುತ ಮೌಲ್ಯ ಲೆಕ್ಕಾಚಾರ :

ಕಂಪನಿಯು ಪ್ರತಿ ಸಂತುಲನ ಪಟ್ಟಿಯ ದಿನಾಂಕದಂದು ಹೂಡಿಕೆ ಮುಂತಾದ ಹಣಕಾಸು ಸಾಧನಗಳನ್ನು ಲೆಕ್ಕಹಾಕುತ್ತದೆ. ನ್ಯಾಯಯುತ ಮೌಲ್ಯವೆಂದರೆ, ಲೆಕ್ಕಾಚಾರದ ದಿನಾಂಕದಂದು ಇದ್ದಂತೆ ಮಾರುಕಟ್ಟೆ ಭಾಗಿಗಳ ನಡುವಿನ ಕ್ರಮಬದ್ಧವಾದ ವ್ಯವಹಾರದಲ್ಲಿ ಆಸ್ತಿಯೊಂದನ್ನು ಮಾರಾಟಮಾಡಿದಾಗ ಪಡೆಯುವ ಅಥವಾ ಹೊಣೆಯೊಂದನ್ನು ವರ್ಗಾಯಿಸಲು ಪಾವತಿಸುವ ಬೆಲೆಯಾಗಿರುತ್ತದೆ. ಆಸ್ತಿಯೊಂದನ್ನು ಮಾರಾಟಮಾಡುವ ಅಥವಾ ಹೊಣೆಯೊಂದನ್ನು ವರ್ಗಾಯಿಸುವ ವ್ಯವಹಾರವು ಕೆಳಗಿನ ಸಂದರ್ಭಗಳಲ್ಲಿ ಘಟಿಸುತ್ತದೆ ಎನ್ನುವ ಊಹನದ ಮೇಲೆ ನ್ಯಾಯಯುತ ಮೌಲ್ಯದ ಲೆಕ್ಕಾಚಾರ ನಡೆಯುತ್ತದೆ:

– ಆಸ್ತಿ ಅಥವಾ ಹೊಣೆಯ ಪ್ರಧಾನ ಮಾರುಕಟ್ಟೆಯಲ್ಲಿ, ಅಥವಾ

– ಪ್ರಧಾನ ಮಾರುಕಟ್ಟೆಯ ಅನುಪಸ್ಥಿತಿಯಲ್ಲಿ, ಆಸ್ತಿ ಅಥವಾ ಹೊಣೆಗೆ ಅತ್ಯಂತ ಲಾಭದಾಯಕವಾದ ಮಾರುಕಟ್ಟೆಯಲ್ಲಿ.

ಪ್ರಧಾನವಾದ ಅಥವಾ ಅತ್ಯಂತ ಲಾಭದಾಯಕವಾದ ಮಾರುಕಟ್ಟೆಯ ಲಭ್ಯಾವಕಾಶವನ್ನು ಕಂಪೆನಿಯು ಹೊಂದಿರಬೇಕು. ಮಾರುಕಟ್ಟೆ ಭಾಗಿಗಳು ತಮ್ಮ ಅತ್ಯುತ್ತಮ ಆರ್ಥಿಕ ಹಿತಾಸಕ್ತಿಯ ನೆಲೆಯಲ್ಲಿ ಪಾಲ್ಗೊಳ್ಳುತ್ತಾರೆ ಎನ್ನುವುದರ ನೆಲೆಯಲ್ಲಿ, ಮಾರುಕಟ್ಟೆ ಭಾಗಿಗಳು ಆಸ್ತಿ ಅಥವಾ ಹೊಣೆಯ ಬೆಲೆಯೊಂದನ್ನು ನಿರ್ಧರಿಸುವಾಗ ಬಳಸುವ ಊಹನಗಳನ್ನು ಬಳಸಿ ಆಸ್ತಿ ಅಥವಾ ಹೊಣೆಯ ನ್ಯಾಯಯುತ ಮೌಲ್ಯವನ್ನು ಲೆಕ್ಕಹಾಕಲಾಗುತ್ತದೆ.

ಹಣಕಾಸೇತರ ಆಸ್ತಿಯ ನ್ಯಾಯಯುತ ಮೌಲ್ಯದ ನಿರ್ಧಾರವು ಮಾರುಕಟ್ಟೆ ಭಾಗಿಯು ಆಸ್ತಿಯನ್ನು ಅದರ ಅತ್ಯುನ್ನತ ಮತ್ತು ಅತ್ಯುತ್ತಮ ಸಾಮರ್ಥ್ಯಕ್ಕೆ ಬಳಸಿ ಆರ್ಥಿಕ ಲಾಭಗಳನ್ನು ಸೃಷ್ಟಿಸುವ ಅಥವಾ ಅದರ ಅತ್ಯುನ್ನತ ಮತ್ತು ಅತ್ಯುತ್ತಮ ಸಾಮರ್ಥ್ಯಕ್ಕೆ ಬಳಸಬಲ್ಲ ಮತ್ತೋರ್ವ ಮಾರುಕಟ್ಟೆ ಭಾಗಿಗೆ ಅದನ್ನು ಮಾರುವ ಭಾಗಿಯ ಸಾಮರ್ಥ್ಯವನ್ನು ಲೆಕ್ಕಕ್ಕೆ ತೆಗೆದುಕೊಳ್ಳುತ್ತದೆ.

ಪ್ರಸ್ತುತವಾದ ಮತ್ತು ಗಮನಿಸಬಹುದಾದ ಊಡಿಕೆಗಳ ಬಳಕೆಯನ್ನು ಗರಿಷ್ಠಗೊಳಿಸಿ ಗಮನಿಸಲಾಗದ ಊಡಿಕೆಗಳನ್ನು ಕನಿಷ್ಠಗೊಳಿಸುವ ಮೂಲಕ, ಕಂಪನಿಯು ನ್ಯಾಯಯುತ ಮೌಲ್ಯದ ಲೆಕ್ಕಹಾಕುವಿಕೆಗೆ, ಲಭ್ಯವಿರುವ ಪರ್ಯಾಪ್ತ ದತ್ತಾಂಶ ಮತ್ತು ಸಂದರ್ಭಕ್ಕೆ ಸೂಕ್ತವಾದ ಮೌಲ್ಯಮಾಪನ ತಂತ್ರಗಳನ್ನು ಬಳಸುತ್ತದೆ.

ನ್ಯಾಯಯುತ ಮೌಲ್ಯವನ್ನು ಲೆಕ್ಕಹಾಕಲಾದ ಅಥವಾ ಹಣಕಾಸು ತಃಖ್ತೆಗಳಲ್ಲಿ ಸೇರಿಸಲಾದ ಎಲ್ಲ ಆಸ್ತಿಗಳು ಮತ್ತು ಹೊಣೆಗಳನ್ನು ಕೆಳಗೆ ವಿವರಿಸಲಾಗಿರುವಂತೆ, ನ್ಯಾಯಯುತ ಮೌಲ್ಯ ಶ್ರೇಣೀಕರಣದ ಒಳಗೆ ವರ್ಗೀಕರಿಸಲಾಗಿದೆ ಮತ್ತು ಇಡಿಯಾಗಿ ನ್ಯಾಯಯುತ ಮೌಲ್ಯದ ಲೆಕ್ಕಾಚಾರಕ್ಕೆ ಮಹತ್ವೂರ್ಣವಾದ ಅತಿ ಕಡಿಮೆ ಹಂತದ ಊಡಿಕೆಯನ್ನು ಇದು ಆಧರಿಸಿರುತ್ತದೆ:

ಹಂತ 1– ಒಂದೇ ರೀತಿಯ ಆಸ್ತಿಗಳು ಅಥವಾ ಹೊಣೆಗಳಿಗೆ ಸಕ್ರಿಯ ಮಾರುಕಟ್ಟೆಗಳಲ್ಲಿ ಉದ್ಧೃತ (ಹೊಂದಿಸದ) ಮಾರುಕಟ್ಟೆ ಬೆಲೆಗಳು.

ಹಂತ 2 – ನ್ಯಾಯಯುತ ಮೌಲ್ಯದ ಲೆಕ್ಕಾಚಾರಕ್ಕೆ ಮಹತ್ವೂರ್ಣವಾದ ಅತಿ ಕಡಿಮೆ ಹಂತದ ಊಡಿಕೆಯ ಮೌಲ್ಯಮಾಪನ ತಂತ್ರಗಳು ನೇರವಾಗಿ ಅಥವಾ ಪರೋಕ್ಷವಾಗಿ ಗಮನಕ್ಕೆ ಬರುವಂಥವಾಗಿವೆ.

ಹಂತ 3 – ನ್ಯಾಯಯುತ ಮೌಲ್ಯದ ಲೆಕ್ಕಾಚಾರಕ್ಕೆ ಮಹತ್ವೂರ್ಣವಾದ ಅತಿ ಕಡಿಮೆ ಹಂತದ ಊಡಿಕೆಯ ಮೌಲ್ಯಮಾಪನ ತಂತ್ರಗಳು ಗಮನಕ್ಕೆ ಬರದಂಥವಾಗಿವೆ.

ಆವರ್ತನೆಯ ಆಧಾರದಲ್ಲಿ ಹಣಕಾಸು ತಃಖ್ತೆಗಳಲ್ಲಿ ಗುರುತಿಸಲಾದ ಆಸ್ತಿತಗಳು ಮತ್ತು ಹೊಣೆಗಳಿಗೆ, ಕಂಪೆನಿಯು ಪ್ರತಿ ವರದಿಯ ಅವಧಿಯ ಕೊನೆಗೆ ವರ್ಗೀಕರಣವನ್ನು ಮರುಪರಿಶೀಲಿಸಿ (ನ್ಯಾಯಯುತ ಮೌಲ್ಯದ ಲೆಕ್ಕಾಚಾರಕ್ಕೆ ಮಹತ್ವೂರ್ಣವಾದ ಅತಿ ಕಡಿಮೆ ಹಂತದ ಊಡಿಕೆಯನ್ನು ಆಧರಿಸಿ) ಶ್ರೇಣೀಕರಣದಲ್ಲಿನ ಹಂತಗಳಲ್ಲಿ ವರ್ಗಾವಣೆಗಳು ಘಟಿಸಿವೆಯೇ ಎಂದು ತೀರ್ಮಾನಿಸುತ್ತದೆ.

ನ್ಯಾಯಯುತ ಮೌಲ್ಯ ಪ್ರಕಟಣೆಗಳ ಉದ್ದೇಶಕ್ಕೆ ಸ್ವರೂಪ, ಲಕ್ಷಣಗಳು ಮತ್ತು ಆಸ್ತಿ ಅಥವಾ ಹೊಣೆಯ ಜೊತೆಗಿನ ಅಪಾಯಗಳ ಆಧಾರದ ಮೇಲೆ ಮತ್ತು ಮೇಲೆ ವಿವರಿಸಲಾದಂತೆ ನ್ಯಾಯಯುತ ಮೌಲ್ಯದ ಶ್ರೇಣೀಕರಣದ ಹಂತವನ್ನು ಆಧರಿಸಿ ಕಂಪೆನಿಯು ಆಸ್ತಿಗಳು ಮತ್ತು ಹೊಣೆಗಳ ವರ್ಗಗಳನ್ನು ನಿರ್ಧರಿಸಿದೆ. ಈ ಟಿಪ್ಪಣಿಯು ನ್ಯಾಯಯುತ ಮೌಲ್ಯದ ಲೇಖಾನೀತಿಯನ್ನು ಸಾರಸಂಗ್ರಹಿಸುತ್ತದೆ. ನ್ಯಾಯಯುತ ಮೌಲ್ಯ ಸಂಬಂಧಿತ ಇತರ ಪ್ರಕಟಣೆಗಳನ್ನು ಪ್ರಸ್ತುತ ಟಿಪ್ಪಣಿಗಳಲ್ಲಿ ನೀಡಲಾಗಿದೆ.

ಮೌಲ್ಯಮಾಪನ ವಿಧಾನಗಳು, ಮಹತ್ವದ ಅಂದಾಜುಗಳು ಮತ್ತು ಊಹನಗಳ ಪ್ರಕಟಣೆಗಳು (ಟಿಪ್ಪಣಿ 50)

ನ್ಯಾಯಯುತ ಮೌಲ್ಯ ಶ್ರೇಣೀಕರಣದ ಪರಿಮಾಣಾತ್ಮಕ ಪ್ರಕಟಣೆಗಳು (ಟಿಪ್ಪಣಿ 44)

ಹಣಕಾಸು ಸಾಧನಗಳು (ದತ್ತಿ ವೆಚ್ಚದಲ್ಲಿ ಒಯ್ದವೂ ಸೇರಿ) (ಟಿಪ್ಪಣಿ 6, 10, 11, 12, 13, 18, 19, 23, 24, 25)

2.25 ವಿದ್ಯುತ್ ಖರೀದಿ

ರಾಜ್ಯ ಗ್ರಿಡ್, ಕೇಂದ್ರ ಗ್ರಿಡ್ ಮತ್ತು ಇತರ ಪ್ರಧಾನ ಸ್ವತಂತ್ರ ವಿದ್ಯುತ್ ಉತ್ಪಾದಕರಿಂದ ವಿದ್ಯುತ್ ಖರೀದಿಯನ್ನು ರಾಜ್ಯ ಹೊರೆ ರವಾನೆ ಕೇಂದ್ರ ಒದಗಿಸುವ ಹಂಚಿಕೆ ಸೂತ್ರವನ್ನು ಆಧರಿಸಿ ಲೆಕ್ಕಕ್ಕೆ ತೆಗೆದೊಕೊಳ್ಳಲಾಗುತ್ತದೆ.

2.26 ಇತ್ತೀಚಿನ ಲೇಖಾ ಘೋಷಣೆಗಳು :

ಹೊಸ ಇಂಡ್ ಎಎಸ್ ಪ್ರಮಾಣಗಳ ಪರಿಚಯ/ಇಂಡ್ ಎಎಸ್ ಪ್ರಮಾಣಗಳಿಗೆ ತಿದ್ದುಪಡಿಗಳು

ಅಧಿಸೂಚನೆಯೊಂದರ ಮೂಲಕ ಕಾರ್ಪೊರೇಟ್ ಸಚಿವಾಲಯವು 'ಇಂಡ್ ಎಎಸ್ 116 □ ಗುತ್ತಿಗೆಗಳು' ಜಾರಿಗೆ 1 ಏಪ್ರಿಲ್ 2019ರ ದಿನಾಂಕವನ್ನು ನಿಗದಿಪಡಿಸಿದೆ.

ಇಂಡ್ ಎಎಸ್ 116 ಏಕ ಗುತ್ತಿಗೆ ಲೆಕ್ಕ ಮಾದರಿಯನ್ನು ಪರಿಚಯಿಸಿ 12 ತಿಂಗಳಿಗೂ ಹೆಚ್ಚಿನ ಅವಧಿಯ ಎಲ್ಲ ಗುತ್ತಿಗೆಗಳೂ, ಆಸ್ತಿಯ ಮೌಲ್ಯ ಕೆಳನೆಲೆಯದಾಗಿರದ ಪಕ್ಷದಲ್ಲಿ, ಆಸ್ತಿಗಳ ಬಳಕೆಯ ಹಕ್ಕುಗಳು ಮತ್ತು ಗುತ್ತಿಗೆ ಹೊಣೆಗಳನ್ನು ಗುರುತಿಸುವುದನ್ನು ಅಗತ್ಯವಾಗಿಸಿದೆ.

ಕಂಪನಿಯು ಇಂಡ್ ಎಎಸ್ 116 – ಗುತ್ತಿಗೆಗಳು – ಇದರ ಪರಿಚಯದ ಪರಿಣಾಮವನ್ನು ಅಂದಾಜುಮಾಡುವ ಪ್ರಕ್ರಿಯೆಯಲ್ಲಿದೆ. ಪರಿಣಾಮವನ್ನು, ಅದು ಇದ್ದಲ್ಲಿ, 31 ಮಾರ್ಚ್ 2020ಕ್ಕೆ ಕೊನೆಗೊಳ್ಳುವ ಹಣಕಾಸು ತಃಖ್ತೆಗಳಲ್ಲಿ ಪ್ರಕಟಿಸಲಾಗುವುದು.

ಗುಲ್ಬರ್ಗಾ ವಿದ್ಯುಚ್ಛಕ್ತಿ ಸರಬರಾಜು ಕಂಪನಿ ನಿಯಮಿತ

(ಸಿಐಎನ್ ಸಂಖ್ಯೆ: ಯು0401ಕೆಎ2002ಎಸ್‌ಜಿಸಿ030436)

ನೋಂದಾಯಿತ ಕಛೇರಿ : ಸ್ಟೇಶನ್ ರಸ್ತೆ ಗುಲ್ಬರ್ಗಾ – 585102, ಕರ್ನಾಟಕ – 585 102

3. ಸ್ವತ್ತು, ಸ್ಥಾವರ ಮತ್ತು ಸಲಕರಣೆ:

ಹಣಕಾಸು ತಃಖ್ತೆಗಳಿಗೆ ಟಿಪ್ಪಣಿಗಳು

ಗ್ರಾಹ್ಯ ಆಸ್ತಿಗಳು ಒಟ್ಟು ಬ್ಲಾಕ್	ಭೂಮಿ ಮತ್ತು ಹಕ್ಕುಗಳು	ಕಟ್ಟಡಗಳು	ಇತರ ಸಿವಿಲ್ ಕಾಮಗಾರಿಗಳು	ರಸ್ತೆಗಳು	ಸ್ಥಾವರ ಮತ್ತು ಯಂತ್ರೋಪಕರಣ	ಲೈನುಗಳು, ಕೇಬಲ್ ಜಾಲಗಳು	ಮೋಟಾರು ವಾಹನಗಳು	ಪೀಠೋಪಕರಣಗಳು ಮತ್ತು ಜೋಡಣೆಗಳು	ಕಛೇರಿ ಸಲಕರಣೆಗಳು	ಒಟ್ಟು
3. ಸ್ವತ್ತು, ಸ್ಥಾವರ ಮತ್ತು ಸಲಕರಣೆ:										
31 ಮಾರ್ಚ್ 2017ರಂದು ಇದ್ದಂತೆ ಶಿಲ್ಕು	**9,230,921,156**	**607,365,962**	**52,241,032**	**31,789,801**	**6,098,182,765**	**28,799,125,884**	**58,552,416**	**53,073,734**	**61,584,976**	**44,992,837,726**
ಸೇರ್ಪಡೆಗಳು	16,947,844	91,064,805	6,038,417	3,048,796	1,181,403,046	2,855,639,554	–	6,260,548	8,142,231	4,168,545,241
ವಿಲೇವಾರಿಗಳು		–		744,979,700	376,059,426		213,833	1,535,496	1,122,788,456	
31 ಮಾರ್ಚ್ 2018ರಂದು ಇದ್ದಂತೆ ಶಿಲ್ಕು	**9,247,869,000**	**698,430,767**	**58,279,449**	**34,838,597**	**6,534,606,110**	**31,278,706,012**	**58,552,416**	**59,120,449**	**68,191,711**	**48,038,594,511**
ಸೇರ್ಪಡೆಗಳು	(273,648,543)	77,321,721	3,476,777	1,912,851	1,283,133,411	3,068,806,345	–	3,750,207	3,332,385	4,168,085,155
ವಿಲೇವಾರಿಗಳು				805,130,927	67,921,094		193,602	853,878	874,099,501	
31 ಮಾರ್ಚ್ 2019ರಂದು ಇದ್ದಂತೆ ಶಿಲ್ಕು	**8,974,220,457**	**775,752,488**	**61,756,226**	**36,751,448**	**7,012,608,595**	**34,279,591,262**	**58,552,416**	**62,677,054**	**70,670,218**	**51,332,580,165**
ಸಂಚಯಿತ ಸವಕಳಿ	–	–	–	–	–	–	–	–	–	
31 ಮಾರ್ಚ್ 2017ರಂದು ಇದ್ದಂತೆ ಶಿಲ್ಕು	–	114,381,253	18,717,691	5,243,067	1,513,824,734	9,041,586,763	36,707,990	24,912,504	19,426,986	10,774,800,988
ವರ್ಷದ ಸವಕಳಿ ವೆಚ್ಚ	–	21,690,501	2,246,531	1,080,308	332,491,040	1,404,271,323	2,393,905	2,710,884	3,430,609	1,770,315,102
ಇತರ ಹೊಂದಾಣಿಕೆಗಳು	–	(601,697)	601,697	–	(29,480,395)	(19,572,375)	–	(525)	(772)	(49,054,067)
ವಿಲೇವಾರಿಗಳು	–	–	–	103,480,969	20,853,144	–	–	–	124,334,113	
31 ಮಾರ್ಚ್ 2018ರಂದು ಇದ್ದಂತೆ ಶಿಲ್ಕು	**–**	**135,470,057**	**21,565,919**	**6,323,375**	**1,713,354,410**	**10,405,432,568**	**39,101,895**	**27,622,863**	**22,856,823**	**12,371,727,910**
ವರ್ಷದ ಸವಕಳಿ ವೆಚ್ಚ	–	24,283,312	3,049,229	1,292,930	292,363,365	1,579,871,464	2,327,433	2,777,281	3,911,821	1,909,876,837
ಇತರ ಹೊಂದಾಣಿಕೆಗಳು	–	–							–	
ವಿಲೇವಾರಿಗಳು	–	–	–	138,234,024	45,320,077					183,554,100
31 ಮಾರ್ಚ್ 2019ರಂದು ಇದ್ದಂತೆ ಶಿಲ್ಕು	**–**	**159,753,369**	**24,615,149**	**7,616,305**	**1,867,483,752**	**11,939,983,955**	**41,429,328**	**30,400,144**	**26,768,645**	**14,098,050,647**
ನಿವ್ವಳ ಬ್ಲಾಕ್										
31 ಮಾರ್ಚ್ 2017ರಂದು ಇದ್ದಂತೆ ಶಿಲ್ಕು	9,230,921,156	492,984,709	33,523,341	26,546,734	4,584,358,031	19,757,539,121	21,844,426	28,161,230	42,157,990	34,218,036,738
31 ಮಾರ್ಚ್ 2018ರಂದು ಇದ್ದಂತೆ ಶಿಲ್ಕು	9,247,869,000	562,960,710	36,713,530	28,515,222	4,821,251,700	20,873,273,444	19,450,521	31,497,586	45,334,888	35,666,866,600
31 ಮಾರ್ಚ್ 2019ರಂದು ಇದ್ದಂತೆ ಶಿಲ್ಕು	**8,974,220,457**	**615,999,119**	**37,141,077**	**29,135,143**	**5,145,124,843**	**22,339,607,307**	**17,123,088**	**32,276,910**	**43,901,574**	**37,234,529,517**

ಎ. ಬಂಡವಾಳೀಕರಿಸಿದ ಸಾಲ ವೆಚ್ಚಗಳು

ಪಿಪಿಇ ಗೆ ಸಂಬಂಧಿಸಿದಂತೆ 31 ಮಾರ್ಚ್ 2019ರಂದು ಕೊನೆಗೊಂಡ ವರ್ಷದಲ್ಲಿ ಬಂಡವಾಳೀಕರಿಸಿದ ಸಾಳ ವೆಚ್ಚಗಳ ಮೊತ್ತ ರೂ. 1,75,81,788 (31 ಮಾರ್ಚ್ 2018 – ಶೂನ್ಯ) ಆಗಿತ್ತು.

ಬಂಡವಾಳೀಕರಣಕ್ಕಾಗಿ ಅರ್ಹವಾದ ಸಾಲ ವೆಚ್ಚಗಳ ಮೊತ್ತವನ್ನು ನಿರ್ಧರಿಸಲು ಬಳಸಲಾದ ದರ 9% ದಿಂದ 12% ಆಗಿತ್ತು ಮತ್ತು ಇದು ನಿರ್ದಿಷ್ಟ ಸಾಲದ ಪರಿಣಾಮಕಾರಿ ಬಡ್ಡಿ ದರವಾಗಿದೆ. 31 ಮಾರ್ಚ್ 2019ಕ್ಕೆ ಕೊನೆಗೊಂಡ ವರ್ಷಕ್ಕೆ ನಿರ್ಮಾಣದಲ್ಲಿರುವ ಆಸ್ತಿಗಳಿಗಾಗಿ ಬಂಡವಾಳೀಕರಿಸಲಾದ ಸಾಲ ವೆಚ್ಚ ರೂ. 49,81,044 ಆಗಿತ್ತು (31 ಮಾರ್ಚ್ 2018 – ಶೂನ್ಯ).

ಕೆಳಗಿನ ಕೋಷ್ಟಕ ಇದನ್ನು ವಿವರಿಸುತ್ತದೆ.

ವಿವರಗಳು	31 ಮಾರ್ಚ್ 2019	31 ಮಾರ್ಚ್ 2018
ಬಡ್ಡಿಯ ಬಂಡವಾಳೀಕರಣ:		
ಪ್ರಾರಂಭಿಕ ಶಿಲ್ಕು	327,959,781	327,959,781
ಸೇರಿಸಿ : ವರ್ಷದ್ದು ಪಿಪಿಇ ಯಲ್ಲಿ ಸೇರಿಸಿದ್ದು	17,581,788	–
ಸಿಡಬ್ಲ್ಯೂಐಪಿ ಯಲ್ಲಿ ಸೇರಿಸಿದ್ದು,	981,044	–
ಮುಕ್ತಾಯದ ಶಿಲ್ಕು	350,522,613	327,959,781

ಗ್ರಾಹಕರ ಕೊಡುಗೆ/ಅನುದಾನ/ಠೇವಣಿ ಕೊಡುಗೆಗಳಿಂದ ಆಸ್ತಿಗಳ ಬಂಡವಾಳೀಕರಣ:

ಸೇವೆಗಳನ್ನು ಒದಗಿಸುವ ಪ್ರಕ್ರಿಯೆಯಲ್ಲಿ ಬಳಸಬೇಕಿರುವ ನಿಟ್ಟಿನಲ್ಲಿ ಗ್ರಾಹಕರಿಂದ ಕಂಪೆನಿಯು ಪಡೆಯುವ ಕೊಡುಗೆಯನ್ನು ಕಂಪೆನಿಯು ಪಿಪಿಇ ಎಂದು ಪರಿಗಣಿಸುತ್ತದೆ ಮತ್ತು ಆಸ್ತಿಯ ನಿರ್ವಚನವನ್ನು ಇದು ಸಾಧಿಸುತ್ತದೆ. ಪ್ರಾರಂಭಿಕ ಒಟ್ಟು ಮೊತ್ತವನ್ನು ನಿಯಂತ್ರಣವನ್ನು ಪಡೆದುಕೊಂಡ ದಿನಾಂಕದಂದು ಈ ಆಸ್ತಿಗಳ ಮಾರುಕಟ್ಟೆ ಬೆಲೆಯ ಆಧಾರದಲ್ಲಿ ನ್ಯಾಯಯುತ ಮೌಲ್ಯದಲ್ಲಿ ಅಂದಾಜುಮಾಡಲಾಗುತ್ತದೆ. ಗ್ರಾಹಕರಿಂದ ಹೀಗೆ ಪಡೆಯಲಾಗುವ ಕೊಡುಗೆಗೆ ಮುಂದೂಡಲಾದ ಆದಾಯ ಹೊಣೆಯನ್ನು ಸೃಷ್ಟಿಸಲಾಗುತ್ತದೆ. ವರ್ಷದ ಪಿಪಿಇ ಮೇಲಿನ ಸವಕಳಿಗೆ ಪ್ರಮಾಣಾನುಸಾರವಾಗಿ ಇತರ ಆದಾಯದ ಅಡಿಯಲ್ಲಿ ಲಾಭ ಮತ್ತು ನಷ್ಟದ ತಃಖ್ತೆ ಖಾತೆಗೆ ಮುಂದೂಡಲಾದ ಆದಾಯವನ್ನು ಬಿಡುಗಡೆಮಾಡಲಾಗುತ್ತದೆ.

ಬಂಡವಾಳ ಅನುದಾನಗಳಿಂದ ಸೃಷ್ಟಿಸಲಾದ ಆಸ್ತಿಗಳನ್ನು ಪಿಪಿಇ ಯಲ್ಲಿ ಸೇರಿಸಲಾಗಿದೆ ಮತ್ತು ಹೀಗೆ ಪಡೆಯಲಾದ ಬಂಡವಾಳ ಅನುದಾನಗಳ ಮೇಲೆ ಸಂವಾದಿಯಾದ ಮುಂದೂಡಲಾದ ಆದಾಯ ಹೊಣೆಯನ್ನು ಸೃಷ್ಟಿಸಲಾಗಿದೆ. ಮುಂದೂಡಲಾದ ಆದಾಯವನ್ನು ವರ್ಷದ ಪಿಪಿಇ ಮೇಲಿನ ಸವಕಳಿಗೆ ಪ್ರಮಾಣಾನುಸಾರವಾಗಿ ಇತರ ಆದಾಯದ ಅಡಿಯಲ್ಲಿ ಲಾಭ ಮತ್ತು ನಷ್ಟದ ಖಾತೆಗೆ ಬಿಡುಗಡೆಮಾಡಲಾಗುತ್ತದೆ.

4 ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ

ವಿವರಗಳು	31 ಮಾರ್ಚ್ 2019ರಂದು ಇದ್ದಂತೆ	01 ಏಪ್ರಿಲ್ 2018ರಂದು ಇದ್ದಂತೆ
	₹	₹
4 ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿ	3,00,32,07,285	84,79,98,245
	3,003,207,285	**84,79,98,245**
ಬಂಡವಾಳೀಕರಿಸಿದ ಬಡ್ಡಿ ವೆಚ್ಚಕ್ಕಾಗಿ ಟಿಪ್ಪಿಣಿ 3(ಎ) ನೋಡಿ. 31 ಮಾರ್ಚ್ 2019ರಂದು ಇದ್ದಂತೆ ಪ್ರಗತಿಯಲ್ಲಿರುವ ಬಂಡವಾಳ ಕಾಮಗಾರಿಯು ನಿರ್ಮಾಣದ ನಡೆಯಲ್ಲಿನ ಸ್ಥಾವರ ಮತ್ತು ಯಂತ್ರೋಪಕರಣವನ್ನು ಒಳಗೊಳ್ಳುತ್ತದೆ.		
5 ಅಭಿವೃದ್ಧಿಯಲ್ಲಿರುವ ಅಗ್ರಾಹ್ಯ ಆಸ್ತಿಗಳು		
ಎ) **ಕಂಪ್ಯೂಟರ್ ತಂತ್ರಾಂಶ**	7,49,23,008	7,40,17,653
ಸ್ಥಾವರ & ಯಂತ್ರೋಪಕರಣ	**7,49,23,008**	**7,40,17,653**

6 ಹಣಕಾಸು ಆಸ್ತಿಗಳು

ವಿವರಗಳು	31 ಮಾರ್ಚ್ 2019ರಂದು ಇದ್ದಂತೆ	01 ಏಪ್ರಿಲ್ 2018ರಂದು ಇದ್ದಂತೆ
	₹	₹
ಎ **ಈಕ್ವಿಟಿ ಸಾಧನಗಳಲ್ಲಿ ಹೂಡಿಕೆ**		
i) **ಉದ್ಧತವಾಗದ ಈಕ್ವಿಟಿ ಷೇರುಗಳು**		
(ಪೂರ್ಣವಾಗಿ ಸಂದಾಯಿತ)(ವ್ಯಾಪಾರೇತರ)		
ಮೆ. ಪವರ್ ಕಂಪನಿ ಆಫ್ ಕರ್ನಾಟಕ ಲಿಮಿಟೆಡ್‌ನ		
2,51,000 ಷೇರುಗಳು (31 ಮಾರ್ಚ್ 2018, 2,51,000)	251,00,000	251,00,000
ಒಟ್ಟು	**251,00,000**	**251,00,000**
ಮೇಲೆ ತೋರಿಸಲಾಗಿರುವಂತೆ ಈಕ್ವಿಟಿ ಸಾಧನಗಳಲ್ಲಿನ ಹೂಡಿಕೆಯು ವರದಿಯ ದಿನಾಂಕಗಳಂದು ಇದ್ದಂತೆ ನ್ಯಾಯಯುತವಾಗಿ ಮೌಲ್ಯಮಾಪನವಾಗಿರುವುದಿಲ್ಲ. ಅಂತೆಯೇ ಹೂಡಿಕೆ ಮೌಲ್ಯಗಳನ್ನು ವೆಚ್ಚದಲ್ಲಿ ಒಯ್ಯಲಾಗಿದೆ.		
ಬಿ **ಚಾಲ್ತಿಯಲ್ಲದ ಸಾಲಗಳು**		
ii) **ಭದ್ರತಾ ಠೇವಣಿಗಳು** (ಆಧಾರರಹಿರ, ವಸೂಲಾಗುವುದೆಂದು ನಿಶ್ಚಿತ)*	16,41,54,856	17,11,45,803
ಒಟ್ಟು	**16,41,54,856**	**17,11,45,803**

6 ಹಣಕಾಸು ಆಸ್ತಿಗಳು

ವಿವರಗಳು		31 ಮಾರ್ಚ್ 2019ರಂದು ಇದ್ದಂತೆ	01 ಏಪ್ರಿಲ್ 2018ರಂದು ಇದ್ದಂತೆ
ಸಿ	**ಭದ್ರತಾ ವಿವರಗಳ ವಿಂಗಡಣೆ**	₹	₹
	3) **ಭದ್ರತಾ ವಿವರಗಳ ವಿಂಗಡಣೆ**		
	– ವಸೂಲಾಗುವುದು – ಸುಭದ್ರ ಎಂದು ಪರಿಗಣಿತವಾದ ಸಾಲಗಳು	–	–
	– ವಸೂಲಾಗುವುದು – ಅಭದ್ರ ಎಂದು ಪರಿಗಣಿತವಾದ ಸಾಲಗಳು	16,41,54,856	17,11,45,803
	ಜಮಾ ಅಪಾಯದಲ್ಲಿ ಗಣನೀಯವಾದ ಏರಿಕೆ ಹೊಂದಿರುವ ಸಾಲಗಳು	–	–
	ಸಾಲಗಳು, ಜಮೇಯ ಬಾಧಿತವಾದದ್ದು	–	–
	ಒಟ್ಟು	**16,41,54,856**	**17,11,45,803**
	ಒಟ್ಟು ಚಾಲ್ತಿಯಲ್ಲದ ಹಣಕಾಸು ಅಸ್ತಿಗಳು	**18,92,54,856**	**19,62,45,803**

7 ಮುಂದೂಡಲಾದ ತೆರಿಗೆ ಆಸ್ತಿಗಳು (ನಿವ್ವಳ)

ವಿವರಗಳು		31 ಮಾರ್ಚ್ 2019ರಂದು ಇದ್ದಂತೆ	01 ಏಪ್ರಿಲ್ 2018ರಂದು ಇದ್ದಂತೆ
ಎ)	**ಮುಂದೂಡಲಾದ ತೆರಿಗೆ ಹೊಣೆ**	₹	₹
	i) ಸ್ಥಿರಾಸ್ತಿಗಳ ಮೇಲಿನ (ಭೂಮಿಯನ್ನು ಹೊರತುಪಡಿಸಿ) ಸವಕಳಿಯಿಂದ	–	–
	ii) ಭೂಮಿಯ ಮರುಮೌಲ್ಯಮಾಪನದಿಂದಾಗಿ	2,072,693,122	2,072,693,122
	iii) ಹೂಡಿಕೆಗಳ ನ್ಯಾಯಯುತ ಮೌಲ್ಯಮಾಪನದಿಂದಾಗಿ	–	–
	ಒಟ್ಟು	**2,072,693,122**	**2,072,693,122**
ಬಿ)	ಮುಂದೂಡಲಾದ ತೆರಿಗೆ ಆಸ್ತಿ:		
	i) ಸ್ಥಿರಾಸ್ತಿಗಳ ಮೇಲಿನ (ಭೂಮಿಯನ್ನು ಹೊರತುಪಡಿಸಿ) ಸವಕಳಿಯಿಂದ	89,956,870	89,956,870
	ii) ವೆಚ್ಚದ ಗುರುತಿಸುವಿಕೆಯಲ್ಲಿನ ಕಾಲ ವ್ಯತ್ಯಾಸಗಳ ಕಾರಣದಿಂದ		
	ಒಟ್ಟು	**89,956,870**	**89,956,870**
	ನಿವ್ವಳ ಮುಂದೂಡಲಾದ ತೆರಿಗೆ (ಹೊಣೆ)/ಆಸ್ತಿ	**(1,982,736,252)**	**(1,982,736,252)**

8 ಇತರ ಚಾಲ್ತಿಯಲ್ಲದ ಆಸ್ತಿಗಳು

ವಿವರಗಳು	31 ಮಾರ್ಚ್ 2019ರಂದು ಇದ್ದಂತೆ	01 ಏಪ್ರಿಲ್ 2018ರಂದು ಇದ್ದಂತೆ
(ಆಧಾರರಹಿತ ಮತ್ತು ವಸೂಲಾಗುವುದೆಂದು ಪರಿಗಣಿತ)	₹	₹
ಎ) ತೆರಿಗೆಯ ಮುಂಗಡ ಪಾವತಿ(ನಿವ್ವಳ)	3,992,144	–
ಬಿ) ಬಂಡವಾಳ ಮುಂಗಡಗಳು	3,360,873,467	1,856,397,094
ಸಿ) ಭದ್ರತಾ ಠೇವಣಿಗಳು	–	–
ಡಿ) ಭದ್ರತಾ ಠೇವಣಿಗಳು – ಇತರೆ	–	–
	3,364,865,611	**1,856,397,094**

9 ದಾಸ್ತಾನು

ವಿವರಗಳು	31 ಮಾರ್ಚ್ 2019ರಂದು ಇದ್ದಂತೆ	01 ಏಪ್ರಿಲ್ 2018ರಂದು ಇದ್ದಂತೆ
ದಾಸ್ತಾನುಗಳು, ಬಿಡಿಭಾಗಗಳು ಮತ್ತು ಬಿಡಿ ಸಾಧನಗಳು	₹	₹
ಎ) ಉಗ್ರಾಣದಲ್ಲಿ ಇರುವ ಸಾಮಗ್ರಿ	1,48,43,61,243	1,34,19,99,214
ಬಿ) ಗುತ್ತಿಗೆದಾರರಲ್ಲಿ ಇರುವ ಸಾಮಗ್ರಿ	1,95,73,096	1,86,08,819
ಸಿ) ನೌಕರರೊಂದಿಗೆ ಇರುವ ಸಾಮಗ್ರಿ	2,16,44,065	1,80,11,269
ಡಿ) ಬಳಕೆ ತಪ್ಪಿದ/ತೊಡೆದುಹಾಕಲಾದ ಆಸ್ತಿಗಳು	1,66,07,441	1,46,82,016
ಇ) ದೋಷಯುಕ್ತ/ಕಳಚಿಹಾಕಲಾದ ಆಸ್ತಿಗಳ ಗುರುತು ಮಾಡಲಾದ ಮೌಲ್ಯ(ಡಬ್ಲ್ಯೂಡಿವಿ)	47,63,34,488	43,40,05,341
	2,01,85,20,333	1,82,73,06,659

10 ಬಿಲ್ ಮಾಡದ ಆದಾಯ

ವಿವರಗಳು	31 ಮಾರ್ಚ್ 2019ರಂದು ಇದ್ದಂತೆ	01 ಏಪ್ರಿಲ್ 2018ರಂದು ಇದ್ದಂತೆ
ದಾಸ್ತಾನುಗಳು, ಬಿಡಿಭಾಗಗಳು ಮತ್ತು ಬಿಡಿ ಸಾಧನಗಳು	₹	₹
ಬಿಲ್ ಮಾಡದ ಆದಾಯ	2580028138	2,37,26,90,170
ಮುಕ್ತಾಯದ ಶಿಲ್ಕು	2580028138	**2,37,26,90,170**
ಬಿಲ್ ಮಾಡದ ಆದಾಯದ ವಿವರಗಳನ್ನು ಕೆಳಗೆ ನೀಡಲಾಗಿದೆ:		
ಪ್ರಾರಂಭದ ಶಿಲ್ಕು	**2,37,26,90,170**	**2,01,24,23,981**
ಸೇರಿಸಿ : ವರ್ಷದಲ್ಲಿ ಬಿಲ್ ಮಾಡದ ಆದಾಯಕ್ಕೆ ಹವಣಿಕೆ	**2,37,26,90,170**	2,37,26,90,170
ಕಳೆಯಿರಿ : ವರ್ಷದಲ್ಲಿ ವಿಪರ್ಯಯಗೊಳಿಸಲಾದ ಬಿಲ್ ಮಾಡದ ಆದಾಯಕ್ಕೆ ಹವಣಿಕೆ	**2,37,26,90,170**	2,012,423,981
ಮುಕ್ತಾಯದ ಶಿಲ್ಕು	**2,58,00,28,138**	**2,37,26,90,170**

11 ವ್ಯಾಪಾರೀ ವಸೂಲಾಗಬೇಕಾದವು

ವಿವರಗಳು	31 ಮಾರ್ಚ್ 2019ರಂದು ಇದ್ದಂತೆ	01 ಏಪ್ರಿಲ್ 2018ರಂದು ಇದ್ದಂತೆ
	₹	₹
ಎ) ಆರು ತಿಂಗಳಿಗೂ ಹೆಚ್ಚಿನ ಅವಧಿಯ ವ್ಯಾಪಾರೀ ವಸೂಲಾಗಬೇಕಾದವು	8,19,87,42,586	4,25,11,38,126
ಬಿ) ಇತರೆ	6,18,73,36,648	7,05,21,29,845
ವ್ಯಾಪಾರೀ ವಸೂಲಾಗಬೇಕಾದವು – ಇತರೆ	14,38,60,79,234	11,30,32,67,971
ಒಟ್ಟು	**14,38,60,79,234**	**11,30,32,67,971**
ಭದ್ರತಾ ವಿವರಗಳ ವಿಂಗಡಣೆ		
ಆಧಾರಿತ, ವಸೂಲಾಗುವುದೆಂದು ಪರಿಗಣಿತವಾದ ವ್ಯಾಪಾರೀ ವಸೂಲಾಗಬೇಕಾದವು	5,98,99,65,892	5,52,25,76,657
ಆಧಾರರಹಿತ, ವಸೂಲಾಗುವುದೆಂದು ಪರಿಗಣಿತವಾದ (ಸಂಶಯಾಸ್ಪದವೂ ಸೇರಿ) ವ್ಯಾಪಾರೀ ವಸೂಲಾಗಬೇಕಾದವು	8,39,61,13,341	5,78,06,91,314
ಸಾಲ ಅಪಾಯದ ಗಣನೀಯ ಹೆಚ್ಚಳನ್ನು ಹೊಂದಿರುವ ವ್ಯಾಪಾರಿ ವಸೂಲಾಗಬೇಕಾದವು	–	–
ಸಾಲವು ಬಾಧಿತವಾದ ವ್ಯಾಪಾರಿ ವಸೂಲಾಗಬೇಕಾದವು	–	–
ಒಟ್ಟು	**14,38,60,79,234**	**11,30,32,67,971**
ನಷ್ಟ ಭತ್ಯೆ ($)	4,23,75,13,527	3,54,83,57,480
ಒಟ್ಟು ವ್ಯಾಪಾರಿ ವಸೂಲಾಗಬೇಕಾದವು	**10,14,85,65,707**	**7,75,49,10,491**

ಒಟ್ಟು ವಸೂಲಾಗದ ಮತ್ತು ಸಂಶಯಾಸ್ಪದ ಗ್ರಾಹಕ ಸ್ವೀಕೃತಿಗಳಿಗೆ ಹವಣಿಕೆಯಾಗಿ ಕರ್ನಾಟಕ ಸರ್ಕಾರವು ಕಂಪನಿಯ ಪ್ರಾರಂಭಿಕ ಶಿಲ್ಕಿನಲ್ಲಿ ರೂ. 99.37 ಕೋಟಿ ಮೊತ್ತವನ್ನು ವರ್ಗಾಯಿಸಿದೆ. ಕರ್ನಾಟಕ ಸರ್ಕಾರದ ಆದೇಶ ಸಂಖ್ಯೆ ಡಿಇ 48 ಪಿಎಸ್ಆರ್ 2003 ದಿನಾಂಕ 31.05.2003ರ ಅನುಸಾರ ಇದನ್ನು ಎಸ್ಕಾಂಗಳ ಉಪವಿಭಾಗಗಳಲ್ಲಿ ಯಾವುದೇ ಗ್ರಾಹಕ ವರ್ಗಗಳಿಗೆ ಪ್ರತಿಯಾಗಿ ಹೊಂದಿಸಬಾರದು. ಗ್ರಾಹಕರಿಂದ ಸಂಶಯಾಸ್ಪದ ಬಾಕಿಗಳಿಗಾಗಿನ ರೂ. 423.75 ಕೋಟಿ ಮೊತ್ತದ ಹವಣಿಕೆಯು ಮೇಲಿನ ಹವಣಿಕೆಯನ್ನು ಒಳಗೊಂಡಿದೆ. ಮೇಲಿನದಲ್ಲದೆ, ಎಚ್ಟಿ ಅನುಷ್ಠಾನ ವರ್ಗಗಳ ಅಡಿಯಲ್ಲಿ ಪ್ರಕರಣದಿಂದ ಪ್ರಕರಣದ ಆಧಾರದಲ್ಲಿ 100% ಹವಣಿಕೆಯನ್ನು ಮಾಡಲಾಗಿದ್ದು ಇದು ರೂ. 42.39 ಕೋಟಿಯಾಗಿದೆ ಹಾಗೂ 2 ವರ್ಷಗಳಿಗೂ ಹೆಚ್ಚು ಅವಧಿಗೆ ಬಾಕಿ ಇರುವ ಐಪಿ ಸೆಟ್ ಬಾಕಿಗಳ ಮೇಲೆ 10% ಹವಣಿಕೆಯನ್ನು ಸೃಷ್ಟಿಸಲಾಗಿದ್ದು ಇದು ರೂ. 267.60 ಕೋಟಿಯಷ್ಟಿದೆ. ಶಿಲ್ಕು ಸಾಲಗಾರರ ಮೇಲೆ 4% ಹವಣಿಕೆಯನ್ನು ಮಾಡಲಾಗಿದೆ.

12 ನಗದು ಮತ್ತು ನಗದು ಸಮಾನಗಳು

ವಿವರಗಳು	31 ಮಾರ್ಚ್ 2019 ರಂದು ಇದ್ದಂತೆ	01 ಏಪ್ರಿಲ್ 2018 ರಂದು ಇದ್ದಂತೆ
ನಗದು ಮತ್ತು ನಗದು ಸಮಾನಗಳು	₹	₹
ಬ್ಯಾಂಕುಗಳಲ್ಲಿನ ಶಿಲ್ಕುಗಳು ಚಾಲ್ತಿ ಖಾತೆಗಳಲ್ಲಿ	1,00,61,49,302	57,95,41,236
ಮೂರು ತಿಂಗಳುಗಳಿಗೂ ಕಡಿಮೆ ಮೂಲ ಪಕ್ವತೆಯ ಠೇವಣಿಗಳು		
ಕೈಯಲ್ಲಿನ ನಗದು	12,68,28,910	5,20,77,781
ರವಾನೆಯಲ್ಲಿರುವ ಚೆಕ್ಕುಗಳು ಮತ್ತು ನಗದು	11,138	11,138
ಕೈಯಲ್ಲಿನ ಸ್ಟಾಂಪುಗಳು	8,24,308	4,47,072
ಒಟ್ಟು ನಗದು ಮತ್ತು ನಗದು ಸಮಾನಗಳು	**1,13,38,13,658**	**63,20,77,227**
ಇತರ ಬ್ಯಾಂಕ್ ಶಿಲ್ಕುಗಳು		
ಹನ್ನೆರಡು ತಿಂಗಳುಗಳಿಗೂ ಕಡಿಮೆ ಉಳಿಕೆ ಪಕ್ವತೆಯ ಠೇವಣಿಗಳು – ಇತರ ಖಾತೆಗಳಲ್ಲಿ (ಸಾಲಗಳು, ಖಾತರಿಗಳು, ಮತ್ತು ಇತರ ಬಾಧ್ಯತೆಗಳಿಗೆ ಪ್ರತಿಯಾಗಿ ಮಾರ್ಜಿನ ಹಣ ಅಥವಾ ಭದ್ರತೆಯ ರೂಪದಲ್ಲಿ ಇರಿಸಕೊಳ್ಳಲಾದ ಮಟ್ಟಿಗೆ)	26,92,18,010 13,43,79,182	 40,80,58,125
ಒಟ್ಟು ಇತರ ಬ್ಯಾಂಕ್ ಶಿಲ್ಕುಗಳು	**40,35,97,192**	**40,80,58,125**
ಒಟ್ಟು ನಗದು ಮತ್ತು ಬ್ಯಾಂಕ್ ಶಿಲ್ಕುಗಳು	**1,53,74,10,850**	**1,04,01,35,352**

* ನಗದು ಮತ್ತು ಬ್ಯಾಂಕ್ ಶಿಲ್ಕುಗಳಲ್ಲಿ ಎ. ಭರ್ತಿಮಾಡದ ವೋಚರ್‌ಗಳು: ರೂ 1,31,4522/– ಮತ್ತು ಬಿ. ಅನಿಶ್ಚಿತ; ರೂ. 20.47 ಲಕ್ಷ ಸೇರಿವೆ (ಕೆಲವು ಅನಿಶ್ಚಿತ ವೋಚರ್‌ಗಳನ್ನು ಸಂತುಲನ ಪಟ್ಟಿಯ ದಿಂಕದಿಂದ 3 ತಿಂಗಳ ಒಳಗೆ ತೊಡೆದುಹಾಕಲಾಗಿಲ್ಲ).

** ಪಿಪಿಎ ಷರತ್ತುಗಳ ಪ್ರಕಾರ ವಿದ್ಯುತ್ ಜನರೇಟರ್‌ಗಳ ಪರವಾಗಿ ಬ್ಯಾಂಕುಗಳಿಂದ ಪಡೆದ ಎಲ್‌ಸಿ ಗಳಿಗೆ ಪ್ರತಿಯಾಗಿ ಭದ್ರತೆಯಾಗಿ ಹಕ್ಕು ಠೇವಣಿ ನೀಡಲಾಗಿದೆ.

ನಗದು ಹರಿವುಗಳ ತಃಖ್ತೆಯ ಉದ್ದೇಶಕ್ಕಾಗಿ ನಗದು ಮತ್ತು ನಗದು ಸಮಾನಗಳು ಕೆಳಗಿನವುಗಳನ್ನು ಒಳಗೊಳ್ಳುತ್ತವೆ :

ವಿವರಗಳು		
ಬ್ಯಾಂಕುಗಳಲ್ಲಿ ಶಿಲ್ಕು ಚಾಲ್ತಿ ಖಾತೆಗಳು	**1,00,61,49,302**	**57,95,41,236**
ಮೂರು ತಿಂಗಳುಗಳಿಗೂ ಮೂಲ ಪಕ್ವತೆಯ ಠೇವಣಿಗಳು	12,68,28,910	5,20,77,781
ಕೈಯಲ್ಲಿನ ನಗದು	11,138	11,138
ರವಾನೆಯಲ್ಲಿರುವ ಚೆಕ್ಕುಗಳು ಮತ್ತು ನಗದು	8,24,308	4,47,072
ಕೈಯಲ್ಲಿನ ಸ್ಟಾಂಪುಗಳು	**1,13,38,13,658**	**63,20,77,227**

13 ಇತರ ಹಣಕಾಸು ಆಸ್ತಿಗಳು:

ವಿವರಗಳು	31 ಮಾರ್ಚ್ 2019ರಂದು ಇದ್ದಂತೆ	01 ಏಪ್ರಿಲ್ 2018ರಂದು ಇದ್ದಂತೆ
ನಗದು ಹರಿವುಗಳ ತಃಖ್ತೆಯ ಉದ್ದೇಶಕ್ಕಾಗಿ ನಗದು ಮತ್ತು ನಗದು ಸಮಾನಗಳು ಕೆಳಗಿನವುಗಳನ್ನು ಒಳಗೊಳ್ಳುತ್ತವೆ:	₹	₹ ಷ
ಎ) ಸಮಾನ ನಿಯಂತ್ರಣದಲ್ಲಿರುವ ಸಂಸ್ಥೆಗಳಿಂದ –		
ಕೆಪಿಟಿಸಿಎಲ್/ಎಸ್ಕಾಂಗಳು/ಪಿಕೆಸಿಎಲ್ – ಪಡೆಯಬೇಕಾದವು	8,24,77,29,432	5,33,88,63,635
ಬಿ) ವಿದ್ಯುತ್ ಜನರೇಟರ್‌ಗಳಿಂದ ವಸೂಲಾಗಬೇಕಾದದ್ದು	27,00,34,314	25,61,51,104
ಸಿ) ಪಿಂಚಣಿ/ಗ್ರಾಚುಟಿ ಟಸ್ಟ್ ನಿಂದ ಪಡೆಯಬೇಕಾದವು	10,32,65,598	9,74,41,075
ಡಿ) ಸೌರದೀಪ ಫಲಾನುಭವಿಗಳಿಂದ ಪಡೆಯಬೇಕಾದವು	2,00,12,937	1,94,06,483
ಇ) ಪ್ರಾಪ್ತವಾದ ಆದರೆ ಬಾಕಿ ಇರದ ಆದಾಯ	2,33,29,081	2,30,95,417
ಎಫ್) ಗ್ರಾಮೀಣ ವಿದ್ಯುದೀಕರಣ ಸಹಾಯಧನ	30,50,87,720	30,50,87,720
ಜಿ) ಶುಲ್ಕ ಸಹಾಯಧನ	11,53,54,98,210	6,31,31,02,034
ಎಚ್) ಆರ್‌ಡಿಪಿಪಿ ಬಾಕಿಗಳು	2,06,13,42,391	2,07,45,62,711
ಒಟ್ಟು	**22,56,62,99,682**	**14,42,77,10,179**
ಭದ್ರತಾ ವಿವರಗಳ ವಿಂಗಡಣೆ		
ಆಧಾರಿತ, ವಸೂಲಾಗುವುದೆಂದು ಪರಿಗಣಿತವಾದ ಹಣಕಾಸು ಆಸ್ತಿಗಳು	40,60,07,170	40,60,07,170
ಆಧಾರರಹಿತ, ವಸೂಲಾಗುವುದೆಂದು ಪರಿಗಣಿತವಾದ (ಸಂಶಯಾಸ್ಪದವೂ ಸೇರಿ) ಹಣಕಾಸು ಆಸ್ತಿಗಳು	22,16,02,92,512	14,02,17,03,009
ಸಾಲ ಅಪಾಯದ ಗಣನೀಯ ಹೆಚ್ಚಳನ್ನು ಹೊಂದಿರುವ ಹಣಕಾಸು ಆಸ್ತಿಗಳು	–	–
ಸಾಲವು ಬಾಧಿತವಾದ ಹಣಕಾಸು ಆಸ್ತಿಗಳು	–	–
ಒಟ್ಟು	**22,56,62,99,682**	**14,42,77,10,179**
ಕಳೆಯಿರಿ : ಭತ್ಯೆ	–	–
ಒಟ್ಟು ಇತರ ಹಣಕಾಸು ಆಸ್ತಿ	**22,56,62,99,682**	**14,42,77,10,179**
ಒಟ್ಟು ಚಾಲ್ತಿ ಹಣಕಾಸು ಆಸ್ತಿಗಳು	**36,83,23,04,377**	**25,59,54,46,192**
ದತ್ತಿ ವೆಚ್ಚದಲ್ಲಿ ಒಯ್ಯಲಾದ ಹಣಕಾಸು ಆಸ್ತಿಗಳ ವಿಂಗಡಣೆ		
ಸಾಲಗಳು (ಟಿಪ್ಪಣಿ 6(ii)	16,41,54,856	17,11,45,803
ಬಿಲ್ ಮಾಡದ ಆದಾಯ (ಟಿಪ್ಪಣಿ 10)	2,58,00,28,138	2,37,26,90,170
ವ್ಯಾಪಾರದಲ್ಲಿ ಬರಬೇಕಾದ್ದು (ಟಿಪ್ಪಣಿ 11)	14,38,60,79,234	11,30,32,67,971
ನಗದು ಮತ್ತು ನಗದು ಸಮಾನಗಳು (ಟಿಪ್ಪಣಿ 12)	1,13,38,13,658	63,20,77,227
ಇತರ ಬ್ಯಾಂಕ್ ಶಿಲ್ಕುಗಳು (ಟಿಪ್ಪಣಿ 12)	40,35,97,192	40,80,58,125
ಇತರ ಹಣಕಾಸು ಆಸ್ತಿಗಳು (ಟಿಪ್ಪಣಿ 13)	22,56,62,99,682	14,42,77,10,179
ದತ್ತಿ ವೆಚ್ಚದಲ್ಲಿ ಒಯ್ಯಲಾದ ಒಟ್ಟು ಹಣಕಾಸು ಆಸ್ತಿಗಳು	**41,13,39,72,760**	**29,31,49,49,475**

14 ಇತರ ಚಾಲ್ತಿ ಆಸ್ತಿಗಳು

ವಿವರಗಳು		31 ಮಾರ್ಚ್ 2019ರಂದು ಇದ್ದಂತೆ	01 ಏಪ್ರಿಲ್ 2018ರಂದು ಇದ್ದಂತೆ
		₹	₹
ಎ)	ಪೂರ್ವಸಂದಾಯಿತ ವೆಚ್ಚಗಳು	13,83,897	12,48,166
ಬಿ)	ನೌಕರರಿಗೆ ಮುಂಗಡ	3,48,66,694	3,46,61,861
ಸಿ)	ಬಂಡವಾಳ ಆಸ್ತಿಗಳಿಗೆ ನಷ್ಟ/ಹಾನಿಗೆ ಹಕ್ಕುಸಲ್ಲಿಕೆ	10,84,209	10,84,209
	ಒಟ್ಟು	**3,73,34,800**	**3,69,94,236**

15. ನಿಬಂಧನಾ ಮುಂದೂಡಿಕೆ ಖಾತೆಗಳು:

ವಿವರಗಳು	31 ಮಾರ್ಚ್ 2019ರಂದು ಇದ್ದಂತೆ	01 ಏಪ್ರಿಲ್ 2018ರಂದು ಇದ್ದಂತೆ
	₹	₹
ನಿಬಂಧನಾ ಮುಂದೂಡಿಕೆ ಖಾತೆ – ಖರ್ಚು ಶಿಲ್ಕುಗಳು ಮತ್ತು ಸಂಬಂಧಿತ ಮುಂದೂಡಿದ ತೆರಿಗೆ ನಿಬಂಧನಾ ಆಸ್ತಿಗಳು	11,38,83,82,156	8,101,129,873
ನಿಬಂಧನಾ ಮುಂದೂಡಿಕೆ ಖಾತೆ ದರ ನಿಬಂಧಿತ ಚಟುವಟಿಕೆಗಳು:	**11,38,83,82,156**	**8,101,129,873**

(i) ಇಂಡ್ ಎಎಸ್ 114 'ನಿಬಂಧನಾ ಮುಂದೂಡಿಕೆ ಖಾತೆಗಳು' ಪ್ರಕಾರ ವಿದ್ಯುತ್ ಹಂಚಿಕೆಯ ವ್ಯಾಪಾರವು ಒಂದು ದರ ನಿಬಂಧಿತ ಚಟುವಟಿಕೆಯಾಗಿದ್ದು ಇಲ್ಲಿ ಅಸ್ತಿತ್ವದಲ್ಲಿರುವ ನಿಬಂಧನೆಗಳ ಆಧಾರದ ಮೇಲೆ ಗ್ರಾಹಕರಿಗೆ ವಿಧಿಸಬೇಕಿರುವ ಶುಲ್ಕವನ್ನು ನಿಬಂಧಕರು ನಿರ್ಧರಿಸುತ್ತಾರೆ.

ಕರ್ನಾಟಕ ವಿದ್ಯುಚ್ಛಕ್ತಿ ನಿಬಂಧನಾ ಆಯೋಗ ("ಕೆಇಆರ್‌ಸಿ") ಹೊರಡಿಸಿರುವ ಬಹು ವರ್ಷದ ಶುಲ್ಕವು (ಎಂವೈಟಿ) ಕಂಪನಿಯ ವಿತರಣಾ ವ್ಯಾಪಾರಕ್ಕೆ ಅನ್ವಯಿಸುತ್ತದೆ. ಈ ನಿಬಂಧನೆಗಳ ಪ್ರಕಾರ ನಿಬಂಧಕರು ಕಂಪನಿಯು ತನ್ನ ಗ್ರಾಹಕರಿಂದ ಲಾಭ ಅಂಗೀಕೃತ ಈಕ್ವಿಟಿ ನೆಲೆಯ ಮೇಲೆ ಭರವಸೆ ನೀಡಲಾದ ದರವನ್ನೂ ಸೇರಿದಂತೆ ತನ್ನ ಸ್ಥಿರ ಮತ್ತು ವ್ಯತ್ಯಾಸಗೊಳ್ಳುವ ವೆಚ್ಚಗಳನ್ನು ವಸೂಲಿಮಾಡುವಂತೆ ಶುಲ್ಕವನ್ನು ನಿಗದಿಪಡಿಸುತ್ತದೆ. ಅನುಕ್ರಮವಾದ ಎಂವೈಟಿ ನಿಬಂಧನೆಗಳಲ್ಲಿ ನಿಗದಿಪಡಿಸಲಾದ ಷರತ್ತು ಮತ್ತು ನಿಬಂಧನೆಗಳ ಪ್ರಕಾರ ಕಂಪನಿಯು ಆದಾಯ, ನಿಬಂಧನಾ ಆಸ್ತಿಗಳು ಮತ್ತು ಹೊಣೆಗಳನ್ನು ನಿರ್ಧರಿಸುತ್ತದೆ.

(ii) 31 ಮಾರ್ಚ್ 2018ರಂದು ಮತ್ತು 31 ಮಾರ್ಚ್ 2017ರಂದು ಇದ್ದಂತೆ ದರ ನಿಬಂಧಿತ ಚಟುವಟಿಕೆಗಳ ಪ್ರಕಾರ ನಿಬಂಧನಾ ಆಸ್ತಿಗಳು/ಹೊಣೆಗಳ ಹೊಂದಾಣಿಕೆ ಕೆಳಗಿನಂತಿದೆ:

ವಿವರಗಳು	31 ಮಾರ್ಚ್ 2019ರಂದು ಇದ್ದಂತೆ	01 ಏಪ್ರಿಲ್ 2018ರಂದು ಇದ್ದಂತೆ
	₹	₹
ಪ್ರಾರಂಭಿಕ ನಿಬಂಧನಾ ಆಸ್ತಿಗಳು		
ವರ್ಷದಲ್ಲಿನ ನಿಬಂಧನಾ ಆದಾಯ/(ಖರ್ಚುಗಳು)	8,10,11,29,873	9,311,559,837
(i) ವಿದ್ಯುತ್ ಖರೀದಿ ವೆಚ್ಚ	6,82,49,12,120	4,563,470,036
(ii) ಮುಂಚಿನ ವರ್ಷಗಳಲ್ಲಿ ಗುರುತಿಸಲಾದ ಆಸ್ತಿಯ ವ್ಯತಿರಿಕ್ತಗೊಳಿಸುವಿಕೆ	(3,53,76,59,837)	(5,77,39,00,00)
ಮುಕ್ತಾಯದ ನಿಬಂದನಾ ಆಸ್ತಿಗಳು (ನಿವ್ವಳ)		

(iii) ಕಂಪನಿಯು ನಿಬಂಧನಾ ಮುಂದೂಡಿಕೆ ಖಾತೆಗಳಲ್ಲಿನ ಚಲನೆಯನ್ನು ಅವನ್ನು ಲೆಕ್ಕ ಪುಸ್ತಕಗಳಲ್ಲಿ ಸೇರಿಸಿದ ನಂತರ ಆದಾಯ ತೆರಿಗೆಗೆ ಒದಗಿಸುತ್ತದೆ. ಇದರಂತೆ, ಲೆಕ್ಕಗಳು ಮತ್ತು ತೆರಿಗೆಯಲ್ಲಿನ ಲೆಕ್ಕವಿರಿಟಿಣಾಸುವಿಕೆಯು ವ್ಯತ್ಯಾಸಗೊಳ್ಳದ ಕಾರಣ ಕಂಪೆನಿಯು ನಿಬಂಧನಾ ಮುಂದೂಡಿಕೆ ಖಾತೆಗಳ ಮೇಲೆ ಯಾವುದೇ ಮುಂದೂಡಿದ ತೆರಿಗೆಯನ್ನು ಗುರುತಿಸಿಲ್ಲ.

16 ಷೇರು ಬಂಡವಾಳ:

ವಿವರಗಳು	31 ಮಾರ್ಚ್ 2019ರಂದು ಇದ್ದಂತೆ		31 ಮಾರ್ಚ್ 2018ರಂದು ಇದ್ದಂತೆ		31 ಮಾರ್ಚ್ 2017ರಂದು ಇದ್ದಂತೆ		01 ಏಪ್ರಿಲ್ 2016ರಂದು ಇದ್ದಂತೆ	
	ಸಂಖ್ಯೆ	₹	ಸಂಖ್ಯೆ	₹	ಸಂಖ್ಯೆ	₹	ಸಂಖ್ಯೆ	₹
ಅಧಿಕೃತ:								
ಪ್ರತಿಯೊಂದು ರೂ. 10ರ		1,200,000,000		12,000,000,000		1,200,000,000		12,000,000,000
ಈಕ್ವಿಟಿ ಷೇರುಗಳು		800,000,000		8,000,000,000		800,000,000		8,000,000,000
		1,200,000,000		12,000,000,000		1,200,000,000		12,000,000,000
		800,000,000		**8,000,000,000**		**800,000,000**		**8,000,000,000**
ಇಶ್ಯೂ ಆದದ್ದು, ವಂತಿಗೆಯಾದದ್ದು ಮತ್ತು ಪೂರ್ಣವಾಗಿ ಸಂದಾಯವಾದದ್ದು ಪ್ರತಿಯೊಂದು ರೂ. 10ರ ಈಕ್ವಿಟಿ ಷೇರುಗಳು								
ವರ್ಷದ ಪ್ರಾರಂಭದಲ್ಲಿ ಇದ್ದದ್ದು		1,114,956,104		11,149,561,040		776,766,104		7,767,661,040
		305,136,104		**3,051,361,040**		**305,136,104**		**3,051,361,040**
ವರ್ಷದಲ್ಲಿ ಇಶ್ಯೂ ಆದದ್ದು ಪೂರ್ಣವಾಗಿ ಸಂದಾಯಿತವಾದ ಈಕ್ವಿಟಿ ಷೇರುಗಳ ಮೂಲಕ		–		–		338,190,000		3,381,900,000
		471,630,000		4,716,300,000		–		–
ವರ್ಷದ ಕೊನೆಗೆ		1,114,956,104		11,149,561,040		1,114,956,104		11,149,561,040
		776,766,104		**7,767,661,040**		**305,136,104**		**3,051,361,040**
ಸಂತುಲನ ಪಟ್ಟಿಗೆ ಒಯ್ಯಲಾದ ಒಟ್ಟು ಮೊತ್ತ		**11,149,561,040**		**11,149,561,040**		**7,767,661,040**		**3,051,361,040**

ಈಕ್ವಿಟಿ ಷೇರುಗಳಿಗೆ ಸಂಬಂಧಿಸಿದ ಷರತ್ತುಗಳು/ಹಕ್ಕುಗಳು :

ಕಂಪನಿಯು ಪ್ರತಿಯೊಂದು ರೂ. 10/– ರ ಸಮತೆಯ ಮೌಲ್ಯವನ್ನು ಹೊಂದಿರುವ ಒಂದೇ ಒಂದು ಈಕ್ವಿಟಿ ಷೇರುಗಳ ವರ್ಗವನ್ನು ಹೊಂದಿದೆ. ಪ್ರತಿಯೊಬ್ಬ ಈಕ್ವಿಟಿ ಷೇರುದಾರ ಪ್ರತಿ ಪಾಲಿಗೂ ಒಂದು ವೋಟಿಗೆ ಹಕ್ಕುದಾರರಾಗಿರುತ್ತಾರೆ. ಕಂಪನಿಯ ಪರಿಸಮಾಪ್ತಿಯ ಸಂದರ್ಭದಲ್ಲಿ ಈಕ್ವಿಟಿ ಷೇರುದಾರರು ಎಲ್ಲ ಆದ್ಯತೆಯ ಮೊತ್ತಗಳ ಹಂಚಿಕೆಯ ನಂತರ ಕಂಪನಿಯ ಉಳಿದ ಆಸ್ತಿಗಳನ್ನು ಪಡೆಯುವ ಹಕ್ಕನ್ನು ಹೊಂದಿರುತ್ತಾರೆ. ಹಂಚಿಕೆಯು ಷೇರುದಾರರು ಹೊಂದಿರುವ ಈಕ್ವಿಟಿ ಷೇರುಗಳ ಪ್ರಮಾಣಾನುಸಾರವಾಗಿ ಆಗುತ್ತದೆ.

a ಒಟ್ಟು ಈಕ್ವಿಟಿ ಷೇರು ಬಂಡವಾಳದ 5% ಕ್ಕಿಂತಲೂ ಹೆಚ್ಚಿನ ಷೇರುಗಳನ್ನು ಹೊಂದಿರುವ ಈಕ್ವಿಟಿ ಷೇರುದಾರರ ವಿವರಗಳು:

ವಿವರಗಳು	31 ಮಾರ್ಚ್ 2019ರಂದು ಇದ್ದಂತೆ		31 ಮಾರ್ಚ್ 2018ರಂದು ಇದ್ದಂತೆ		31 ಮಾರ್ಚ್ 2017ರಂದು ಇದ್ದಂತೆ		01 ಏಪ್ರಿಲ್ 2016ರಂದು ಇದ್ದಂತೆ	
	ಸಂಖ್ಯೆ	ಪ್ರತಿಶತ	ಸಂಖ್ಯೆ	ಪ್ರತಿಶತ	ಸಂಖ್ಯೆ	ಪ್ರತಿಶತ	ಸಂಖ್ಯೆ	ಪ್ರತಿಶತ
(i) ಕರ್ನಾಟಕ ಸರ್ಕಾರ	1,114,956,095	99.99%	1,114,956,095	99.99%	776,766,095	99.99%	305,136,095	99.99%

b) ಬೋನಸ್ ರೂಪದಲ್ಲಿ ನೀಡಿಕೆಯಾದ ಒಟ್ಟು ಷೇರುಗಳು, ನಗದನ್ನು ಹೊರತುಪಡಿಸಿ ಇತರೆ ಬಾಬ್ತಿಗೆ ಪರಿಗಣಿಸಲಾದ ಷೇರುಗಳು ಮತ್ತು ವರದಿಯ ದಿನಾಂಕಕ್ಕೆ ತಕ್ಷಣ ಹಿಂದಿನ ಐದು ವರ್ಷಗಳ ಅವಧಿಯಲ್ಲಿ ಹಿಂದಕ್ಕೆ ಖರೀದಿಸಲಾದ ಷೇರುಗಳು

ವಿವರಗಳು	31 ಮಾರ್ಚ್ 2019ರಂದು ಇದ್ದಂತೆ		31 ಮಾರ್ಚ್ 2018ರಂದು ಇದ್ದಂತೆ		31 ಮಾರ್ಚ್ 2017ರಂದು ಇದ್ದಂತೆ		01 ಏಪ್ರಿಲ್ 2016ರಂದು ಇದ್ದಂತೆ	
	ಸಂಖ್ಯೆ	ಪ್ರತಿಶತ	ಸಂಖ್ಯೆ	ಪ್ರತಿಶತ	ಸಂಖ್ಯೆ	ಪ್ರತಿಶತ	ಸಂಖ್ಯೆ	ಪ್ರತಿಶತ
i) ಭದ್ರತಾ ಪ್ರೀಮಿಯಂ ಅಥವಾ ಬಂಡವಾಳ ವಿಮೋಚನೆ ಮುಡಿಪಿನ ಬಂಡವಾಳೀಕರಣದ ಮೂಲಕ ಪೂರ್ಣವಾಗಿ ಸಂದಾಯಿತ ಎಂದು ಹಂಚಲಾದ ಈಕ್ವಿಟಿ ಷೇರುಗಳು	–	–	–	–	–	–	–	–

ಟಿಪ್ಪಣಿ : 17 : ಇತರ ಈಕ್ವಿಟಿ

	ವಿವರಗಳು	ರೂ. ಗಳಲ್ಲಿ
		₹
ಎ)	**ಹಂಚಿಕೆ ಬಾಕಿ ಇರಿಸಿ ಷೇರು ಅರ್ಜಿ ಹಣ**	
	1 ಏಪ್ರಿಲ್ 2017ರಂದು ಇದ್ದಂತೆ	**1,93,95,00,003**
	ಸೇರಿಸಿ : ಪಡೆಯಲಾದ ಷೇರು ಅರ್ಜಿ ಹಣ	1,91,50,00,000
	ಕಳೆಯಿರಿ : ಷೇರುಗಳ ಹಂಚಿಕೆ	(3,38,19,00,000)
	31 ಮಾರ್ಚ್ 2018ರಂದು ಇದ್ದಂತೆ	**47,26,00,003**
	ಸೇರಿಸಿ : ಪಡೆಯಲಾದ ಷೇರು ಅರ್ಜಿ ಹಣ	1,54,46,00,000
	ಕಳೆಯಿರಿ : ಷೇರುಗಳ ಹಂಚಿಕೆ	–
	31 ಮಾರ್ಚ್ 2019ರಂದು ಇದ್ದಂತೆ	**2,01,72,00,003**
ಬಿ.	**ಸಾಮಗ್ರಿ ದರ ವ್ಯತ್ಯಾಸಕ್ಕೆ ಮುಡಿಪು**	
	1 ಏಪ್ರಿಲ್ 2017ರಂದು ಇದ್ದಂತೆ	**45,15,39,348**
	ಸೇರಿಸಿ : ವರ್ಷದಲ್ಲಿನ ಸೇರ್ಪಡೆ	–
	ಕಳೆಯಿರಿ: ವರ್ಷದಲ್ಲಿನ ಸವಕಳಿ/ಹಿಂತೆಗೆಯುವಿಕೆಯ ವ್ಯತಿರಿಕ್ತತೆ	(42,01,880)
	31 ಮಾರ್ಚ್ 2018ರಂದು ಇದ್ದಂತೆ	**44,73,37,468**
	ಸೇರಿಸಿ : ವರ್ಷದಲ್ಲಿನ ಸೇರ್ಪಡೆ	66,534,134
	ಕಳೆಯಿರಿ: ವರ್ಷದಲ್ಲಿನ ಸವಕಳಿ/ಹಿಂತೆಗೆಯುವಿಕೆಯ ವ್ಯತಿರಿಕ್ತತೆ	–
	31 ಮಾರ್ಚ್ 2019ರಂದು ಇದ್ದಂತೆ	**51,38,71,602**

	ವಿವರಗಳು	ರೂ. ಗಳಲ್ಲಿ
ಸಿ.	**ಉಳಿಸಿಕೊಂಡ ಗಳಿಕೆಗಳು**	₹
	1 ಏಪ್ರಿಲ್ 2017ರಂದು ಇದ್ದಂತೆ	**(8,76,95,23,590**
	ಸೇರಿಸಿ : ವರ್ಷದ ಲಾಭ	(4,72,45,74,495)
	ಸೇರಿಸಿ : ವರ್ಷದ ಇತರ ಸಮಗ್ರ ಆದಾಯ	(16,82,936)
	31 ಮಾರ್ಚ್ 2018ರಂದು ಇದ್ದಂತೆ	**(13,49,57,81,021)**
	ಸೇರಿಸಿ : ವರ್ಷದ ಲಾಭ	3,48,06,33,616
	ಸೇರಿಸಿ : ವರ್ಷದ ಇತರ ಸಮಗ್ರ ಆದಾಯ	(92,56,695)
	31 ಮಾರ್ಚ್ 2019ರಂದು ಇದ್ದಂತೆ	**(10,02,44,04,100)**
ಡಿ.	**ಪಿಪಿಇ ಮೇಲಿನ ಮರುಮೌಲ್ಯಮಾಪನ**	
	1 ಏಪ್ರಿಲ್ 2017ರಂದು ಇದ್ದಂತೆ	**7,07,10,20,458**
	ಸೇರಿಸಿ : ಪಿಪಿಇ ಮೇಲಿನ ಮರುಮೌಲ್ಯಮಾಪನ	–
	ಕಳೆಯಿರಿ : ಮರುಮೌಲ್ಯಮಾಪನ ಮುಡಿಪಿನ ವಿಪರ್ಯಯ	–
	31 ಮಾರ್ಚ್ 2018ರಂದು ಇದ್ದಂತೆ	**7,07,10,20,458**
	ಸೇರಿಸಿ : ಪಿಪಿಇ ಮೇಲಿನ ಮರುಮೌಲ್ಯಮಾಪನ	–
	ಕಳೆಯಿರಿ : ಮರುಮೌಲ್ಯಮಾಪನ ಮುಡಿಪಿನ ವಿಪರ್ಯಯ	(27,78,43,500)
	31 ಮಾರ್ಚ್ 2019ರಂದು ಇದ್ದಂತೆ	**6,79,31,76,958**
	ಒಟ್ಟು ಇತರ ಈಕ್ವಿಟಿ	**(70,01,55,537)**

18 ಸಾಲಗಳು:

ವಿವರಗಳು	31 ಮಾರ್ಚ್ 2019ರಂದು ಇದ್ದಂತೆ	31 ಮಾರ್ಚ್ 2018ರಂದು ಇದ್ದಂತೆ
	₹	₹
ಚಾಲ್ತಿಯಲ್ಲದ ಹೊಣೆಗಳು		
18 ಸಾಲಗಳು:		
I) ಆಧಾರಿತ ಸಾಲಗಳು:		
a. ಇತರರಿಂದ ಸಾಲಗಳು	10,815,744,641	8,027,944,833
ಕಳೆಯಿರಿ: ಇತರರಿಂದ ಸಾಲಗಳ ಮೇಲಿನ ಚಾಲ್ತಿ ಪಕ್ವತೆಗಳು	2,638,482,086	1,745,131,435
	8,177,262,555	6,282,813,398
II) ಆಧಾರರಹಿತ ಸಾಲಗಳು:		
a) ತರರಿಂದ ಸಾಲಗಳು	53,733,654	66,297,557
ಇತರರಿಂದ ಸಾಲಗಳು	12,563,903	12,563,903
ಕಳೆಯಿರಿ: ಇತರರಿಂದ ಸಾಲಗಳ ಮೇಲಿನ ಚಾಲ್ತಿ ಪಕ್ವತೆಗಳು	41,169,751	53,733,654
ಒಟ್ಟು ಸಾಲಗಳು	8,218,432,306	6,336,547,052

ವಿವರಗಳು	31 ಮಾರ್ಚ್ 2019ರಂದು ಇದ್ದಂತೆ	31 ಮಾರ್ಚ್ 2018ರಂದು ಇದ್ದಂತೆ
	₹	₹
ಹೆಚ್ಚುವರಿ ಮಾಹಿತಿ :		
ಆಧಾರಿತ ಸಾಲಗಳು:		
ಎ ಇತರರಿಂದ ಅವಧಿ ಸಾಲಗಳು		
1 ಗ್ರಾಮೀಣ ವಿದ್ಯುದೀಕರಣ ನಿಗಮ ನಿಯಮಿತ, ನವದೆಹಲಿ – ಇಲ್ಲಿಂದ ಸಾಲಗಳು –		
ಎಪಿಡಿಆರ್‌ಪಿ ಪ್ರತಿಯಾಗಿ–ನಿಧಿ ಒದಗಿಸುವಿಕೆ	**11,743,020**	**18,761,297**
(ಯಂತ್ರೋಪಕರಣಗಳು, ಸಲಕರಣೆಗಳು, ಯಂತ್ರಗಳ ಬಿಡಿಭಾಗಗಳು, ಸಾಧನಗಳು, ಅನುಷ್ಠಾನಗಳು ಮತ್ತು ಜೋಡಿಸಲಾದ/ಸೃಷ್ಟಿಸಲಾದ/ನಿಲ್ಲಿಸಲಾದ ಪೂರಕಭಾಗಗಳೂ ಸೇರಿದಂತೆ ಎಲ್ಲ ಅಸ್ತಿತ್ವದಲ್ಲಿರುವ ಋಣಭಾರವಿರದ ಚರ ಸ್ವತ್ತುಗಳು ಮತ್ತು ಭವಿಷ್ಯದಲ್ಲಿನ ಎಲ್ಲ ಯಂತ್ರೋಪಕರಣಗಳು, ಸಲಕರಣೆಗಳು, ಯಂತ್ರಗಳ ಬಿಡಿಭಾಗಗಳು, ಸಾಧನಗಳು, ಅನುಷ್ಠಾನಗಳು ಮತ್ತು ಜೋಡಿಸಲಾದ/ಸೃಷ್ಟಿಸಲಾದ/ನಿಲ್ಲಿಸಲಾದ ಪೂರಕಭಾಗಗಳು ಹಾಗೂ ಸಾಲದ ಮೊತ್ತದಿಂದ ಖರೀದಿಸಲಾದ ಅಥವಾ ಖರೀದಿಸಬೇಕಾದ ಸಾಮಗ್ರಿಗಳ ದಾಸ್ತಾನುಗಳ ಅಡವಿರಿಸುವಿಕೆಯ ಮೂಲಕ ಭದ್ರವಾದದ್ದು. ಸಾಲದ ಅವಧಿ 13 ವರ್ಷಗಳಾಗಿದ್ದು 3 ವರ್ಷಗಳ ಅಧಿಕೃತ ಮುಂದೂಡಿಕೆ– ಯಿರುತ್ತದೆ ಹಾಗೂ 10 ಸಮಾನ ಕಂತುಗಳಲ್ಲಿ ಮರುಪಾವತಿ ಇರುತ್ತದೆ. ಮರುಪಾವತಿ 2009ರಿಂದ ಪ್ರಾರಂಭವಾಗುತ್ತದೆ. ಬಡ್ಡಿ ದರ 8.00%.)		
2 ಪಿಎಫ್‌ಸಿ–ಆರ್‌ಎಪಿಡಿಆರ್‌ಪಿ	**463,819,847**	**278,745,229**
ಭಾಗ ಎ		
ಅಸಲು ಮತ್ತು ಬಡ್ಡಿಗಳೆರಡಕ್ಕೂ ಸೇರಿದಂತೆ 3 ವರ್ಷಗಳ ಅಧಿಕೃತ ಮುಂದೂಡಿಕೆ ಅವಧಿಯೂ ಸೇರಿದಂತೆ ಸಾಲದ ಅವಧಿಯು ಮೂಲದಲ್ಲಿ 10 ವರ್ಷವಾಗಿರುತ್ತು. ಬಡ್ಡಿಯನ್ನು ಕಾಲದಿಂದ ಕಾಲಕ್ಕೆ ಹಣಕಾಸು ಸಚಿವಾಲಯದ ಸೂಚನೆಯಂತೆ ಪಾವತಿಸಬೇಕಾಗುತ್ತದೆ. ಯೋಜನೆಯ ಅಡಿ ಹೊಸದಾಗಿ ಹಣಕಾಸು ಒದಗಿಸಲಾದ ಆಸ್ತಿಗಳನ್ನು ಭದ್ರತೆಯಾಗಿ ಒದಗಿಸುವ ಮೂಲಕ ಅಡವಿರಿಸಿ ಸಾಲವನ್ನು ಭದ್ರಗೊಳಿಸಲಾಗಿದೆ. ಸಮಾನ ಕಂತುಗಳಲ್ಲಿ ಮರುಪಾವತಿ ಮತ್ತು 5 ವರ್ಷಗಳ ಅಧಿಕೃತ ಮುಂದೂಡಿಕೆಯೊಂದಿಗೆ ಸಾಲದ ಅವಧಿಯನ್ನು 10 ವರ್ಷಗಳಿಗೆ ಮಾರ್ಪಡಿಸಲಾಗಿದೆ. (ಅಧಿಕೃತ ಮುಂದೂಡಿ ಕೆಯನ್ನು ಎರಡು ವರ್ಷದ ಅವಧಿಗೆ ವಿಸ್ತರಿಸಬಹುದಿದೆ). ಬಡ್ಡಿ ದರ 11.50%.		
ಭಾಗ – ಬಿ		
ಸಾಲದ ಅವಧಿ 20 ವರ್ಷಗಳಾಗಿದ್ದು 5 ವರ್ಷಗಳ ಅಧಿಕೃತ ಮುಂದೂಡಿಕೆ ಯಿರುತ್ತದೆ ಹಾಗೂ 2016ರಿಂದ ಆರಂಭವಾಗುವಂತೆ ಸಮಾನ ವಾರ್ಷಿಕ ಕಂತುಗಳಲ್ಲಿ ಮರುಪಾವತಿ ಇರುತ್ತದೆ. ಬಡ್ಡಿ ದರ 11.50%.		
3 ಗ್ರಾಮೀಣ ವಿದ್ಯುದೀಕರಣ ನಿಗಮದಿಂದ ಸಾಲ	**6,878,131,771**	**5,288,424,040**
a ಆರ್‌ಇಸಿ – ಗ್ರಾಮೀಣ ಹೊರೆ ನಿರ್ವಹಣ ವ್ಯವಸ್ಥೆ – ರೂ. 36.84 ಕೋಟಿ – ಸಾಲದ ಅವಧಿ 13 ವರ್ಷಗಳಾಗಿದ್ದು 3 ವರ್ಷಗಳ ಅಧಿಕೃತ ಮುಂದೂಡಿಕೆಯಿರುತ್ತದೆ. 10 ಸಮಾನ ವಾರ್ಷಿಕ ಕಂತುಗಳಲ್ಲಿ ಮರುಪಾವತಿ ಇರುತ್ತದೆ. ಮರುಪಾವತಿ 2011 ರಿಂದ ಪ್ರಾರಂಭ. ಬಡ್ಡಿ ದರ 10.90%.		

ವಿವರಗಳು	31 ಮಾರ್ಚ್ 2019ರಂದು ಇದ್ದಂತೆ	31 ಮಾರ್ಚ್ 2018ರಂದು ಇದ್ದಂತೆ
	₹	₹
b ಆರ್‌ಇಸಿ – ಎನ್‌ಜೆವೈ (ಹಂತ–I) – ರೂ. 108.19 ಕೋಟಿ –ಸಾಲದ ಅವಧಿ 13 ವರ್ಷಗಳಾಗಿದ್ದು 3 ವರ್ಷಗಳ ಅಧಿಕೃತ ಮುಂದೂಡಿಕೆಯಿರುತ್ತದೆ. 10 ಸಮಾನ ವಾರ್ಷಿಕ ಕಂತುಗಳಲ್ಲಿ ಮರುಪಾವತಿ ಇರುತ್ತದೆ. ಮರುಪಾವತಿ 2016 ರಿಂದ ಪ್ರಾರಂಭ. ಬಡ್ಡಿ ದರ 11.00%.		
c ಆರ್‌ಇಸಿ – ರೀಕಂಡಕ್ಟರಿಂಗ್ – ರೂ. 139.87 ಕೋಟಿ – ಸಾಲದ ಅವಧಿ 13 ವರ್ಷಗಳಾಗಿದ್ದು 3 ವರ್ಷಗಳ ಅಧಿಕೃತ ಮುಂದೂಡಿಕೆಯಿರುತ್ತದೆ. 10 ಸಮಾನ ವಾರ್ಷಿಕ ಕಂತುಗಳಲ್ಲಿ ಮರುಪಾವತಿ ಇರುತ್ತದೆ. ಮರುಪಾವತಿ 2010 ರಿಂದ ಪ್ರಾರಂಭ. ಬಡ್ಡಿ ದರ 9.75% ದಿಂದ 10.90%.ವರೆಗೆ ಇರುತ್ತದೆ.		
d ಆರ್‌ಇಸಿ – ಡಿಟಿಸಿ ಮೀಟರಿಂಗ್ – ರೂ. 128.04 ಕೋಟಿ – ಸಾಲದ ಅವಧಿ 13 ವರ್ಷಗಳಾಗಿದ್ದು 3 ವರ್ಷಗಳ ಅಧಿಕೃತ ಮುಂದೂಡಿಕೆಯಿರುತ್ತದೆ. 10 ಸಮಾನ ವಾರ್ಷಿಕ ಕಂತುಗಳಲ್ಲಿ ಮರುಪಾವತಿ ಇರುತ್ತದೆ. ಮರುಪಾವತಿ 2014 ರಿಂದ ಪ್ರಾರಂಭ. ಬಡ್ಡಿ ದರ 12.50%.		
e ಆರ್‌ಇಸಿ – ಆರ್‌ಜಿಜಿವಿವೈ – ರೂ. 12.72 ಕೋಟಿ – ಸಾಲದ ಅವಧಿ 15 ವರ್ಷಗಳಾಗಿದ್ದು 5 ವರ್ಷಗಳ ಅಧಿಕೃತ ಮುಂದೂಡಿಕೆಯಿರುತ್ತದೆ. 10 ಸಮಾನ ವಾರ್ಷಿಕ ಕಂತುಗಳಲ್ಲಿ ಮರುಪಾವತಿ ಇರುತ್ತದೆ. ಬಡ್ಡಿ ದರ 10% ದಿಂದ 12.5% ವರೆಗೆ ಇರುತ್ತದೆ.		
4 ಪವರ್ ಫೈನಾನ್ಸ್ ಕಾರ್ಪೊರೇಶನ್ ನಿಂದ ಸಾಲ	**10,514,581**	**14,269,788**
(ನಿರಂತರ ಜ್ಯೋತಿ ಯೋಜನೆಯ ಅಡಿ ಸೃಷ್ಟಿಸಲಾದ ಆಸ್ತಿಗಳ ಅಡವಿರಿಸುವಿಕೆಯ ಮೂಲಕ ಭದ್ರವಾದದ್ದು. ಸಾಲದ ಅವಧಿ 12 ವರ್ಷಗಳಾಗಿದ್ದು 48 ಸಮಾನ ತ್ರೈಮಾಸಿಕ ಕಂತುಗಳಲ್ಲಿ ಮರುಪಾವತಿ ಇರುತ್ತದೆ. ಮರುಪಾವತಿ 2010 ರಿಂದ ಪ್ರಾರಂಭ. ಬಡ್ಡಿ ದರ 11.75%.)		
5 ಪವರ್ ಫೈನಾನ್ಸ್ ಕಾರ್ಪೊರೇಶನ್ ನಿಂದ ಸಾಲ	**124,970,039**	**203,076,319**
(ಡಿಟಿಸಿ ಮೀಟರಿಂಗ್ ಯೋಜನೆಯ ಅಡಿ ಸೃಷ್ಟಿಸಲಾದ ಆಸ್ತಿಗಳ ಅಡವಿರಿಸುವಿಕೆಯ ಮೂಲಕ ಭದ್ರವಾದದ್ದು. ಸಾಲದ ಅವಧಿ 5 ವರ್ಷಗಳಾಗಿದ್ದು 20 ಸಮಾನ ತ್ರೈಮಾಸಿಕ ಕಂತುಗಳಲ್ಲಿ ಮರುಪಾವತಿ ಇರುತ್ತದೆ. ಮರುಪಾವತಿ 2009 ರಿಂದ ಪ್ರಾರಂಭ. ಬಡ್ಡಿ ದರ 10.90%.)		
6 ಗ್ರಾಮೀಣ ವಿದ್ಯುದೀಕರಣ ನಿಗಮದಿಂದ ಸಾಲ –ಪಿಎಸ್‌ಐ	**776,808,687**	**536,225,991**
(ಯೋಜನೆಯ ಅಡಿ ನಿರ್ಮಾಣವಾದ ಉಪಕೇಂದ್ರಗಳಲ್ಲಿ ಅನುಷ್ಠಾನಗೊಳಿಸಿರುವ ಆಸ್ತಿಗಳ ಅಡವಿರಿಸುವಿಕೆಯ ಮೂಲಕ ಭದ್ರವಾದದ್ದು. ಸಾಲದ ಅವಧಿ 13 ವರ್ಷಗಳಾಗಿದ್ದು 3 ವರ್ಷಗಳ ಅಧಿಕೃತ ಮುಂದೂಡಿಕೆಯಿರುತ್ತದೆ. 10 ಸಮಾನ ವಾರ್ಷಿಕ ಕಂತುಗಳಲ್ಲಿ ಮರುಪಾವತಿ ಇರುತ್ತದೆ. ಮರುಪಾವತಿ 2010 ರಿಂದ ಪ್ರಾರಂಭ. ಬಡ್ಡಿ ದರ 8.25% ದಿಂದ 10.90% ವರೆಗೆ ಇರುತ್ತದೆ.)		
7 ಪವರ್ ಫೈನಾನ್ಸ್ ಕಾರ್ಪೊರೇಶನ್ ನಿಂದ ಸಾಲ	**400,700,278**	**162,539,333**
(2x5 ಎಮ್‌ವಿಎ, 33/11 ಕೆವಿ ಉಪಕೇಂದ್ರಗಳು ಮತ್ತು ಸಂಬಂಧಿತ ಲೈನುಗಳನ್ನು ಒಳಗೊಂಡ ಚರ ಆಸ್ತಿಗಳ ಅಡವಿರಿಸುವಿಕೆಯ ಮೂಲಕ ಭದ್ರವಾದದ್ದು. ಸಾಲದ ಅವಧಿ 12 ವರ್ಷಗಳಾಗಿದ್ದು 48 ಸಮಾನ		

ವಿವರಗಳು	31 ಮಾರ್ಚ್ 2019ರಂದು ಇದ್ದಂತೆ	31 ಮಾರ್ಚ್ 2018ರಂದು ಇದ್ದಂತೆ
	₹	₹
ತ್ರೈಮಾಸಿಕ ಕಂತುಗಳಲ್ಲಿ ಮರುಪಾವತಿ ಇರುತ್ತದೆ. ಮರುಪಾವತಿ 2004 & 2007ರಿಂದ ರಿಂದ ಪ್ರಾರಂಭ. ಬಡ್ಡಿ ದರ 8.00% ದಿಂದ 11.% ವರೆಗೆ ಇರುತ್ತದೆ.)		
ಗ್ರಾಮೀಣ ವಿದ್ಯುದೀಕರಣ ನಿಗಮದಿಂದ ಮಧ್ಯಮಾವಧಿ ಸಾಲಗಳು	**1,374,999,993**	–
ಬಡ್ಡಿ ಮತ್ತು ಅಸಲಿನ ಮರುಪಾವತಿಯು ಸಾಮಗ್ರಿಗಳು/ಆಸ್ತಿಗಳ ಮೇಲಿನ ಭಾರದ ಮೂಲಕ ಹಾಗೂ ಸಾಲಕ್ಕಾಗಿ ಆರ್ಇಸಿ ಒಪ್ಪುವಂತೆ ಎಸ್ಕ್ರೋ ಅನ್ವಯದೊಂದಿಗೆ ಸುಭದ್ರವಾಗಿರುತ್ತದೆ. ಸಾಲವು 36 ತಿಂಗಳ ಅವಧಿಯದಾಗಿದ್ದು ಮೊದಲ ವಿರತಣೆಯ ದಿನಾಂಕದಿಂದ ಪ್ರಾರಂಭಿಸಿ 36 ಮಾಸಿಕ ಕಂತುಗಳಲ್ಲಿ ಅಸಲು ಮತ್ತು ಬಡ್ಡಿಯಪಾವತಿಗೆ ಅವಕಾಶವಿರುತ್ತದೆ. ಯಾವುದೇ ಪಾವತಿಯಿರದ ಅವಧಿ ಇರುವುದಿಲ್ಲ. ಅನ್ವಯವಾಗುವ ಬಡ್ಡಿ ದರ 11.25% ವಾಗಿರುತ್ತದೆ.		
8 ವಾಣಿಜ್ಯ ಬ್ಯಾಂಕುಗಳಿಂದ ಸಾಲಗಳು	**774,056,425**	**1,525,902,836**
ಎ. ಸಿಂಡಿಕೇಟ್ ಬ್ಯಾಂಕ್		
(ಕಂಪನಿಯು ಪಡೆಯಬೇಕಿರುವುದರೊಂದಿಗೆ ಇತರ ಕಾರ್ಯಯುಕ್ತ ಬಂಡವಾಳ ದಾತರನ್ನು ಸಮಾನ ದರದಲ್ಲಿ ಅಡಮಾನವಿರಿಸುವುದರ ಮೂಲಕ ಸುಭದ್ರ. ಸಾಲದ ಅವಧಿಯು 3 ವರ್ಷವಾಗಿದ್ದು ಜನವರಿ 2017ರಿಂದ ಪ್ರಾರಂಭವಾಗುವ 36 ಸಮಾನ ತ್ರೈಮಾಸಿಕ ಕಂತುಗಳಲ್ಲಿ ಮರುಪಾವತಿ ಇರುತ್ತದೆ. ಬಡ್ಡಿ ದರವು 1 ವರ್ಷ ಎಂಎಲ್ಸಿಆರ್ + ವಾರ್ಷಿಕ 50%, ಅರ್ಥಾತ್ ವಾರ್ಷಿಕ 10.95%)		
ಉಪಮೊತ್ತ	**10,815,744,641**	**8,027,944,833**
ಅ ಕಳೆಯಿರಿ: ಚಾಲ್ತಿ ಪಕ್ವತೆಗಳು	**2,638,482,086**	**1,745,131,435**
ಒಟ್ಟು	**8,177,262,555**	**6,282,813,398**
ಆಧಾರರಹಿತ ಸಾಲಗಳು:		
1 ಸರ್ಕಾರದಿಂದ ಸಾಲಗಳು – ಪಿಎಮ್ಜಿವೈ		
ಸಾಲದ ಅವಧಿ 20 ವರ್ಷಗಳಾಗಿದ್ದು 5 ವರ್ಷಗಳ ಅಧಿಕೃತ ಮುಂದೂಡಿಕೆಯಿರುತ್ತದೆ.		
ಸಲನ್ನು ಸಮಾನ ವಾರ್ಷಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕಿದ್ದು ಮರುಪಾವತಿ 1 ಸೆಪ್ಟೆಂಬರ್ 2010 ರಿಂದ ಪ್ರಾರಂಭವಾಗಿ ಸೆಪ್ಟೆಂಬರ್ 2024ಕ್ಕೆ ಮುಗಿಯುತ್ತದೆ.		
ಬಡ್ಡಿ ದರ 12%.	25,280,624	30,731,270
2 ಸರ್ಕಾರದಿಂದ ಸಾಲಗಳು – ಎಪಿಡಿಆರ್ಪಿ		
ಸಾಲದ ಅವಧಿ 13 ವರ್ಷಗಳಾಗಿದ್ದು 3 ವರ್ಷಗಳ ಅಧಿಕೃತ ಮುಂದೂಡಿಕೆಯಿರುತ್ತದೆ. ಅಸಲನ್ನು 10 ಸಮಾನ ವಾರ್ಷಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕಿದ್ದು ಮರುಪಾವತಿ 2009 ರಿಂದ ಪ್ರಾರಂಭವಾಗಿ ಸೆಪ್ಟೆಂಬರ್ 2018ಕ್ಕೆ ಮುಗಿಯುತ್ತದೆ. ಬಡ್ಡಿ ದರ 8%.	**28,453,030**	**35,566,287**

ವಿವರಗಳು	31 ಮಾರ್ಚ್ 2019ರಂದು ಇದ್ದಂತೆ	31 ಮಾರ್ಚ್ 2018ರಂದು ಇದ್ದಂತೆ
	₹	₹
3 ಕರ್ನಾಟಕ ಸರ್ಕಾರದಿಂದ ಸಾಲಗಳು–ವಿದ್ಯುತ್ ವಲಯ ಸ್ವಚಾಲನೆ ಪ್ರಕ್ರಿಯೆ		
ಸಾಲದ ಅವಧಿ 10 ವರ್ಷಗಳಾಗಿದ್ದು 10 ಸಮಾನ ವಾರ್ಷಿಕ ಕಂತುಗಳಲ್ಲಿ ಮರುಪಾವತಿ ಮಾಡಬೇಕಿದ್ದು ಮರುಪಾವತಿ 3 ಡಿಸೆಂಬರ್ 2010 ರಿಂದ ಪ್ರಾರಂಭವಾಗಿ ಡಿಸೆಂಬರ್ 2017ಕ್ಕೆ ಮುಗಿಯುತ್ತದೆ. ಬಡ್ಡಿ ದರ 9%.	–	
ಉಪಮೊತ್ತ	53,733,654	66,297,557
ಕಳೆಯಿರಿ: ಚಾಲ್ತಿ ಪಕ್ವತೆಗಳು	12,563,903	12,563,903
ಒಟ್ಟು	**41,169,751**	**53,733,654**

ಸಾಲಗಳಿಗಾಗಿ ಅಡವಿರಿಸಲಾಗಿರುವ ಸ್ವತ್ತುಗಳು, ಸ್ಥಾವರ ಮತ್ತು ಸಲಕರಣೆಗಳ ಒಯ್ಯುವ ಮೊತ್ತಗಳನ್ನು ಟಿಪ್ಪಣಿ 3 ರಲ್ಲಿ ಪ್ರಕಟಿಸಲಾಗಿದೆ.

ಬ್ಯಾಂಕುಗಳಿಗೆ ಬೇಡಿಕೆಯ ಮೇಲೆ ಪಾವತಿಸಬೇಕಾದ ಅವಧಿ ಸಾಲಗಳು ಮತ್ತು ಸಾಲಗಳು ಸಾಲ ಸೇವಾ ವ್ಯಾಪ್ತಿ ಅನುಪಾತ, ಒಟ್ಟು ಸಾಲ ಗೇರಿಂಗ್ ಅನುಪಾತಗಳಿಗೆ ಸಂಬಂಧಿಸಿದ ಒಡಂಬಡಿಕೆಗಳನ್ನು ಒಳಗೊಳ್ಳುತ್ತದೆ. ಮೇಲೆ ಹೇಳಲಾಗಿರುವ ಎಲ್ಲ ಅನುಪಾತಗಳೂ ಬ್ಯಾಂಕುಗಳು ತಾವು ನಿಗದಿಪಡಿಸಿದ ಅಂಗೀಕಾರಗಳ ಮಿತಿಗಳಲ್ಲಿಯೇ ಇವೆ.

ವರದಿಯ ದಿನಾಂಕದಂದು ಇದ್ದಂತೆ ಕಂಪನಿಯು ಸದರಿ ವರ್ಷದಲ್ಲಿ ಮುಂದುವರಿದ ರೀತಿಯಲ್ಲಿ ಸಾಲಗಳ ಮರುಪಾವತಿಯಲ್ಲಿ ತಪ್ಪಿರುವುದಿಲ್ಲ.

19 ಇತರ ಚಾಲ್ತಿಯಲ್ಲದ ಹಣಕಾಸು ಹೊಣೆಗಳು:

ವಿವರಗಳು	31 ಮಾರ್ಚ್ 2019ರಂದು ಇದ್ದಂತೆ	31 ಮಾರ್ಚ್ 2018ರಂದು ಇದ್ದಂತೆ
	₹	₹
ಚಾಲ್ತಿಯಲ್ಲದ ಹೊಣೆಗಳು		
19 ಇತರ ಚಾಲ್ತಿಯಲ್ಲದ ಹಣಕಾಸು ಹೊಣೆಗಳು:		
a) ಗ್ರಾಹಕರಿಂದ ಭದ್ರತಾ ಠೇವಣಿ	5,317,930,623	4,925,662,798
b) ಗ್ರಾಹಕರಿಗೆಂದು ಕರ್ನಾಟಕ ಸರ್ಕಾರ ಮಾಡಿದ ಹವಣಿಕೆ	59,695,651	59,695,651
c) ಕರ್ನಾಟಕ ಸರ್ಕಾರವು ಒದಗಿಸಿದ ಬಿಆರ್‌ಪಿ ಹೊಂದಾಣಿಕೆ, ಎಸ್‌ಎಂಐಓಆರ್‌ಇ	129,306,507	129,306,507
d) ಕರ್ನಾಟಕ ಸರ್ಕಾರಕ್ಕೆ ಇತರ ಸಂದಾಯವಾಗಬೇಕಾದವು	33,528,956	33,528,956
	5,540,461,737	**5,148,193,912**

ವಿವರಗಳು	31 ಮಾರ್ಚ್ 2019ರಂದು ಇದ್ದಂತೆ	31 ಮಾರ್ಚ್ 2018ರಂದು ಇದ್ದಂತೆ
	₹	₹
ಕಂಪನಿಯು ಗ್ರಾಹಕರಿಂದ ಪಡೆಯುವ ಭದ್ರತಾ ಠೇವಣಿಗೆ ವರ್ಷದ ಪ್ರಾರಂಭದಲ್ಲಿ ಬ್ಯಾಂಕ್ ದರದಲ್ಲಿ ಬಡ್ಡಿಯನ್ನು ಪಾವತಿಸುತ್ತದೆ. (ಬಡ್ಡಿ ದರ : ಮಾರ್ಚ್ 31, 2019 – 6.25%, ಮಾರ್ಚ್ 31, 2018 – 6.75%)	0	
20 ಹವಣಿಕೆಗಳು:		
a) ಕುಟುಂಬ ಹಿತ ನಿಧಿಗೆ ಹವಣಿಕೆ	46,677,453	53,758,508
b) ರಜೆ ನಗದೀಕರಣಕ್ಕೆ ಹವಣಿಕೆ	664,534,390	445,165,655
	711,211,843	**498,924,163**
ಪರಿಹಾರಯುಕ್ತ ಗೈರುಹಾಜರಿಗಳ ಹೊಣೆಯು ಕಂಪನಿಯ ಗಳಿಕೆ ರಜೆಗಾಗಿನ ಹೊಣೆಗಳನ್ನು ಒಳಗೊಳ್ಳುತ್ತದೆ. ಕುಟುಂಬ ಹಿತ ನಿಧಿ ಮತ್ತು ರಜೆ ನಗದೀಕರಣಗಳ ವಿವರವಾದ ಪ್ರಕಟಣೆಗೆ ಟಿಪ್ಪಣಿ ಸಂಖ್ಯೆ 39ನ್ನು ಸಹ ಗಮನಿಸಿ.		
21 ಮುಂದೂಡಲಾದ ಆದಾಯ		
(i) ಬಂಡವಾಳ ವೆಚ್ಚಕ್ಕಾಗಿ ಗ್ರಾಹಕರಿಂದ ಕೊಡುಗೆ		
ಪ್ರಾರಂಭಿಕ ಶಿಲ್ಕು	4,756,378,773	4,415,402,471
ವರ್ಷದಲ್ಲಿ ಪಡೆದದ್ದು	844,592,658	566,076,302
ಲಾಭ ಮತ್ತು ನಷ್ಟದ ತಃಖ್ತೆಗೆ ಬಿಡುಗಡೆಮಾಡಿದ್ದು	(340,700,000)	(225,100,000)
ಮುಕ್ತಾಯದ ಶಿಲ್ಕು	5,260,271,430	4,756,378,773
(ii) ಬಂಡವಾಳ ವೆಚ್ಚಕ್ಕಾಗಿ ಗ್ರಾಹಕರಿಂದ ಸರ್ಕಾರದಿಂದ ಅನುದಾನ		
ಪ್ರಾರಂಭಿಕ ಶಿಲ್ಕು	2,765,693,426	2,180,954,026
ವರ್ಷದಲ್ಲಿ ಪಡೆದದ್ದು	1,619,932,919	716,939,400
ಲಾಭ ಮತ್ತು ನಷ್ಟದ ತಃಖ್ತೆಗೆ ಬಿಡುಗಡೆಮಾಡಿದ್ದು	(112,500,000	(132,200,000)
ಮುಕ್ತಾಯದ ಶಿಲ್ಕು	4,273,126,345	2,765,693,426
ಒಟ್ಟು ಮುಂದೂಡಲಾದ ಆದಾಯ	**9,533,397,775**	**7,522,072,199**
ಚಾಲ್ತಿ ಹೊಣೆ	9,533,397,775	7,522,072,199
ಚಾಲ್ತಿಯಲ್ಲದ ಹೊಣೆ ಬಂಡವಾಳ ವೆಚ್ಚಕ್ಕಾಗಿ ಗ್ರಾಹಕರಿಂದ ಕೊಡುಗೆ ಮತ್ತು ಬಂಡವಾಳ ವೆಚ್ಚಕ್ಕಾಗಿ ಗ್ರಾಹಕರಿಂದ ಸರ್ಕಾರದಿಂದ ಅನುದಾನವನ್ನು ಈ ಹಿಂದೆ ಮುಡಿಪುಗಳಲ್ಲಿ ತೋರಿಸಲಾಗಿತ್ತು ಮತ್ತು ಈ ಮುಡಿಪುಗಳಿಂದ ಮಾಡಲಾಗುದ ಬಿಡುಗಡೆಗಳನ್ನು ಸವಕಳಿಯಿಂದ ಕಡಿತ ಎಂದು ತೋರಿಸಲಾಗುತ್ತಿತ್ತು. ಆದರೆ, ಈ ವಿಂಗಡಣೆ ಮತ್ತು ಪ್ರಕಟಣೆಯು ಇಂಡ್ ಎಎಸ್ 20ಕ್ಕೆ ಅನುಗುಣವಾಗಿರದ ಕಾರಣ ಈ ವರ್ಷ ಇದನ್ನು ಸರಿಪಡಿಸಲಾಗಿದೆ ಮತ್ತು ಹಾಗಾಗಿ; i) ಬಂಡವಾಳ ವೆಚ್ಚಕ್ಕಾಗಿ ಗ್ರಾಹಕರಿಂದ ಕೊಡುಗೆ ಮತ್ತು ಬಂಡವಾಳ ವೆಚ್ಚಕ್ಕಾಗಿ ಗ್ರಾಹಕರಿಂದ ಸರ್ಕಾರದಿಂದ ಅನುದಾನದ ಮೊತ್ತವನ್ನು ಮುಂದೂಡಲಾದ ಆದಾಯ ಹೊಣೆಯ ಅಡಿಯಲ್ಲಿ ತೋರಿಸಲಾಗಿದೆ. ii) ಮೇಲಿನದರಿಂದ ಆದ ಬಿಡುಗಡೆಯನ್ನು ಇತರ ಆದಾಯ ಅನುಸೂಚಿಯಡಿ ತೋರಿಸಲಾಗಿದೆ.		

ವಿವರಗಳು	31 ಮಾರ್ಚ್ 2019ರಂದು ಇದ್ದಂತೆ	31 ಮಾರ್ಚ್ 2018ರಂದು ಇದ್ದಂತೆ
	₹	₹
22 ಇತರ ಚಾಲ್ತಿಯಲ್ಲದ ಹೊಣೆಗಳು:		
(ಎ)ಠೇವಣಿ ಕೊಡುಗೆ ಕಾಮಗಾರಿ	511,133,624	(7,586,251)
	511,133,624	**(7,586,251)**
23 ಸಾಲಗಳು:		
I) ಆಧಾರಿತ ಸಾಲಗಳು:		
ಎ)ಬೇಡಿಕೆಯ ಮೇಲೆ ಮರುಪಾವತಿಸಬೇಕಾದ ಸಾಲಗಳು		
– ಬ್ಯಾಂಕುಗಳಿಂದ	639,500,331	743,969,617
– ಇತರರಿಂದ	–	
– ಒಟ್ಟು	**639,500,331**	**743,969,617**
1) ಆಧಾರಿತ ಸಾಲಗಳಿಗೆ ಭದ್ರತೆಯ ವಿವರಗಳು		
ಎ)ಬ್ಯಾಂಕುಗಳಿಂದ ಸಾಲ (ಗ್ರಾಹಕರಿಂದ ಬರಬೇಕಾದವುಗಳ ಭಾರದಿಂದ ಸುಭದ್ರ) ಸಾಲಗಳಿಗಾಗಿ ಭದ್ರತೆಯ ರೂಪದಲ್ಲಿ ಅಡವಿರಿಸಲಾಗಿರುವ ಸ್ವತ್ತು, ಸ್ಥಾವರ ಮತ್ತು ಸಲಕರಣೆಗಳ ಒಯ್ಯುವ ಮೊತ್ತವನ್ನು ಟಿಪ್ಪಣಿ ಸಂ. 3ರಲ್ಲಿ ಪ್ರಕಟಿಸಲಾಗಿದೆ.	639,500,331	743,969,617
ಚಾಲ್ತಿ ಹೊಣೆಗಳು		
24 ವ್ಯಾಪಾರೀ ಸಂದಾಯಗಳು		
ಎ) ಅತಿ ಸಣ್ಣ ಮತ್ತು ಸಣ್ಣ ಉದ್ಯಮಗಳಿಗೆ ಒಟ್ಟು ಬಾಕಿಗಳು	–	–
ಬಿ) ಅತಿ ಸಣ್ಣ ಮತ್ತು ಸಣ್ಣ ಉದ್ಯಮಗಳಲ್ಲದ ಇತರ ಉದ್ಯಮಗಳಿಗೆ ಒಟ್ಟು ಬಾಕಿಗಳು	42,074,576,734	42,108,312,443
ಸಿ) ಸಂಬಂಧಿತ ಪಕ್ಷಗಳಿಗೆ	7,387,918,438	(763,138,501)
ಪಾವತಿಸಬೇಕಾದ ಒಟ್ಟು ವ್ಯಾಪಾರಿ ಬಾಬ್ತು	**49,462,495,173**	**41,345,173,942**
ಮೇಲಿನ ಹಣಕಾಸು ಹೊಣೆಗಳ ಷರತ್ತು ಮತ್ತು ನಿಬಂಧನೆಗಳು:		
ವ್ಯಾಪಾರಿ ಸಂದಾಯಗಳು ಬಡ್ಡಿಯನ್ನು ಒಳಗೊಂಡಿರುವುದಿಲ್ಲ ಮತ್ತು ಸಾಧಾರಣವಾಗಿ 60 ರಿಂದ 90 ದಿನಗಳ ಒಳಗೆ ಇತ್ಯರ್ಥವಾಗುತ್ತವೆ. ಕಂಪನಿಯ ಅಪಾಯ ನಿರ್ವಹಣಾ ಪ್ರಕ್ರಿಯೆಗಳ ಮೇಲಿನ ವಿವರಣೆಗಳಿಗೆ ಟಿಪ್ಪಣಿ 46 ನೋಡಿ		
ಹೆಚ್ಚುವರಿ ಮಾಹಿತಿ:		
1 ವಿದ್ಯುತ್ ಖರೀದಿಗೆ ವ್ಯಾಪಾರಿ ಸಂದಾಯಗಳು	36,202,540,291	36,208,211,855
2 ಬಾಕಿ ಇರುವ ಖರ್ಚುಗಳಿಗಾಗಿ ಇತರ ಹೊಣೆ	5,872,036,444	5,900,100,593
3 ಸಂಬಂಧಿತ ಸಂಸ್ಥೆಗಳಿಗೆ–ಕೆಪಿಟಿಸಿಎಲ್/ ಪಿಸಿಕೆಎಲ್/ ಇತರ ಎಸ್ಕಾಂಗಳು–ಸಂದಾಯವಾಗಬೇಕಾದ್ದು	7,387,918,438	(763,138,501)
	49,462,495,173	**41,345,173,948**
ಎಂಎಸ್ಎಂಇಡಿ ಕಾಯ್ದೆ, 2006ರ ಅಡಿಯಲ್ಲಿ ಅತಿಸಣ್ಣ ಮತ್ತು ಸಣ್ಣ ಉದ್ಯಮಗಳಿಗೆ ಬಾಕಿಯ ವಿವರಗಳು:		
